ಗುರುವಾರ ಡಿಸೆಂಬರ್ 18 2025 ₹ 7.00
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಬೆಂಗಳೂರಿನಲ್ಲಿ ಪಾಂಡೆ

ಬೆಂಗಳೂರಿನ ಎಸ್.ಎಂ.ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ಬುಧವಾರ ವಿಶ್ವ ಟೆನಿಸ್ ಲೀಗ್‌ನ ನಾಲ್ಕನೇ ಆವೃತ್ತಿಯ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡ ಬಾಲಿವುಡ್ ನಟಿ ಅನನ್ಯಾ ಪಾಂಡೆ

ನೃತ್ಯ ಪ್ರದರ್ಶನ

ಕೋಲ್ಕತ್ತದಲ್ಲಿ ಬುಧವಾರ ನಡೆದ 'ವ್ಯಾಪಾರ ಸಮ್ಮೇಳನ–2025'ರಲ್ಲಿ ಕಲಾವಿದೆಯರು ಆಕರ್ಷಕ ಸಾಂಪ್ರದಾಯಿಕ ನೃತ್ಯ ಪ್ರದರ್ಶಿಸಿದರು

ಮುಗಿಯದ ಕಾಮಗಾರಿ: ತಪ್ಪದ ಕಿರಿಕಿರಿ

ನಮ್ಮ ಮೆಟ್ರೊ ನೀಲಿ ಮಾರ್ಗ: ಕೆ.ಆರ್.ಪುರ–ಹೆಬ್ಬಾಳ ನಡುವೆ ಆಮೆಗತಿಯಲ್ಲಿ ಸಾಗುತ್ತಿರುವ ಕೆಲಸ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ನಮ್ಮ ಮೆಟ್ರೊ ನೀಲಿ ಮಾರ್ಗದಲ್ಲಿ ಕೆ.ಆರ್.ಪುರದಿಂದ ಹೆಬ್ಬಾಳದವರೆಗೆ ಕಾಮಗಾರಿ ಆಮೆಗತಿಯಲ್ಲಿ ಸಾಗುತ್ತಿದೆ. ಇದರಿಂದಾಗಿ ಈ ರಸ್ತೆಯಲ್ಲಿ ವಾಹನ ಸಂಚಾರವೇ ದುಸ್ತರವಾಗಿದೆ. ದಟ್ಟಣೆ ಅವಧಿಯಲ್ಲಿ ವಾಹನಗಳು ತಾಸುಗಟ್ಟಲೆ ನಿಂತು ತೆವಲುತ್ತಾ ಸಾಗುವಂತಾಗಿದೆ.

ಕೆಂಪಾಪುರ, ವೀರಣ್ಣ ಪಾಳ್ಯ, ನಾಗವಾರ, ಮಾನ್ಯತಾ ಟೆಕ್‌ಪಾರ್ಕ್, ಕಸ್ತೂರಿನಗರ, ಬಾಬುಸಾ ಪಾಳ್ಯ (ಬಾಬುಸಾಬ್ ಪಾಳ್ಯ), ಬೆನ್ನಿಗಾನಹಳ್ಳಿ, ಕೆ.ಆರ್. ಪುರವರೆಗೆ ಸಾಗುವುದೇ ಕಷ್ಟವಾಗಿದೆ. ಬುಧವಾರ ‘ಪ್ರಜಾವಾಣಿ’ ತಂಡ ಸ್ಥಳಕ್ಕೆ ಭೇಟಿ ನೀಡಿದಾಗ ವಾಹನಗಳ ಸಾಲುಗಳ ನಡುವೆ ಆಂಬುಲೆನ್ಸ್ ಸಿಲುಕಿಕೊಂಡಿತ್ತು. ಸೈರನ್ ಮಾತ್ರ ಒಂದೇ ಸಮನೆ ಹೊಡೆಯುತ್ತಿದ್ದರೂ ಮುಂದಕ್ಕೆ ಸಾಗಲು ಸಾಧ್ಯವಾಗಲಿಲ್ಲ. ಎರಡು ಕಿ.ಮೀ. ಸಾಗಲು ಸುಮಾರು ಮುಕ್ಕಾಲು ತಾಸು ತೆಗೆದುಕೊಂಡಿತು.

ಅತಿ ಹೆಚ್ಚು ವಾಹನದಟ್ಟಣೆಯ ಪ್ರದೇಶಗಳಲ್ಲಿ ಒಂದಾಗಿರುವ ಹೊರ ವರ್ತುಲ ರಸ್ತೆಯ (ಒಆರ್‌ಆರ್) ದಟ್ಟಣೆಯನ್ನು ಕಡಿಮೆ ಮಾಡಲು, ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತೆರಳುವವರಿಗೆ ಅನುಕೂಲ ಮಾಡಿಕೊಡಲು ರೂಪಿಸಿದ ‘ನೀಲಿ ಮಾರ್ಗ’ ಯೋಜನೆಯು ನಿಗದಿತ ಸಮಯದಲ್ಲಿ ಪೂರ್ಣಗೊಳ್ಳದೇ ಸಮಸ್ಯೆಯಾಗಿ ಕಾಡತೊಡಗಿದೆ.

ಕೇಂದ್ರ ರೇಷ್ಮೆ ಮಂಡಳಿಯಿಂದ (ಸೆಂಟ್ರಲ್ ಸಿಲ್ಕ್ ಬೋರ್ಡ್) ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ವರೆಗಿನ 58 ಕಿ.ಮೀ. ಉದ್ದದ ಈ ಮಾರ್ಗವು ಎರಡು ಹಂತದಲ್ಲಿ 2024ರ ಒಳಗೆ ಪೂರ್ಣಗೊಳ್ಳಬೇಕಿತ್ತು.

ಅಂಕಿ ಅಂಶಗಳು

58 ಕಿ.ಮೀ.
ನೀಲಿ ಮಾರ್ಗದ ಉದ್ದ

2026ರ ಡಿಸೆಂಬರ್
ಕೆ.ಆರ್ ಪುರ–ಸಿಲ್ಕ್ ಬೋರ್ಡ್ ಮೆಟ್ರೊ ಸಂಚಾರದ ಗುರಿ

2027ರ ಜೂನ್
ಹೆಬ್ಬಾಳ– ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಡುವೆ ಮೆಟ್ರೊ ಸಂಚಾರದ ನಿರೀಕ್ಷೆ

2027ರ ಡಿಸೆಂಬರ್
ಕೆ.ಆರ್ ಪುರ–ಹೆಬ್ಬಾಳ ನಡುವೆ ಮೆಟ್ರೊ ಸಂಚಾರದ ನಿರೀಕ್ಷೆ

ನಮ್ಮ ಮೆಟ್ರೊ

ಕೋವಿಡ್ ಕಾರಣದಿಂದ ಕಾಮಗಾರಿಯು ತಡವಾಗಿ ಆರಂಭವಾಗಿದ್ದರಿಂದ ಪೂರ್ಣಗೊಳ್ಳುವ ಅವಧಿಯನ್ನು ಎರಡು ವರ್ಷ ವಿಸ್ತರಿಸಿ, ಗಡುವನ್ನು ಪುನರ್‌ನಿಗದಿ ಮಾಡಲಾಗಿತ್ತು. ರೇಷ್ಮೆ ಮಂಡಳಿಯಿಂದ ಕೆ.ಆರ್.ಪುರದವರೆಗೆ (ಹಂತ 2ಎ) 2021ರ ಆಗಸ್ಟ್‌ನಲ್ಲಿ ಹಾಗೂ ಕೆ.ಆರ್. ಪುರದಿಂದ ವಿಮಾನ ನಿಲ್ದಾಣದವರೆಗೆ (ಹಂತ 2ಬಿ) 2022ರ ಫೆಬ್ರುವರಿಯಲ್ಲಿ ಕಾಮಗಾರಿ ಆರಂಭವಾಗಿದ್ದು 2026ರ ಡಿಸೆಂಬರ್ ಒಳಗೆ ಮುಗಿಯಬೇಕಿದೆ.

ರೇಷ್ಮೆ ಮಂಡಳಿಯಿಂದ ಕೆ.ಆರ್. ಪುರವರೆಗಿನ ಸಿವಿಲ್ ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ. ಹೆಬ್ಬಾಳದಿಂದ ವಿಮಾನ ನಿಲ್ದಾಣ ಕಡೆಗೂ ವೇಗವಾಗಿ ಕಾಮಗಾರಿ ನಡೆಯುತ್ತಿದೆ. ಹೆಬ್ಬಾಳ ಮತ್ತು ಕೆ.ಆರ್. ಪುರ ನಡುವೆಯೇ ಸಮಸ್ಯೆ ಉಂಟಾಗಿದ್ದು, ವಾಹನ ಸಂಚಾರ ಯಾತನಾಮಯವಾಗಿದೆ.

‘ವೀರಣ್ಣಪಾಳ್ಯ ಮೇಲ್ಸೇತುವೆಯಲ್ಲಿ ಬೆಳಿಗ್ಗೆ ಅಥವಾ ಸಂಜೆ ದಟ್ಟಣೆಯ ಅವಧಿಯಲ್ಲಿ ಒಂದು ವಾಹನ ನಿಂತರೆ ಕೆಲವೇ ನಿಮಿಷದಲ್ಲಿ ನಾಲ್ಕು ಕಿ.ಮೀ. ಉದ್ದಕ್ಕೆ ವಾಹನಗಳು ಸಾಲುಗಟ್ಟಿ ನಿಲ್ಲುತ್ತವೆ. ಮಧ್ಯಾಹ್ನವೂ ಒಂದೆರಡು ಕಿ.ಮೀ.ವರೆಗೆ ವಾಹನಗಳು ನಿಲ್ಲುತ್ತವೆ. ಮೆಟ್ರೊ ಕಾಮಗಾರಿ ಬೇಗ ಮುಗಿಸಿದ್ದರೆ ಹೀಗಾಗುತ್ತಿರಲಿಲ್ಲ. ಮಳೆಗಾಲ ಬಂತೆಂದರೆ ಹೆಬ್ಬಾಳ, ಕೆಂಪಾಪುರದಲ್ಲಿ ರಸ್ತೆಯಲ್ಲೇ ನೀರು ನಿಲ್ಲುತ್ತದೆ. ಪಾಲಿಕೆಯ ಯಾವ ಅಧಿಕಾರಿಗಳೂ ಬರುವುದಿಲ್ಲ. ನಾವೇ ಕಬ್ಬಿಣದ ಸಲಾಕೆ ಇಟ್ಟುಕೊಂಡು ಎಲ್ಲಿ ಬ್ಲಾಕ್ ಆಗಿದೆ ಎಂದು ನೋಡಿ ತ್ಯಾಜ್ಯ ಸರಿಸಿ ನೀರು ಹೋಗುವಂತೆ ಮಾಡುತ್ತೇವೆ’ ಎಂದು ಸಂಚಾರ ಪೊಲೀಸರು ತಿಳಿಸಿದರು.

‘ಈಗಲೇ ಹೀಗೆ. ಇನ್ನು ಕೆಲವೇ ದಿನಗಳಲ್ಲಿ ಒಳಚರಂಡಿ ಮತ್ತು ನೀರು ಸರಬರಾಜು ಮಂಡಳಿಯ ಕಾಮಗಾರಿಗಳು ಇಲ್ಲಿ ಆರಂಭಗೊಳ್ಳಲಿವೆ. ಮೆಟ್ರೊ ಕಾಮಗಾರಿಗೆ ಅಗೆದ ಬಳಿಕ ಉಳಿದಿರುವ ರಸ್ತೆಯನ್ನು ಅವರು ಅಗೆಯಲಿದ್ದಾರೆ. ಆ ನಂತರ ವಾಹನ ಸಂಚಾರವೇ ನಿಂತು ಹೋಗುವ ಸಾಧ್ಯತೆ ಇದೆ’ ಎಂದು ಕಳವಳ ವ್ಯಕ್ತಪಡಿಸಿದರು.

15 ದಿನಗಳ ಈಚೆಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಎರಡು ಬಾರಿ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಒಂದು ಬಾರಿ ಇಲ್ಲಿಗೆ ಬಂದು ಪರಿಶೀಲನೆ ನಡೆಸಿದ್ದಾರೆ. ಕೂಡಲೇ ಕಾಮಗಾರಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚಿಸಿದ್ದಾರೆ. ನಿಗದಿತ ಸಮಯದಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಭರವಸೆ ನೀಡಿದ್ದಾರೆ. ಆದರೆ, ವಸ್ತುಸ್ಥಿತಿ ಏನೆಂದರೆ, ಇನ್ನು ಎರಡು ವರ್ಷವಾದರೂ ಕಾಮಗಾರಿ ಮುಗಿಯುವುದಿಲ್ಲ. ಬೇಕಾದರೆ ಕಾದು ನೋಡಿ ಎಂದು ಕೆಂಪಾಪುರದ ಸೈಯದ್ ಸವಾಲು ಹಾಕಿದರು.

ನಾಗವಾರದ ಹೊರವರ್ತುಲ ರಸ್ತೆಯಲ್ಲಿ ನಮ್ಮ ಮೆಟ್ರೊ ಕಾಮಗಾರಿ ಕುಂಠಿತಗೊಂಡಿದ್ದು ಬುಧವಾರ ವಾಹನ ದಟ್ಟಣೆ ಕಂಡುಬಂತು. – ಪ್ರಜಾವಾಣಿ ಚಿತ್ರಗಳು/ಪ್ರಶಾಂತ್ ಎಚ್.ಜಿ.

ಗುತ್ತಿಗೆದಾರರಿಗೆ ಎಚ್ಚರಿಕೆ ನೀಡಿದ್ದ ಡಿಸಿಎಂ

ನಿಗದಿತ ಸಮಯದೊಳಗೆ ಕಾಮಗಾರಿ ಪೂರ್ಣಗೊಳಿಸುವುದಾಗಿ ಗುತ್ತಿಗೆದಾರರು ತಿಳಿಸಿದ್ದಾರೆ. ಅದರಂತೆ ಪೂರ್ಣಗೊಳಿಸದೇ ಇದ್ದರೆ ಗುತ್ತಿಗೆದಾರರಿಗೆ ಮುಂದೆ ಯಾವುದೇ ಕಾಮಗಾರಿ ನೀಡುವುದಿಲ್ಲ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಎಚ್ಚರಿಸಿದ್ದರು.

‘ಎರಡು ವರ್ಷಗಳಲ್ಲಿ ಪಿಲ್ಲರ್ ನಿರ್ಮಿಸಲು ಸಾಧ್ಯವಾಗಿಲ್ಲ. ಎರಡು ತಿಂಗಳಲ್ಲಿ ಮ್ಯಾಜಿಕ್ ಮಾಡ್ತೀರಾ? ನನಗೆ ಪಿಲ್ಲರ್ ಕಾಣಿಸುತ್ತಿಲ್ಲ. ನಾನೇನು ಕುರುಡ ಅಂದುಕೊಂಡ್ರಾ? ಒಂದು ಪಿಲ್ಲರ್ ನಿರ್ಮಿಸಲು ಎರಡು ವರ್ಷ ಬೇಕಾ’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದರು.

ಇದಾದ ನಂತರವೂ ಕಾಮಗಾರಿ ವೇಗ ಪಡೆದುಕೊಂಡಿಲ್ಲ. ಹೀಗಾಗಿ ನಿಗದಿತ ಗಡುವಿನ ಒಳಗೆ ಕಾಮಗಾರಿ ಮುಗಿಯುವ ಲಕ್ಷಣಗಳು ಕಾಣುತ್ತಿಲ್ಲ.

ಮೇಲ್ಸೇತುವೆ ರಸ್ತೆಗಳೇ ನಿಧಾನಗತಿಗೆ ಕಾರಣ

ಕೆ.ಆರ್. ಪುರದಿಂದ ಹೆಬ್ಬಾಳದವರೆಗೆ ಹೊರ ವರ್ತುಲ ರಸ್ತೆಯಲ್ಲಿ ಹೆಚ್ಚು ಮೇಲ್ಸೇತುವೆ ರಸ್ತೆಗಳಿರುವುದರಿಂದ ಕಾಮಗಾರಿ ನಿಧಾನವಾಗಿದೆ. ಮೇಲ್ಸೇತುವೆಗಳನ್ನು ತಪ್ಪಿಸಿಕೊಂಡು ಗರ್ಡರ್ ಅಳವಡಿಸಬೇಕು. ಕ್ರೇನ್ ಹೋಗದ ಜಾಗಗಳಲ್ಲಿ ಬೇರೆ ವ್ಯವಸ್ಥೆಗಳನ್ನು ಮಾಡಬೇಕು. ಪ್ರಮುಖ ಜಂಕ್ಷನ್‌ಗಳಲ್ಲಿ ಕಾಂಪೋಸ್ಟ್ ಗರ್ಡರ್, ವೆಬ್ ಗರ್ಡರ್‌ಗಳನ್ನು ಹಾಕಲಾಗುತ್ತಿದೆ. ಈ ಎಲ್ಲ ಕಾರಣದಿಂದ ನಿಧಾನವಾಗಿದೆ ಎಂದು ನಮ್ಮ ಮೆಟ್ರೊ ಅಧಿಕಾರಿಗಳು ಮಾಹಿತಿ ನೀಡಿದರು.

‘ರೇಷ್ಮೆ ಮಂಡಳಿಯಿಂದ ಕೆ.ಆರ್. ಪುರದವರೆಗೆ ಮುಂದಿನ ವರ್ಷ ಸೆಪ್ಟೆಂಬರ್‌ನಲ್ಲಿ ಸಂಚಾರ ಆರಂಭಿಸಲಾಗುವುದು. ವಿಮಾನ ನಿಲ್ದಾಣದಿಂದ ಹೆಬ್ಬಾಳದವರೆಗೆ 2027ರ ಜೂನ್‌ನಲ್ಲಿ ಆರಂಭವಾಗುವ ನಿರೀಕ್ಷೆ ಇದೆ. ಹೆಬ್ಬಾಳದಿಂದ ಕೆ.ಆರ್. ಪುರ ನಡುವೆ ಅದೇ ವರ್ಷ ಡಿಸೆಂಬರ್ ಒಳಗೆ ಮೆಟ್ರೊ ಸಂಚಾರ ಆರಂಭಿಸಬೇಕು ಎಂಬ ಗುರಿ ಇಟ್ಟುಕೊಂಡಿದ್ದೇವೆ. ನಮ್ಮ ಮೆಟ್ರೊ ಸಂಚಾರ ಆರಂಭಗೊಂಡಾಗ ವಾಹನ ದಟ್ಟಣೆ ಸಮಸ್ಯೆ ಕಡಿಮೆಗೊಳ್ಳಲಿದೆ’ ಎಂದು ವಿವರಿಸಿದರು.

ಬಾಬುಸಾಪಾಳ್ಯದ ಹೊರವರ್ತುಲ ರಸ್ತೆಯಲ್ಲಿ ಸಾಲುಗಟ್ಟಿ ನಿಂತಿರುವ ವಾಹನಗಳ ನಡುವೆ ಸಂಚರಿಸಲು ಪರದಾಡಿದ ಆಂಬುಲೆನ್ಸ್

ಜನರು ಏನಂತಾರೆ?

ನಮ್ಮ ಮನೆಯವರು 15 ವರ್ಷಗಳಿಂದ ನಡೆಸುತ್ತಿದ್ದ ಹೋಟೆಲ್ ಸೇರಿದಂತೆ ಇಲ್ಲಿದ್ದ ಕೆಲವು ಅಂಗಡಿಗಳನ್ನೆಲ್ಲ ಮೆಟ್ರೊ ಕಾಮಗಾರಿಗಾಗಿ ತೆರವುಗೊಳಿಸಿದರು. ಕಾಮಗಾರಿ ನಡೆಯುತ್ತಲೇ ಇದೆ. ಮುಗಿಯುವ ಲಕ್ಷಣ ಕಾಣಿಸುತ್ತಿಲ್ಲ. ದೂಳು ತುಂಬಿ ಹೋಗಿದೆ. ಪಕ್ಕದಲ್ಲಿರುವ ಯಾವುದೇ ಅಂಗಡಿ, ಹೋಟೆಲ್‌ಗಳಲ್ಲಿ ವ್ಯಾಪಾರವೇ ಇಲ್ಲದಂತಾಗಿದೆ.

ಶಕುಂತಲಾ, ನಾಗವಾರ

ಪ್ರತಿ ತಿಂಗಳು ನಾಲ್ಕೈದು ಲಕ್ಷ ರೂಪಾಯಿ ನಷ್ಟ ಮಾಡಿಕೊಂಡು ವ್ಯಾಪಾರ ಮಾಡುತ್ತಿದ್ದೇವೆ. ನಾವು ಯಾರನ್ನೂ ದೂರಲು ಹೋಗುವುದಿಲ್ಲ. ಕಾಮಗಾರಿಗಳು ನಡೆಯುತ್ತಿರುವಾಗ ಸಮಸ್ಯೆ ಆಗಿಯೇ ಆಗುತ್ತದೆ. ಆದಷ್ಟು ಬೇಗ ಮೆಟ್ರೊ ಕಾಮಗಾರಿ ಪೂರ್ಣಗೊಳಿಸಿದರೆ ಸಮಸ್ಯೆ ಪರಿಹಾರಗೊಳ್ಳಲಿದೆ.

ಬಸವರಾಜ್, ಹೋಟೆಲ್ ಮಾಲೀಕರು, ವೀರಣ್ಣಪಾಳ್ಯ

ವೀರಣ್ಣಪಾಳ್ಯದ ಹೊರವರ್ತುಲ ರಸ್ತೆಯಲ್ಲಿ ವಾಹನದಟ್ಟಣೆ

ರಾಜ್ಯದಲ್ಲಿ ಮರ ತಜ್ಞರ ಸಮಿತಿಯೇ ಇಲ್ಲ: ಅರ್ಜಿದಾರರಿಂದ ಮಾಹಿತಿ

ಮರ ಕಡಿಯದಂತೆ ಹೈಕೋರ್ಟ್ ತಡೆಯಾಜ್ಞೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕಂಟೋನ್ಮೆಂಟ್ ರೈಲ್ವೆ ಕಾಲೊನಿಯಲ್ಲಿ ಅರಣ್ಯದಂತಿರುವ ಸುಮಾರು ಎಂಟು ಎಕರೆ ಪ್ರದೇಶದಲ್ಲಿ ತನ್ನ ಅನುಮತಿಯಿಲ್ಲದೆ ಯಾವುದೇ ಮರಗಳನ್ನು ಕಡಿಯದಂತೆ ರಾಜ್ಯ ಹೈಕೋರ್ಟ್ ಮಧ್ಯಂತರ ತಡೆಯಾಜ್ಞೆ ನೀಡಿದೆ.

ಭಾರತೀಯ ರೈಲ್ವೆಗೆ ಸೇರಿರುವ ಈ ಜಮೀನಿನಲ್ಲಿ 371 ಮರಗಳಿದ್ದು, ಈ ಜೀವ ವೈವಿಧ್ಯದ ಪ್ರದೇಶವನ್ನು ವಾಣಿಜ್ಯ ಬಳಕೆಗೆ ಖಾಸಗಿ ಸಂಸ್ಥೆಯೊಂದಕ್ಕೆ ಗುತ್ತಿಗೆ ನೀಡಿರುವುದನ್ನು ಪ್ರಶ್ನಿಸಿ ಮಾಜಿ ಶಾಸಕ ಎ. ಟಿ. ರಾಮಸ್ವಾಮಿ ಮತ್ತಿತರರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾಯಮೂರ್ತಿ ಸಿ.ಎಂ.ಪೂಣಚ್ಚ ಅವರಿದ್ದ ದ್ವಿಸದಸ್ಯ ನ್ಯಾಯಪೀಠ, ಈ ಆದೇಶ ನೀಡಿ ಪ್ರಕರಣದ ವಿಚಾರಣೆಯನ್ನು ಮುಂದೂಡಿದೆ.

ಅರ್ಜಿದಾರ ಎ. ಟಿ. ರಾಮಸ್ವಾಮಿ ಪರ ಬುಧವಾರ ವಾದಿಸಿದ ವಕೀಲರು, ‘ಈಗಾಗಲೇ ಬುಲ್ಡೋಜರ್ ತಂದು ವಿವಾದಿತ ಜಾಗದಲ್ಲಿ ನಿಲ್ಲಿಸಲಾಗಿದೆ. ಅಲ್ಲಿರುವ ಮರಗಳನ್ನು ಕಡಿಯಲಾಗುತ್ತಿದೆ. ಈ ಜಾಗಕ್ಕೆ ಜೀವ ವೈವಿಧ್ಯತೆಯ ತಾಣ ಎಂದು ಮಾನ್ಯತೆ ನೀಡಿದ್ದ ಆದೇಶವನ್ನು ಅರಣ್ಯ ಇಲಾಖೆ ಏಕಾಏಕಿ ಹಿಂತೆಗೆದುಕೊಂಡಿದೆ. ಆದ್ದರಿಂದ ಅಲ್ಲಿ ಮರ ಕಡಿಯಲು ಅವಕಾಶ ನೀಡಬಾರದು’ ಎಂದು ವಾದಿಸಿದರು.

ಕೇಂದ್ರ ಸರ್ಕಾರ ಮತ್ತು ರೈಲ್ವೆ ಜಾಗ ಅಭಿವೃದ್ಧಿ ಪ್ರಾಧಿಕಾರದ ಪರ ಹಾಜರಾದ ಹೆಚ್ಚುವರಿ ಸಾಲಿಸಿಟರ್ ಜನರಲ್ ಅರವಿಂದ ಕಾಮತ್, ‘ನಾವು ಅರಣ್ಯ ತಜ್ಞರ ಸಮಿತಿಯ ಅನುಮತಿ ಇಲ್ಲದೆ ಮರ ಕಡಿಯುವುದಿಲ್ಲ’ ಎಂದು ಹೇಳಿದರು.

ಆಗ ಅರ್ಜಿದಾರರ ಪರ ವಕೀಲರು, ‘ರಾಜ್ಯದಲ್ಲಿ ಮರ ತಜ್ಞರ ಸಮಿತಿಯೇ ಇಲ್ಲ. ಸಮಿತಿ ರಚಿಸುವಂತೆ ಹೈಕೋರ್ಟ್ ಆದೇಶ ನೀಡಿದ್ದರೂ ಇನ್ನೂ ಪಾಲನೆಯಾಗಿಲ್ಲ’ ಎಂದು ಹೇಳಿದರು. ಇದನ್ನು ಪರಿಗಣಿಸಿದ ನ್ಯಾಯಾಲಯವು, ತನ್ನ ಅನುಮತಿಯಿಲ್ಲದೆ ಈ ಪ್ರದೇಶದಲ್ಲಿ ಯಾವುದೇ ಮರ ಕಡಿಯಬಾರದು ಎಂದು ಹೇಳಿ ಪ್ರತಿವಾದಿಗಳಿಗೆ ಆಕ್ಷೇಪ ಸಲ್ಲಿಸಲು ಸಮಯಾವಕಾಶ ನೀಡಿ ವಿಚಾರಣೆಯನ್ನು ಮುಂದೂಡಿತು.

ಅವಕಾಶವಿಲ್ಲ: ಸಚಿವ ಈಶ್ವರ ಖಂಡ್ರೆ

ಕಂಟೋನ್ಮೆಂಟ್ ರೈಲ್ವೆ ಕಾಲೊನಿಯನ್ನು ಜೀವ ವೈವಿಧ್ಯತಾಣವಾಗಿಸಲು ಅವಕಾಶವಿಲ್ಲದ ಕಾರಣ ಅಧಿಸೂಚನೆ ಯನ್ನು ವಾಪಸ್ ಪಡೆಯಲಾಗಿದೆ ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದರು.

‘ರೈಲ್ವೆ ಕಾಯ್ದೆಯಡಿ ರೈಲ್ವೆ ಇಲಾಖೆಗೆ ಸೇರಿದ ಯಾವುದೇ ಭೂಮಿಯಲ್ಲಿ ಬೇರೆಯವರು ಹಸ್ತಕ್ಷೇಪ ಮಾಡಲು ಅವಕಾಶವಿಲ್ಲ. ಹೀಗಾಗಿ ಕಂಟೋನ್ಮೆಂಟ್ ರೈಲ್ವೆ ಕಾಲೊನಿಯ 8.61 ಎಕರೆಯನ್ನು ಜೀವವೈವಿಧ್ಯ ತಾಣ ಎಂದು ಘೋಷಿಸಿದ್ದ ಅಧಿಸೂಚನೆ ಹಿಂಪಡೆಯಲಾಗಿದೆಯೇ ಹೊರತು ಯಾವುದೇ ಒತ್ತಡಕ್ಕೆ ಮಣಿದಿಲ್ಲ’ ಎಂದರು.

‘ನಗರಕ್ಕೆ ಅತ್ಯಗತ್ಯವಾಗಿದ್ದ ಶ್ವಾಸತಾಣ ಮತ್ತು ಹಸಿರು ಪ್ರದೇಶ ಸಂರಕ್ಷಿಸಲು ಕಂಟೋನ್ಮೆಂಟ್ ರೈಲ್ವೆ ಕಾಲೊನಿಯ 8.61 ಎಕರೆಯಲ್ಲಿದ್ದ 371 ಮರ ಉಳಿಸಲು ಜೀವವೈವಿಧ್ಯ ತಾಣ ಎಂದು ಘೋಷಿಸಲಾಗಿತ್ತು. ಆದರೆ ರೈಲ್ವೆ ಕಾಯಿದೆಯಡಿ ಇದಕ್ಕೆ ನಿರ್ಬಂಧ ಇರುವುದರಿಂದ ಹಿಂಪಡೆಯುವ ನಿರ್ಧಾರ ಮಾಡಲಾಯಿತು’ ಎಂದು ತಿಳಿಸಿದರು.

‘ಈ ಸಂಬಂಧ ರೈಲ್ವೆ ಭೂ ಅಭಿವೃದ್ಧಿ ಪ್ರಾಧಿಕಾರದೊಂದಿಗೆ ಅಧಿಕಾರಿಗಳು ಮಾತನಾಡಿದ್ದು, ಪ್ರಾಧಿಕಾರವು ಪರಿಸರ ಸಂರಕ್ಷಣೆಗೆ ತಾನು ಬದ್ಧವಾಗಿದ್ದು, ಬಾಧಿತ ವೃಕ್ಷಗಳನ್ನು ಬೇರೆಡೆಗೆ ಸ್ಥಳಾಂತರಿಸುವ ಮತ್ತು ಮರು ನಾಟಿ ಮಾಡುವ ವಾಗ್ದಾನ ನೀಡಿದೆ’ ಎಂದು ಮಾಹಿತಿ ನೀಡಿದರು.

‘ರೈಲ್ವೆ ಭೂ ಪ್ರಾಧಿಕಾರವು ಜೀವವೈವಿಧ್ಯ ಕಾಯ್ದೆ 37(1) ರನ್ವಯ ಜಾರಿಯಲ್ಲಿರುವ ಯಾವುದೇ ಕಾನೂನು ಜಾರಿ ಮಾಡಲು ಮತ್ತು ಹಾಲಿ ಪ್ರದೇಶದಲ್ಲಿ ಕಟ್ಟಡ ನಿರ್ಮಾಣದ ಬಳಿಕವೂ ಸಸಿ ನೆಡುವ ಮೂಲಕ ಹಸಿರು ಹೊದಿಕೆ ರಕ್ಷಿಸುವುದಾಗಿ ಮತ್ತು ಕಂಟೋನ್ಮೆಂಟ್ ರೈಲ್ವೆ ಕಾಲೊನಿಯ ಜೀವವೈವಿಧ್ಯತೆ ರಕ್ಷಿಸುವುದಾಗಿ ಲಿಖಿತ ಭರವಸೆ ನೀಡಿದೆ’ ಎಂದು ಈಶ್ವರ ಖಂಡ್ರೆ ಸ್ಪಷ್ಟಪಡಿಸಿದರು.

ಹಳದಿ ಮಾರ್ಗ ನಿಲ್ದಾಣಗಳಿಗೆ ಬಿಎಂಟಿಸಿ ಬಸ್

ಬೆಂಗಳೂರು: ನಮ್ಮ ಮೆಟ್ರೊ ಹಳದಿ ಮಾರ್ಗದ ಹಲವು ನಿಲ್ದಾಣಗಳ ಸಮೀಪ ಬಿಎಂಟಿಸಿ ಬಸ್‌ಗಳ ತಂಗುದಾಣ ಆರಂಭಿಸಲಾಗಿದೆ.

ರಾಷ್ಟ್ರೀಯ ವಿದ್ಯಾಲಯ ರಸ್ತೆ – ಡೆಲ್ಟಾ ಎಲೆಕ್ಟ್ರಾನಿಕ್ಸ್ ಬೊಮ್ಮಸಂದ್ರ ನಡುವಿನ ಈ ಮಾರ್ಗದಲ್ಲಿ ಬಯೋಕಾನ್ ಹೆಬ್ಬಗೋಡಿ, ಬೆರೆಟೇನ ಅಗ್ರಹಾರ, ಸಿಂಗಸಂದ್ರ, ಹೊಂಗಸಂದ್ರ, ಕೇಂದ್ರ ರೇಷ್ಮೆ ಮಂಡಳಿ, ಆರ್.ವಿ. ರಸ್ತೆ ನಿಲ್ದಾಣ ಗಳ ಬಳಿ ಹೊಸದಾಗಿ ಮೆಟ್ರೊ ತಂಗುದಾಣಗಳನ್ನು ಆರಂಭಿಸಲಾಗಿದೆ. ಎಲೆಕ್ಟ್ರಾನಿಕ್ ಸಿಟಿ, ಹೊಸ ರಸ್ತೆ, ರಾಗಿಗುಡ್ಡ ಮೆಟ್ರೊ ನಿಲ್ದಾಣಗಳ ಬಳಿಗೆ ಬಸ್ ತಂಗುದಾಣ ಸ್ಥಳಾಂತರಿಸಲಾಗಿದೆ.

ಜಯದೇವ, ಬಿಟಿಎಂ ಲೇಔಟ್, ಬೊಮ್ಮನಹಳ್ಳಿ, ಕುಡ್ಲು ಗೇಟ್ ಹಾಗೂ ಇನ್ಫೋಸಿಸ್ ಫೌಂಡೇಷನ್ ಕೋನಪ್ಪನ ಅಗ್ರಹಾರ ಮೆಟ್ರೊ ನಿಲ್ದಾಣಗಳಲ್ಲಿ ಬಸ್ ತಂಗುದಾಣಗಳು ಈಗಾಗಲೇ 100 ಮೀ. ಒಳಗೆ ಲಭ್ಯವಿವೆ. ಹುಸ್ಕೂರು ರಸ್ತೆ ಮತ್ತು ಡೆಲ್ಟಾ ಎಲೆಕ್ಟ್ರಾನಿಕ್ಸ್ ಬೊಮ್ಮಸಂದ್ರದಲ್ಲಿ ಸ್ಥಳದ ಕೊರತೆಯಿಂದಾಗಿ ನಿಲ್ದಾಣಗಳನ್ನು ಸ್ಥಳಾಂತರ ಸಾಧ್ಯವಾಗಿಲ್ಲ ಎಂದು ನಮ್ಮ ಮೆಟ್ರೊ ಅಧಿಕಾರಿಗಳು ತಿಳಿಸಿದ್ದಾರೆ.

ರಸ್ತೆ ಡಾಂಬರೀಕರಣಕ್ಕೆ ಒತ್ತಾಯ

ದೊಡ್ಡಬಿದರಕಲ್ಲು ವಾರ್ಡ್ ವ್ಯಾಪ್ತಿಯ ನಾಗರಿಕರ ಆಕ್ರೋಶ

ಪ್ರಜಾವಾಣಿ ವಾರ್ತೆ

ಕೆಂಗೇರಿ: ‘ಮೂರು ವರ್ಷ ಮುಗಿಯುತ್ತಾ ಬಂದರೂ ರಸ್ತೆಗೆ ಡಾಂಬರು ಬೀಳುತ್ತಿಲ್ಲ. ಡಾಂಬರು ಹಾಕುವುದಕ್ಕಾಗಿ ರಸ್ತೆಗೆ ಹಾಕಿರುವ ಜಲ್ಲಿ ಕಲ್ಲನ್ನಾದರೂ ತೆಗೆದು ಉಪಕಾರ ಮಾಡಿ’ ಎಂದು ದೊಡ್ಡ ಬಿದರಕಲ್ಲು ವಾರ್ಡ್ ವ್ಯಾಪ್ತಿಯ ನಾಗರಿಕರು ಆಕ್ರೋಶ ವ್ಯಕ್ತಪಡಿಸಿದರು.

‘ಚುನಾವಣೆ ವೇಳೆ ರಸ್ತೆ ನಿರ್ಮಾಣದ ಆಶ್ವಾಸನೆ ನೀಡಿ ಜಲ್ಲಿ ಸುರಿಯಲಾಗಿತ್ತು. ಮೂರು ವರ್ಷವಾದರೂ ಗೆದ್ದ ಜನ ಪ್ರತಿನಿಧಿಗಳಾಗಲೀ, ಅಧಿಕಾರಿಗಳಾಗಲಿ ಇತ್ತ ತಿರುಗಿ ನೋಡಿಲ್ಲ. ರಸ್ತೆ ಅಭಿವೃದ್ಧಿ ಮರೀಚಿಕೆಯಾಗಿದೆ’ ಎಂದು ಲಕ್ಷ್ಮೀ ವೆಂಕಟೇಶ್ವರ ಬಡಾವಣೆ ನಿವಾಸಿ ಜಗದೀಶ್ ದೂರಿದರು.

‘ಮೂರು ತಿಂಗಳ ಒಳಗೆ ರಸ್ತೆ ಪೂರ್ಣಗೊಳಿಸದಿದ್ದರೆ, ರಸ್ತೆಯಲ್ಲಿರುವ ಜಲ್ಲಿಯನ್ನು ಬಿಬಿಎಂಪಿ ಕಚೇರಿ ಎದುರು ಸುರಿದು ಪ್ರತಿಭಟನೆ ನಡೆಸಲಾಗುವುದು’ ಎಂದು ಎಚ್ಚರಿಸಿದರು.

ಡಾಂಬರೀಕರಣಕ್ಕೆ ಒತ್ತಾಯಿಸಿ ಲಕ್ಷ್ಮೀ ವೆಂಕಟೇಶ್ವರ ಬಡಾವಣೆ ನಿವಾಸಿಗಳು ಪ್ರತಿಭಟನೆ ನಡೆಸಿದರು

ಅನ್ನಪೂರ್ಣೇಶ್ವರಿ ಲೇಔಟ್ ಸೋಮಶೇಖರ್ ಮಾತನಾಡಿ, ‘ರಸ್ತೆ ಸರಿ ಇಲ್ಲದ ಕಾರಣ ಶಾಲೆಯ ಬಸ್‌ಗಳು ಬರುತ್ತಿಲ್ಲ. ಹಿರಿಯ ನಾಗರಿಕರು ರಸ್ತೆಯಲ್ಲಿ ಓಡಾಡಲು ಸಾಧ್ಯವಾಗುತ್ತಿಲ್ಲ. ವಾಹನ ಸವಾರರು ಬಿದ್ದು ಗಾಯಗೊಳ್ಳುತ್ತಿದ್ದಾರೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ಹತ್ತಾರು ವರ್ಷಗಳಿಂದ ದೊಡ್ಡ ಬಿದರಕಲ್ಲು ವಾರ್ಡ್ ಬಿಬಿಎಂಪಿ ವ್ಯಾಪ್ತಿಯಲ್ಲಿದೆ. ಹೀಗಿದ್ದರೂ ಬಹುತೇಕ ಪ್ರದೇಶ, ಮೂಲ ಸೌಕರ್ಯ ಕೊರತೆಯಿಂದ ಸೊರಗುತ್ತಿದೆ’ ಎಂದು ಅಯ್ಯಂಗಾರ್ ಬಡಾವಣೆ ನಿವಾಸಿ ಗಿರಿಜಾ ಹೇಳಿದರು.

ವಿಧಾನ ಪರಿಷತ್ ಸದಸ್ಯ ಟಿ.ಎನ್. ಜವರಾಯಿಗೌಡ ಅವರು ಕೇಂದ್ರ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಜನ್ಮದಿನದ ಶುಭ ಕೋರಿದರು. ಯುವ ಮುಖಂಡರಾದ ಸಂತೋಷ್ ಜವರಾಯಿಗೌಡ, ಟ್ರಾವೆಲ್ ಮಂಜುನಾಥ್, ವಿಜಯ್ ಕುಮಾರ್, ಚಂದ್ರಣ್ಣ, ಸತೀಶ್ ಬೈರೇಗೌಡ, ಅರುಣ್ ಗೌಡ, ಹರೀಶ್ ಉಪಸ್ಥಿತರಿದ್ದರು

‘ಅಲೆಮಾರಿಗಳಿಗೆ ಮತ್ತೆ ನಯವಂಚನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪರಿಶಿಷ್ಟ ಜಾತಿಗಳ ಗುಂಪಿನಲ್ಲಿ ಅಸ್ಪೃಶ್ಯ ಅಲೆಮಾರಿ ಸಮುದಾಯಗಳು ಇತರೆ ಜಾತಿಗಳಿಗಿಂತ ಸಾಪೇಕ್ಷವಾಗಿ ಹೆಚ್ಚು ಹಿಂದುಳಿದಿದ್ದಾರೆ ಎನ್ನುವುದನ್ನೇ ತಾತ್ವಿಕವಾಗಿ ನಿರಾಕರಿಸಿರುವುದರ ಮೂಲಕ ಶೇ 1ರ ಮೀಸಲಾತಿ ನಿರಾಕರಣೆಗಿಂತಲೂ ದೊಡ್ಡ ನಯವಂಚನೆಯನ್ನು ಸರ್ಕಾರ ಮಾಡಿದೆ’ ಎಂದು ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಸಿ.ಎಸ್.ದ್ವಾರಕನಾಥ್ ದೂರಿದರು.

‘ಲಭ್ಯ ಅಂಕಿ ಅಂಶಗಳ ಆಧಾರದ ಮೇಲೆ ನಾಗಮೋಹನದಾಸ್ ಆಯೋಗ ಪರಿಶಿಷ್ಟ ಜಾತಿಗಳಲ್ಲಿನ ಅಸ್ಪೃಶ್ಯ ಮತ್ತು ಸ್ಪೃಶ್ಯ ಜಾತಿಗಳಿಗೆ ಮೀಸಲಾತಿ ಹಂಚಿಕೆ ಸಂಬಂಧ ವರದಿ ನೀಡಿತ್ತು. ಆದರೆ, ಸರ್ಕಾರ ಆ ಪ್ರಕಾರ ಮೀಸಲಾತಿ ನೀಡಲಿಲ್ಲ. ಇದನ್ನು ಪ್ರಶ್ನಿಸಿ ಅಲೆಮಾರಿ ಸಮುದಾಯವು ನ್ಯಾಯಾಲಯದ ಮೆಟ್ಟಿಲೇರಿದೆ. ಆಯೋಗ ಅನುಸರಿಸಿದ ಮಾನದಂಡಗಳೇ ಮೂಲಭೂತವಾಗಿ ತಪ್ಪೆಂದು ಪರೋಕ್ಷವಾಗಿ ಸರ್ಕಾರ ವಾದಿಸಿದೆ. ಸರ್ಕಾರ ತಾನೇ ಮಾಡಿದ್ದ ಆಯೋಗವೊಂದರ ವರದಿಗೆ ತಾನೇ ವಿರುದ್ಧವಾಗಿ ವಾದಿಸಿರುವುದು ಇತಿಹಾಸದಲ್ಲಿ ಹಿಂದೆಂದೂ ಕಂಡ ದಾಖಲೆಗಳಿಲ್ಲ’ ಎಂದಿದ್ದಾರೆ.

‘ಅಸ್ಪೃಶ್ಯ ಅಲೆಮಾರಿ ಸಮುದಾಯಗಳಿಗೆ ಶೇ 1ರ ಮೀಸಲಾತಿಯನ್ನು ಕೊಡುವ ಬಗ್ಗೆ ಪೂರಕ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಸರ್ಕಾರ ಹೇಳಿತ್ತು. ಸದ್ಯಕ್ಕೆ ಅದನ್ನು ಜಾರಿ ಮಾಡಲು ಸಾಧ್ಯವಾಗದೆ ಇರುವುದಕ್ಕೆ ತಾತ್ಕಾಲಿಕ ಮತ್ತು ಆಡಳಿತಾತ್ಮಕ ಕಾರಣಗಳಿವೆ ಎಂದು ಹೇಳುತ್ತಿದೆ. ಆಗ ಕೊಟ್ಟ ಭರವಸೆಗಳು ಬೂಟಾಟಿಕೆ ಮತ್ತು ನಯವಂಚಕತನದ ಹೇಳಿಕೆಗಳು ಎಂಬುದು ಸಾಬೀತಾಗಿದೆ’ ಎಂದಿದ್ದಾರೆ.

ನಗರದಲ್ಲಿ ಇಂದು

‘ಅಡ್ವಾನ್ಸ್ ಇನ್ ಕಂಪ್ಯೂಟೇಶನಲ್ ಆ್ಯಂಡ್ ಎಕ್ಸ್‌ಪೆರಿಮೆಂಟಲ್ ಅಪ್ರೋಚಸ್ ಇನ್ ಏರೋಸ್ಟ್ರಕ್ಚರ್ಸ್’ ವಿಷಯದ ಬಗ್ಗೆ ಅಂತರರಾಷ್ಟ್ರೀಯ ಸಮ್ಮೇಳನ: ಅತಿಥಿಗಳು: ವಿ. ನಾರಾಯಣನ್, ಪ್ರಲ್ಹಾದ ರಾಮರಾವ್, ಬಿ. ಗುರುದತ್ತ, ಐ.ಎಸ್. ರಾಜು, ಚನ್ನರಾಜ್ ರಾಯಚಂದ್, ಸಮೀರ್ ಕಾಮತ್, ವಿ.ಕೆ. ಆತ್ರೆ, ಎಸ್. ಸೋಮಶೇಖರ್, ಆಯೋಜನೆ ಹಾಗೂ ಸ್ಥಳ: ಸಿಎಂಎಸ್ ಬಿಸಿನೆಸ್ ಸ್ಕೂಲ್ ಆಫ್ ಜೈನ್, ಗಾಂಧಿನಗರ, ಬೆಳಿಗ್ಗೆ 9

‘ಬೆಂಗಳೂರಿಗೆ ನಿಸರ್ಗ ಆಧಾರಿತ ಪರಿಹಾರಗಳು– ಚರಂಡಿ ವ್ಯವಸ್ಥೆಯ ಪರ್ಯಾಯಾಲೋಚನೆಗಳು’ ಕಾರ್ಯಾಗಾರ: ಆರಂಭಿಕ ಮಾತು: ಶ್ವೇತಾ ಪಾಂಡೆ, ಪ್ರಸ್ತುತಿ: ನಿತ್ಯಾ ರಮೇಶ್, ದಿಕ್ಸೂಚಿ ಭಾಷಣ: ಮಹೇಶ್ವರ ರಾವ್, ಆಯೋಜನೆ: ಜನ ಅರ್ಬನ್ ಸ್ಪೇಸ್ ಫೌಂಡೇಷನ್, ಸ್ಥಳ: ಟರ್ಫ್ ಹಾಲ್, ರಿನೈಸಾನ್ಸ್ ಬೆಂಗಳೂರು ರೇಸ್ ಕೋರ್ಸ್ ಹೋಟೆಲ್, ರೇಸ್ ಕೋರ್ಸ್ ರಸ್ತೆ ಬೆಳಿಗ್ಗೆ 9.30

ಅಲ್ಪಸಂಖ್ಯಾತರ ಹಕ್ಕುಗಳ ದಿನ: ಪ್ರಧಾನ ಭಾಷಣ: ಬಿ.ಎಸ್. ಪಾಟೀಲ, ಉಪಸ್ಥಿತಿ: ಯು.ಟಿ. ಖಾದರ್, ಉದ್ಘಾಟನೆ: ಜಮೀರ್ ಅಹಮ್ಮದ್ ಖಾನ್, ಅತಿಥಿ: ಬಾನು ಮುಷ್ತಾಕ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಸನ್ಮಾನ: ಎಲ್. ಕೆ. ಅತೀಕ್, ಆಯೆಷಾಬಾನು, ಹುಸನೇಸಾಬ್ ನದಾಫ್, ಹುದಾ ಮಸ್ರೂರ್, ಜೂಡ್ ಫೆಲಿಕ್ಸ್ ಸೆಬಾಸ್ಟಿಯನ್, ಪದ್ಮಶ್ರೀ ಎನ್., ಸರ್ದಾರ್ ಮನ್ಮಿತ್ ಸಿಂಗ್ ಗ್ರಂಥಿ, ಖೇನ್ ರಿಂಪೋಚೆ ಗಶೆ ನವಾಂಗ್ ಸಂಗಯ್, ಶೆರಿಯಾರ್ ಡಿ. ವಕೀಲ್, ಆಯೋಜನೆ: ರಾಜ್ಯ ಅಲ್ಪಸಂಖ್ಯಾತರ ಆಯೋಗ, ಸ್ಥಳ: ಡಿ. ದೇವರಾಜ ಅರಸು ಭವನದ ಸಭಾಂಗಣ, ಮಿಲ್ಲರ್ಸ್ ರಸ್ತೆ, ವಸಂತನಗರ, ಬೆಳಿಗ್ಗೆ 11

ಬಾನು ಮುಷ್ತಾಕ್

ಎರಡು ನಾಟಕಗಳ ಪ್ರದರ್ಶನ: ಮಧ್ಯಾಹ್ನ 2ಕ್ಕೆ ಶ್ರೀರಾಮ ಕಲಾ ತಂಡದಿಂದ ‘ಎಬ್ಬೆಟ್ ರಾಮಕ್ಕ’ ನಾಟಕ ಪ್ರದರ್ಶನ, ನಿರ್ದೇಶನ: ಹೇಮಂತ್ ಕುಮಾರ್, ಮಧ್ಯಾಹ್ನ 3ಕ್ಕೆ ಗಂಧರ್ವ ಸೇವಾ ಕಲಾ ತಂಡದಿಂದ ‘ಗುರು–ಶಿಷ್ಯರು’ ನಾಟಕ ಪ್ರದರ್ಶನ, ನಿರ್ದೇಶನ: ಜಯಚಂದ್ರ, ಆಯೋಜನೆ: ಸಿಂಧು ಭೈರವಿ ಕಲಾ ತಂಡ ಟ್ರಸ್ಟ್, ಸ್ಥಳ: ನಿರಾಶ್ರಿತರ ಪರಿಹಾರ ಕೇಂದ್ರ, ಮಾಗಡಿ ರಸ್ತೆ

ರಾಷ್ಟ್ರೀಯ ಪಿಂಚಣಿ ಪದ್ಧತಿ ಬಗ್ಗೆ ದುಂಡು ಮೇಜಿನ ಸಭೆ: ಆಯೋಜನೆ: ಪೆನ್ಶನ್ ಫಂಡ್ ರೆಗ್ಯುಲೇಟರಿ ಆ್ಯಂಡ್ ಡೆವಲಪ್‌ಮೆಂಟ್ ಅಥಾರಿಟಿ (ಪಿಎಫ್‌ಆರ್‌ಡಿಎ), ಸ್ಥಳ: ತಾಜ್ ವೆಸ್ಟ್‌ಎಂಡ್, ಮಧ್ಯಾಹ್ನ 2.15

‘ಭಗವದ್ಗೀತೆ’ ಅರ್ಥಾತ್ ‘ಧರ್ಮರಾಜ್ಯ ಸ್ಥಾಪನೆ’ ನಾಟಕ ಪ್ರದರ್ಶನ: ಉದ್ಘಾಟನೆ: ವಿಭು ಬಖ್ರು, ಉಪಸ್ಥಿತಿ: ಅನು ಶಿವರಾಮನ್, ಕೆ.ಎಸ್. ಮುದಗಲ್, ರಾಜೇಶ್ ರೈ ಕೆ., ಶಶಿಕಿರಣ್ ಶೆಟ್ಟಿ ಕೆ., ಅಧ್ಯಕ್ಷತೆ: ವಿವೇಕ್ ಸುಬ್ಬಾರೆಡ್ಡಿ, ಆಯೋಜನೆ: ವಕೀಲರ ಸಂಘ, ಸ್ಥಳ: ಹೈಕೋರ್ಟ್ ಆವರಣ, ಸಂಜೆ 4

ಕರ್ನಾಟಕ ರಾಜ್ಯೋತ್ಸವ ಮತ್ತು ‘ಪೋಷಕ ಕಲಾರತ್ನ ಪ್ರಶಸ್ತಿ’ ಪ್ರದಾನ ಸಮಾರಂಭ: ಅತಿಥಿಗಳು: ಎಂ. ನರಸಿಂಹಲು, ಸಾ.ರಾ. ಗೋವಿಂದು, ದೊಡ್ಡಣ್ಣ, ರಮೇಶ್ ಭಟ್, ಉಮೇಶ್ ಬಣಕಾರ್, ಸೋಮಶೇಖರ್, ಸೋಮಸುಂದರ್, ಲಗ್ಗೆರೆ ನಾರಾಯಣಸ್ವಾಮಿ, ಆಯೋಜನೆ: ಕರ್ನಾಟಕ ಚಲನಚಿತ್ರ ಪೋಷಕ ಕಲಾವಿದರ ಸಂಘ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಸಂಜೆ 4

ಭರತನಾಟ್ಯ ಪ್ರದರ್ಶನ: ಮಾರ್ಗಂ ಸ್ಕೂಲ್ ಆಫ್ ಪರ್ಫಾರ್ಮಿಂಗ್ ಆರ್ಟ್ಸ್ ವಿದ್ಯಾರ್ಥಿಗಳಿಂದ, ಸ್ಥಳ: ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 45ನೇ ಅಡ್ಡರಸ್ತೆ, ಜಯನಗರ 5ನೇ ಬಡಾವಣೆ, ಸಂಜೆ 5.15

ಆಂಡಾಳ್ ರಚನೆಯ ‘ತಿರುಪ್ಪಾವೈ’ ಬಗ್ಗೆ ಕನ್ನಡ ಉಪನ್ಯಾಸ: ಕೆ.ವಿ. ಪದ್ಮಾವತಿ ಶ್ರೀನಿವಾಸರಂಗನ್, ಆಯೋಜನೆ: ಟಿಟಿಡಿ ಆಳ್ವಾರ್ ದಿವ್ಯಪ್ರಬಂಧ ಪ್ರಾಜೆಕ್ಟ್, ಸೀತಾರಾಮಾಂಜನೇಯ ಸ್ವಾಮಿ ದೇವಸ್ಥಾನ ಸಮಿತಿ, ಸ್ಥಳ: ಸೀತಾರಾಮಾಂಜನೇಯ ಸ್ವಾಮಿ ದೇವಸ್ಥಾನ, ಸಮೀರಪುರ, ಕೆಂಪೇಗೌಡನಗರ, ಸಂಜೆ 5.30

ಆಂಡಾಳ್ ವಿರಚಿತ ತಿರುಪ್ಪಾವೈ ಜ್ಞಾನಯಜ್ಞ ಪ್ರವಚನ: ಪ್ರಭಾ ಶ್ರೀಧರ್, ಆಯೋಜನೆ ಮತ್ತು ಸ್ಥಳ: ಕನ್ನಡ ಸಹೃದಯರ ಪ್ರತಿಷ್ಠಾನ, ಕುಮಾರವ್ಯಾಸ ಮಂಟಪ, ರಾಜಾಜಿನಗರ, ಸಂಜೆ 5.30

‘ರಂಗ್–ರಸ್: ದಿ ಸೋಲ್ ಆಫ್ ಕಥಕ್ ಅಕ್ರಾಸ್ ಏರಾಸ್’ ನೃತ್ಯ ರೂಪಕ ಪ್ರದರ್ಶನ: ವರ್ಷಾ ಪ್ರಸಾದ್, ಸಿಂಥಿಯಾ ವಿಜಯಕುಮಾರ್, ಆಯೋಜನೆ ಹಾಗೂ ಸ್ಥಳ: ಮೆಡ್ಡೈ ದಿ ಸ್ಟೇಜ್, ಕೋರಮಂಗಲ, ಸಂಜೆ 6

‘ಬಂಕಾಪುರದಲ್ಲಿ ರನ್ನಮಯ್ಯ’ ವಿಷಯದ ಬಗ್ಗೆ ಉಪನ್ಯಾಸ: ಎಸ್. ಚಂಪಕಲಕ್ಷ್ಮಿ, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಹಾಗೂ ಸ್ಥಳ: ಕನ್ನಡ ಯುವಜನ ಸಂಘ, ಎಚ್. ಸಿದ್ದಯ್ಯ ರಸ್ತೆ, ಹೊಂಬೇಗೌಡ ನಗರ, ಸಂಜೆ 6.30

ಮಾರ್ಗಶೀರ್ಷೋತ್ಸವ–2025: ಭಕ್ತಿ ಸಂಗೀತ: ವಸುಧಾ ರವಿ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಸುರಭಾರತೀ, ಎಚ್‌ಆರ್‌ಬಿಆರ್ ಲೇಔಟ್, ಸಂಜೆ 6.30ರಿಂದ

ಹರಿದಾಸ ನಮನ: ಗಾಯನ: ಅಪೂರ್ವ ಸಂದೀಪ್, ಕೀರ್ತಿ ಬೆಳವಾಡಿ, ಕೀ-ಬೋರ್ಡ್: ಶ್ರೀನಿಧಿ, ತಬಲಾ: ಎಂ.ಜಿ. ಜಯಸಿಂಹ, ಕೊಳಲು: ಸಂದೀಪ್ ರತ್ನಾಕರ್, ಆಯೋಜನೆ ಹಾಗೂ ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಪವಮಾನಪುರ, ಬನಶಂಕರಿ 6ನೇ ಹಂತ, ರಾತ್ರಿ 7

‘ಡುವಲ್ ಮಾರ್ಗಂ–7’ ಒಡಿಸಿ ಮತ್ತು ಕೂಚುಪುಡಿ ನೃತ್ಯ ಪ್ರದರ್ಶನ: ಶುಭಂ ಓಜಾ, ಗುರುರಾಜ್ ಎನ್., ಆಯೋಜನೆ ಮತ್ತು ಸ್ಥಳ: ಬೆಂಗಳೂರು ಇಂಟರ್‌ನ್ಯಾಷನಲ್ ಸೆಂಟರ್, ದೊಮ್ಮಲೂರು, ರಾತ್ರಿ 7

‘ಆದದ್ದೆಲ್ಲಾ ಒಳಿತೇ..?’ ನಾಟಕ ಪ್ರದರ್ಶನ: ಪ್ರಸ್ತುತಿ: ಕ್ರಿಯೇಟಿವ್ ಥಿಯೇಟರ್, ಸ್ಥಳ: ರಂಗಶಂಕರ, ಜೆ.ಪಿ.ನಗರ, ರಾತ್ರಿ 7.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಸಾಂಸ್ಕೃತಿಕ ಮುನ್ನೋಟ

‘ಸಂಸಾರದಲ್ಲಿ ಸನಿದಪ’ ನಾಟಕದ ದೃಶ್ಯ

‘ಸಂಸಾರದಲ್ಲಿ ಸನಿದಪ’ ನಾಟಕ

ಬೆಂಗಳೂರು: ಕರ್ನಾಟಕ ನಾಟಕ ಅಕಾಡೆಮಿಯು ‘ತಿಂಗಳ ನಾಟಕ’ ಯೋಜನೆಯಡಿ ಇದೇ 20ರಂದು ಸಂಜೆ 6.30ಕ್ಕೆ ಮಲ್ಲತ್ತಹಳ್ಳಿಯ ಕಲಾಗ್ರಾಮ ಸಮುಚ್ಚಯದಲ್ಲಿ ‘ಸಂಸಾರದಲ್ಲಿ ಸನಿದಪ’ ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಸಿರಿಗೇರಿಯ ಧಾತ್ರಿ ರಂಗಸಂಸ್ಥೆ ಈ ನಾಟಕವನ್ನು ಪ್ರಸ್ತುತಪಡಿಸಲಿದೆ. ಇಟಾಲಿಯನ್ ನಾಟಕಕಾರ ದಾರಿಯೋ ಫೋ ಅವರು ರಚಿಸಿದ ನಾಟಕವನ್ನು ಕೆ.ವಿ ಅಕ್ಷರ ಅವರು ಕನ್ನಡಕ್ಕೆ ತಂದಿದ್ದಾರೆ. ಮಂಡ್ಯ ರಮೇಶ್ ಅವರು ನಿರ್ದೇಶಿಸಿದ್ದಾರೆ.

ಹಾಸ್ಯನಟ ಎಂ.ಎಸ್. ಉಮೇಶ್ ಅವರಿಗೆ ನುಡಿ ನಮನ ಕಾರ್ಯಕ್ರಮವನ್ನೂ ಹಮ್ಮಿಕೊಳ್ಳಲಾಗಿದೆ. ಚಿಂದೋಡಿ ಬಂಗಾರೇಶ್ ಮತ್ತು ಡಿಂಗ್ರಿ ನಾಗರಾಜ್ ಭಾಗವಹಿಸುತ್ತಾರೆ. ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ ಅಧ್ಯಕ್ಷತೆ ವಹಿಸಲಿದ್ದಾರೆ.

‘ಲೈಟ್ಸ್ ಆಫ್!’ ನಾಟಕ ಪ್ರದರ್ಶನ

ಬೆಂಗಳೂರು: ಅನೇಕ ತಂಡವು ಇದೇ 19ರಂದು ಸಂಜೆ 7 ಗಂಟೆಗೆ ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿ ‘ಲೈಟ್ಸ್ ಆಫ್!’ ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಪೀಟರ್ ಷಾಫರ್ ಅವರ ಈ ನಾಟಕವನ್ನು ಸುರೇಶ್ ಆನಗಳ್ಳಿ ನಿರ್ದೇಶಿಸಿದ್ದಾರೆ. ಟಿಕೆಟ್‌ಗಳು ಬುಕ್‌ಮೈ ಶೋದಲ್ಲಿ ಲಭ್ಯವಿದೆ.

‘ಅಂಧಯುಗ’ ನಾಟಕ ಪ್ರದರ್ಶನ

ಬೆಂಗಳೂರು: ರಾಷ್ಟ್ರೀಯ ನಾಟಕ ಶಾಲೆ ಬೆಂಗಳೂರು ಕೇಂದ್ರವು ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿ ಇರುವ ತನ್ನ ಕೇಂದ್ರದಲ್ಲಿ ಇದೇ 18ರಿಂದ 23ರವರೆಗೆ ಸಂಜೆ 7 ಗಂಟೆಗೆ ‘ಅಂಧಯುಗ’ ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಕೇಂದ್ರದ 10ನೇ ಬ್ಯಾಚ್‌ನ ವಿದ್ಯಾರ್ಥಿಗಳು ಈ ನಾಟಕ ಪ್ರದರ್ಶಿಸಲಿದ್ದಾರೆ. ಧರ್ಮವೀರ ಭಾರತಿ ಅವರು ಈ ನಾಟಕ ರಚಿಸಿದ್ದು, ಸಿದ್ದಲಿಂಗ ಪಟ್ಟಣಶೆಟ್ಟಿ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಈ ನಾಟಕವನ್ನು ಆರ್. ರಾಜು ನಿರ್ದೇಶಿಸಿದ್ದಾರೆ. ಪ್ರವೇಶ ಉಚಿತ ಇರಲಿದೆ ಎಂದು ಕೇಂದ್ರದ ನಿರ್ದೇಶಕಿ ವೀಣಾ ಶರ್ಮಾ ಭೂಸನೂರುಮಠ ತಿಳಿಸಿದ್ದಾರೆ.

ರುಚಿತಾ ಶಾಸ್ತ್ರಿ ರಂಗಪ್ರವೇಶ

ಬೆಂಗಳೂರು: ಲೀಲಾ ನಾಟ್ಯ ಕಲಾ ವೃಂದವು ಇದೇ 23ರಂದು ಸಂಜೆ 5.30ಕ್ಕೆ ಜೆ.ಸಿ.ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ ರುಚಿತಾ ಶಾಸ್ತ್ರಿ ಅವರ ಭರತನಾಟ್ಯ ರಂಗಪ್ರವೇಶ ಹಮ್ಮಿಕೊಂಡಿದೆ.

ರುಚಿತಾ ಅವರು ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ ಅಧ್ಯಕ್ಷ ನ್ಯಾಯಮೂರ್ತಿ ಎಚ್.ಪಿ. ಪ್ರಭಾಕರ ಶಾಸ್ತ್ರಿ ಮತ್ತು ಉಷಾ ಅವರ ಪುತ್ರಿಯಾಗಿದ್ದು, ಉದಯ್ ಕೃಷ್ಣ ಉಪಾಧ್ಯಾಯ ಅವರ ಬಳಿ ಭರತನಾಟ್ಯ ಅಭ್ಯಾಸ ಮಾಡಿದ್ದಾರೆ. ರಂಗಪ್ರವೇಶ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ, ಕಲಾವಿದರಾದ ರಾಧಾ ಶ್ರೀಧರ್, ಮೈಸೂರು ಎಲ್. ಲೀಲಾ ಕದಂಬಿ ಭಾಗವಹಿಸುತ್ತಾರೆ. ಎಲ್. ಲೀಲಾವತಿ ಉಪಾಧ್ಯಾಯ ಮತ್ತು ಟಿ.ಎಸ್. ನಾಗರಾಜ ಉಪಾಧ್ಯಾಯ ಉಪಸ್ಥಿತರಿರುತ್ತಾರೆ.

ರುಚಿತಾ ಶಾಸ್ತ್ರಿ

ಪ್ರತಿ ಗುರುವಾರ ಪ್ರಕಟವಾಗುವ ‘ಸಾಂಸ್ಕೃತಿಕ ಮುನ್ನೋಟ’ ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ–ಮೇಲ್‌ಗೆ nagaradalli_indu@prajavani.co.in (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ

prajavani.net prajavani
ಗುರುವಾರ, ಡಿಸೆಂಬರ್ 18, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 348 | ಪುಟ 18
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಶ್ರೀಲಂಕಾಕ್ಕೆ ಶ್ರೀಧರ್

ಭಾರತದ ಆರ್.ಶ್ರೀಧರ್ ಅವರು 2026ರ ಟಿ20 ವಿಶ್ವಕಪ್ ಟೂರ್ನಿ ಮುಗಿಯುವವರೆಗೆ ಶ್ರೀಲಂಕಾ ಕ್ರಿಕೆಟ್ ತಂಡದ ಫೀಲ್ಡಿಂಗ್ ಕೋಚ್ ಆಗಿ ಕಾರ್ಯ ನಿರ್ವಹಿಸಲಿದ್ದಾರೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ

ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 84,559 | ನಿಫ್ಟಿ 25,818 | $/₹ 90.38 | ಚಿನ್ನ (Std. 10g) ₹1,38,550 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,13,000 (ಬೆಂಗಳೂರು)

ಕೃಷ್ಣ ವಿರುದ್ಧ ಭೂ ಕಬಳಿಕೆ ಆರೋಪ

21 ಎಕರೆ 16 ಗುಂಟೆಯಷ್ಟು ಕೆರೆ, ಸ್ಮಶಾನ ಜಮೀನು ದಾಖಲೆ ತಿರುಚಿ ಅಕ್ರಮ: ಬಿಜೆಪಿ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ಕೋಲಾರ ಜಿಲ್ಲೆ ನರಸಾಪುರ ಹೋಬಳಿಯ ಗರುಡನಪಾಳ್ಯ ಗ್ರಾಮದಲ್ಲಿ ಕೆರೆ ಮತ್ತು ಸ್ಮಶಾನ ಭೂಮಿಯ ದಾಖಲೆ ತಿದ್ದಿ ಖರಾಬು ಎಂದು ತಮ್ಮ ಹೆಸರಿಗೆ ಮಾಡಿಕೊಳ್ಳುವ ಮೂಲಕ ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ಅಕ್ರಮ ಎಸಗಿದ್ದಾರೆ ಎಂದು ಬಿಜೆಪಿ ನಾಯಕರು ಆರೋಪಿಸಿದರು.

ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಮುಖ್ಯ ಸಚೇತಕ ಎನ್.ರವಿಕುಮಾರ್ ಮತ್ತು ಬಿಜೆಪಿ ರಾಜ್ಯ ಕಾರ್ಯದರ್ಶಿ ತಮ್ಮೇಶಗೌಡ ಅವರು ಬುಧವಾರ ಇಲ್ಲಿ ಸುದ್ದಿಗೋಷ್ಠಿ ನಡೆಸಿ ಪೂರಕ ದಾಖಲೆಗಳನ್ನು ಬಿಡುಗಡೆ ಮಾಡಿದರು. ಕೃಷ್ಣಬೈರೇಗೌಡ ಅವರು ಕೂಡಲೇ ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.

ಆರೋಪವೇನು?: ನರಸಾಪುರ ಹೋಬಳಿ ಗರುಡನಪಾಳ್ಯ ಗ್ರಾಮದ 20 ಎಕರೆ 16 ಗುಂಟೆ (ಸರ್ವೆ ಸಂಖ್ಯೆ 46) ಜಮೀನು ಮೂಲ ದಾಖಲೆಯಲ್ಲಿ ಕೆರೆ ಎಂದು ನಮೂದಾಗಿದೆ. ಅದೇ ರೀತಿ ಸರ್ವೆ ಸಂಖ್ಯೆ 47 ರಲ್ಲಿ ಒಂದು ಎಕರೆ ಜಮೀನು ಮೂಲ ದಾಖಲೆಯ ಪ್ರಕಾರ ಸ್ಮಶಾನ ಎಂದು ನಮೂದಾಗಿದೆ.

ಆದರೆ, ಕೆರೆ ಮತ್ತು ಸ್ಮಶಾನಕ್ಕೆ ಸೇರಿದ ಒಟ್ಟು 21ಎಕರೆ 16 ಗುಂಟೆ ಜಮೀನಿನ ದಾಖಲೆಗಳನ್ನು ತಿದ್ದಿ, ಖರಾಬು ಎಂದು ನಕಲಿ ದಾಖಲೆ ಸೃಷ್ಟಿಸಲಾಗಿದೆ. 2001-02ರಲ್ಲಿ ಈ ಕೃತ್ಯ ನಡೆದಿದೆ. ಕೃಷ್ಣಬೈರೇಗೌಡ ಮತ್ತು ಅವರ ಕುಟುಂಬದ ಹೆಸರಿಗೆ ಬರೆಸಲಾಗಿದೆ. ಈಗಲೂ ಕೃಷ್ಣಬೈರೇಗೌಡ ಅವರ ಕುಟುಂಬದ ಹೆಸರಿನಲ್ಲಿಯೇ ಇದೆ. ಕಂದಾಯ ಕಾನೂನಿನ ಪ್ರಕಾರ, ಸರ್ಕಾರಿ ಜಮೀನು ಅದರಲ್ಲೂ ಕರೆ, ಸ್ಮಶಾನದ ಜಮೀನುಗಳನ್ನು ಯಾವುದೇ ವ್ಯಕ್ತಿಯ ಹೆಸರಿಗೆ ದಾಖಲೆ ಮಾಡಲು ಸಾಧ್ಯವಿಲ್ಲ. ಈ ಜಮೀನಿನ ಮಾರುಕಟ್ಟೆ ಮೌಲ್ಯ ₹100 ಕೋಟಿ ಮೀರುತ್ತದೆ ಎಂದು ನಾರಾಯಣಸ್ವಾಮಿ ಹೇಳಿದರು.

1978ರ ಮೂಲ ದಾಖಲೆಗಳಲ್ಲಿ ಕೆರೆ, ಸ್ಮಶಾನ ಎಂದೇ ಇದೆ. ಕೆರೆ ಮತ್ತು ಸ್ಮಶಾನ ಜಮೀನು ದಾಖಲೆಗಳನ್ನು ಬದಲಾವಣೆ ಮಾಡಲು ಯಾವ ಅಧಿಕಾರಿಗೂ ಅಧಿಕಾರವಿಲ್ಲ. ಸಚಿವರು ಅಧಿಕಾರ ದುರ್ಬಳಕೆ ಮಾಡುವ ಮೂಲಕ ಅಕ್ರಮ ಎಸಗಿದ್ದಾರೆ ಎಂದು ಅವರು ಆರೋಪಿಸಿದರು.

'ತಾವು ಪ್ರಾಮಾಣಿಕರು, ಶುದ್ಧಹಸ್ತ ರೆಂದು ಕೃಷ್ಣಬೈರೇಗೌಡ ಬಿಂಬಿಸಿ ಕೊಳ್ಳುತ್ತಾರೆ. ದಾಖಲೆಗಳನ್ನು ಸರ್ಕಾರಿ ಜಮೀನನ್ನು ತಮ್ಮ ಹೆಸರಿಗೆ ಮಾಡಿಕೊಂಡಿರುವುದು ಅಕ್ಷಮ್ಯ ಅಪರಾಧ. ಇದು 'ಬೇಲಿಯೇ ಎದ್ದು ಹೊಲ ಮೇಯ್ದ' ಪ್ರಕರಣ ಎಂದು ಎನ್. ರವಿ ಕುಮಾರ್ ಹೇಳಿದರು.

4

'ಪಿತ್ರಾರ್ಜಿತ ಆಸ್ತಿ: ಟೀಕೆಗಾಗಿ ಆರೋಪ'



ಕೃಷ್ಣ ಬೈರೇಗೌಡ

'ರಾಜಕೀಯ ಟೀಕೆಗಾಗಿ ವಿರೋಧ ಪಕ್ಷದ ನಾಯಕರು ನನ್ನ ಮೇಲೆ ಭೂ ಅಕ್ರಮದ ಆರೋಪ ಮಾಡುತ್ತಿದ್ದಾರೆ. ಅವರು ಮಾಡಿರುವ ಆರೋಪದ ಕುರಿತು ಲೋಕಾಯುಕ್ತ ಸೇರಿದಂತೆ ಯಾವುದೇ ತನಿಖೆಗೂ ಸಿದ್ಧ' ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಹೇಳಿದರು.

ಛಲವಾದಿ ನಾರಾಯಣಸ್ವಾಮಿ ಅವರ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, 'ಆರೋಪ ಮಾಡಬೇಕು ಎಂಬ ಕಾರಣಕ್ಕೆ ಯಾವುದೇ ವಿಚಾರ ಇಲ್ಲದಿದ್ದರೂ ಹುಡುಕಿ ಆರೋಪ ಮಾಡಲಾಗುತ್ತಿದೆ. ಗರುಡನ ಪಾಳ್ಯದ ಭೂಮಿ ನನ್ನ ತಾತ ಅವರಿಂದ ಬಂದ ಪಿತ್ರಾರ್ಜಿತ ಆಸ್ತಿ' ಎಂದರು.

4

ಕ್ಷಮೆಯಾಚಿಸಿದ ಸಚಿವೆ ಲಕ್ಷ್ಮಿ

ಲಕ್ಷ್ಮಿ ಹೆಬ್ಬಾಳಕರ

ಸುವರ್ಣ ವಿಧಾನಸೌಧ (ಬೆಳಗಾವಿ): 'ಗೃಹಲಕ್ಷ್ಮಿ' ಯೋಜನೆಯ ಹಣ ಪಾವತಿ ಕುರಿತಂತೆ ಸದನಕ್ಕೆ ತಪ್ಪು ಮಾಹಿತಿ ನೀಡಿದ್ದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರು ವಿರೋಧ ಪಕ್ಷಗಳು ಹಾಕಿದ ಪಟ್ಟಿಗೆ ಮಣಿದು, ಕ್ಷಮೆ ಕೇಳಿದ ಪ್ರಸಂಗಕ್ಕೆ ವಿಧಾನಸಭೆ ಬುಧವಾರ ಸಾಕ್ಷಿಯಾಯಿತು.

ಸಚಿವೆ ಕ್ಷಮೆ ಯಾಚಿಸಿದರೂ ತೃಪ್ತರಾಗದ ವಿರೋಧ ಪಕ್ಷಗಳ ಸದಸ್ಯರು, ಎರಡು ತಿಂಗಳ ಬಾಕಿಯನ್ನು ಯಾವಾಗ ಪಾವತಿಸಲಾಗುವುದು ಎಂಬುದನ್ನು ಸ್ಪಷ್ಟವಾಗಿ ಹೇಳಿಲ್ಲವೆಂದು ಆರೋಪಿಸಿ ಸಭಾತ್ಯಾಗ ಮಾಡಿದರು.

ಕಲಾಪ ಆರಂಭವಾಗುತ್ತಿದ್ದಂತೆ ವಿಚಾರ ಪ್ರಸ್ತಾಪಿಸಿದ ವಿರೋಧ ಪಕ್ಷದ ನಾಯಕ ಆರ್.ಅಶೋಕ, 'ಮಹೇಶ ಟೆಂಗಿನಕಾಯಿ ಅವರ ಪ್ರಶ್ನೆಗೆ ಗೃಹಲಕ್ಷ್ಮಿ ಯೋಜನೆಯ ಕಳೆದ ಫೆಬ್ರುವರಿ ಮತ್ತು ಮಾರ್ಚ್ ತಿಂಗಳ ಕಂತು ಪಾವತಿಸಲಾಗಿದೆ ಎಂದು ಲಕ್ಷ್ಮಿ ಹೆಬ್ಬಾಳಕರ ತಪ್ಪು ಉತ್ತರ ನೀಡಿದ್ದಾರೆ. ಮೂರು ದಿನದಿಂದ ಅವರು ಸದನಕ್ಕೆ ಬರುತ್ತಿಲ್ಲ. ಇದು ಸದನದ ಗೌರವದ ಪ್ರಶ್ನೆ. ಸಚಿವರ ಕರೆಯಿಸಿ ಸ್ಪಷ್ಟನೆ ಕೊಡಿಸಿ' ಎಂದು ಆಗ್ರಹಿಸಿದರು.

ಅದಕ್ಕೆ ಸಚಿವ ಪ್ರಿಯಾಂಕ್ ಖರ್ಗೆ, 'ಈ ವಿಚಾರವನ್ನು ಮುಖ್ಯಮಂತ್ರಿಯವರ ಗಮನಕ್ಕೆ ತರಲಾಗಿದೆ. ಉದ್ದೇಶಪೂರ್ವಕವಾಗಿ ಅವರು ತಪ್ಪು ಮಾಹಿತಿ ನೀಡಿಲ್ಲ' ಎಂದರು.

4

ಪರಿಸರ ಪುನಶ್ಚೇತನಕ್ಕಾಗಿ ಮೀಸಲಾದ ಹಣ ಅನ್ಯ ಉದ್ದೇಶಕ್ಕೆ

ಗಣಿ: ₹770 ಕೋಟಿ ಅಕ್ರಮ

• ಜಯಸಿಂಹ ಆರ್.

ಸುವರ್ಣ ವಿಧಾನಸೌಧ (ಬೆಳಗಾವಿ): ಗಣಿಗಾರಿಕೆಯಿಂದ ತೊಂದರೆಗೆ ಒಳಗಾದ ಜನರು ಮತ್ತು ಪರಿಸರದ ಪುನಶ್ಚೇತನಕ್ಕಾಗಿ ರೂಪಿಸಿದ 'ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್-ಡಿಎಂಎಫ್‌ಟಿ' ಯೋಜನೆಯ ಅಡಿ 2016ರಿಂದ 2023ರ ಅವಧಿಯಲ್ಲಿ ₹770 ಕೋಟಿಯಷ್ಟು ನಿಧಿಯನ್ನು ನಿಯಮ-ಬಾಹಿರವಾಗಿ ವೆಚ್ಚ ಮಾಡಲಾಗಿದೆ. ರಾಜ್ಯವು ಈ ಯೋಜನೆ ಅನುಷ್ಠಾನ ದಲ್ಲಿ ಸಂಪೂರ್ಣ ಹಾದಿ ತಪ್ಪಿದೆ ಎಂದು ಮಹಾಲೇಖಪಾಲರ ವರದಿ (ಸಿಎಜಿ) ಹೇಳಿದೆ.

ಇಲ್ಲಿ ಅಧಿವೇಶನದಲ್ಲಿ ಬುಧವಾರ ಮಂಡಿಸಲಾದ, 'ಪ್ರಧಾನ ಮಂತ್ರಿ ಖನಿಜ ಕ್ಷೇತ್ರಕಲ್ಯಾಣ ಯೋಜನೆಯ ಮೇಲಿನ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ವರದಿ: 2018-23'ರಲ್ಲಿ ಈ ಮಾಹಿತಿ ಇದೆ.

ಗಣಿಗಾರಿಕೆಯಿಂದ ತೊಂದರೆಗೆ ಒಳಗಾದ ಪ್ರದೇಶದಲ್ಲಿನ ಜನರ ಸಮಗ್ರ ಅಭಿವೃದ್ಧಿ ಮತ್ತು ಪರಿಸರದ ಪುನಶ್ಚೇತನಕ್ಕಾಗಿ ಕೇಂದ್ರ ಸರ್ಕಾರವು 2015ರಲ್ಲಿ ಈ ಯೋಜನೆ ರೂಪಿಸಿತ್ತು. ರಾಜ್ಯದಲ್ಲಿ ಈ ಯೋಜನೆ 2016ರಿಂದ ಆರಂಭವಾಗಿದ್ದು, 2018-23ರ ಮಧ್ಯೆ ಹೆಚ್ಚು ಅಕ್ರಮಗಳು ನಡೆದಿವೆ ಎಂಬುದ ರತ್ತ ಸಿಎಜಿಯ ಲೆಕ್ಕಪರಿಶೋಧನೆಯು ಬೊಟ್ಟು ಮಾಡುತ್ತದೆ. 2016-18 ರಲ್ಲಿ ಕಾಂಗ್ರೆಸ್, 2018-19ರಲ್ಲಿ ಜೆಡಿಎಸ್-ಕಾಂಗ್ರೆಸ್ ಮತ್ತು 2019-23ರ ಅವಧಿಯಲ್ಲಿ ಬಿಜೆಪಿ ಸರ್ಕಾರವಿತ್ತು.

ಬಳ್ಳಾರಿ, ಚಿತ್ರದುರ್ಗ, ಗದಗ, ಬೆಂಗಳೂರು ನಗರ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಇಂತಹ ಟ್ರಸ್ಟ್‌ಗಳಿದ್ದು, ಎಲ್ಲೆಡೆಯೂ ನಿಯಮಬಾಹಿರ ವಾಗಿ ನಿಧಿಯನ್ನು ಬಳಕೆ ಮಾಡಲಾಗಿದೆ ಎಂಬುದನ್ನು ಲೆಕ್ಕಪರಿಶೋಧನೆ ವರದಿಯು ವಿವರಿಸಿದೆ.

ಈ ಯೋಜನೆ ಪ್ರಕಾರ, ರಾಜ್ಯದಲ್ಲಿ ತೆಗೆಯಲಾಗುವ ಖನಿಜ ಸಂಪತ್ತಿನ ಮೇಲೆ ಸಂಗ್ರಹಿಸಲಾಗುವ ರಾಜಧನಕ್ಕೆ ಖನಿಜ ಪ್ರತಿಷ್ಠಾನ ನಿಧಿಯನ್ನು (ಡಿಎಂಎಫ್) ವಿಧಿಸಬೇಕು. ಗಣಿಗಾರಿಕೆಯಿಂದ ತೊಂದರೆಗೆ ಒಳಗಾದ ಜನರ ದೈನಂದಿನ ಜೀವನ, ಆರೋಗ್ಯ, ಜೀವನೋಪಾಯ, ಪುನರ್ವಸತಿ, ಆರ್ಥಿಕ ನೆರವು ಒದಗಿಸಲು ಈ ನಿಧಿಯನ್ನು ಬಳಸಬೇಕು. ಜತೆಗೆ ಹಸಿರು-ಅರಣ್ಯ ಪುನಶ್ಚೇತನಕ್ಕೆ ಈ ನಿಧಿಯನ್ನು ಬಳಸಬೇಕು. ಇಂತಹ ಕಾಮಗಾರಿ ಮತ್ತು ಕಾರ್ಯಕ್ರಮಗಳನ್ನು ಮಾತ್ರ ಆದ್ಯತಾ ಪಟ್ಟಿಯಲ್ಲಿ ಸೇರಿಸಬೇಕು ಎಂಬುದು ನಿಯಮ. ಆದರೆ ಐದೂ ಜಿಲ್ಲಾ ಟ್ರಸ್ಟ್‌ಗಳು ಆದ್ಯತಾ ಪಟ್ಟಿಯಲ್ಲಿ ಇಲ್ಲದ ಕಾಮಗಾರಿಗಳಿಗೆ ₹300.44 ಕೋಟಿ ವೆಚ್ಚ ಮಾಡಿವೆ. ಇದರಿಂದ ಯೋಜನೆಯ ಮೂಲ ಉದ್ದೇಶಕ್ಕೆ ಧಕ್ಕೆಯಾಗಿದೆ ಎನ್ನುತ್ತದೆ ಸಿಎಜಿ ವರದಿ.

7

ಟೆಂಡರ್ ಕರೆಯದೇ ಗುತ್ತಿಗೆ

ವಿವಿಧ ಕಾಮಗಾರಿಗಳನ್ನು ಗುತ್ತಿಗೆ ನೀಡುವಾಗ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆಯನ್ನು ಉಲ್ಲಂಘಿಸಲಾಗಿದೆ. ಹತ್ತಾರು ಕೋಟಿ ಮೊತ್ತದ ಕಾಮಗಾರಿಯನ್ನು ₹1 ಕೋಟಿಗಿಂತ ಕಡಿಮೆಯ ಪ್ಯಾಕೇಜ್‌ಗಳಾಗಿ ವಿಭಜಿಸಿ, ಟೆಂಡರ್ ಕರೆಯದೆಯೇ ಗುತ್ತಿಗೆ ನೀಡಲಾಗಿದೆ. ಟೆಂಡರ್ ಕರೆಯುವುದನ್ನು ತಪ್ಪಿಸುವ ಉದ್ದೇಶದಿಂದಲೇ ಹೀಗೆ ಮಾಡಲಾಗಿದೆ. ಐದೂ ಟ್ರಸ್ಟ್‌ಗಳಿಂದ ಟೆಂಡರ್ ಇಲ್ಲದೆಯೇ ₹395.20 ಕೋಟಿ ಮೊತ್ತದ 373 ಕಾಮಗಾರಿಗಳನ್ನು ಗುತ್ತಿಗೆ ನೀಡಲಾಗಿದೆ. ಟ್ರಸ್ಟ್‌ಗಳ ಈ ನಡೆಯನ್ನು ಮತ್ತು ಇದಕ್ಕೆ ಸರ್ಕಾರ ನೀಡಿರುವ ಸಮರ್ಥನೆಯನ್ನು ಒಪ್ಪಲಾಗದು ಎಂದು ಸಿಎಜಿ ಹೇಳಿದೆ.

ಚಿನಕುರುಳಿ — ಪ್ರಕಾಶ್ ಶೆಟ್ಟಿ

ನಿವೃತ್ತಿ ಬಳಿಕ ಕಾಯಂ ಭಾಗ್ಯ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ನಿವೃತ್ತ ದುಃಖಿತ ನೌಕರರಿಗೆ ಶುಭ ಸುದ್ದಿ
- ಎರಡನೇ ಸುತ್ತಿನ ಹೋರಾಟಕ್ಕೆ ಯಶಸ್ಸು

ಬೆಂಗಳೂರು: 'ನಿವೃತ್ತಿ ಹೊಂದಿದಾಕ್ಷಣ ಸೇವಾ ಕಾಯಮಾತಿ ಹಕ್ಕನ್ನು ಕಸಿದು ಕೊಳ್ಳಲಾಗದು' ಎಂಬ ಮಹತ್ವದ ಅಭಿಪ್ರಾಯ ವ್ಯಕ್ತಪಡಿಸಿರುವ ಹೈಕೋರ್ಟ್, ಉತ್ತರ ಕನ್ನಡ ಜಿಲ್ಲೆ ಶಿರಸಿ ತಾಲ್ಲೂಕಿನ ಗ್ರಾಮ ಪಂಚಾಯ್ತಿಯಲ್ಲಿ 21 ವರ್ಷ ಗುತ್ತಿಗೆ ಆಧಾರದಡಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದ ರಮೇಶ ವೆಂಕಟರಮಣ ಹೆಗಡೆಯವರಿಗೆ 'ಸೇವಾ ಕಾಯಮಾತಿ' ಭಾಗ್ಯ ಕರುಣಿಸಿದೆ.

ಈ ಸಂಬಂಧ ಶಿರಸಿ ತಾಲ್ಲೂಕಿನ ಕುಳವೆ ಗ್ರಾಮದ ರಮೇಶ್ ವೆಂಕಟ ರಮಣ ಹೆಗಡೆ (68) ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಪುರಸ್ಕರಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ (ಧಾರವಾಡ) 'ದಶಕಗಳ ಕಾಲ ವೃತ್ತಿ ಪ್ರಗತಿ ಅಥವಾ ಸಮಾನ ಸಂಭಾವನೆ ಇಲ್ಲದೆ ದುಡಿದ ನೌಕರರ ದುಃಸ್ಥಿತಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪುಗಳನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ' ಎಂದು ಹೇಳಿದೆ.

ಅರ್ಜಿದಾರರ ಪರ ಹೈಕೋರ್ಟ್ ವಕೀಲೆ ವೈಭವಿ ಇನಾಂದಾರ್ ವಾದವನ್ನು ಪುರಸ್ಕರಿಸಿರುವ ನ್ಯಾಯಪೀಠ, 'ತಾತ್ಕಾಲಿಕ, ಒಪ್ಪಂದದ ಮೇರೆಗೆ ಅಥವಾ ದಿನಗೂಲಿ ಇಲ್ಲವೇ ಕ್ರೋಡೀಕೃತ ವೇತನ ಪಡೆಯುವ ನೌಕರರು ಯಾವುದೇ ರೀತಿಯ ನೇಮಕಾತಿಗೆ ಒಳಪಟ್ಟಿದ್ದರೂ, ಅವರು 10 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ ನಂತರ ಮತ್ತು ಹುದ್ದೆಯನ್ನು ಅಲಂಕರಿಸಲು ಅರ್ಹತೆ ಪಡೆದ ನಂತರ, ಸೇವಾ ಕ್ರಮಬದ್ಧತೆಗೆ ಒಳಪಡಲು ಅರ್ಹರಾಗಿರುತ್ತಾರೆ' ಎಂದಿದೆ.

7

ಒಳಮೀಸಲು ಮಸೂದೆ ಅಂಗೀಕಾರ

ಸುವರ್ಣ ವಿಧಾನಸೌಧ (ಬೆಳಗಾವಿ): ಪರಿಶಿಷ್ಟಜಾತಿಯವರಿಗೆ ಒಳಮೀಸಲಾತಿ ಕಲ್ಪಿಸುವ ಸರ್ಕಾರಿ ಆದೇಶಗಳು ಮತ್ತು ಸುತ್ತೋಲೆಗಳಿಗೆ ಕಾನೂನಾತ್ಮಕ ರಕ್ಷಣೆ ನೀಡುವ ಉದ್ದೇಶದ 'ಕರ್ನಾಟಕ ಅನುಸೂಚಿತ ಜಾತಿಗಳ (ಉಪವರ್ಗೀ ಕರಣ) ಮಸೂದೆ'ಗೆ ವಿಧಾನಸಭೆ ಅಂಗೀಕಾರ ನೀಡಿದೆ. ನ್ಯಾ. ನಾಗಮೋಹನ್ ದಾಸ್ ಆಯೋಗದ ಶಿಫಾರಸುಗಳನ್ನು ಕೆಲ ಮಾರ್ಪಾಡಿನೊಂದಿಗೆ ಅನುಮೋದಿಸಿದ್ದ ಸರ್ಕಾರ ಈ ಮಸೂದೆಯನ್ನು ರೂಪಿಸಿತ್ತು.

4

ಐಟಿಐ ಆಸ್ತಿ ನಗದೀಕರಣ

ಪ್ರಜಾವಾಣಿ ವಾರ್ತೆ

ನವದೆಹಲಿ: ನಷ್ಟದ ಸುಳಿಗೆ ಸಿಲುಕಿ ಬ್ಯಾಂಕ್ ಸಾಲದಿಂದ ನಲುಗಿರುವ ಬೆಂಗಳೂರಿನ ಐಟಿಐ ಲಿಮಿಟೆಡ್‌ನ ₹3,473 ಕೋಟಿ ಮೊತ್ತದ ಆಸ್ತಿಯ ನಗದೀಕರಣಕ್ಕೆ ಕೇಂದ್ರ ದೂರಸಂಪರ್ಕ ಇಲಾಖೆ ಮುಂದಾಗಿದೆ.

ಲೋಕಸಭೆಯಲ್ಲಿ ಬುಧವಾರ ಪ್ರಶ್ನೋತ್ತರ ಅವಧಿಯಲ್ಲಿ ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಕೇಳಿದ ಪ್ರಶ್ನೆಗೆ ದೂರಸಂಪರ್ಕ ಖಾತೆಯ ರಾಜ್ಯ ಸಚಿವ ಚಂದ್ರಶೇಖರ ಪೆಮ್ಮಸಾನಿ ಉತ್ತರ ನೀಡಿ, 'ನಗದೀಕರಣಕ್ಕಾಗಿ 91 ಎಕರೆಯ ನಾಲ್ಕು ಆಸ್ತಿಗಳನ್ನು ಗುರುತಿಸಲಾಗಿದೆ ಎಂದು ತಿಳಿಸಿದ್ದಾರೆ.

2024-25ನೇ ಹಣಕಾಸು ವರ್ಷದಲ್ಲಿ, ಕಂಪನಿಯು ₹4,323 ಕೋಟಿ ವಹಿವಾಟು ನಡೆಸಿದೆ. ಬ್ಯಾಂಕ್‌ಗಳ ಸಾಲ ₹1,325 ಕೋಟಿ ಬಾಕಿ ಇದೆ. ನೌಕರರ ವೇತನ ಹಾಗೂ ನಿವೃತ್ತಿ ವೇತನ ₹339 ಕೋಟಿ ಪಾವತಿಸಿಲ್ಲ. ಸಂಸ್ಥೆಯನ್ನು ಬಲಪಡಿಸಲು ಕೇಂದ್ರ ಸರ್ಕಾರವು ಈ ಹಿಂದೆ ₹4,156 ಕೋಟಿ ಹಣಕಾಸಿನ ನೆರವು ನೀಡಿತ್ತು. ನೌಕರರ ಬಾಕಿ ವೇತನ ಪಾವತಿ ಹಾಗೂ ಬ್ಯಾಂಕ್ ಸಾಲಗಳನ್ನು ತೀರಿಸಲು ಕೆಲವು ಖಾಲಿ ಜಾಗಗಳನ್ನು ನಗದೀಕರಣಕ್ಕೆ ಬಳಸಿಕೊಳ್ಳಲು ಯೋಜಿಸಲಾಗಿದೆ. ಇದಕ್ಕಾಗಿ ಐಟಿಐ ಜತೆಗೆ ಮಾತುಕತೆ ನಡೆದಿದೆ ಎಂದು ಸಚಿವರು ತಿಳಿಸಿದ್ದಾರೆ.

ಯಾವೆಲ್ಲ ಆಸ್ತಿಗಳ ನಗದೀಕರಣ

ಜಾಗ	ಎಕರೆ	ಮೌಲ್ಯ (₹ಕೋಟಿಗಳಲ್ಲಿ)
ಬಿ.ನಾರಾಯಣಪುರ	10.20	357
ಕೆ.ಆರ್.ಪುರ	44	1,651
ಕೆ.ಆರ್.ಪುರ ಐಟಿಐ ಟೌನ್‌ಶಿಪ್	21	823
ಕೆ.ಆರ್.ಪುರ ಐಟಿಐ ಟೌನ್‌ಶಿಪ್	16	642
ಒಟ್ಟು	91	3,473

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ

ಪರಿಶಿಷ್ಟ ಯುವಕನ ಮೇಲೆ ಹಲ್ಲೆ

ಗುಬ್ಬಿ(ತುಮಕೂರು): ತಾಲ್ಲೂಕಿನ ಎಂ.ಎಚ್ ಪಟ್ಟಣ ಗೇಟ್‌ನಲ್ಲಿರುವ ಜಿಎನ್‌ಬಿ ಸ್ಪಿರಿಟ್ ಅಂಡ್ ಸ್ಪೇ ಹೋಟೆಲ್‌ಗೆ ಊಟಕ್ಕೆ ಹೋಗಿದ್ದ ಪರಿಶಿಷ್ಟ ಜಾತಿಯ ಯುವಕನ ಮೇಲೆ ಹೋಟೆಲ್ ಮಾಲೀಕ ಹಾಗೂ ಸಹಚರರು ಮಂಗಳವಾರ ರಾತ್ರಿ ಹಲ್ಲೆನಡೆಸಿದ್ದಾರೆ.

ಬೆಂಗಳೂರು : ಕೇಂದ್ರ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವರಾದ ಶ್ರೀಹೆಚ್.ಡಿ. ಕುಮಾರಸ್ವಾಮಿಯವರ ಜನ್ಮದಿನದ ಪ್ರಯುಕ್ತ ಜೆಡಿಎಸ್ ಪಕ್ಷದ ಸಾಮಾಜಿಕ ಜಾಲತಾಣ ವಿಭಾಗದ ರಾಜ್ಯಾಧ್ಯಕ್ಷರಾದ ಶ್ರೀಚಂದನ್.ಹೆಚ್.ಎಸ್‌ರವರ ನೇತೃತ್ವದಲ್ಲಿ ಬೆಂಗಳೂರಿನ ಟಿ. ದಾಸರಹಳ್ಳಿಯಲ್ಲಿರುವ ವಿಶಾಲ್ ಪಬ್ಲಿಕ್ ಶಾಲೆಯ ಮಕ್ಕಳಿಗೆ ಭಗವದ್ಗೀತೆ ಪುಸ್ತಕ ವಿತರಣೆ ಮಾಡಲಾಯಿತು. ಈ ವೇಳೆ ಮಾತನಾಡಿದ ಅವರು, 'ಶಾಲಾ ಹಂತದಲ್ಲಿ ಮಕ್ಕಳಿಗೆ ಭಗವದ್ಗೀತೆ ಕಲಿಸಬೇಕು ಎಂಬುದು ಹೆಚ್.ಡಿ.ಕುಮಾರಸ್ವಾಮಿಯವರ ಆಶಯ. ಮಕ್ಕಳಿಗೆ ಜ್ಞಾನ, ಮನಸ್ಸಿನ ನಿಯಂತ್ರಣ, ಶಾಂತಿ ಮತ್ತು ನಾಯಕತ್ವ ಬೆಳೆಸಲು ಭಗವದ್ಗೀತೆಯು ಮಾರ್ಗದರ್ಶನ ನೀಡುತ್ತದೆ ಎಂದರು. ಈ ಸಂದರ್ಭದಲ್ಲಿ ಶಾಲೆಯ ಸಂಸ್ಥಾಪಕರಾದ ಶ್ರೀಟಿ.ಕೆ. ನರಸೇಗೌಡರವರು ಸೇರಿದಂತೆ ಆಡಳಿತ ಮಂಡಳಿಯ ಸದಸ್ಯರು ಹಾಗೂ ಸಾಮಾಜಿಕ ಜಾಲತಾಣ ವಿಭಾಗದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಪ್ರಸ್ತುತಿ : ಪಿವಿ ಬ್ರ್ಯಾಂಡ್ ಸ್ಪಾಟ್

ಬೆಳಗಾವಿ : ಜೆಡಿಎಸ್ ರಾಜ್ಯಾಧ್ಯಕ್ಷರು, ಮಾಜಿ ಮುಖ್ಯಮಂತ್ರಿಗಳು ಹಾಗೂ ಭಾರತ ಸರ್ಕಾರದ ಭಾರಿ ಕೈಗಾರಿಕೆ ಉಕ್ಕು ಸಚಿವರಾದ ಸನ್ಮಾನ್ಯ ಶ್ರೀಎಚ್.ಡಿ.ಕುಮಾರಸ್ವಾಮಿಯವರ 66ನೇ ಜನ್ಮದಿನವನ್ನು ಪಕ್ಷದ ಶಾಸಕರು ದೇಗುಲದಲ್ಲಿ ಪೂಜೆ ಸಲ್ಲಿಸುವ ಮೂಲಕ ಆಚರಿಸಲಾಯಿತು. ಬೆಳಗಾವಿ ನಗರದ ರಾಣಿ ಚೆನ್ನಮ್ಮ ವೃತ್ತದ ಸಮೀಪದ ಗಣಪತಿ ದೇವಸ್ಥಾನದಲ್ಲಿ ಬೆಣ್ಣೆ ಅಲಂಕಾರ ಪೂಜೆ ಸಲ್ಲಿಸಿ, ಎಚ್‌ಡಿ.ಕುಮಾರಸ್ವಾಮಿಯವರಿಗೆ ಮತ್ತಷ್ಟು ಜನಪರ ಶ್ರಮಿಸುವ ಶಕ್ತಿ, ಆರೋಗ್ಯ ನೀಡುವಂತೆ ಪ್ರಾರ್ಥಿಸಲಾಯಿತು. ಈ ವೇಳೆ ಮಾತನಾಡಿದ ವಿಧಾನ ಪರಿಷತ್ ಶಾಸಕರಾದ ಶರವಣರವರು, 'ರೈತರು, ಬಡವರಿಗಾಗಿ ಹಲವು ಯೋಜನೆಗಳನ್ನು ಜಾರಿಗೆ ತಂದು, ರಾಜ್ಯದ ಏಳ್ಗೆಗೆ ಅಪಾರ ಕೊಡುಗೆ ನೀಡಿದ ಮಹಾ ನಾಯಕನ ಆಯುರಾರೋಗ್ಯ ವೃದ್ಧಿಸಲಿ ಎಂದು ದೇವರಲ್ಲಿ ಪ್ರಾರ್ಥಿಸಿದೆ' ಎಂದರು. ಆ ನಂತರ ಸಮೀಪದ ಅಂಧ ಮಕ್ಕಳ ಶಾಲೆಗೆ ತೆರಳಿ ಸೇವಾ ಕಾರ್ಯನಡೆಸಲಾಯಿತು. ಈ ವೇಳೆ ಜೆಡಿಎಸ್ ಶಾಸಕರು ಪಾಲ್ಗೊಂಡಿದ್ದರು.

ಪ್ರಸ್ತುತಿ : ಪಿವಿ ಬ್ರ್ಯಾಂಡ್ ಸ್ಪಾಟ್

ಟರ್ಫ್ ಕ್ಲಬ್ ಕುದುರೆಗಳಿಗೆ ಗ್ಲಾಂಡರ್ಸ್ ರೋಗ

ಬೆಂಗಳೂರು: ಬೆಂಗಳೂರು ಟರ್ಫ್ ಕ್ಲಬ್ ಕುದುರೆಗಳಲ್ಲಿ ಗ್ಲಾಂಡರ್ಸ್ ರೋಗ ದೃಢಪಟ್ಟಿರುವುದರಿಂದ ಇದನ್ನು ಗ್ಲಾಂಡರ್ಸ್ ಕೇಂದ್ರೀಕೃತ ಪ್ರದೇಶವೆಂದು ಗುರುತಿಸಲಾಗಿದೆ ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ.ಜಗದೀಶ ತಿಳಿಸಿದ್ದಾರೆ.

ಪ್ರಾಣಿಗಳಲ್ಲಿ ಸೋಂಕುಕಾರಕ ಮತ್ತು ಸಾಂಕ್ರಾಮಿಕ ರೋಗಗಳ ಪ್ರತಿಬಂಧಕ ಮತ್ತು ನಿಯಂತ್ರಣ ಅಧಿನಿಯಮ 2009 ರ ಕಾಲಂ-6 ರಡಿ ಸರ್ಕಾರದಿಂದ ಅಧಿಸೂಚನೆ ಹೊರಡಿಸಲಾಗಿದೆ. ಬೆಂಗಳೂರು ಟರ್ಫ್ ಕ್ಲಬ್ ಸುತ್ತಲಿನ 2 ಕಿ.ಮೀ ವ್ಯಾಪ್ತಿಯಲ್ಲಿ ಕುದುರೆ, ಕತ್ತೆ, ಹೇಸರಕತ್ತೆಗಳ ಚಲನವಲನ ಹಾಗೂ ಮನರಂಜನೆ, ಮೆರವಣಿಗೆ ನಿರ್ಬಂಧಿಸಲಾಗಿದೆ ಎಂದು ತಿಳಿಸಿದ್ದಾರೆ.

ಭಾರತ ಸರ್ಕಾರ

ಭಾರತೀಯ ವಿಮಾನ ನಿಲ್ದಾಣಗಳ ಆರ್ಥಿಕ ನಿಯಂತ್ರಣ ಪ್ರಾಧಿಕಾರ

3ನೇ ಮಹಡಿ, ಉಡಾನ್ ಭವನ, ಸಫ್ದರ್‌ಜಂಗ್ ವಿಮಾನ ನಿಲ್ದಾಣ, ನವದೆಹಲಿ – 110003

ಭಾರತೀಯ ವಿಮಾನ ನಿಲ್ದಾಣಗಳ ಆರ್ಥಿಕ ನಿಯಂತ್ರಣ ಪ್ರಾಧಿಕಾರದಲ್ಲಿನ ಜೂನಿಯರ್ ರಿಸರ್ಚ್ ಅಸೋಸಿಯೇಟ್ (ಟ್ಯಾರೀಫ್) / ಕನ್ಸಲ್ಟಂಟ್ (ಟ್ಯಾರೀಫ್) / ಜೂನಿಯರ್ ಕನ್ಸಲ್ಟಂಟ್ (ರೆಗ್ಯುಲೇಟರಿ) (ಒಟ್ಟು ಒಂಭತ್ತು (09) ಹುದ್ದೆಗಳ ನಿಯೋಜನೆಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ

ಉಲ್ಲೇಖಿತ ನಿಬಂಧನೆಗಳ (ಟಿಒಆರ್) ಮೇರೆಗೆ ಕಾರ್ಯನಿರ್ವಹಿಸಲು, ಜೂನಿಯರ್ ರಿಸರ್ಚ್ ಅಸೋಸಿಯೇಟ್ (ಟ್ಯಾರೀಫ್) / ಕನ್ಸಲ್ಟಂಟ್ (ಟ್ಯಾರೀಫ್) / ಜೂನಿಯರ್ ಕನ್ಸಲ್ಟಂಟ್ (ರೆಗ್ಯುಲೇಟರಿ) (ಒಟ್ಟು ಒಂಭತ್ತು (09) ಹುದ್ದೆಗಳ ನಿಯೋಜನೆಗಾಗಿ ಅರ್ಹ ಅಭ್ಯರ್ಥಿಗಳಿಂದ ಭಾರತೀಯ ವಿಮಾನ ನಿಲ್ದಾಣಗಳ ಆರ್ಥಿಕ ನಿಯಂತ್ರಣ ಪ್ರಾಧಿಕಾರ ಇವರು ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ನಿಗದಿತ ವಿದ್ಯಾರ್ಹತೆ ಮತ್ತು ಅನುಭವವುಳ್ಳ ಅಭ್ಯರ್ಥಿಗಳನ್ನು ಆಯಾ ವಿಭಾಗದಲ್ಲಿನ ಖಾಲಿ ಹುದ್ದೆಗಳಿಗೆ ನಿಯೋಜಿಸಿಕೊಳ್ಳಬಹುದಾಗಿರುತ್ತದೆ. ಯಾವುದೇ ಮುನ್ಸೂಚನೆ ನೀಡದೆಯೆ ಮತ್ತು ಯಾವುದೇ ಕಾರಣ ನೀಡದೆಯೆ, ಸದರಿ ಖಾಲಿಹುದ್ದೆಗಳ ಸಂಖ್ಯೆಯಲ್ಲಿ ಬದಲಾವಣೆ ಆಗಬಹುದಾಗಿರುತ್ತದೆ.

2. ಅರ್ಹತಾ ಮಾನದಂಡ, ಉಲ್ಲೇಖಿತ ನಿಬಂಧನೆಗಳು (ಟಿಒಆರ್) ಇತ್ಯಾದಿಗಳನ್ನುಒಳಗೊಂಡಿರುವ ವಿವರಗಳು ಎಇಆರ್‌ಎ ಸಂಸ್ಥೆಯ www.aera.gov.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ. ಅರ್ಜಿಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ 07.01.2026 ರಂದು ಸಂಜೆ 5.30 ಗಂಟೆವರೆಗೆ.** ಖಾಲಿಹುದ್ದೆಗಳ ಪ್ರಕಟಣೆಯಲ್ಲಿ ತಿಳಿಸಿರುವ ಮಾದರಿಯಲ್ಲಿ / ವಿವರಗಳನ್ವಯ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಕೊನೆಯ ದಿನಾಂಕ ಮತ್ತು ಸಮಯದ ನಂತರ ಸಲ್ಲಿಕೆಯಾಗುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಡೆಪ್ಯೂಟಿ ಚೀಫ್

ಭಾರತೀಯ ವಿಮಾನ ನಿಲ್ದಾಣಗಳ ಆರ್ಥಿಕ ನಿಯಂತ್ರಣ ಪ್ರಾಧಿಕಾರ, 3ನೇ ಮಹಡಿ, ಉಡಾನ್ ಭವನ, ಸಫ್ದರ್‌ಜಂಗ್ ವಿಮಾನ ನಿಲ್ದಾಣ, ನವದೆಹಲಿ – 110003

CBC 03112/12/0016/2526

ಕೃಷ್ಣ ಬೈರೇಗೌಡ ರಾಜೀನಾಮೆಗೆ ಆಗ್ರಹ

ಬ್ಯಾಟರಾಯನಪುರ ವೃತ್ತದಲ್ಲಿ ಬಿಜೆಪಿ ಕಾರ್ಯಕರ್ತರ ಬೃಹತ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ಭೂದಾಖಲೆ ತಿರುಚಿ ಅಕ್ರಮ ಎಸಗಿದ್ದಾರೆಂದು ಆರೋಪಿಸಿ ಬ್ಯಾಟರಾಯನಪುರ ಕ್ಷೇತ್ರದ ಬಿಜೆಪಿ ಕಾರ್ಯಕರ್ತರು ಬ್ಯಾಟರಾಯನ ಪುರ ವೃತ್ತದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು.

ಸಚಿವರ ವಿರುದ್ಧ ಘೋಷಣೆಗಳನ್ನು ಕೂಗಿ ರಾಜೀನಾಮೆಗೆ ಒತ್ತಾಯಿಸಿದರು.

ಈ ವೇಳೆ ಪೊಲೀಸರು ಮತ್ತು ಬಿಜೆಪಿ ಕಾರ್ಯಕರ್ತರ ನಡುವೆ ಮಾತಿನ ಚಕಮಕಿ ನಡೆಯಿತು. ಪ್ರತಿಭಟನ ಕಾರರನ್ನು ಬಂಧಿಸಿ ಸಂಪಿಗೆಹಳ್ಳಿ ಪೊಲೀಸ್ ಠಾಣೆಯ ಮೈದಾನಕ್ಕೆ ಕರೆದೊಯ್ದು, ನಂತರ ಬಿಡುಗಡೆ ಮಾಡಲಾಯಿತು.

ಇದಕ್ಕೂ ಮುನ್ನ ಬ್ಯಾಟರಾಯನಪುರದ ಗ್ರಾಮಾಂತರ ಮಂಡಲ ಬಿಜೆಪಿ ಅಧ್ಯಕ್ಷ ಹನುಮಂತೇಗೌಡ ಮಾತನಾಡಿ 'ಸಚಿವರ ಮೇಲೆ ಆರೋಪವಿದೆ. ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ತನಿಖೆ ಎದುರಿಸಬೇಕು' ಎಂದು ಆಗ್ರಹಿಸಿದರು.

ಬ್ಯಾಟರಾಯನಪುರ ನಗರ ಮಂಡಲ ಬಿಜೆಪಿ ಅಧ್ಯಕ್ಷ ಕೃಷ್ಣಮೂರ್ತಿ ಮಾತನಾಡಿ, 'ದಾಖಲೆಗಳನ್ನು ತಿರುಚಿ, ಸರ್ಕಾರಿ ಆಸ್ತಿಯನ್ನು ಕಬಳಿಸಲು ಮುಂದಾಗಿರುವ ಗಂಭೀರ ಆರೋಪ ಸಚಿವರ ಮೇಲಿದೆ. ದಾಖಲೆಗಳೂ ಆರೋಪವನ್ನು ಪುಷ್ಟೀಕರಿಸುತ್ತಿವೆ. ಸಚಿವರು ರಾಜೀನಾಮೆ ನೀಡಿ ತನಿಖೆ ಎದುರಿಸಬೇಕು' ಎಂದರು.

ಬಿಜೆಪಿ ಎಸ್‌ಸಿ ಮೋರ್ಚಾ ರಾಜ್ಯ ಕಾರ್ಯದರ್ಶಿ ಮುನಿಹನುಮಯ್ಯ, ಬೆಂಗಳೂರು ಉತ್ತರ ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಪಿ.ವೆಂಕಟೇಶ್, ಬಿ.ಎಸ್. ಅನಿಲ್ ಕುಮಾರ್, ಕೆ.ಡಿ. ಪ್ರತಾಪ್ ಗೌಡ, ಲೋಹಿತ್ ಗೌಡ, ತಿಮ್ಮೇಗೌಡ, ಎಲ್. ನಂಜಪ್ಪ ಹಾಜರಿದ್ದರು.

ಬ್ಯಾಟರಾಯನಪುರ ಕ್ಷೇತ್ರದ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು

ಕನಕಪುರ ಯೋಜನಾ ಪ್ರಾಧಿಕಾರ

ಖಾತಾ ನಂ. 469/CA, ಸಹಕಾರಿ ವಸತಿ ಬಡಾವಣೆ, ಅಗ್ರಹಾರ ನ್ಯೂ ಕಾಲೋನಿ, ತುಂಗಣಿ ಅಂಚೆ, ಕನಕಪುರ ತಾ||, ರಾಮನಗರ ಜಿಲ್ಲೆ. ದೂ : 080–29762005, 29762006. ಇ–ಮೇಲ್:kkpaplan@gmail.com

ಸಂಖ್ಯೆ: ಕಯೋಪ್ರಾ/ಭೂಉಬ/16/2025–26/3180 ದಿನಾಂಕ: 17.12.2025

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 14(ಎ) ಪ್ರಕಾರ, ಈ ಕೆಳಕಂಡ ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರೂ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಕನಕಪುರ ಯೋಜನಾ ಪ್ರಾಧಿಕಾರ, ಕನಕಪುರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಮೆ|| ಆಭರಣ ಕನ್ಸ್ಟ್ರಕ್ಷನ್ ಎಲ್‌ಎಲ್‌ಪಿ ಪರವಾಗಿ ಆಭರಣ ಡಿಕೆಎಸ್ ಮತ್ತು ಶ್ರೀಮತಿ ಗೌರಮ್ಮ ಕೋಂ ಲೇಟ್ ಕೆಂಪೇಗೌಡ	ಕನಕಪುರ	ಸಾತನೂರು	ಸಾತನೂರು	25/6	0–05	ವಸತಿ	ಕೈಗಾರಿಕೆ
				ದೇಶುವಳ್ಳಿ	6/2	4–01		
					ಒಟ್ಟು	4–06		

ಷರಾ :– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳಲ್ಲಿ ಕೈಗಾರಿಕಾ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸುವುದರಿಂದ ಬಡವರಿಗೆ ಮತ್ತು ಮಧ್ಯಮ ವರ್ಗದವರಿಗೆ ಉದ್ಯೋಗವಕಾಶಗಳು ಸೃಷ್ಟಿಯಾಗುತ್ತವೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿಕಾರ್ಮಿಕರಿಗೆ ಉದ್ಯೋಗ ದೊರಕುವುದಾಗಿ ಹಾಗೂ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುವುದಾಗಿ, ಕೈಗಾರಿಕೆ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಯಾಗಿ ಅಭಿವೃದ್ಧಿಯಾಗುವುದರಿಂದ ಸರ್ಕಾರದ ಬೊಕ್ಕಸಕ್ಕೆ ತೆರಿಗೆ ರೂಪದಲ್ಲಿ ಸಾಕಷ್ಟು ಆದಾಯ ಬರುವುದಾಗಿ ಸಾರ್ವಜನಿಕ ಹಿತಾಸಕ್ತಿ ವ್ಯಕ್ತಪಡಿಸಿ "**ವಸತಿ**" ವಲಯದಿಂದ "**ಕೈಗಾರಿಕೆ**" ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/–

ಸದಸ್ಯ ಕಾರ್ಯದರ್ಶಿಗಳು

ಕನಕಪುರ ಯೋಜನಾ ಪ್ರಾಧಿಕಾರ, ಕನಕಪುರ.

DIPR/BSD/497/SA/2025-26

ಶಿವಾನಂದಗೆ ಲೋಹಿಯಾ ಪ್ರಶಸ್ತಿ

ಬೆಂಗಳೂರು: ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ನೀಡುವ 'ಲೋಹಿಯಾ ಪ್ರಶಸ್ತಿ'ಗೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಟ್ರಸ್ಟ್‌ನ ಅಧ್ಯಕ್ಷ ಎಸ್. ರಾಮಲಿಂಗೇಶ್ವರ(ಸಿಸಿರಾ) ತಿಳಿಸಿದ್ದಾರೆ.



ಶಿವಾನಂದ ತಗಡೂರು

ಪ್ರಶಸ್ತಿಯು ಫಲಕ, ₹5 ಸಾವಿರ ನಗದು ಒಳಗೊಂಡಿದ್ದು, ಡಿಸೆಂಬರ್ 19ರಂದು ಬೆಳಿಗ್ಗೆ 11.15ಕ್ಕೆ ಶೇಷಾದ್ರಿಪುರ ಕಾಲೇಜಿನ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದ್ದಾರೆ.

'5 ಸಾವಿರ ಗಿಡ ನೆಡುವ ಗುರಿ'

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಒಂದು ವರ್ಷದಲ್ಲಿ 5 ಸಾವಿರ ಗಿಡ ನೆಡಲಾಗುವುದು ಎಂದು ಅಖಿಲ ಭಾರತೀಯ ಗ್ರಾಮ ವಿಕಾಸ ಪರಿಷದ್‌ನ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಸಿಂಗ್ ಬಿಸ್ಮಿಲ್ ಹೇಳಿದರು.

ಸಂಸ್ಥೆಯು 2026ರಲ್ಲಿ ಹಮ್ಮಿಕೊಳ್ಳುವ ಯೋಜನೆಗಳ ಬಗ್ಗೆ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ಪರಿಸರ ಸಂರಕ್ಷಣೆ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸುವುದು ಸಂಸ್ಥೆಯ ಪ್ರಮುಖ ಗುರಿಯಾಗಿದೆ. ಇದಲ್ಲದೇ ಬೆಂಗಳೂರನ್ನು ಕೊಳೆಗೇರಿ ಮುಕ್ತ ನಗರವನ್ನಾಗಿಸಲು ಸಮರ್ಪಕ ಯೋಜನೆಗಳನ್ನು ರೂಪಿಸುವ ಉದ್ದೇಶ ಹೊಂದಿದೆ' ಎಂದು ತಿಳಿಸಿದರು.

ಜಲಮಂಡಳಿ ನೀರಿನ ಅದಾಲತ್ ಇಂದು

ಬೆಂಗಳೂರು: ಬೆಂಗಳೂರು ಜಲ ಮಂಡಳಿ ಗುರುವಾರ(ಡಿ.18) ಬೆಳಿಗ್ಗೆ 9.30ರಿಂದ 11ರವರೆಗೆ 12 ಉಪವಿಭಾಗಗಳಲ್ಲಿ ನೀರಿನ ಅದಾಲತ್ ಆಯೋಜಿಸಿದೆ.

ವಾಯುವ್ಯ–2 ಉಪವಿಭಾಗದ ಅದಾಲತ್ ಪೀಣ್ಯ 2ನೇ ಹಂತದ ಶ್ರೀರಾಮ ಡಿಲಕ್ಸ್ ಹೋಟೆಲ್ ಹಿಂಭಾಗ, ವಾಯುವ್ಯ–4 ಸುಂಕದಕಟ್ಟೆ, ಕೇಂದ್ರ 1–2 ಫ್ರೇಜರ್ ಟೌನ್, ಈಶಾನ್ಯ–2ರ ಅದಾಲತ್ ಸದಾಶಿವನಗರ, ಉತ್ತರ 1–2 ಆರ್.ಟಿ.ನಗರ ಪಿ, ಉತ್ತರ 2–2 ವಿದ್ಯಾರಣ್ಯಪುರ, ವಿ.ವಿಪುರಂ, ನೈರುತ್ಯ–5 ಬನಶಂಕರಿ 3ನೇ ಹಂತರದ ಬನಗಿರಿನಗರ, ಕಾಡುಗೋಡಿ ಎಸ್‌ಟಿಪಿ ಆವರಣ, ಪೂರ್ವ 2–3 ಉಪವಿಭಾಗದ ಅದಾಲತ್ ಕಲ್ಕೆರೆಯಲ್ಲಿ ನಡೆಯಲಿದೆ.

ವಾಟ್ಸ್ ಆ್ಯಪ್ ಸಂಖ್ಯೆ 8762228888 ಸಂದೇಶದ ಮೂಲಕ ದೂರನ್ನು ದಾಖಲಿಸಲು ಅವಕಾಶವಿದೆ.

ಮಾಲೂರು ನಗರ ಯೋಜನಾ ಪ್ರಾಧಿಕಾರ, ಮಾಲೂರು

ಮಾರುತಿ ಬಡಾವಣೆ 2ನೇ ಹಂತ, ಮಾಡ್ರನ್ ಶಾಲೆ ಹತ್ತಿರ, ತಿರುಮಲ ಕಲ್ಯಾಣ ಮಂಟಪ ರಸ್ತೆ, ಮಾಲೂರು–563 130, ಕೋಲಾರ ಜಿಲ್ಲೆ, ಕಛೇರಿ ದೂರವಾಣಿ ಸಂಖ್ಯೆ: 08151–299920,

Web Site:www.malur.tpa.gov.in, Email:ms.malur.planning.authority@gmail.com

ಸಂಖ್ಯೆ: ಮಾಯೋಪ್ರಾ/ಭೂ.ಬ/2025–26/293 ದಿನಾಂಕ: 12.12.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ, ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಮಾಲೂರು ಯೋಜನಾ ಪ್ರಾಧಿಕಾರ, ಮಾಲೂರು ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ	ವಿಸ್ತೀರ್ಣ ಎ/ಗು	ಅನುಮೋದಿತ ಮಹಾ ಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪ ಯೋಗ	ಷರಾ
1.	ಪ್ರಿಯಾಂಕ. ಎಂ ಕೋಂ ಪ್ರೀತಮ್ ಎನ್	ಮಾಲೂರು	ಕಸಬಾ	ನೀಲಕಂಠ ಅಗ್ರಹಾರ	63	2ಎ–01ಗು	ಕೃಷಿ	ವಸತಿ	–

ಷರಾ: ಈ ಜಮೀನುಗಳಲ್ಲಿ ವಿನ್ಯಾಸದ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯ ಜಾಗಗಳು, ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂದು ಅರ್ಜಿದಾರರು ತಿಳಿಸುತ್ತಾ. ಸದರಿ ಪ್ರದೇಶವನ್ನು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/– ಸದಸ್ಯ ಕಾರ್ಯದರ್ಶಿ, ಮಾಲೂರು ಯೋಜನಾ ಪ್ರಾಧಿಕಾರ, ಮಾಲೂರು

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:406/ಕೆಎಸ್‌ಎಂಸಿಎ/2025–26

ಗ್ರೇಟರ್ ಬೆಂಗಳೂರು ಪ್ರಾಧಿಕಾರ

ಕಾರ್ಯಪಾಲಕ ಅಭಿಯಂತರರು (ಯೋಜನೆ ಮತ್ತು ಸಮನ್ವಯ), ನೆಲ ಮಹಡಿ, ಅನೆಕ್ಸ್ –2 ಕಟ್ಟಡ, ಬಿಬಿಎಂಪಿ ಪ್ರಧಾನ ಕಚೇರಿ, ಎನ್.ಆರ್. ಚೌಕ, ಬೆಂಗಳೂರು–560 002.

No: EE/P& C/PR/01/2025-26 ದಿನಾಂಕ: 17.12.2025

ಪ್ರಕಟಣೆ

ವಿಷಯ: ಗ್ರೇಟರ್ ಬೆಂಗಳೂರು ಪ್ರಾಧಿಕಾರ (2ನೇ ಕರೆ) ದಲ್ಲಿರುವ ಯೋಜನೆ ಮತ್ತು ಸಮನ್ವಯ ಇಲಾಖೆಯ ಅಡಿಯಲ್ಲಿ ಯೋಜನೆ ಮತ್ತು ವಿನ್ಯಾಸ ಕೋಶಕ್ಕಾಗಿ ಗುತ್ತಿಗೆ ಆಧಾರದ ಮೇಲೆ ನಗರ ವಿನ್ಯಾಸಕರು ಮತ್ತು ನಗರ ಸಾರಿಗೆ ತಜ್ಞರನ್ನು ನೇಮಿಸಿಕೊಳ್ಳುವುದು.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಯೋಜನೆ ಮತ್ತು ಸಮನ್ವಯ ಇಲಾಖೆಯ ಅಡಿಯಲ್ಲಿ ಯೋಜನೆ ಮತ್ತು ವಿನ್ಯಾಸ ಕೋಶದಲ್ಲಿ ಆವರ್ತಕ ಕಾರ್ಯಕ್ಷಮತೆ ಪರಿಶೀಲನೆಗೆ ಒಳಪಟ್ಟು, ಒಂದು (1) ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಗೆ ಒಪ್ಪಂದದ ಆಧಾರದ ಮೇಲೆ ನೇಮಕಗೊಳ್ಳಲು ಅರ್ಹ ಮತ್ತು ಅನುಭವಿ ವೃತ್ತಿಪರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹುದ್ದೆಗಳ ವಿವರಗಳು ಈ ಕೆಳಗಿನಂತಿವೆ:

Position	Number of Posts	Educational Qualification	Experience	Preferred Skills or Responsibilities
Urban Designer	1	Master's Degree in Urban Planning/ Urban Design from a recognized university.	Minimum 3-5 years of relevant professional experience in urban planning, land use, or related fields.	Should have professional experience with Urban design projects and be familiar with IRC codes and guidelines. Should have done field work, and be familiar with digital data collection. Should have engaged with government agencies and conducted public participation in the projects.
Urban Transport Expert	2	Master's Degree in Transportation Planning/ Transport Engineering/ Urban Transport Systems from a recognized university.	Minimum 3-5 years of relevant professional experience in urban mobility, transport planning or related fields.	Expertise in traffic analysis, transport modelling and public transport planning Familiarity with transport policies and smart mobility initiatives. Experience in preparing DPRs and feasibility studies.

1. ಪ್ರಮುಖ ಜವಾಬ್ದಾರಿಗಳು :

- ವಿಶೇಷವಾಗಿ ರಸ್ತೆಗಳು ಮತ್ತು ಸಾರಿಗೆಗೆ ಸಂಬಂಧಿಸಿದ ನಗರ ಮೂಲಸೌಕರ್ಯ ಯೋಜನೆಗಳ ಯೋಜನೆ, ವಿನ್ಯಾಸ ಮತ್ತು ಅಭಿವೃದ್ಧಿಗೆ ಬೆಂಬಲ ನೀಡುವುದು.
- ನಗರ ನೀತಿ, ಚಲನಶೀಲತೆ ಯೋಜನೆ, ನಗರ ಸಾರಿಗೆ ಏಕೀಕರಣ ಮತ್ತು ಸಂಬಂಧಿತ ತಂತ್ರಗಳಲ್ಲಿ ತಾಂತ್ರಿಕ ಪರಿಣತಿಯನ್ನು ಒದಗಿಸುವುದು.
- ನಗರಾಭಿವೃದ್ಧಿ ಉಪಕ್ರಮಗಳ ಅನುಷ್ಠಾನಕ್ಕಾಗಿ ಪಾಲುದಾರರೊಂದಿಗೆ ಸಹಕರಿಸುವುದು.
- ವರದಿಗಳು, ಯೋಜನಾ ದಾಖಲೆಗಳನ್ನು ಸಿದ್ಧಪಡಿಸುವುದು ಮತ್ತು ತಾಂತ್ರಿಕ ಪ್ರಸ್ತಾವನೆಯ ಪರಿಶೀಲನೆಯಲ್ಲಿ ಸಹಾಯ ಮಾಡುವುದು.
- ರಸ್ತೆ ಮೂಲಸೌಕರ್ಯ ಮತ್ತು ನಗರ ಬೀದಿ ಭೂದೃಶ್ಯಗಳ ಯೋಜನೆ ಮತ್ತು ವಿನ್ಯಾಸಕ್ಕೆ ಕೊಡುಗೆ ನೀಡುವುದು.
- ಸೌಂದರ್ಯಶಾಸ್ತ್ರ, ಕ್ರಿಯಾತ್ಮಕತೆ ಮತ್ತು ಪಾದಚಾರಿ ಸ್ನೇಹಿ ವಿನ್ಯಾಸವನ್ನು ಸಂಯೋಜಿಸಲು ಇನ್‌ಪುಟ್‌ಗಳನ್ನು ಒದಗಿಸುವುದು.
- ದತ್ತಾಂಶ ಸಂಗ್ರಹಣೆ, ವಿಶ್ಲೇಷಣೆ, ಪಾಲುದಾರರ ಸಮಾಲೋಚನೆಗಳು ಮತ್ತು ವರದಿ ತಯಾರಿಕೆಯಲ್ಲಿ ಸಹಾಯ ಮಾಡುವುದು.
- ಅಗತ್ಯವಿರುವಂತೆ ಸಂಬಂಧಿತ ಇಲಾಖೆಗಳು ಮತ್ತು ಸಲಹೆಗಾರರೊಂದಿಗೆ ಸಮನ್ವಯ ಸಾಧಿಸುವುದು.

2. ಸಂಭಾವನೆ:

ಕೈಗಾರಿಕಾ ಮಾನದಂಡಗಳ ಪ್ರಕಾರ ಅರ್ಹತೆಗಳು ಮತ್ತು ಅನುಭವಕ್ಕೆ ಅನುಗುಣವಾಗಿರಬೇಕು.

3. ಕೆಲಸ ಮಾಡುವ ಸ್ಥಳ:

ಯೋಜನೆ ಮತ್ತು ಸಮನ್ವಯ ಇಲಾಖೆಯ ಅಡಿಯಲ್ಲಿ ಯೋಜನೆ ಮತ್ತು ವಿನ್ಯಾಸ ಕೋಶ, ಗ್ರೇಟರ್ ಬೆಂಗಳೂರು ಪ್ರಾಧಿಕಾರ.

ಅರ್ಜಿ ಸಲ್ಲಿಸುವ ವಿಧಾನ: ಆಸಕ್ತ ಅಭ್ಯರ್ಥಿಗಳು ತಮ್ಮ ಸಿವಿ, ಅರ್ಹತಾ ದಾಖಲೆಗಳು ಮತ್ತು ಸಂಬಂಧಿತ ಅನುಭವವನ್ನು ಹೈಲೈಟ್ ಮಾಡುವ ಸಂಕ್ಷಿಪ್ತ ಕವರ್ ಲೆಟರ್ ಅನ್ನು **https://bit.ly/Planninganddesigncell** ಗೆ ಫಾರ್ಮ್ ಮೂಲಕ ಸಲ್ಲಿಸಬಹುದು.

ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **07.01.2026**. ಈ ಹಿಂದೆ ಈ ಹುದ್ದೆಗೆ ಅರ್ಜಿ ಸಲ್ಲಿಸಿದ್ದ ಅಭ್ಯರ್ಥಿಗಳು ಮತ್ತೆ ಅರ್ಜಿ ಸಲ್ಲಿಸಲು ಅವಕಾಶವಿಲ್ಲ.

ಸೂಚನೆ :

- ಶಾರ್ಟ್‌ಲಿಸ್ಟ್ ಮಾಡಿದ ಅಭ್ಯರ್ಥಿಗಳನ್ನು ಮಾತ್ರ ಸಂದರ್ಶನಕ್ಕೆ ಕರೆಯಲಾಗುತ್ತದೆ.
- ಯಾವುದೇ ಕಾರಣ ನೀಡದೆ ಈ ಅಧಿಸೂಚನೆಯನ್ನು ರದ್ದುಗೊಳಿಸುವ ಅಥವಾ ಮಾರ್ಪಡಿಸುವ ಹಕ್ಕನ್ನು ಪ್ರಾಧಿಕಾರವು ಕಾಯ್ದಿರಿಸಿದೆ.
- ಯಾವುದೇ ಪ್ರಶ್ನೆಗಳಿಗೆ, ಸಂಪರ್ಕಿಸಿ: 9986985040

ಸಹಿ/– ಕಾರ್ಯಪಾಲಕ ಅಭಿಯಂಬರರು

ಯೋಜನೆ ಮತ್ತು ಸಮನ್ವಯ, ಗ್ರೇಟರ್ ಬೆಂಗಳೂರು ಪ್ರಾಧಿಕಾರ

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ.: CAO/CN/BNC/156/2025

ದಿನಾಂಕ: 04.11.2025 ಗೆ ತಿದ್ದುಪಡಿ

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಶಿವಮೊಗ್ಗ – ಶೃಂಗೇರಿ – ಮಂಗಳೂರು (332 ಕಿಮೀ.), ತಾಳಗುಪ್ಪ – ಹೊನ್ನಾವರ (95 ಕಿಮೀ.), ಆಲಮಟ್ಟಿ – ಯಾದಗಿರಿ (162 ಕಿಮೀ) ಮತ್ತು ಭದ್ರಾವತಿ – ಚಿಕ್ಕಜಾಜೂರು (73 ಕಿಮೀ.) ನಡುವೆ ಹೊಸ ಲೈನ್‌ಗಾಗಿ ಅಂತಿಮ ಹಂತದ ಸ್ಥಳಗಳ ಸಮೀಕ್ಷೆ. (ಟೆಂಡರು ಉಲ್ಲೇಖ ಸಂ.: SWR-FLS-RATE CONTRACT-03)	ರೂ. 33,52,62,609/-

ಕೊನೆಯ ದಿನಾಂಕ	
ಪ್ರಸ್ತುತ	ಪರಿಷ್ಕೃತ
15.12.2025 (15:00 ಗಂಟೆಯವರೆಗೆ)	24.12.2025 (15:00 ಗಂಟೆಯವರೆಗೆ)

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿ / ಬೆಂಗಳೂರು ದಂಡು

PUB/738/AAMO/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Accounts & Finance

SENIOR ACCOUNTANT or Senior - Advisory Services vacancy in Papua New Guinea An exciting opportunity exists for an English speaking, hardworking professional with a Bachelor's or Master's Commerce degree, with 3 - 5 years' experience in an Accounting/Auditing Practice, managing the work of 4 - 5 junior Accountants and Admin. staff, with organised, methodical and good work habits. Preference will be given to single status male applicants. Car driving ability essential. Remuneration will consist of a salary commensurate with your qualifications, experience and skills. Furnished housing, a motor vehicle and medical and repatriation insurance are provided plus one return airfare to Bangalore after twelve (12) months of service. Email your bio data with your photograph and 3 latest pay slips to pvnnpng@gmail.com by 26 December 2025. Interviews to be conducted in Bangalore on 29 and 30 December 2025.

Wanted

WANTED EXPERIENCED Dhobis for a laundry washing unit in Bannerghatta, Bangalore Salary : 18,000 to 25,000 Call: 9880266007 / 8050666007

PUBLIC NOTICE

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನಮ್ಮ ಕಕ್ಷಿದಾರರು ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಚನ್ನರಾಯಪಟ್ಟಣ ಹೋಬಳಿ, ಬೂದಿಗೆರೆ ಗ್ರಾಮದ ರೀಸರ್ವೆ ನಂ. 3/2 ರಲ್ಲಿರುವ (ಹಳೆಯ ಸರ್ವೆ ನಂ. 3 ರ ಭಾಗ) 3 ಎಕರೆ 30 ಗುಂಟೆ ಮತ್ತು ಖರಾಬ್ 07 ಗುಂಟೆ ಅಳತೆಯ ಜಮೀನನ್ನು ಈ ಕೆಳಗೆ ಷೆಡ್ಯೂಲ್‌ನಲ್ಲಿ ("ಷೆಡ್ಯೂಲ್ ಸ್ವತ್ತು") ಸಂಪೂರ್ಣವಾಗಿ ವಿವರಿಸಲಾಗಿದ್ದು ಇದನ್ನು ಶ್ರೀ ಬಿ.ಎಸ್. ನಂಜುಂಡ ಭಟ್, ಬಿನ್ ಲೇಟ್ ಸೂರಪ್ಪ ಮತ್ತು ಅವರ ಕುಟುಂಬದ ಸದಸ್ಯರಿಂದ ಖರೀದಿಸಲು ಪ್ರಸ್ತಾಪಿಸಿರುತ್ತಾರೆ. ಸದರಿ ಸ್ವತ್ತು ಬೂದಿಗೆರೆ ಗ್ರಾಮದ ಹಳೆಯ ಸರ್ವೆ ನಂ. 3ರ ಅಳತೆ ಒಟ್ಟು 4 ಎಕರೆ 21 ಗುಂಟೆ ವಿಸ್ತೀರ್ಣ, 07 ಗುಂಟೆ ಖರಾಬ್ ಸೇರಿದಂತೆ ಇನಾಮ್ ಭೂಮಿಯಾಗಿದ್ದು ಶ್ರೀ ದೇಶ ನಾರಾಯಣಸ್ವಾಮಿ ದೇವಸ್ಥಾನಕ್ಕೆ ಸೇರಿದ್ದು ಮತ್ತು ಸದರಿ ಶ್ರೀ ಬಿ.ಎಸ್. ನಂಜುಂಡ ಭಟ್‌ರವರನ್ನು ಕರ್ನಾಟಕ (ಮತೀಯ ಮತ್ತು ಧಾರ್ಮಿಕ ಸಂಬಂಧವಾದ) ಇನಾಮ್ ರದ್ದಿಯಾಯ್ತಿ ಕಾಯ್ದೆ, 1955ರ ಅಡಿಯಲ್ಲಿ ದೇವನಹಳ್ಳಿ ತಾಲ್ಲೂಕಿನ ಭೂ ನ್ಯಾಯಮಂಡಳಿಯು 29ನೇ ಅಕ್ಟೋಬರ್ 1981ರ ಸಾಮಾನ್ಯ ಆದೇಶದ ನಂ. LRF (INA) ನಂ. 65/79–80, 792/79–80, 27, 10, 11, 12/79–80, 822/79–80, 823/79–80, 784/79–80, 162/80–81 ಮತ್ತು 163/80–81ರ ಪ್ರಕಾರ ಅನುಭೋಗಿ/ಹಿಡುವಾಳಿದಾರರು ಎಂದು ನೋಂದಾಯಿಸಲಾಗಿರುತ್ತದೆ. ಹಳೆಯ ಸರ್ವೆ ನಂ.3 ಸದರಿ ಭೂಮಿಯು ತರುವಾಯ ರೀಸರ್ವೆ ನಂ. 3/1 (24 ಗುಂಟೆಗಳು) ಮತ್ತು ರೀಸರ್ವೆ ನಂ. 3/2 (3 ಎಕರೆ 30 ಗುಂಟೆಗಳು ಮತ್ತು 07 ಖರಾಬ ಗುಂಟೆಗಳು) ಅಂದರೆ, ಷೆಡ್ಯೂಲ್ ಸ್ವತ್ತು ಎಂದು ಉಪವಿಭಾಗ ಮಾಡಲಾಗಿರುತ್ತದೆ.

ಸದರಿ ಸ್ವತ್ತಿನ ಮೇಲೆ ಯಾವುದೇ ವ್ಯಕ್ತಿ/ಗಳಿಗೆ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ ಅಥವಾ ಕ್ಲೇಮುಗಳು ಮತ್ತು ಆಕ್ಷೇಪಣೆಗಳು ಇದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ಹದಿನೈದು ದಿನಗಳ ಒಳಗೆ, ದಾಖಲೆ ಪುರಾವೆಗಳೊಂದಿಗೆ ತಮ್ಮ ಹಕ್ಕು ಅಥವಾ ಆಕ್ಷೇಪಣೆಗಳನ್ನು ನಮಗೆ ಸಲ್ಲಿಸಬಹುದು. ಈ ಅವಧಿಯೊಳಗೆ ಅಂತಹ ಯಾವುದೇ ಹಕ್ಕು ಅಥವಾ ಆಕ್ಷೇಪಣೆಗಳು ನಮಗೆ ಬರದಿದ್ದರೆ, ನಮ್ಮ ಕಕ್ಷಿದಾರರು ಸದರಿ ಸ್ವತ್ತಿನ ಮೇಲೆ ಯಾವುದೇ ವ್ಯಕ್ತಿ(ಗಳಿಂದ) ಯಾವುದೇ ಹಕ್ಕು/ಆಕ್ಷೇಪಣೆಗಳಿಲ್ಲ ಎಂದು ಪರಿಗಣಿಸುತ್ತಾರೆ ಮತ್ತು ಖರೀದಿಯ ವಹಿವಾಟನ್ನು ಮುಂದುವರಿಸುತ್ತಾರೆಂದು ತಿಳಿಸುವುದು.

ಷೆಡ್ಯೂಲ್

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಚನ್ನರಾಯಪಟ್ಟಣ ಹೋಬಳಿ, ಬೂದಿಗೆರೆ ಗ್ರಾಮದ ರೀಸರ್ವೆ ನಂ. 3/2ರಲ್ಲಿರುವ (ಹಳೆಯ ಸರ್ವೆ ನಂ.3 ರ ಭಾಗ) 3 ಎಕರೆ 30 ಗುಂಟೆ ಮತ್ತು ಖರಾಬ್ 07 ಗುಂಟೆ ಅಳತೆಯ ಸ್ವತ್ತಿಗೆ ಚೆಕ್ಕುಬಂದಿ–

ಪೂರ್ವಕ್ಕೆ : ಸರ್ವೆ ನಂ. 4.
ಪಶ್ಚಿಮಕ್ಕೆ : ಸರ್ವೆ ನಂ. 241,
ಉತ್ತರಕ್ಕೆ : ಬೂದಿಗೆರೆ ಕೆರೆ,
ದಕ್ಷಿಣಕ್ಕೆ : ಬಾಗಲೂರು – ದೇವನಹಳ್ಳಿ ರಸ್ತೆ ಮತ್ತು ಅದರಾಚೆಗೆ, ಮರು ಸರ್ವೆ ನಂ. 3/1

ಬೆಂಗಳೂರು
ದಿನಾಂಕ: 17–12–2025

ಮೆ|| ಟಿ ಎಸ್ ಸುರೇಶ್ + ಅಸೋಸಿಯೇಟ್ಸ್
ವಕೀಲರು
ಫಾರ್ಚೂನ್ ಛೇಂಬರ್ಸ್, 2ನೇ ಮಹಡಿ, 8, ಲಾಲ್‌ಬಾಗ್ ರಸ್ತೆ, ರಿಚ್‌ಮಂಡ್ ಸರ್ಕಲ್, ಬೆಂಗಳೂರು–560 027.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

PERSONAL

Announcements

ANNOUNCEMENT

I, **A.S. KRISHNA,** R/at No. 120/2, 4th Cross, Venkateshwara Layout, J.P. Nagar 8th Phase, B.G. Road, Bengaluru-76, declare that by oversight in my Aadhar & PAN Card my D.O.B. is mentioned as 01-01-1961 and 01-05-1964 my actual & correct D.O.B is 19-05-1960 (as recorded in PF), vide affidavit dated 18.11.2025 before notary S. Vijaya Kumar, Bengaluru.

CHANGE OF NAME

I, **SHAIKH SUBANI** S/o MEHBOOB SHAIKH, R/at No. 28, 3rd Floor, D Block, Dhobighat Quarters, L R Nagar, Viveknagar, Bengaluru-560047, have changed my name to **SHUBHAM BHOSALE** and declare that i have embraced Hinduism and renounced Islam w.e.f 03-08-2025, vide affidavit dated 03.12.2025 before XXXVIII Addl. Chief Judical Magistrate, Bengaluru.

I,ASHOK BABU, Residing at No.4043, Casa Serenita Sobha City, Thanisandra Main Road, R.K.Hegde Nagar,Bengaluru-560077. Have Changed my Name ASHOK BABU to ASHOK BABU THANGARAJ vide affidavitDated:16.12.2025 before Notary K.V.Mani,Bangalore

Change of Name

CHANGE OF NAME

I, **Renuka Bharadi** W/o Hanumanth Kuragund, residing at No.65/31, 2nd Floor, 3rd Cross, Bhovi Colony, Suddaguntepalya, Taverekere Post, Bengaluru-560029, have changed my name to **PALLAVI KURAGUND** vide affidavit dated 17.12.2025 before notary K Venkateshan, Bengaluru.

Lost

ಕಳೆದುಹೋಗಿದೆ

ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು, ಬಿಡದಿ-2 ಹೋಬಳಿ, ಬಿಲ್ಲಕೆಂಪನಹಳ್ಳಿ ಗ್ರಾಮದ ಸರ್ವೇನಂಬರ್ 51/3 (ಐವತ್ತೊಂದು ಸಬ್ ಮೂರು) ರ ಆಸ್ತಿಪತ್ರ (ಸಂಖ್ಯೆ: RMN-1-07758: 2019-20) ಕಳೆದುಹೋಗಿದೆ. ಯಾರಿಗಾದರೂ ದೊರಕಿದ್ದಲ್ಲಿ ತಕ್ಷಣವೇ ಈ ಕೆಳಕಂಡ ಸಂಖ್ಯೆಯನ್ನು ಸಂಪರ್ಕಿಸಿ

ಯತೀಶ್ ವಿ
99724 44044

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd.
Bengaluru

JOB

To Place your Classified Ads Contact:
9886213331

MARUTI SUZUKI
NEXA
We Are Now
3 CRORE STRONG & COUNTING.
THANK YOU, INDIA.
Let's celebrate together with special offers.
FRONX
FRONX
EFFECTIVE PRICE OF ₹6.6 LAKH*
BALENO
BALENO
EFFECTIVE PRICE OF ₹5.52 LAKH*
OFFERS VALID TILL 31ST DEC 2025
NEXA SAFETY SHIELD
UP TO 100% WAIVER ON CAR LOAN PROCESSING FEE**
SCAN TO CONNECT TO A SHOWROOM NEAR YOU
E-BOOK TODAY @ WWW.NEXAEXPERIENCE.COM
Contact us at
1800-200-[6392]
1800-102-[6392]
T&C available at your nearest dealership. *Ex. Showroom Price of Fronx Sigma ₹ 6.85 lakh, Consumer Offer (-) ₹ 15 000, Exchange Bonus (-) ₹ 10 000 = ₹ 6.6 lakh. #Ex. Showroom Price of Baleno Sigma ₹ 5.99 lakh, Consumer Offer (-) ₹ 30 000, Exchange Bonus (-) ₹ 15 000, Rural Offer (-) ₹ 2 100 = ₹ 5.52 lakh. The actual Effective Price mentioned may vary based on the customer's eligibility, profile, and applicable offers at the time of purchase. Offers valid on Fronx Sigma Variant & Baleno Sigma Variant. Maruti Suzuki India Limited reserves the right to discontinue offers without notice and offers may vary across variants. ^Offers include consumer offer, exchange bonus, and institutional or rural offers (wherever applicable) on select models/variants. The above offers are valid until stocks last. Creative visualization. Images used are for illustration purposes only. Car colour may vary due to printing on paper. ^^Prices subject to applicable GST rates as notified by the Government of India. **By selected finance partners. Finance is at the sole discretion of the financer. Prices and savings mentioned above are for select variants and may vary across cities/variants.

ಅಡವಿಟ್ಟ ಚಿನ್ನ ರಕ್ಷಣೆಗೆ ಮಸೂದೆ

• ಚಂದ್ರಹಾಸ ಹಿರೇಮಳಲಿ

ಸುವರ್ಣ ವಿಧಾನಸೌಧ (ಬೆಳಗಾವಿ): ತ್ವರಿತ ಸಾಲಕ್ಕಾಗಿ ಅಡವಿಟ್ಟ ಚಿನ್ನವನ್ನು ನಿಗದಿತ ಅವಧಿಯ ಒಳಗೆ ಬಿಡಿಸಿಕೊಳ್ಳಲು ಸಾಧ್ಯವಾಗದೆ ಸಂಕಷ್ಟ ಅನುಭವಿಸುವ ಬಡವರು, ಮಧ್ಯಮ ವರ್ಗದ ಜನರ ನೆರವಿಗೆ ಕಾಯ್ದೆಯ ಬಲ ತುಂಬಲು ಮಸೂದೆಯೊಂದು ಸಿದ್ಧವಾಗಿದೆ.

ವಿಧಾನಪರಿಷತ್‌ನ ಕಾಂಗ್ರೆಸ್ ಸದಸ್ಯ ರಮೇಶ್ ಬಾಬು, ‘ಕರ್ನಾಟಕ ಬಂಗಾರ ಅಡವಿಟ್ಟ ಸಾಲಗಾರರ ರಕ್ಷಣಾ ಮಸೂದೆ–2025’ ಹೆಸರಿನಲ್ಲಿ ಖಾಸಗಿ ಮಸೂದೆ ಸಿದ್ಧಪಡಿಸಿದ್ದಾರೆ. ವಿಧಾನ-ಪರಿಷತ್‌ನ ಉಪಸಭಾಪತಿ ಎಂ.ಕೆ.ಪ್ರಾಣೇಶ್ ಅಧ್ಯಕ್ಷತೆಯ ಸಮಿತಿ ಮಸೂದೆ ಮಂಡನೆಗೆ ಸಮ್ಮತಿ ನೀಡಿದೆ.

ಕರ್ನಾಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ ಬ್ಯಾಂಕೇತರ ಹಣಕಾಸು ಕಂಪನಿಗಳು, ಖಾಸಗಿ ಹಣಕಾಸು ಸಂಸ್ಥೆಗಳು, ಲೇವಾದೇವಿಗಾರರು ಚಿನ್ನದ ಆಭರಣಗಳನ್ನು ಅಡವಿಟ್ಟುಕೊಂಡು ಸಾಲ ನೀಡುತ್ತವೆ. ನಿಗದಿತ ಅವಧಿಯ ಒಳಗೆ ಸಾಲದ ಅಸಲು ಹಾಗೂ ಬಡ್ಡಿ ಮರುಪಾವತಿ ಮಾಡದಿದ್ದರೆ, ಅವಧಿ ಪೂರ್ಣಗೊಳ್ಳುತ್ತಿದ್ದಂತೆ ಅಡವಿಟ್ಟ ಆಭರಣಗಳನ್ನು ಹರಾಜು ಹಾಕುತ್ತವೆ. ಅಡವಿಟ್ಟುಕೊಳ್ಳುವಾಗ ನೀಡುವ ಸಾಲದ ಪ್ರಮಾಣ ಚಿನ್ನದ ಮೌಲ್ಯದ ಶೇ 50ಕ್ಕಿಂತ ಕಡಿಮೆ ಇರುತ್ತದೆ.



ಬಹುತೇಕ ಬಡವರು ಕೂಲಿ ಮಾಡಿ, ಸಣ್ಣ ಮೊತ್ತ ಉಳಿಸಿ ಚಿನ್ನ ಖರೀದಿಸಿರುತ್ತಾರೆ. ಅಡವಿಟ್ಟು ಸಾಲ ಪಡೆದ ಶೇ 50ರಷ್ಟು ಚಿನ್ನ ಹರಾಜಿಗೆ ಬರುತ್ತಿದೆ. ಸಾಮಾನ್ಯರ ಬದುಕು ಬೀದಿ ಪಾಲಾಗುತ್ತಿದೆ

ರಮೇಶ್ ಬಾಬು, ವಿಧಾನಪರಿಷತ್ ಸದಸ್ಯ, ಕಾಂಗ್ರೆಸ್

ಅಸಲು–ಬಡ್ಡಿ ಸೇರಿದರೂ ಚಿನ್ನದ ವರ್ತಮಾನದ ಮೌಲ್ಯಕ್ಕಿಂತ ಕಡಿಮೆ ಇರುತ್ತದೆ. ಇಂತಹ ಹಲವು ಪ್ರಕರಣಗಳಲ್ಲಿ ಉಳಿಕೆ ಮೊತ್ತವನ್ನು ಸಾಲಗಾರರಿಗೆ ವರ್ಗಾಯಿಸುವುದೇ ಇಲ್ಲ. ಬದಲಿಗೆ ಹರಾಜಿನ ನಂತರವೂ ಉಳಿಕೆ ಸಾಲದ ಬಾಕಿ ಪಾವತಿಸುವಂತೆ ನೋಟಿಸ್ ನೀಡಲಾಗುತ್ತದೆ. ಅಂತಹ ಸಾಲಗಾರರ ರಕ್ಷಣೆ ಹಾಗೂ ಅಡವಿಟ್ಟ ಚಿನ್ನದ ಹರಾಜು ಪ್ರಕ್ರಿಯೆಯನ್ನು ನಿಯಂತ್ರಿಸಲು ಹಾಗೂ ಅನುಸಂಧಾನ ವ್ಯವಸ್ಥೆ ಬಲಪಡಿಸಲು ಕಾಯ್ದೆಯ ಅಗತ್ಯವಿದೆ ಎಂದು ಮಸೂದೆ ರಚನೆಯ ಕಾರಣಗಳನ್ನು ವಿವರಿಸಲಾಗಿದೆ.

ಖಾಸಗಿ ಮಸೂದೆ ಮಂಡನೆಗೆ ಸಿದ್ಧತೆ

ಚಿನ್ನದ ಅಡಮಾನ ಸಾಲ ನೀಡುವ ಯಾವುದೇ ವಾಣಿಜ್ಯ ಬ್ಯಾಂಕ್, ಖಾಸಗಿ ಕಂಪನಿ, ಖಾಸಗಿ ಸಂಸ್ಥೆ, ಬ್ಯಾಂಕೇತರ ಹಣಕಾಸು ಕಂಪನಿಗಳು, ಖಾಸಗಿ ಬ್ಯಾಂಕ್, ಖಾಸಗಿ ಪ್ರತಿಷ್ಠಾನ, ಲೇವಾದೇವಿಗಾರರು ಕಾಯ್ದೆಯ ವ್ಯಾಪ್ತಿಗೆ ಒಳಪಡಲಿದ್ದು, ಅಡಮಾನ ಸಾಲ ಪಡೆದ ಚಿನ್ನವನ್ನು ಹರಾಜು ಹಾಕುವ ಮೊದಲು ಹಲವು ಪ್ರಕ್ರಿಯೆಗಳನ್ನು ನಡೆಸಬೇಕು ಎಂದು ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ.

ಅವಧಿ ಮುಗಿದ ದಿನಾಂಕದಿಂದ 180 ದಿನಗಳನ್ನು ನಿಗದಿ ಮಾಡಿ, ನೋಟಿಸ್ ನೀಡುವುದು. ಪಡೆದ ಸಾಲ, ವಿಧಿಸಿದ ಬಡ್ಡಿ, ಅಡವಿಟ್ಟ ಸಮಯದ ಚಿನ್ನದ ಮೌಲ್ಯ, ಪ್ರಸ್ತುತ ಮಾರುಕಟ್ಟೆ ಮೌಲ್ಯ, ಮರುಪಾವತಿ ವಿವರಗಳನ್ನು ಒದಗಿಸುವುದು ಕಡ್ಡಾಯ. ಒಟ್ಟು ಮೌಲ್ಯ ಹಾಗೂ ನೋಟಿಸ್ ಅವಧಿಯ ಒಳಗೆ ಬಾಕಿ ಮೊತ್ತ ಮತ್ತು ಅನ್ವಯವಾಗುವ ಬಡ್ಡಿಯನ್ನು ಪಾವತಿಸುವ ಸಾಲಗಾರರಿಗೆ ತಮ್ಮ ಚಿನ್ನವನ್ನು ಮರಳಿ ಪಡೆಯುವ ಅವಕಾಶ ಕಲ್ಪಿಸಲಾಗಿದೆ. 180 ದಿನಗಳ ನೋಟಿಸ್ ನೀಡಿದ ನಂತರವೂ ಹರಾಜು ಪ್ರಕ್ರಿಯೆ ಪೂರ್ಣಗೊಳಿಸಲು ಹೆಚ್ಚುವರಿ 90 ದಿನಗಳ ಗಡುವು ವಿಧಿಸಬೇಕೆಂದು ಪ್ರಸ್ತಾವವಿದೆ.

ಹರಾಜಿಗೆ ಅಧಿಕಾರಿಗಳ ಕಣ್ಗಾವಲು

ರಾಜ್ಯ ಸರ್ಕಾರದಿಂದ ಅನುಮೋದನೆ ಪಡೆದ ಪರವಾನಗಿ ಹೊಂದಿದ ಹರಾಜುಗಾರರ ಮೂಲಕ ಮಾತ್ರ ಚಿನ್ನದ ಹರಾಜು ಪ್ರಕ್ರಿಯೆ ನಡೆಸಬೇಕು. ಸ್ಥಳೀಯ ತಹಶೀಲ್ದಾರ್ ಅಥವಾ ಸರ್ಕಾರ ನಿಯೋಜಿಸಿದ ಸರ್ಕಾರಿ ಪ್ರತಿನಿಧಿಯ ಸಮ್ಮುಖದಲ್ಲಿ ನಡೆಸುವುದನ್ನು ಕಡ್ಡಾಯಗೊಳಿಸಬೇಕೆಂದು ಹೇಳಲಾಗಿದೆ.

ಹರಾಜಿನ ನಂತರ ಸಾಲದ ಬಾಕಿ ಮೊತ್ತ ಹಾಗೂ ಹರಾಜು ವೆಚ್ಚಗಳನ್ನು ಕಡಿತಗೊಳಿಸಿ, ಉಳಿಯುವ ಹೆಚ್ಚುವರಿ ಮೊತ್ತವನ್ನು 15 ದಿನಗಳ ಒಳಗೆ ಸಾಲಗಾರರಿಗೆ ಮರುಪಾವತಿಸಬೇಕು ಎಂಬ ವಿವರಗಳನ್ನು ಮಸೂದೆ ಒಳಗೊಂಡಿದೆ.

ಚಿನ್ನದ ಅಡಮಾನ ಸಾಲದ ಮೇಲ್ವಿಚಾರಣೆ ಬಿಗಿಗೊಳಿಸುವುದು, ಅಡವಿಟ್ಟ ಚಿನ್ನವನ್ನು ಮರಳಿ ಪಡೆಯುವ ಅವಕಾಶವನ್ನು ವಿಸ್ತರಿಸುವುದು, ಸಾಲಗಾರರ ರಕ್ಷಣಾ ಮಾನದಂಡಗಳನ್ನು ಖಚಿತಪಡಿಸುವುದು, ನ್ಯಾಯಸಮ್ಮತ ವ್ಯಾಪಾರ ಕ್ರಮಗಳನ್ನು ಜಾರಿಗೊಳಿಸುವ ನಿಯಮಗಳನ್ನು ರೂಪಿಸುವ ಅಧಿಕಾರವನ್ನು ರಾಜ್ಯ ಸರ್ಕಾರಕ್ಕೆ ನೀಡಲಾಗಿದೆ.

ಉಲ್ಲಂಘನೆಗೆ ₹10 ಲಕ್ಷ ದಂಡ

ಕಾಯ್ದೆಯ ನಿಯಮಗಳನ್ನು ಉಲ್ಲಂಘಿಸುವ ಹಣಕಾಸು ವಹಿವಾಟು ಸಂಸ್ಥೆಗಳಿಗೆ 6 ತಿಂಗಳು ಕಾರಾಗೃಹ ಶಿಕ್ಷೆ, ₹10 ಲಕ್ಷದವರೆಗೆ ದಂಡ ವಿಧಿಸಲು ಅವಕಾಶ ಕಲ್ಪಿಸಬೇಕೆಂದು ಪ್ರಸ್ತಾಪಿಸಲಾಗಿದೆ.

ಅಪರಾಧ ಪುನರಾವರ್ತನೆಯಾದರೆ ಸಂಸ್ಥೆಯ ನೋಂದಣಿ, ಪರವಾನಗಿ ರದ್ದು ಮಾಡುವುದು, ಅಗತ್ಯ ಕ್ರಮ ಕೈಗೊಳ್ಳಲು, ಭಾರತೀಯ ರಿಸರ್ವ್ ಬ್ಯಾಂಕ್‌ಗೆ ವರದಿ ನೀಡಲು ಅಧಿಕಾರ ನೀಡಲಾಗಿದೆ.

ಕಾಯ್ದೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವಲ್ಲಿ ವಿಫಲವಾದ ಅಧಿಕಾರಿಗಳ ವಿರುದ್ಧವೂ ಕ್ರಮ ಕೈಗೊಳ್ಳುವ ಅವಕಾಶವನ್ನು ಒದಗಿಸಬೇಕೆಂದು ಉಲ್ಲೇಖಿಸಲಾಗಿದೆ.

ವಿಧಾನಪರಿಷತ್

ಪ್ರಶ್ನೋತ್ತರ

ಬೌದ್ಧ ಬಿಕ್ಕುಗಳಿಗೂ ಸಂಭಾವನೆ

ಮುಜರಾಯಿ ದೇವಸ್ಥಾನಗಳ ಅರ್ಚಕರ ರೀತಿ ಬೌದ್ಧ ಬಿಕ್ಕುಗಳಿಗೂ ಪ್ರತಿ ತಿಂಗಳು ₹6,000 ಗೌರವಧನ ನೀಡಲಾಗುವುದು. ಈಗಾಗಲೇ ಪ್ರಸ್ತಾವನೆ ಪರಿಶೀಲನೆಯ ಹಂತದಲ್ಲಿದ್ದು, ಆದೇಶವನ್ನು ಶೀಘ್ರ ಹೊರಡಿಸಲಾಗುವುದು.
ಜೈನ ಬಸದಿಗಳಲ್ಲಿ ಸೇವೆ ಸಲ್ಲಿಸುತ್ತಿರುವ ಮುಖ್ಯ ಅರ್ಚಕರು, ಮಸೀದಿಗಳ ಪೇಶ್ ಇಮಾಮ್‌ಗಳಿಗೆ ಈಗಾಗಲೇ ₹6,000 ನೀಡಲಾಗುತ್ತಿದೆ

ಅಲ್ಪಸಂಖ್ಯಾತ ಕಲ್ಯಾಣ ಸಚಿವರ ಪರವಾಗಿ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ
ಪ್ರಶ್ನೆ: ಕೆ.ಶಿವಕುಮಾರ್, ಕಾಂಗ್ರೆಸ್

ಭದ್ರಾ, ಯಗಚಿ: ಭೂಮಿ ಹಂಚಿಕೆ ಪರಿಶೀಲನೆ

ಚಿಕ್ಕಮಗಳೂರು ಜಿಲ್ಲೆ ಭದ್ರಾ ವನ್ಯಜೀವಿ ಸಂರಕ್ಷಣಾ ಯೋಜನೆ, ಹಾಸನ ಜಿಲ್ಲೆ ಯಗಚಿ ಜಲಾಶಯ ಯೋಜನೆಗಳ ಸಂತ್ರಸ್ತರಿಗೆ ಭೂಮಿ ಮಂಜೂರು ಮಾಡುವಲ್ಲಿ ಕೆಲ ಸಮಸ್ಯೆಗಳು ಆಗಿವೆ. ಹಿಂದಿನ ಸರ್ಕಾರಗಳು ಸರಿಯಾಗಿ ನಿರ್ವಹಣೆ ಮಾಡದ ಕಾರಣ ಕಡಿಮೆ ಭೂಮಿ ಕಳೆದುಕೊಂಡವರಿಗೆ ಹೆಚ್ಚು ಜಮೀನು ಸಿಕ್ಕಿದೆ. ಅಂದು ಜನಿಸದೇ ಇದ್ದವರ ಹೆಸರಿಗೂ ಪರ್ಯಾಯ ಜಮೀನು ಪಡೆದಿದ್ದಾರೆ. ಗೋಮಾಳ ಭೂಮಿಯೂ ಹಂಚಿಕೆಯಾಗಿದೆ. ಈ ಎಲ್ಲ ವಿಷಯಗಳ ಕುರಿತು ಸೂಕ್ತ ಮಾಹಿತಿ ಪಡೆದು, ಕ್ರಮ ಕೈಗೊಳ್ಳಲಾಗುವುದು

ಕೃಷ್ಣಬೈರೇಗೌಡ, ಕಂದಾಯ ಸಚಿವ
ಪ್ರಶ್ನೆ: ಎಸ್.ಎಲ್.ಭೋಜೇಗೌಡ, ಜೆಡಿಎಸ್

ಎ.ಸಿ ಕೋರ್ಟ್ ಪ್ರಕರಣ: 3 ತಿಂಗಳೊಳಗೆ ಇತ್ಯರ್ಥ

ಎಲ್ಲ 54 ಉಪ ವಿಭಾಗಾಧಿಕಾರಿಗಳ (ಎ.ಸಿ) ಕೋರ್ಟ್‌ನಲ್ಲಿರುವ ಬಾಕಿ ಪ್ರಕರಣಗಳನ್ನು ಮೂರು ತಿಂಗಳ ಒಳಗೆ ಇತ್ಯರ್ಥ ಮಾಡಲಾಗುವುದು. ಎರಡೂವರೆ ವರ್ಷಗಳ ಹಿಂದೆ 62,857 ಪ್ರಕರಣಗಳು ಬಾಕಿ ಇದ್ದವು. ವಿಶೇಷ ಉಪವಿಭಾಗಾಧಿಕಾರಿ ಕೋರ್ಟ್‌ಗಳನ್ನು ಸ್ಥಾಪಿಸಿ ತ್ವರಿತ ಇತ್ಯರ್ಥಕ್ಕೆ ಕ್ರಮ ಕೈಗೊಳ್ಳಲಾಗಿದೆ. ಈಗ 14,324 ಪ್ರಕರಣಗಳು ಬಾಕಿ ಇದ್ದು, ಎಲ್ಲ ಪ್ರಕರಣಗಳನ್ನೂ ಇತ್ಯರ್ಥ ಮಾಡಲಾಗುವುದು

ಕೃಷ್ಣಬೈರೇಗೌಡ, ಕಂದಾಯ ಸಚಿವ
ಪ್ರಶ್ನೆ: ರಾಮೋಜಿಗೌಡ, ಕಾಂಗ್ರೆಸ್

ಅವಧಿ ಮುಗಿದ 3,791 ಬಸ್‌ಗಳು ನಿಷ್ಕ್ರಿಯ

ಅವಧಿ ಪೂರೈಸಿ, ನಿರುಪಯುಕ್ತವಾದ ನಾಲ್ಕು ಸಾರಿಗೆ ನಿಗಮಗಳ 3,212 ಬಸ್‌ಗಳನ್ನು ನಿಷ್ಕ್ರಿಯಗೊಳಿಸಲಾಗಿದೆ. ಬಾಕಿ ಇರುವ 579 ಬಸ್‌ಗಳನ್ನು ಶೀಘ್ರ ನಿಷ್ಕ್ರಿಯಗೊಳಿಸಲಾಗುವುದು. ಮೂರು ವರ್ಷಗಳಲ್ಲಿ 5,851 ಹೊಸ ಬಸ್‌ಗಳನ್ನು ಖರೀದಿಸಲಾಗಿದ್ದು, ಹೊಸದಾಗಿ 2,806 ಬಸ್‌ಗಳ ಖರೀದಿಗೆ ಅನುಮತಿ ನೀಡಲಾಗಿದೆ

ರಾಮಲಿಂಗಾರೆಡ್ಡಿ, ಸಾರಿಗೆ ಸಚಿವ
ಪ್ರಶ್ನೆ: ಗೋವಿಂದರಾಜು, ಜೆಡಿಎಸ್

ಕಾವೇರಿ–2 ತಂತ್ರಾಂಶದಲ್ಲಿ ಸಮಸ್ಯೆ ಇಲ್ಲ

ವಿಭಾಗ ಪತ್ರ, ದಾನಪತ್ರಗಳ ನೋಂದಣಿ ಸಮಸ್ಯೆಗೆ ಕಾವೇರಿ–2 ತಂತ್ರಾಂಶ ಕಾರಣವಲ್ಲ. ಕಳೆದ ಮೂರು ವರ್ಷಗಳಲ್ಲಿ ಗ್ರಾಮೀಣ ಪ್ರದೇಶದ 36,724 ವಿಭಾಗ ಪತ್ರಗಳು ಹಾಗೂ 85,698 ದಾನ ಪತ್ರಗಳು ನೋಂದಣಿಯಾಗಿವೆ. ವಿಭಾಗ ಮಾಡಿಕೊಡಬೇಕಿರುವುದು ಸ್ಥಳೀಯ ಸಂಸ್ಥೆಗಳ ಜವಾಬ್ದಾರಿ. ಈ ಕುರಿತು ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿ, ಪೌರಾಡಳಿತ ಸಚಿವರ ಜತೆ ಚರ್ಚಿಸಿ, ಸಮಸ್ಯೆ ಬಗೆಹರಿಸಲಾಗುವುದು

ಕೃಷ್ಣಬೈರೇಗೌಡ, ಕಂದಾಯ ಸಚಿವ., ಪ್ರಶ್ನೆ: ಡಿ.ಎಸ್.ಅರುಣ್, ಬಿಜೆಪಿ

‘ಕಳ್ಳರಾದ ಪೊಲೀಸರು; ಡ್ರಗ್ಸ್ ವ್ಯಾಪಕ’

ಎರಡೂವರೆ ವರ್ಷಗಳ ಕಾನೂನು ಸುವ್ಯವಸ್ಥೆ: ಶ್ವೇತಪತ್ರ ಹೊರಡಿಸಿ – ಅಶೋಕ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ‘ರಾಜ್ಯದಲ್ಲಿ ಪೊಲೀಸರೇ ಕಳ್ಳರಾಗಿದ್ದಾರೆ. ಸುಲಿಗೆಗೆ ಇಳಿದಿದ್ದಾರೆ. ಜೈಲುಗಳು ರೆಸಾರ್ಟ್‌ಗಳಾಗಿವೆ. ಕೈದಿಗಳ ಕೈಯಲ್ಲಿ ಮೊಬೈಲ್ ಬಂದಿದೆ. ಡ್ರಗ್ಸ್ ಮಾಫಿಯಾ ವ್ಯಾಪಕವಾಗಿ ಬೆಳೆದಿದೆ’ ಎಂದು ಆರೋಪಿಸಿದ ವಿರೋಧ ಪಕ್ಷದ ನಾಯಕ ಆರ್. ಅಶೋಕ, ‘ಈ ಎರಡೂವರೆ ವರ್ಷಗಳ ಕಾನೂನು ಸುವ್ಯವಸ್ಥೆ ಸಂಬಂಧಿಸಿದ ಶ್ವೇತ ಪತ್ರ ಬಿಡುಗಡೆ ಮಾಡಬೇಕು’ ಎಂದು ಆಗ್ರಹಿಸಿದರು.

ರಾಜ್ಯದಲ್ಲಿನ ಕಾನೂನು ಸುವ್ಯವಸ್ಥೆ ಕುರಿತು ವಿಧಾನಸಭೆಯಲ್ಲಿ ಬುಧವಾರ ಮಾತನಾಡಿದ ಅವರು, ‘ಪರಪ್ಪನ ಅಗ್ರಹಾರ ಜೈಲಿನಲ್ಲಿ ಕೊಲೆಗಾರರಿಗೆ, ಭಯೋತ್ಪಾದಕರಿಗೆ ರೆಸಾರ್ಟ್, ಫೈವ್ ಸ್ಟಾರ್ ಹೋಟೆಲ್ ಸೌಲಭ್ಯ ನೀಡಲಾಗುತ್ತಿದೆ. ಬ್ಯಾರಕ್‌ಗೆ ವರ್ಗಾವಣೆ ಮಾಡಿಸಿಕೊಳ್ಳಲು ಜೈಲಧಿಕಾರಿಗಳಿಗೆ ಕೈದಿಗಳು ಲಂಚ ನೀಡುತ್ತಾರೆ’ ಎಂದು ದೂರಿದರು.

‘ರೌಡಿಶೀಟರ್ ಗುಬ್ಬಚ್ಚಿ ಸೀನ ಜೈಲಿನಲ್ಲೇ ಜನ್ಮದಿನ ಆಚರಿಸಿಕೊಂಡ. ಆ ಕೇಕ್ ಮೇಲೆ ಹೆಸರು ಬರೆಸಿಕೊಂಡಿದ್ದ. ಅಂತಹ ಕೇಕ್ ಜೈಲಿನೊಳಗೆ ಹೇಗೆ ಬಂತು? ಭಯೋತ್ಪಾದಕ ಶಕೀಲ್ ಮನ್ನಾ ಕೈಯಲ್ಲಿ ಫೋನ್ ಇರುವ ವಿಡಿಯೊ ಬಹಿರಂಗವಾಗಿದೆ. ನಟ ದರ್ಶನ್ ಕೈಯಲ್ಲಿ ಸಿಗರೇಟ್ ಇರುವ ಫೋಟೊ ಬಂದಿತ್ತು. ಪೊಲೀಸ್ ಆಯುಕ್ತರು ಪ್ರತಿ ತಿಂಗಳು ಜೈಲಿಗೆ ಭೇಟಿ ನೀಡಿ ಪರಿಶೀಲನೆ ಮಾಡಬೇಕೆಂದು ಜೈಲಿನ ನಿಯಮದಲ್ಲೇ ಇದೆ. ಆದರೆ, ಈ ರೀತಿಯ ಭೇಟಿಗಳೇ ನಡೆದಿಲ್ಲ’ ಎಂದರು.

ಹಿರಿಯ ಪೊಲೀಸ್ ಅಧಿಕಾರಿಗಳೇ ಅಪರಾಧ ಕೃತ್ಯಗಳಲ್ಲಿ ತೊಡಗಿಸಿಕೊಂಡರೆ ಹೇಗೆ? ಪೊಲೀಸರಿಗೆ ನೈತಿಕ ಪಾಠವನ್ನು ಕಲಿಸಬೇಕಾದ ಅಗತ್ಯವಿದೆ.
ಆರಗ ಜ್ಞಾನೇಂದ್ರ, ಬಿಜೆಪಿ

‘ಜೈಲಿನಲ್ಲೇ ಕೈದಿಗಳು ಮದ್ಯ ತಯಾರಿಸುತ್ತಿದ್ದಾರೆ. ಕಾರವಾರ ಜೈಲಿನಲ್ಲಿ ಕೈದಿಗಳು ಡ್ರಗ್ಸ್ ಸೇವಿಸುತ್ತಿದ್ದು, ಅದು ಸಿಗದಿದ್ದಾಗ ಸಿಬ್ಬಂದಿಗೇ ಹೊಡೆದಿದ್ದಾರೆ. ಜೈಲುಗಳಲ್ಲಿ ಜಾಮರ್‌ಗಳನ್ನೇ ಹ್ಯಾಕ್ ಮಾಡುತ್ತಾರೆ. ಸಿಸಿಟಿವಿ ಕ್ಯಾಮೆರಾಗಳನ್ನು ಖರೀದಿಸಲು ಸರ್ಕಾರದ ಬಳಿ ಹಣ ಇಲ್ಲ. ಎರಡು ವರ್ಷದಿಂದ ಕೈದಿಗಳಿಗೆ ಕೂಲಿ ಕೊಡಲು ಕೂಡಾ ಹಣವಿಲ್ಲ. ಎಷ್ಟು ಹಣ ಬಾಕಿ ಇದೆ ಎನ್ನುವುದನ್ನು ಸರ್ಕಾರವೇ ತಿಳಿಸಬೇಕು’ ಎಂದು ಆಗ್ರಹಿಸಿದರು.

ಇತ್ತೀಚೆಗೆ ನಡೆದ ಅಪರಾಧ ಪ್ರಕರಣಗಳ ಬಗ್ಗೆ ಮಾತನಾಡಿದ ಅಶೋಕ, ‘ಹಿಂದೆ ಅಪರಾಧಿಗಳಿಗೆ ಪೊಲೀಸರ ಭಯ ಇತ್ತು. ಈಗ ಇಲ್ಲ. ಬೆಂಗಳೂರಿನಲ್ಲಿ 11 ತಿಂಗಳಲ್ಲಿ 130 ಪೊಲೀಸರು ಅಪರಾಧಿಗಳ ಜೊತೆ ಶಾಮೀಲಾಗಿ ಅಮಾನತಾಗಿದ್ದಾರೆ’ ಎಂದರು.

ಸೈಬರ್ ಅಪರಾಧ ಪ್ರಕರಣಗಳನ್ನು ಅಂಕಿಅಂಶ ಸಹಿತ ವಿವರಿಸಿದ ಅವರು, ‘ಮಾದಕ ವಸ್ತು ಸೇವಿಸುವವರಲ್ಲಿ ಶೇ 15ರಷ್ಟು ಶಾಲಾ ಮಕ್ಕಳಿದ್ದಾರೆ ಎನ್ನುವುದು ಆಘಾತಕಾರಿ. ಚಾಕೊಲೇಟ್ ಮೂಲಕ ಮಾದಕ ವಸ್ತು ನೀಡಿ ಬಳಿಕ ಅವರನ್ನು ವ್ಯಸನಿಗಳಾಗಿ ಮಾಡುತ್ತಾರೆ. ರಾಜ್ಯಕ್ಕೆ ₹ 150 ಕೋಟಿ ಮೌಲ್ಯದ ಮಾದಕ ವಸ್ತುಗಳು ಬರುತ್ತಿವೆ. ಪೊಲೀಸ್ ಇಲಾಖೆಯಲ್ಲಿ ಡ್ರಗ್ಸ್ ಜಾಲದೊಂದಿಗೆ ಇರುವವರನ್ನು ಪತ್ತೆ ಮಾಡಿ ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದರು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು, ಶರಣು ಕಂದಕೂರ, ಬಿಜೆಪಿಯ ಸಿಮೆಂಟ್ ಮಂಜು, ಎಸ್.ಎನ್. ಚನ್ನಬಸಪ್ಪ, ಸಿ.ಕೆ. ರಾಮಮೂರ್ತಿ , ಬಿಜೆಪಿ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ ಯತ್ನಾಳ ಮತ್ತಿತರರು ರಾಜ್ಯದ ಪೊಲೀಸ್ ವ್ಯವಸ್ಥೆಯಲ್ಲಿನ ಪರಿಸ್ಥಿತಿಯನ್ನು ತೆರೆದಿಟ್ಟರು.

ಪೊಲೀಸರ ವರ್ಗಾವಣೆ ಹಿಂದಿನ ‘ಇಂದ್ರ’ ಯಾರು?

‘ಗೃಹ ಇಲಾಖೆಯಲ್ಲಿ ದೊಡ್ಡ ಮಟ್ಟದ ಭ್ರಷ್ಟಾಚಾರ ನಡೆಯುತ್ತಿದೆ. ಪೊಲೀಸ್ ಅಧಿಕಾರಿಗಳ ವರ್ಗಾವಣೆಯಲ್ಲಿ ಯಾವ ‘ಇಂದ್ರ’ ಭಾಗಿಯಾಗಿದ್ದಾನೆ. ಅಂತಹ ಅತೀಂದ್ರಿಯ ಶಕ್ತಿ ಯಾರು ಎನ್ನುವುದನ್ನು ಬಹಿರಂಗ ಪಡಿಸಬೇಕು’ ಎಂದು ಬಿಜೆಪಿಯ ವಿ. ಸುನೀಲ್ ಕುಮಾರ್ ಆಗ್ರಹಿಸಿದರು.

‘ನೊಂದವರಿಗೆ ನೆರವು ನೀಡಬೇಕಾದ ಪೊಲೀಸ್ ಇಲಾಖೆ ಶೋಷಿಸುವ ಇಲಾಖೆಯಾಗಿದೆ’ ಎಂದು ಅವರು ದೂರಿದರು.

‘ಅಪರಾಧಿಗಳನ್ನು ಕಟಕಟೆಯಲ್ಲಿ ನಿಲ್ಲಿಸಬೇಕಾದ ಪೊಲೀಸರೇ ಕಟಕಟೆಯಲ್ಲಿ ನಿಲ್ಲುವ ಸ್ಥಿತಿ ನಿರ್ಮಾಣವಾಗಿದೆ. ಅನ್ಯಾಯಕ್ಕೆ ಒಳಗಾಗಿ ಠಾಣೆಗೆ ಬರುವ ಸಂತ್ರಸ್ತರಿಗೆ ರಕ್ಷಣೆ ನೀಡಬೇಕಾದವರು ಅಪರಾಧಿಗಳಿಗೆ ರಕ್ಷಣೆ ನೀಡುತ್ತಿದ್ದಾರೆ. ಇಲಾಖೆಯ ಮೇಲೆ ಗೃಹ ಸಚಿವರ ಹಿಡಿತ ತಪ್ಪಿದೆಯೇ? ಇಲಾಖೆಯಲ್ಲಿ ರಿಯಲ್ ಎಸ್ಟೇಟ್ ಕೈಯಾಡಿಸುತ್ತಿದೆಯೇ? ಅಥವಾ ಗೃಹ ಸಚಿವರಿಗೆ ಇಲಾಖೆ ಬಗ್ಗೆ ಆಸಕ್ತಿ ಇಲ್ಲವೇ’ ಎಂದು ಪ್ರಶ್ನಿಸಿದರು.

ಪೊಲೀಸರ ದಕ್ಷತೆ– ಮುನಿರತ್ನ ವಂಗ್ಯ

‘ರಾಜ್ಯದ ಪೊಲೀಸರು ಸಾಕಷ್ಟು ದಕ್ಷರಾಗಿದ್ದಾರೆ. ನ್ಯಾಯಾಲಯದಲ್ಲಿ ಜಾಮೀನು ಅರ್ಜಿ ಸಲ್ಲಿಸಿ, ಅದು ತಿರಸ್ಕಾರ ಆಗುವ ಮೊದಲೇ ಆರೋಪಿಯಾಗಿದ್ದ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರ ಮಗ ಶಾಸಕ ಎಚ್.ಡಿ. ರೇವಣ್ಣ ಅವರನ್ನು ಬಂಧಿಸಲು ಇಡೀ ಮನೆಯನ್ನು ಸುತ್ತುವರಿದಿದ್ದರು’ ಎಂದು ಬಿಜೆಪಿಯ ಮುನಿರತ್ನ ವ್ಯಂಗ್ಯವಾಡಿದರು.

ಆಗ ಸಿಟ್ಟಾದ ಸಭಾಧ್ಯಕ್ಷ ಯು.ಟಿ. ಖಾದರ್, ‘ಇಲ್ಲದ ವಿವಾದ ಸೃಷ್ಟಿ ಮಾಡಲು ಇಲ್ಲಿ ಅವಕಾಶವಿಲ್ಲ’ ಎಂದು ಹೇಳಿ, ಬಿಜೆಪಿ ಅರವಿಂದ ಬೆಲ್ಲದ ಅವರಿಗೆ ಮಾತನಾಡುವಂತೆ ಸೂಚನೆ ನೀಡಿದರು.

ಆದರೂ ಮಾತು ನಿಲ್ಲಿಸದ ಮುನಿರತ್ನ, ಪೊಲೀಸ್ ಇಲಾಖೆ ಕುರಿತಂತೆ ಮಾತನ್ನು ಮುಂದುವರಿಸಿದರು. ಆಗ ಆರ್. ಅಶೋಕ ಮತ್ತು ಅರವಿಂದ ಬೆಲ್ಲದ್ ಮುನಿರತ್ನರನ್ನು ಸಮಾಧಾನಪಡಿಸಲು ಮುಂದಾದರು. ಅಷ್ಟರಲ್ಲಾಗಲೇ ಖಾದರ್ ಅವರು ಚರ್ಚೆಗೆ ಅಂತ್ಯ ಹಾಡಿ, ಬೆಲ್ಲದ್ ಮಾತನಾಡುವ ಅವಕಾಶ ಕಸಿದರು. ಇದರಿಂದ ಬೆಲ್ಲದ ಮುನಿರತ್ನ ಕಡೆಗೆ ನೋಡಿ ಸುಮ್ಮನಾದರು.

ಜಿಎಸ್‌ಟಿ ಪರಿಷ್ಕರಣೆ ₹14,500 ಕೋಟಿ ನಷ್ಟ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ಕೇಂದ್ರ ಸರ್ಕಾರವು ಜಿಎಸ್‌ಟಿಯನ್ನು ತರ್ಕಬದ್ಧಗೊಳಿಸಿದ್ದರಿಂದಾಗಿ ಕರ್ನಾಟಕಕ್ಕೆ ₹14,500 ಕೋಟಿ ನಷ್ಟವಾಗುತ್ತದೆ ಎಂದು ರಾಜ್ಯ ಸರ್ಕಾರವು ಅಂದಾಜಿಸಿದೆ.

ವಿಧಾನಸಭೆಯಲ್ಲಿ ಬುಧವಾರ ಮಂಡಿಸಲಾದ 2025–26ನೇ ಸಾಲಿನ ಮಧ್ಯವಾರ್ಷಿಕ ಆರ್ಥಿಕ ಸ್ಥಿತಿಗತಿ ವರದಿಯಲ್ಲಿ ಈ ಮಾಹಿತಿ ಇದೆ.

ಜಿಎಸ್‌ಟಿಯ ನಾಲ್ಕು ಹಂತಗಳನ್ನು ಎರಡಕ್ಕೆ ಇಳಿಸಿದ್ದರಿಂದ ಮತ್ತು ಜಿಎಸ್‌ಟಿ–ಸೆಸ್ ವಿಲೀನಗೊಳಿಸಿದ್ದರಿಂದ ರಾಜ್ಯ ಸರ್ಕಾರಕ್ಕೆ ಭಾರಿ ನಷ್ಟವಾಗುತ್ತದೆ. ಈ ನಷ್ಟವನ್ನು ಸರಿಪಡಿಸಲು ಕ್ರಮ ತೆಗೆದುಕೊಳ್ಳಿ ಎಂದು ಜಿಎಸ್‌ಟಿ ಮಂಡಳಿಯ 56ನೇ ಸಭೆಯಲ್ಲಿ ಮಂಡಿಸಲಾದ ಪ್ರಸ್ತಾವಗಳು ಮತ್ತು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸಲ್ಲಿಸಿದ ಮನವಿಗಳಿಗೆ ಸೂಕ್ತ ಸ್ಪಂದನೆ ವ್ಯಕ್ತವಾಗಿಲ್ಲ. ಹೀಗಾಗಿ ಪ್ರಸಕ್ತ ಆರ್ಥಿಕ ವರ್ಷದಲ್ಲಿ ರಾಜ್ಯಕ್ಕೆ ನಷ್ಟವಾಗಲಿದೆ ಎಂಬ ಮಾಹಿತಿ ವರದಿಯಲ್ಲಿದೆ.

2024–25ನೇ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗೆ ಸಂಗ್ರಹವಾಗಿದ್ದ ವಾಣಿಜ್ಯ ತೆರಿಗೆ, ಅಬಕಾರಿ ತೆರಿಗೆ, ಮೋಟಾರು ವಾಹನ ತೆರಿಗೆಗಳಲ್ಲಿ, ಈ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಕ್ರಮವಾಗಿ ಶೇ 8, ಶೇ 10.6, ಶೇ 4.9ರಷ್ಟು ಬೆಳವಣಿಗೆ ದಾಖಲಿಸಿವೆ. ನೋಂದಣಿ ಮತ್ತು ಮುದ್ರಾಂಕ ತೆರಿಗೆ ಸಂಗ್ರಹವು ಶೇ 1ರಷ್ಟು ಇಳಿಕೆಯಾಗಿದೆ ಎಂದಿದೆ.

ನೀಗಿದ ವಿಜ್ಞಾನ ದಾಹ...

ಪ್ರಜಾವಾಣಿ ಚಿತ್ರ: **ರಂಜು ಪಿ.**

ಅಧಿವೇಶನ ವೀಕ್ಷಣೆಗಾಗಿ ಬೆಳಗಾವಿಯ ಸುವರ್ಣ ವಿಧಾನಸೌಧಕ್ಕೆ ಬುಧವಾರ ಆಗಮಿಸಿದ್ದ ಬೆಳಗಾವಿ ಜಿಲ್ಲೆಯ ಚೆನ್ನಮ್ಮನ ಕಿತ್ತೂರು ತಾಲ್ಲೂಕಿನ ಕೊಟಬಾಗಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿನಿಯರು, ಸೌಧದ ಮುಂಭಾಗದಲ್ಲಿನ ವಿಜ್ಞಾನ ಪಾರ್ಕ್‌ಗೆ ತೆರಳಿ ಹಲವು ಪರಿಕರಗಳನ್ನು ವೀಕ್ಷಿಸಿದರು. ‘ಐ ಲವ್ ಸೈನ್ಸ್’ ಎಂದು ಜೋರಾಗಿ ಹೇಳಿ ಸಂಭ್ರಮಿಸಿದರು

ಒಳಮೀಸಲಾತಿ ಮಸೂದೆ ಅಂಗೀಕಾರ

ಒಂದನೇ ಪುಟದಿಂದ...

ಪರಿಶಿಷ್ಟ ಜಾತಿಗೆ ಲಭ್ಯ ಇರುವ ಶೇ 17 ರಷ್ಟು ಮೀಸಲಾತಿಯಲ್ಲಿ ಪ್ರವರ್ಗ–ಎ(16 ಜಾತಿಗಳು) ಶೇ 6, ಪ್ರವರ್ಗ–ಬಿ (19 ಜಾತಿಗಳು) ಶೇ 6, ಪ್ರವರ್ಗ–ಸಿ(63 ಜಾತಿಗಳು) ಶೇ 5, ಒಟ್ಟು 98 ಜಾತಿಗಳಿಗೆ ಒಳ ಮೀಸಲು ಹಂಚಿಕೆಯಾಗಲಿದೆ. ಈ ಮಸೂದೆಗೆ ಹಸಿರು ನಿಶಾನೆ ಸಿಗುತ್ತದೆ ಎಂದು ಕಾದಿದ್ದ ಬಹುದೊಡ್ಡ ಸಮುದಾಯ ನಿರೀಕ್ಷೆ ಈಗ ಫಲ ಕಂಡಿದೆ. ಒಳಮೀಸಲಾತಿ ಕಾಯ್ದೆ 2025ರ ಆ.25 ರಿಂದ ಅನ್ವಯವಾಗಲಿದೆ. ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಅವರು ಮಸೂದೆ ಮಂಡಿಸಿದರು. ಚರ್ಚೆ ಇಲ್ಲದೇ ಮಸೂದೆ ಅಂಗೀಕಾರ ಪಡೆಯಿತು.

‘ನ್ಯಾಷನಲ್ ಹೆರಾಲ್ಡ್’: ಕೋಲಾಹಲ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ(ಬೆಳಗಾವಿ): ಕಾಂಗ್ರೆಸ್‌ನ ಎ.ಎಸ್.ಪೊನ್ನಣ್ಣ ಅವರು ವಿಧಾನಸಭೆಯಲ್ಲಿ ಶೂನ್ಯ ವೇಳೆಯಲ್ಲಿ ನ್ಯಾಷನಲ್ ಹೆರಾಲ್ಡ್ ವಿಷಯ ಪ್ರಸ್ತಾಪಿಸಿ, ಕೇಂದ್ರ ಸರ್ಕಾರ ಕೇಂದ್ರ ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಪ್ರಸ್ತಾಪಿಸಿದ್ದು ಭಾರಿ ಗದ್ದಲಕ್ಕೆ ಕಾರಣವಾಯಿತು.

‘ತನಿಖಾ ಸಂಸ್ಥೆಗಳಾದ ಇಡಿ, ಸಿಬಿಐ, ಐಟಿಗಳನ್ನು ತಮ್ಮ ರಾಜಕೀಯ ವಿರೋಧಿಗಳನ್ನು ಮಟ್ಟ ಹಾಕಲು ಬಳಸಿಕೊಳ್ಳಲಾಗುತ್ತಿದೆ’ ಎಂದು ಪೊನ್ನಣ್ಣ ಹೇಳಿದಾಗ ಇದಕ್ಕೆ ಬಿಜೆಪಿ ಸದಸ್ಯರು ತೀವ್ರವಾಗಿ ಆಕ್ಷೇಪಿಸಿ, ‘ಯಾವುದೇ ಕಾರಣಕ್ಕೂ ಚರ್ಚೆಗೆ ಅವಕಾಶ ನೀಡಬಾರದು’ ಎಂದರು.

ಒಂದು ಹಂತದಲ್ಲಿ ಬಿಜೆಪಿ– ಕಾಂಗ್ರೆಸ್ ಸದಸ್ಯರ ಮಧ್ಯೆ ಕಾವೇರಿದ ವಾಗ್ವಾದ ನಡೆದಾಗ ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಕಲಾಪವನ್ನು ಒಂದು ಗಂಟೆಯಷ್ಟು ಕಾಲ ಮುಂದೂಡಿದ ಪ್ರಸಂಗವೂ ನಡೆಯಿತು.

ಪೊನ್ನಣ್ಣ ಅವರ ಪ್ರಸ್ತಾಪವನ್ನು ಬಿಜೆಪಿಯ ಎಸ್.ಸುರೇಶ್ ಕುಮಾರ್ ಅವರು ಬಲವಾಗಿ ವಿರೋಧಿಸಿದರು. ‘ವಿಧಾನಸಭೆಯ ನಿಯಮಾವಳಿ ಪ್ರಕಾರ ಶೂನ್ಯ ವೇಳೆಯಲ್ಲಿ ಇಂತಹ ವಿಷಯ ಪ್ರಸ್ತಾಪಿಸಲು ಅವಕಾಶವಿಲ್ಲ. ಇದು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ. ಕೇಂದ್ರ ಸರ್ಕಾರವಾಗಲಿ, ಇ.ಡಿ, ಐಟಿಯವರಾಗಲಿ ಇಲ್ಲಿಗೆ ಬಂದು ಉತ್ತರ ಕೊಡಲು ಸಾಧ್ಯವಿಲ್ಲ. ಹಾಗಿದ್ದರೆ ಸರ್ಕಾರದ ಪರವಾಗಿ ಯಾರು ಉತ್ತರ ಕೊಡುತ್ತಾರೆ’ ಎಂದು ಪ್ರಶ್ನಿಸಿದರು.

ವಿರೋಧ ಪಕ್ಷದ ನಾಯಕ ಆರ್.ಅಶೋಕ ಮಾತನಾಡಿ, ‘ಇಲ್ಲಿಗೆ ಸಂಬಂಧವಿಲ್ಲದ ವಿಚಾರವನ್ನು ಪ್ರಸ್ತಾಪಿಸಿರುವುದು ಕಾನೂನು ಬಾಹಿರ. ಈ ವಿಷಯ ಪ್ರಸ್ತಾಪಿಸಲು ಯಾವುದೇ ಕಾರಣಕ್ಕೂ ಅವಕಾಶ ನೀಡಬಾರದು. ಬೇಕಿದ್ದರೆ ಸಂಸತ್ತಿನಲ್ಲಿ ಚರ್ಚೆ ಮಾಡಿ’ ಎಂದು ತರಾಟೆಗೆ ತೆಗೆದುಕೊಂಡರು.

ಆಗ ಮಧ್ಯ ಪ್ರವೇಶಿಸಿದ ಕಾನೂನು ಸಚಿವ ಎಚ್.ಕೆ.ಪಾಟೀಲ, ‘ನ್ಯಾಷನಲ್ ಹೆರಾಲ್ಡ್ ಸ್ವಾತಂತ್ರ್ಯ ಹೋರಾಟದ ವೇಳೆ ಸ್ವಾತಂತ್ರ್ಯದ ಪರ ಇದ್ದ ಪತ್ರಿಕೆ. ಇದರ ಮೇಲೆ ರಾಜಕೀಯ ಗೂಬೆ ಕೂರಿಸುವ ಕೆಲಸ ಆಗಿದೆ. ಇದರ ವಿಚಾರಣೆಗೆ ನ್ಯಾಯಾಲಯ ತಡೆ ನೀಡಿ ಕೇಂದ್ರ ಸರ್ಕಾರಕ್ಕೆ ಕಪಾಳ ಮೋಕ್ಷ ಮಾಡಿದೆ’ ಎಂದು ಹೇಳಿದರು. ಆಗ ಬಿಜೆಪಿ ಸದಸ್ಯರು ‘ವೋಟ್ ಚೋರಿ ಅಲ್ಲ ಹೆರಾಲ್ಡ್ ಚೋರಿ’ ಎಂದು ಘೋಷಣೆ ಹಾಕಿದರು.

‘ಸೋನಿಯಾಗಾಂಧಿ ಕುಟುಂಬ ಅಕ್ರಮವಾಗಿ ಹಣ ವರ್ಗಾವಣೆ ಮಾಡಿರುವ ಆರೋಪವನ್ನು ಹೊಂದಿದೆ. ಇದು ವೈಯಕ್ತಿಕ ಪ್ರಕರಣ’ ಎಂದು ಬಿಜೆಪಿಯ ಆರಗ ಜ್ಞಾನೇಂದ್ರ ಹೇಳಿದರು.

ಆರೋಪ –ಪ್ರತ್ಯಾರೋಪ ಜೋರಾದಾಗ ಬಿಜೆಪಿಯ ಸುನಿಲ್‌ಕುಮಾರ್ ಅವರು ಸಭಾಧ್ಯಕ್ಷ ಯು.ಟಿ.ಖಾದರ್ ಅವರನ್ನು ತರಾಟೆಗೆ ತೆಗೆದುಕೊಂಡು, ‘ಲೋಕಸಭೆಯಲ್ಲಿ ಈ ವಿಚಾರ ಚರ್ಚೆ ಮಾಡುವುದು ಬಿಟ್ಟು ರಾಹುಲ್‌ಗಾಂಧಿ ಜರ್ಮನಿಗೆ ಓಡಿ ಹೋಗಿದ್ದಾರೆ. ಸದನವನ್ನು ಸಭಾಧ್ಯಕ್ಷರು ತಮ್ಮ ಖುಷಿಗೆ ತಕ್ಕಂತೆ ನಡೆಸುತ್ತಿದ್ದಾರೆ. ಪೀಠಕ್ಕೆ ಮರ್ಯಾದೆ ಇಲ್ಲವೇ? ಪೀಠಕ್ಕೆ ಅವಮಾನ ಮಾಡುತ್ತಿದ್ದೀರಿ’ ಎಂದು ಅಬ್ಬರಿಸಿದಾಗ, ಸಭಾಧ್ಯಕ್ಷರು ಕಲಾಪ ಮುಂದೂಡಿದರು.

ಡಿಕೆಶಿಗೆ ನೋಟಿಸ್: ಶಾಸಕರ ಚರ್ಚೆ

ಪೊನ್ನಣ್ಣ ಮತ್ತು ಎಚ್.ಕೆ.ಪಾಟೀಲ ಅವರ ಪರವಾಗಿ ಪ್ರಿಯಾಂಕ್ ಖರ್ಗೆ, ಎಚ್.ಸಿ.ಮಹದೇವಪ್ಪ, ಕೆ.ಎಂ.ಶಿವಲಿಂಗೇಗೌಡ, ಎಚ್.ಸಿ.ಬಾಲಕೃಷ್ಣ ಮತ್ತು ಇತರರು ಬಿಜೆಪಿಯ ಶಾಸಕರ ವಿರುದ್ಧ ವಾಗ್ದಾಳಿ ನಡೆಸಿದರು. ‘ಡಿ.ಕೆ.ಶಿವಕುಮಾರ್ ಅವರಿಗೆ ಯಾವ ಆಧಾರದ ಮೇಲೆ ನೋಟಿಸ್ ನೀಡಲಾಗಿದೆ. ಉದ್ದೇಶ ಪೂರ್ವಕವಾಗಿ ಸಿಲುಕಿಸಲಾಗಿದೆ’ ಎಂದು ಪ್ರಿಯಾಂಕ್ ಹೇಳಿದಾಗ, ‘₹10 ಕೋಟಿ ಕೊಟ್ಟಿದ್ದಕ್ಕೇ ನೋಟಿಸ್ ಬಂದಿರಬಹುದು. ನಿಮಗೆ ಅವರ ಮೇಲೆ ಬಹಳ ಪ್ರೀತಿ ಇದ್ದರೆ, ಅವರನ್ನೇ ಮುಖ್ಯಮಂತ್ರಿ ಮಾಡಿ’ ಎಂದು ಅಶೋಕ ಕಾಲೆಳೆದರು.

371ಜೆ ವಿಧಿ ಜಾರಿಯಾದರೂ ಸುಧಾರಣೆಯಾದ ಶಿಕ್ಷಣ ಮತ್ತು ಸಾರಿಗೆ ಕ್ಷೇತ್ರ

‘ಉತ್ತರದಲ್ಲಿ ಕಲ್ಯಾಣ ಕರ್ನಾಟಕವೇ ಹಿಂದೆ’

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ಉತ್ತರ ಕರ್ನಾಟಕದಲ್ಲಿ ಕಲ್ಯಾಣ ಕರ್ನಾಟಕವೇ ಬಹಳ ಹಿಂದುಳಿದಿದೆ. ಕಿತ್ತೂರು ಕರ್ನಾಟಕಕ್ಕೇ ಹೆಚ್ಚಿನ ಅನುದಾನ ಹೋಗುತ್ತದೆ. ಈ ತಾರತಮ್ಯವನ್ನು ಹೋಗಲಾಡಿಸಬೇಕು ಎಂಬ ಕೂಗು ವಿಧಾನ ಪರಿಷತ್ತಿನಲ್ಲಿ ಅನುರಣಿಸಿತು.

ದಕ್ಷಿಣ ಕರ್ನಾಟಕಕ್ಕೆ ಹೋಲಿಸಿದರೆ ಹಿಂದುಳಿದಿರುವ ಈ ಎರಡೂ ಭಾಗಗಳನ್ನು ಪ್ರತ್ಯೇಕಿಸಿ ನೋಡುವುದು ಬೇಡ ಎಂಬ ಒತ್ತಾಯಕ್ಕೂ ಸದನ ಸಾಕ್ಷಿಯಾಯಿತು.

ಇಲ್ಲಿ ನಡೆಯುತ್ತಿರುವ ವಿಧಾನ ಮಂಡಲದ ಚಳಿಗಾಲದ ಅಧಿವೇಶನದಲ್ಲಿ ಬುಧವಾರದ ಕಲಾಪದ ವೇಳೆ, ಉತ್ತರ ಕರ್ನಾಟಕದ ಸಮಸ್ಯೆಗಳ ಕುರಿತಾಗಿ ಚರ್ಚೆಯನ್ನು ಕೈಗೆತ್ತಿಕೊಳ್ಳಲಾಯಿತು.

ಬಿಜೆಪಿಯ ಶಶೀಲ್ ಜಿ.ನಮೋಷಿ, ‘ಉತ್ತರ ಕರ್ನಾಟಕ ಎಂದರೆ, ಮುಂಬೈ ಕರ್ನಾಟಕವನ್ನಷ್ಟೇ ಕೇಂದ್ರೀಕರಿಸಿ ಮಾತನಾಡಲಾಗುತ್ತಿದೆ. ಆದರೆ ಅದಕ್ಕಿಂತಲೂ ಹಿಂದುಳಿದಿರುವ ಕಲ್ಯಾಣ ಕರ್ನಾಟಕವನ್ನು ಕಡೆಗಣಿಸಲಾಗುತ್ತಿದೆ. 371-ಜೆ ವಿಧಿ ಜಾರಿಯಾದ ನಂತರ ಸ್ವಲ್ಪ ಸುಧಾರಣೆ ಆಗಿದೆಯಾದರೂ, ಆಗಬೇಕಾದದ್ದು ಇನ್ನಷ್ಟು ಇದೆ. ರಾಜ್ಯದ ಸರ್ಕಾರಿ ಶಾಲೆಗಳಲ್ಲಿ 52,000 ಶಿಕ್ಷಕರ ಹುದ್ದೆಗಳು ಖಾಲಿ ಇದ್ದರೆ, ಆ ಪೈಕಿ ಕಲ್ಯಾಣ ಕರ್ನಾಟಕದಲ್ಲಿ 22,000 ಹುದ್ದೆಗಳು ಖಾಲಿ ಇವೆ’ ಎಂದರು.

ಬಳ್ಳಾರಿ ಉಸ್ತುವಾರಿ ಸಚಿವರು ಯಾರು ಎಂಬುದು ನನಗೆ ಗೊತ್ತೇ ಇಲ್ಲ. ಅವರು ಎಷ್ಟು ಬಾರಿ ಜಿಲ್ಲೆಗೆ ಬಂದಿದ್ದಾರೆ? ಎಷ್ಟು ಸಭೆ ನಡೆಸಿದ್ದಾರೆ?
ವೈ.ಎಂ.ಸತೀಶ್, ವಿಧಾನ ಪರಿಷತ್ತಿನಲ್ಲಿ ಬಿಜೆಪಿ ಸದಸ್ಯ

ಕಾಂಗ್ರೆಸ್‌ನ ಎಫ್.ಎಚ್. ಜಕ್ಕಪ್ಪನವರ್, ‘ಸಾರಿಗೆ ವಿಚಾರದಲ್ಲೂ ಕಲ್ಯಾಣ ಕರ್ನಾಟಕಕ್ಕೆ ಅನ್ಯಾಯವಾಗುತ್ತಿದೆ. ಕೇಂದ್ರ ಸರ್ಕಾರವು ರಾಜ್ಯಕ್ಕೆ ನೀಡುತ್ತಿರುವ 4,500 ವಿದ್ಯುತ್ ಚಾಲಿತ ಬಸ್‌ಗಳಲ್ಲಿ ಕೇವಲ 200 ಬಸ್‌ಗಳನ್ನು ಕಲ್ಯಾಣ ಕರ್ನಾಟಕಕ್ಕೆ ಹಂಚಿಕೆ ಮಾಡಲಾಗುತ್ತಿದೆ. ಈ ಸಂಖ್ಯೆಯನ್ನು 750ಕ್ಕೆ ಹೆಚ್ಚಿಸಬೇಕು’ ಎಂದರು.

ಜತೆಗೆ, ‘ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಇದೆ. ಆದರೆ ಕಿತ್ತೂರು ಕರ್ನಾಟಕದ ಭಾಗಕ್ಕೆ ಅಂತಹ ಯಾವುದೇ ಮಂಡಳಿ ಇಲ್ಲ. ಹೀಗಾಗಿ ಇಲ್ಲಿಗೆ ಹಂಚಿಕೆಯಾಗುವ ಅನುದಾನವು ಬಳಕೆಯಾಗುತ್ತಿರುವುದಕ್ಕೆ ಒಂದೆಡೆಯೇ ಲೆಕ್ಕ ಸಿಗದಂತಾಗಿದೆ. ಅಂತಹ ಒಂದು ಮಂಡಳಿ ಕಿತ್ತೂರು ಕರ್ನಾಟಕಕ್ಕೂ ಬೇಕು’ ಎಂದು ಆಗ್ರಹಿಸಿದರು.

ಕಾಂಗ್ರೆಸ್‌ನ ಎಂ.ನಾಗರಾಜ್ ಯಾದವ್, ‘ಕಿತ್ತೂರು ಕರ್ನಾಟಕ, ಕಲ್ಯಾಣ ಕರ್ನಾಟಕ ಎಂದು ಪ್ರತ್ಯೇಕಿಸಿ ನೋಡುವುದು ಬೇಡ. ಈ ಎರಡೂ ಪ್ರಾಂತ್ಯಗಳು ದಕ್ಷಿಣ ಕರ್ನಾಟಕಕ್ಕಿಂತ ಬಹಳ ಹಿಂದುಳಿದಿವೆ. ನಾವೆಲ್ಲರೂ ಸೇರಿ, ಈ ಪ್ರದೇಶಗಳನ್ನು ಹೇಗೆ ಅಭಿವೃದ್ಧಿಪಡಿಸಬಹುದು ಎಂಬುದರತ್ತ ಗಮನಹರಿಸೋಣ’ ಎಂದು ಅವರು ಹೇಳಿದರು.

‘ಮೀಸಲಾತಿಯಲ್ಲಿ ಅನ್ಯಾಯ’

‘ಕಲ್ಯಾಣ ಕರ್ನಾಟಕ ಮೀಸಲಾತಿ ಅನ್ವಯ ಮಾಡುವಾಗ ಅಧಿಕಾರಿಗಳು ಅನ್ಯಾಯ ಮಾಡುತ್ತಿದ್ದಾರೆ. ಮೀಸಲಾತಿಯ ಸಾರ್ವತ್ರಿಕ ನಿಯಮಗಳ ಪ್ರಕಾರ, ಯಾವುದೇ ಮೀಸಲಾತಿ ಅಡಿ ಬರುವ ಅಭ್ಯರ್ಥಿಯು ಮೆರಿಟ್ ಆಧಾರದಲ್ಲಿ ಆಯ್ಕೆಯಾದರೆ ಸಾಮಾನ್ಯ ವರ್ಗದಲ್ಲಿ ಆಯ್ಕೆಯಾಗುತ್ತಾನೆ. ಆದರೆ ಕಲ್ಯಾಣ ಕರ್ನಾಟಕ ಮೀಸಲಾತಿ ವಿಚಾರದಲ್ಲಿ ಹಾಗೆ ಆಗುತ್ತಿಲ್ಲ’ ಎಂದು ಶಶೀಲ್ ಜಿ.ನಮೋಷಿ ಆರೋಪಿಸಿದರು.

‘ಮೆರಿಟ್ ಆಧಾರದಲ್ಲಿ ಆಯ್ಕೆಯಾಗುವ ಅರ್ಹತೆ ಇದ್ದರೂ, ಅಭ್ಯರ್ಥಿಯನ್ನು ಕಲ್ಯಾಣ ಕರ್ನಾಟಕ ಮೀಸಲಾತಿಯ ಅಡಿಯಲ್ಲಿ ತೋರಿಸಲಾಗುತ್ತಿದೆ. ಇದರಿಂದ, ಅರ್ಹತೆ ಇದ್ದೂ ಕಲ್ಯಾಣ ಕರ್ನಾಟಕದ ಅಭ್ಯರ್ಥಿಗಳಿಗೆ ಸಾಮಾನ್ಯ ವರ್ಗದದಲ್ಲಿ ಆಯ್ಕೆ/ಬಡ್ತಿ ಜೇಷ್ಠತೆಯನ್ನು ನಿರಾಕರಿಸಲಾಗುತ್ತಿದೆ. ಇದನ್ನು ಸರಿಪಡಿಸಬೇಕು’ ಎಂದು ಅವರು ಒತ್ತಾಯಿಸಿದರು.

ಕೃಷ್ಣ ವಿರುದ್ಧ ಭೂ ಕಬಳಿಕೆ ಆರೋಪ

ಒಂದನೇ ಪುಟದಿಂದ...

‘ಮುಖ್ಯಮಂತ್ರಿ ಈ ಭೂಹಗರಣವನ್ನು ಗಂಭೀರವಾಗಿ ಪರಿಗಣಿಸಿ ತನಿಖೆ ನಡೆಸಬೇಕು. ಒಂದು ವೇಳೆ ಸರ್ಕಾರ ಈ ಕುರಿತು ಮೃದು ಧೋರಣೆ ತಾಳಿದರೆ ಕಾನೂನು ಹೋರಾಟದ ಜತೆಗೆ ಪ್ರಜಾಸತ್ತಾತ್ಮಕ ಹೋರಾಟ ನಡೆಸುತ್ತೇವೆ’ ಎನ್.ರವಿ ಕುಮಾರ್ ಎಚ್ಚರಿಸಿದರು.

‘ಈ ಹಿಂದೆ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದ ಹಗರಣದಲ್ಲಿ ಬಿ.ನಾಗೇಂದ್ರ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯನವರ ಪತ್ನಿ 14 ನಿವೇಶನಗಳನ್ನು ವಾಪಸ್ ಮಾಡಿದ್ದರು. ಕೆಐಎಡಿಬಿ ಕೈಗಾರಿಕಾ ಪ್ರದೇಶದಲ್ಲಿ 5 ಎಕರೆ ಜಮೀನನ್ನು ಸಚಿವ ಪ್ರಿಯಾಂಕ್ ಖರ್ಗೆ ಅವರು ತಮ್ಮ ಕುಟುಂಬದ ಒಡೆತನದ ಟ್ರಸ್ಟ್‌ಗೆ ಮಂಜೂರು ಮಾಡಿಸಿಕೊಂಡಿದ್ದರು. ಬಳಿಕ ಅದನ್ನು ಹಿಂತಿರುಗಿಸಿದರು. ಇದೀಗ ಮತ್ತೊಂದು ಹಗರಣ ಬಯಲಿದೆ ಬಂದಿದೆ ಎಂದು ಅವರು ಹೇಳಿದರು.

‘ಪಿತ್ರಾರ್ಜಿತ ಆಸ್ತಿ: ಕೀಟಲೆಗಾಗಿ ಆರೋಪ’

ಒಂದನೇ ಪುಟದಿಂದ...

‘ನಮ್ಮ ತಂದೆಯ ಮೂಲಕ ಭಾಗವಾಗಿ ನಮಗೆ ಬಂದಿದೆ. ಬೇಕಾದರೂ ಅದನ್ನು ಯಾವ ಮೂಲದಿಂದಲಾದರೂ ಪರಿಶೀಲಿಸಿಕೊಳ್ಳಲಿ. ಯಾವ ಕಾಲದಲ್ಲಿ ಏನೇನಾಗಿದೆ ಎಂಬುದನ್ನು ಪರೀಕ್ಷಿಸಲಿ’ ಎಂದರು.

‘ನಾನು ಸರ್ಕಾರದಲ್ಲಿ ಸಚಿವನಾಗಿದ್ದೇನೆ. ಇಲಾಖಾ ಅಥವಾ ಸರ್ಕಾರದ ತನಿಖೆ ನಡೆದರೆ ಪಕ್ಷಪಾತವಾಗುತ್ತದೆ ಎಂದಾದರೆ ಯಾವುದಾದರೂ ಸ್ವತಂತ್ರ ಸಂಸ್ಥೆ ಮೂಲಕ ತನಿಖೆ ನಡೆಸಲಿ. ಲೋಕಾಯುಕ್ತಕ್ಕೆ, ನ್ಯಾಯಾಲಯಕ್ಕೆ ದೂರು ನೀಡಿ ತನಿಖೆ ಮಾಡಿಸಲಿ. ಇಲ್ಲಸಲ್ಲದ ಆರೋಪ ಮಾಡುವುದನ್ನೇ ವೃತ್ತಿಯಾಗಿಸಿಕೊಂಡವರಷ್ಟೇ ಈ ರೀತಿ ಮಾಡುತ್ತಾರೆ’ ಎಂದರು.

ಕ್ಷಮೆಯಾಚಿಸಿದ ಸಚಿವೆ ಲಕ್ಷ್ಮಿ

ಒಂದನೇ ಪುಟದಿಂದ...

‘ಸುಳ್ಳು ಹೇಳುವ ಉದ್ದೇಶವೂ ಅವರಿಗೆ ಇರಲಿಲ್ಲ. ಹಾಗೇನಾದರೂ ಎರಡು ತಿಂಗಳ ಕಂತು ಪಾವತಿ ಆಗಿಲ್ಲವೆಂದಾದರೆ ಪಾವತಿಸುವುದಾಗಿ ಮುಖ್ಯಮಂತ್ರಿ ಕೂಡ ಹೇಳಿದ್ದಾರೆ’ ಎಂದರು. ‘ಸಚಿವರ ಕರೆಯಿಸಿ ಉತ್ತರ ಕೊಡಿಸುತ್ತೇನೆ’ ಎಂದು ಸಭಾಧ್ಯಕ್ಷರು ಹೇಳಿದರೂ, ‘ಇದು 1.26 ಕೋಟಿ ಮಹಿಳೆಯರಿಗೆ ಸಂಬಂಧಿಸಿದ ವಿಚಾರ. ಯಾವ ಕಾರಣಕ್ಕೆ ಎರಡು ತಿಂಗಳು ಹಣ ಪಾವತಿಸಿಲ್ಲ. ಮೋಸ ಮಾಡಲು ಹೀಗೆ ಮಾಡಿದ್ರಾ’ ಎಂದು ಅಶೋಕ ಪ್ರಶ್ನಿಸಿದರು.

ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಸಭಾಧ್ಯಕ್ಷರ ಪೀಠದ ಮುಂಭಾಗದಲ್ಲಿ ಜಮಾಯಿಸಿ ಸಚಿವೆ ಹಾಗೂ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು. ಆಗ ಕಲಾಪವನ್ನು ಸಭಾಧ್ಯಕ್ಷರು 10 ನಿಮಿಷ ಮುಂದೂಡಿದರು.

ಸುಮಾರು ಒಂದು ಗಂಟೆಯ ಬಳಿಕ ಮತ್ತೆ ಕಲಾಪ ಆರಂಭವಾದಾಗ ಲಕ್ಷ್ಮೀ ಹೆಬ್ಬಾಳಕರ ಕೂಡ ಹಾಜರಾದರು. ವಿರೋಧ ಪಕ್ಷದ ಸದಸ್ಯರು ಸಭಾಧ್ಯಕ್ಷರ ಪೀಠದ ಮುಂಭಾಗದಲ್ಲಿ ಧರಣಿ ಮುಂದುವರಿಸಿದರು.

‘ಸಚಿವೆ ಸದನಕ್ಕೆ ಬಂದಿದ್ದಾರೆ. ತಮ್ಮ ಆಸನಗಳಲ್ಲಿ ಕುಳಿತುಕೊಂಡರೆ ಅವರು ಉತ್ತರ ಕೊಡುತ್ತಾರೆ’ ಎಂದು ಸಭಾಧ್ಯಕ್ಷರು ಹೇಳಿದಾಗ, ಆರ್. ಅಶೋಕ ‘ಎರಡು ತಿಂಗಳ ಬಾಕಿ ಅಂದರೆ, ಸುಮಾರು ₹ 5 ಸಾವಿರ ಕೋಟಿ ಎಲ್ಲಿಗೆ ಹೋಯಿತು ಎನ್ನುವುದಕ್ಕೆ ಸಚಿವೆ ಉತ್ತರಿಸಬೇಕು. ತಪ್ಪು ಉತ್ತರಕ್ಕೆ ರಾಜ್ಯದ ಜನರ ಕ್ಷಮೆ ಯಾಚಿಸಬೇಕು’ ಎಂದು ಆಗ್ರಹಿಸಿದರು. ಸಭಾಧ್ಯಕ್ಷರು ಮನವೊಲಿಸಿದ ಬಳಿಕ ವಿರೋಧ ಪಕ್ಷಗಳ ಸದಸ್ಯರು ಧರಣಿ ಕೈಬಿಟ್ಟರು.

ಬಳಿಕ ಮಾತನಾಡಿದ ಲಕ್ಷ್ಮೀ ಹೆಬ್ಬಾಳಕರ, ‘ಪ್ರಶ್ನೆಗೆ ಉತ್ತರ ನೀಡುವಾಗ ಫೆಬ್ರವರಿ ಮತ್ತು ಮಾರ್ಚ್ ತಿಂಗಳ ಕಂತು ಪಾವತಿಸಲಾಗಿದೆ ಎಂದು ಹೇಳಿದ್ದೇನೆ. ಈ ಎರಡೂ ತಿಂಗಳು ಹಾಕಿಲ್ಲ. ಮಾಹಿತಿ ನೀಡುವಾಗ ಹೆಚ್ಚುಕಮ್ಮಿ ಯಾಗಿದೆ. ತಪ್ಪು ಮಾಹಿತಿ ನೀಡಿ ಸದನದ ದಾರಿ ತಪ್ಪಿಸುವ ಉದ್ದೇಶ ನನ್ನದಲ್ಲ. ಮುಂದಿನ ದಿನಗಳಲ್ಲಿ ಹಣ ಪಾವತಿಸುತ್ತೇವೆ’ ಎಂದರು.

ಅವರ ಮಾತಿನಿಂದ ತೃಪ್ತರಾಗದ ವಿರೋಧ ಪಕ್ಷದ ಸದಸ್ಯರು, ಸಚಿವರು ಕ್ಷಮೆ ಕೇಳಬೇಕೆಂದು ಪಟ್ಟು ಹಿಡಿದರು. ಆಗ ಲಕ್ಷ್ಮೀ ಹೆಬ್ಬಾಳಕರ, ‘ನನ್ನ ಮಾತುಗಳಿಂದ ಯಾರಿಗಾದರು ನೋವಾಗಿದ್ದರೆ ವಿಷಾದ ವ್ಯಕ್ತಪಡಿಸುತ್ತೇನೆ’ ಎಂದರು.

ಇದನ್ನು ಆಕ್ಷೇಪಿಸಿದ ಆರ್. ಅಶೋಕ, ‘ತಪ್ಪಾಗಿದೆ ಎಂದು ಸದನದಲ್ಲಿ ಹೇಳಿ, ಕ್ಷಮೆ ಕೇಳಬೇಕು’ ಎಂದು ಆಗ್ರಹಿಸಿದರು. ಸಚಿವ ಎಚ್.ಕೆ. ಪಾಟೀಲ, ‘ಸಚಿವೆ ವಿಷಾದ ವ್ಯಕ್ತಪಡಿಸಿದ್ದಾರೆ. ಈ ಚರ್ಚೆ ಇಲ್ಲಿಗೇ ಮುಗಿಸಿ’ ಎಂದು ಮನವಿ ಮಾಡಿದರು.

ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ
ಜನಪ್ರಿಯ ಮಾಜಿ ಸಂಸದರು, ಯುವಕರ ಆಶಾಕಿರಣ, ಬಡವರ ಬಂಧು,
ಸಂಘಟನಾ ಚತುರ ಹಾಗೂ ಬೆಂಗಳೂರು ಸಹಕಾರ ಹಾಲು ಒಕ್ಕೂಟದ(ಬಮೂಲ್) ಅಧ್ಯಕ್ಷರಾದ
ಸನ್ಮಾನ್ಯ ಶ್ರೀ ಡಿ.ಕೆ.ಸುರೇಶ್ ಅವರಿಗೆ
ಜನ್ಮದಿನದ
ಶುಭಾಶಯಗಳು
Happy Birthday
ಶ್ರೀ ಹನುಮಂತರಾಯಪ್ಪ ಅವರು
ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು
ಬೆಂಗಳೂರು ಪಶ್ಚಿಮ
ಎಚ್. ಕುಸುಮ ರವರು
ಕಾಂಗ್ರೆಸ್ ಮುಖಂಡರು
ರಾಜರಾಜೇಶ್ವರಿನಗರ
ಶುಭಕೋರುವವರು : ರಾಜರಾಜೇಶ್ವರಿನಗರದ ಡಿ.ಕೆ.ಸುರೇಶ್ ಅಭಿಮಾನಿಗಳ ಬಳಗ

ಕರ್ನಾಟಕ ಸರ್ಕಾರ
ನಗರಾಭಿವೃದ್ಧಿ ಇಲಾಖೆ
ಪೌರಾಡಳಿತ ನಿರ್ದೇಶನಾಲಯ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಶ್ರೀ ಡಿ ಕೆ ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ನಿಮ್ಮ ಮನೆಯಲ್ಲೇ ಕುಳಿತು
ಇ-ಖಾತಾವನ್ನು ಪಡೆದುಕೊಳ್ಳಿ
ಬೇಕಾದ ದಾಖಲಾತಿಗಳು
1. ಮಾಲೀಕರ ಭಾವಚಿತ್ರ ಮತ್ತು ಆಧಾರ್
2. ಆಸ್ತಿ ತೆರಿಗೆ ಎಸ್.ಎ.ಎಸ್ ಚಲನ್ ಸಂಖ್ಯೆ
3. ಸ್ವತ್ತಿನ ಕ್ರಯ / ನೋಂದಾಯಿತ ಪತ್ರ ಸಂಖ್ಯೆ (ಕಾವೇರಿ ತಂತ್ರಾಶದಿಂದ ವಿದ್ಯುನ್ಮಾನವಾಗಿ ಪಡೆದುಕೊಳ್ಳುವುದು)
4. ವಿದ್ಯುತ್ ಆರ್ ಆರ್ ಸಂಖ್ಯೆ (ಖಾಲಿ ನಿವೇಶನಗಳಿಗೆ ಅಗತ್ಯವಿಲ್ಲ)
5. ಸ್ವತ್ತಿನ ಛಾಯಾಚಿತ್ರ
6. EC : 15/16
7. ಸ್ವತ್ತಿಗೆ ಸಂಬಂಧಿಸಿದ ಇತರೆ ಪೂರಕ ಅಗತ್ಯ ದಾಖಲೆಗಳು
• ನಗರ ನಿವಾಸಿಗಳ 45 ಲಕ್ಷಕ್ಕೂ ಹೆಚ್ಚು ಕರಡು ಆಸ್ತಿ ದಾಖಲೆ ಇ-ಆಸ್ತಿ ತಂತ್ರಾಂಶದಲ್ಲಿ ಪ್ರಕಟಿಸಲಾಗುವುದು.
• www.eaasthi.karnataka.gov.in ಮೂಲಕ Online ನಲ್ಲಿ ಆಸ್ತಿ ದಾಖಲೆ ಪರಿಶೀಲಿಸಬಹುದು.
• ಅಗತ್ಯವಿದ್ದಲ್ಲಿ ದಾಖಲೆ ನೀಡಿ ತಿದ್ದುಪಡಿ/ತಕರಾರು ಅರ್ಜಿ ಸಲ್ಲಿಸಬಹುದು.
• ಆನ್‌ಲೈನ್‌ನಲ್ಲೇ ಶುಲ್ಕ ಪಾವತಿಸಿ ದಾಖಲೆ ಸಲ್ಲಿಸಿ ಅನುಮೋದಿತ ಅಧಿಕೃತ ಇ-ಖಾತೆ ಪಡೆಯಬಹುದು.
• K-1 ಕೇಂದ್ರಗಳಲ್ಲೂ ಸಹ ನಾಗರಿಕರು ತಂತ್ರಾಂಶವನ್ನು ಬಳಸಿ ಸೇವೆಯನ್ನು ಪಡೆಯಬಹುದು.
• ಇ-ಖಾತಾ ಪಡೆಯುವ ಮೂಲಕ ಸರಳವಾಗಿ ಆಸ್ತಿ ತೆರಿಗೆಯನ್ನು ಆನ್‌ಲೈನ್ ಮುಖಾಂತರ ಪಾವತಿಸಬಹುದು.
ಶ್ರೀ ಸುರೇಶ್ ಬಿ. ಎಸ್. ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಹಾಗೂ ಶ್ರೀ ರಹೀಂ ಖಾನ್, ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿರುವುದು.
ಸಾರ್ವಜನಿಕ ಆಸ್ತಿ ದಾಖಲೆ ಈಗ ಮತ್ತಷ್ಟು ಸುರಕ್ಷಿತ
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
www.eaasthi.karnataka.gov.in / ಸಹಾಯವಾಣಿ ಸಂಖ್ಯೆ : 7259585959
ದಿನಾಂಕ 18-12-2025 ರಿಂದ ಪ್ರಾರಂಭ
ಡಾ. ಶಾಲಿನಿ ರಜನೀಶ್ ಭಾ.ಆ.ಸೇ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಕರ್ನಾಟಕ ಸರ್ಕಾರ
ತುಷಾರ ಗಿರಿನಾಥ ಭಾ.ಆ.ಸೇ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ
ದೀಪ ಚೋಳನ್ ಭಾ.ಆ.ಸೇ ಸರ್ಕಾರದ ಕಾರ್ಯದರ್ಶಿಗಳು ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ
ಪ್ರಭುಲಿಂಗ ಕವಳಿಕಟ್ಟಿ ಭಾ.ಆ.ಸೇ ನಿರ್ದೇಶಕರು, ನಗರಾಭಿವೃದ್ಧಿ ಇಲಾಖೆ ಕರ್ನಾಟಕ ಸರ್ಕಾರ
ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿಯನ್ನು ಸಾಧಿಸಲು ನಿರಂತರ ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

512 ಎಕರೆ ಕಬಳಿಕೆ ಯತ್ನ: ಎಲ್ಲ ದಾಖಲೆ ನಕಲಿ

ಮೂಡಿಗೆರೆ ತಹಶೀಲ್ದಾರ್ ದೂರು ಆಧರಿಸಿ ಪೊಲೀಸರು ದಾಖಲಿಸಿರುವ ಎಫ್ಐಆರ್‌ನಲ್ಲಿ ಉಲ್ಲೇಖ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಮೂಡಿಗೆರೆ ತಾಲ್ಲೂಕಿನಲ್ಲಿ 512 ಎಕರೆ ಅರಣ್ಯ ಜಾಗ ಮತ್ತು ಕಂದಾಯ ಭೂಮಿಯ ಖಾತೆಯನ್ನು ತಮ್ಮ ಹೆಸರಿಗೆ ಇಂಡೀಕರಿಸಿಕೊಳ್ಳಲು ವ್ಯಕ್ತಿಯೊಬ್ಬರು ಸಲ್ಲಿಸಿದ್ದ ಅರ್ಜಿಯಲ್ಲಿನ ದಾಖಲೆಗಳೆಲ್ಲಾ ಗ್ರಾಮ ಲೆಕ್ಕಿಗರ ಸಹಿ, ನಕ್ಷೆಗಳು ಎಲ್ಲವೂ ನಕಲಿ ಎಂದು ತಹಶೀಲ್ದಾರ್ ನೀಡಿರುವ ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಒಟ್ಟು 512 ಎಕರೆ 26 ಗುಂಟೆ ಜಮೀನು ಕಬಳಿಸಲು ಮಾರೆಬೈಲ್ ಗ್ರಾಮದ ಮನ್ಮಥ (ನೇಮಣ್ಣಗೌಡ) ಎಂಬುವರು ನಕಲಿ ದಾಖಲೆ ಸೃಷ್ಟಿಸಿದ್ದಾರೆ ಎಂದು ತಹಶೀಲ್ದಾರ್ ಅಶ್ವಿನಿ ನೀಡಿರುವ ದೂರು ಆಧರಿಸಿ ಮೂಡಿಗೆರೆ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ. ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

ಈ ಪ್ರಕರಣದಲ್ಲಿ 2023 ಆ.3ರಿಂದ 2024ರ ಆ.2ರ ತನಕ ವಿಚಾರಣೆ ನಡೆಸಿದ ಉಪ ವಿಭಾಗಾಧಿಕಾರಿ, 'ಅರ್ಜಿದಾರರು ಹಾಜರುಪಡಿಸಿರುವ ಎಲ್ಲಾ ದಾಖಲೆಗಳು, ನಕ್ಷೆಗಳು ಸಕ್ಷಮ ಅಧಿಕಾರಿಗಳಿಂದ ದೃಢೀಕರಣ ಆಗಿಲ್ಲ. ವಿಶೇಷ ಜಿಲ್ಲಾಧಿಕಾರಿ ಅವರ ಇನಾಂ ಆದೇಶದ ಪ್ರತಿಯಲ್ಲಿರುವ ಸರ್ವೆ ನಂಬರ್‌ಗಳಿಗೂ, ನಕ್ಷೆಯ ಸರ್ವೆ ನಂಬರ್‌ಗಳಿಗೂ ತಾಳೆಯಾಗುತ್ತಿಲ್ಲ. ಪಹಣಿ ದಾಖಲೆಗಳಲ್ಲಿ ಮ್ಯುಟೇಷನ್ ಉಲ್ಲೇಖ ಇಲ್ಲ. ಎಲ್ಲಾ ದಾಖಲೆಗಳಲ್ಲಿ ಗ್ರಾಮ ಲೆಕ್ಕಿಗರ ಸಹಿ ನಕಲಿಯಾಗಿವೆ. ಮೇಲ್ನೋಟಕ್ಕೆ ಎಲ್ಲಾ ದಾಖಲೆಗಳೂ ನಕಲಿ ಎಂಬಂತೆ ಕಾಣಿಸುತ್ತಿದೆ. ಆದ್ದರಿಂದ ಠಾಣೆಯಲ್ಲಿ ದೂರು ದಾಖಲಿಸಿ' ಎಂದು ಮೂಡಿಗೆರೆ ತಹಶೀಲ್ದಾರ್ ಅವರಿಗೆ ಆದೇಶಿಸಿದ್ದರು.

ಇದನ್ನು ಆಧರಿಸಿ ಪೊಲೀಸ್ ಠಾಣೆಗೆ ತಹಶೀಲ್ದಾರ್ ಅಶ್ವಿನಿ ದೂರು ನೀಡಿದ್ದಾರೆ. ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಈ ಎಲ್ಲಾ ಅಂಶಗಳು ಎಫ್ಐಆರ್‌ನಲ್ಲಿ ಉಲ್ಲೇಖಗೊಂಡಿವೆ.

ಎಫ್ಐಆರ್ ಪ್ರಕಾರ, ಆರೋಪಿ ಮನ್ಮಥ ಭೂಮಿ ತನ್ನ ವಶಕ್ಕೆ ಪಡೆಯಲು ಮಂಡಿಸಿದ್ದ ವಾದ ಹೀಗಿದೆ.

'ಅಷ್ಟೂ ಜಮೀನು ತಮ್ಮ ಪೂರ್ವಜರಾದ ಎಂ.ಎಸ್.ಈರೇಗೌಡ ಮತ್ತು ಹೂವಣ್ಣಗೌಡ ಎಂಬುವವರಿಗೆ ಸೇರಿತ್ತು. 1956ರಲ್ಲಿ ಇನಾಂ ರದ್ದತಿ ಕಾಯ್ದೆ ಜಾರಿಯ ಬಳಿಕ ಸರ್ಕಾರದ ವಶಕ್ಕೆ ಹೋಗಿತ್ತು. ಇದೇ ಕಾಯ್ದೆಯ ನಿಯಮ 7ರ ಅಡಿಯಲ್ಲಿ ಈರೇಗೌಡ ಮತ್ತು ಹೂವಣ್ಣಗೌಡ ಅವರಿಗೆ ವಿಶೇಷ ಭೂಸ್ವಾಧೀನಾಧಿಕಾರಿ ಮುಂದೆ ಅರ್ಜಿ ಸಲ್ಲಿಸಿದ್ದರು. 1974ರ ಮಾ.5ರಂದು ಇಬ್ಬರಿಗೂ ಅಧಿಭೋಗದಾರಿಕೆ ನೊಂದಾಯಿಸಲಾಗಿದೆ. ವಿಶೇಷ ಜಿಲ್ಲಾಧಿಕಾರಿ ಅವರ ಆದೇಶದಂತೆ ₹1024.52 ಮೊತ್ತವನ್ನು ತಹಶೀಲ್ದಾರ್ ಅವರಿಗೆ ಪಾವತಿಸಲಾಗಿದೆ. ನಕ್ಷೆ ಕೂಡ ತಯಾರಿಸಲಾಗಿದೆ. ಆದರೆ, ಈ ಜಮೀನನ್ನು ಖಾತೆ ಮಾಡದ ಕಾರಣ ಎಂದಿದ್ದು, 2 ಲಕ್ಷ ಸಸಿಗಳನ್ನು ನೆಡಲಾಗಿದೆ. ಮರವಾಲ್ಮಿ ಬಾಬ್ತು ₹3.50 ಲಕ್ಷವನ್ನು 1984ರಲ್ಲಿ ಅರಣ್ಯ ಇಲಾಖೆಗೆ ಪಾವತಿಸಲಾಗಿದೆ. ಹಣ ಸಂದಾಯ ಕುರಿತು ಅಂದಿನ ಡಿಸಿಎಫ್ ಅವರು ಚಿಕ್ಕಮಗಳೂರು ಜಿಲ್ಲಾಧಿಕಾರಿಗೆ ಪತ್ರ ಬರೆದಿದ್ದಾರೆ.

'ಅದೇ ವರ್ಷ ಜಿಲ್ಲಾಧಿಕಾರಿ ಅವರು ಭೂಮಂಜೂರಾತಿ ಸಮಿತಿ ಮುಂದೆ ವಿಷಯ ಮಂಡಿಸಿ ಈರೇಗೌಡ ಮತ್ತು ಹೂವಣ್ಣಗೌಡ ಅವರಿಗೆ ಭೂಮಿ ಮಂಜೂರು ಮಾಡಲು ನಡಾವಳಿ ದಾಖಲಿಸಿದ್ದಾರೆ. ಇದೇ ವರ್ಷ ಹೂವಣ್ಣ ಗೌಡ ಮೃತಪಟ್ಟರೆ, 1985ರಲ್ಲಿ ಈರೇಗೌಡ ಮೃತಪಟ್ಟಿದ್ದಾರೆ. 1981ರಲ್ಲಿ ಹೂವಣ್ಣಗೌಡ ಮತ್ತು 1983ರಲ್ಲಿ ಈರೇಗೌಡ ಅವರು ಮನ್ಮಥ ಅವರಿಗೆ ವಿಲ್ ಬರೆದುಕೊಟ್ಟಿದ್ದಾರೆ. ಈ ಎಲ್ಲಾ ದಾಖಲೆಗಳನ್ನು ಆಧರಿಸಿ ಹಕ್ಕು ದಾಖಲಿಸಲು 2001ರಲ್ಲಿ ಚಿಕ್ಕಮಗಳೂರು ಉಪವಿಭಾಗಾಧಿಕಾರಿ ಆದೇಶ ಮಾಡಿದ್ದಾರೆ. ಆದರೂ, ತಹಶೀಲ್ದಾರ್ ಅವರು ಖಾತೆ ದಾಖಲಿಸಿಲ್ಲ. ಆದ್ದರಿಂದ ಮತ್ತೊಮ್ಮೆ ಮೇಲ್ಮನವಿ ಸಲ್ಲಿಸಲಾಗಿದೆ. ಉಪವಿಭಾಗಾಧಿಕಾರಿ ಅವರಿಗೆ ಖಾತೆ 'ಇಂಡೀಕರಣ ಮಾಡಿಕೊಡಲು ಕ್ರಮ ಕೈಗೊಳ್ಳಬೇಕು' ಎಂದು ಮನ್ಮಥ ಅವರು ಉಪವಿಭಾಗಾಧಿಕಾರಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು.

ಮುಖ್ಯಾಂಶಗಳು

- ಉಪ ವಿಭಾಗಾಧಿಕಾರಿ ಅವರಿಂದ ಸಮಗ್ರ ತನಿಖೆ
- ನಕಲಿ ದಾಖಲೆಗಳ ಜೆರಾಕ್ಸ್ ಪ್ರತಿಯೊಂದಿಗೆ ಅರ್ಜಿ ಸಲ್ಲಿಕೆ
- ವಾಸ್ತವ ಸರ್ವೆ ಸಂಖ್ಯೆ, ಅರ್ಜಿ ಸರ್ವೆ ಸಂಖ್ಯೆಗೆ ತಾಳೆ ಆಗಿಲ್ಲ

'ಖಾಸಗಿ ಜಾಗ ಕಬಳಿಕೆಗೂ ಯತ್ನ'

ನಕಲಿ ದಾಖಲೆ ಸೃಷ್ಟಿಸಿ ಪಡೆಯಲು ಪ್ರಯತ್ನಿಸಿರುವ ಜಾಗದಲ್ಲಿ ಅರಣ್ಯ ಭೂಮಿ, ಕಂದಾಯ ಜಾಗ ಮತ್ತು ಖಾಸಗಿ ವ್ಯಕ್ತಿಗಳ ಜಾಗವೂ ಇದೆ ಎಂದು ಎಫ್ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಜಿ.ಅಗ್ರಹಾರ, ಅಣಜೂರು, ಜಿ.ಹೊಸಹಳ್ಳಿ ಮತ್ತು ಬಣಕಲ್ ಗ್ರಾಮಗಳ ವಿವಿಧ ಸರ್ವೆ ನಂಬರ್‌ಗಳಲ್ಲಿ ಒಟ್ಟು 512 ಎಕರೆ 26 ಗುಂಟೆ ಜಾಗದಲ್ಲಿ ಹಲವೆಡೆ ಖಾಸಗಿಯವರ ಹಿಡುವಳಿ ಕೂಡ ಇದೆ. ದುರುದ್ದೇಶದಿಂದ ಇದನ್ನು ತನ್ನ ಹೆಸರಿಗೆ ಖಾತೆ ಮಾಡಿಸಿಕೊಳ್ಳಲು ಮನ್ಮಥ ಪ್ರಯತ್ನಿಸಿದ್ದಾರೆ ಎಂದು ತಹಶೀಲ್ದಾರ್ ನೀಡಿರುವ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಸುದ್ದಿ 2 ನಿಮಿಷ

'ಪುಸ್ತಕ ಖರೀದಿ: ಹಣ ಮೀಸಲಿಡಿ'

ಬಳ್ಳಾರಿ: 'ಸರ್ಕಾರ ನಾಲ್ಕೈದು ವರ್ಷಗಳಿಂದ ಪುಸ್ತಕ ಖರೀದಿಸಿಲ್ಲ. ಬಂಡವಾಳ ವಾಪಸ್ ಆಗದೇ ಪ್ರಕಾಶಕರು ಕಂಗಾಲು ಆಗಿದ್ದಾರೆ. ಸರ್ಕಾರ ಈ ಬಜೆಟ್‌ನಲ್ಲಾದರೂ ಪುಸ್ತಕ ಖರೀದಿಗೆ ₹20 ಕೋಟಿ ಮೀಸಲಿರಿಸಬೇಕು' ಎಂದು ಕರ್ನಾಟಕ ಪ್ರಕಾಶಕರ ಸಂಘದ ಅಧ್ಯಕ್ಷೆ ಡಾ. ವಸುಂಧರಾ ಭೂಪತಿ ಇಲ್ಲಿ ಆಗ್ರಹಿಸಿದರು.

ಕರ್ನಾಟಕ ಪ್ರಕಾಶಕರ ಸಂಘ ಮತ್ತು ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಸಹಯೋಗದಲ್ಲಿ ಬುಧವಾರ ಆರಂಭಗೊಂಡ ಎರಡು ದಿನಗಳ 'ಪ್ರಕಾಶಕರ ಕಮ್ಮಟ'ದಲ್ಲಿ ಅವರು ಮಾತನಾಡಿದರು.

'ಸಮಸ್ಯೆ ಬಗೆಹರಿಸುವುದಾಗಿ ಸರ್ಕಾರ ಇದೇ ಡಿ. 20ರವರೆಗೆ ಸಮಯ ಕೇಳಿದೆ. ಸ್ಪಂದಿಸದಿದ್ದರೆ ಹೋರಾಟ ನಡೆಸಲಾಗುವುದು' ಎಂದು ಎಚ್ಚರಿಸಿದರು.

'ಸ್ಥಳೀಯ ಸಂಸ್ಥೆಗಳ ಮೂಲಕ ಸಂಗ್ರಹಿಸಿರುವ ಗ್ರಂಥಾಲಯ ಕರ (ಸೆಸ್) ₹703 ಕೋಟಿ ಬಾಕಿ ಇದೆ. ಇದರ ಸದ್ಬಳಕೆ ಆಗಬೇಕು. ನಮ್ಮ ಹಣವನ್ನು ನಮಗೇ ಕೊಡಲು ಏನು ತೊಂದರೆ. ಕೇರಳದಲ್ಲಿ ಇರುವಂತೆ ಸರ್ಕಾರವು ಲೇಖಕರ ಕೃತಿಗಳ 2000 ಪ್ರತಿಗಳನ್ನು ಖರೀದಿಸಬೇಕು' ಎಂದು ಒತ್ತಾಯಿಸಿದರು.

28ಕ್ಕೆ ಸಾಗರ ಫೋಟೋಗ್ರಫಿಕ್ ಸೊಸೈಟಿ ರಜತ ಮಹೋತ್ಸವ

ಬೆಂಗಳೂರು: ಸಾಗರ ಫೋಟೋಗ್ರಫಿಕ್ ಸೊಸೈಟಿಯು ನೀನಾಸಂ ಸಹಯೋಗದಲ್ಲಿ ಇದೇ 28ರಂದು ಹೆಗ್ಗೋಡಿನಲ್ಲಿ ರಜತ ಮಹೋತ್ಸವ ಸಮಾರಂಭವನ್ನು ಹಮ್ಮಿಕೊಂಡಿದೆ.

ಸಂಸ್ಥೆಯು ಛಾಯಾಗ್ರಹಣ ತರಬೇತಿ ಕ್ಷೇತ್ರದಲ್ಲಿ 25 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದೆ. ಈ ಸಂಸ್ಥೆಯ ಆರಂಭಿಕ ಅಧ್ಯಕ್ಷರೂ ಆಗಿದ್ದ ಛಾಯಾಗ್ರಾಹಕ ದೊಡ್ಡೇರಿ ವೆಂಕಟಗಿರಿರಾವ್ (ಡಿ.ವಿ.ರಾವ್) ಅವರ ನೆನಪಿನಲ್ಲಿ 45 ಕಪ್ಪು–ಬಿಳುಪು ಪಿಕ್ಟೋರಿಯಲ್ ಛಾಯಾಚಿತ್ರಗಳ ಪ್ರದರ್ಶನವನ್ನೂ ಹಮ್ಮಿಕೊಳ್ಳಲಾಗಿದೆ. ಈ ಛಾಯಾಚಿತ್ರಗಳನ್ನು ಅವರೇ ಸೆರೆಹಿಡಿದು, ಸಂಸ್ಕರಿಸಿ, ಮುದ್ರಿಸಿದ್ದರು. ಅಂತರರಾಷ್ಟ್ರೀಯ ಸಲಾನ್ ಸ್ಪರ್ಧೆಗಳಲ್ಲಿ ಪ್ರದರ್ಶಿತಗೊಂಡಿದ್ದವು. ಈ ಛಾಯಾಚಿತ್ರಗಳ ಜತೆಗೆ ಸೊಸೈಟಿಯ ಕೆಲವು ಸದಸ್ಯರ ಛಾಯಾಚಿತ್ರಗಳೂ ಪ್ರದರ್ಶನಗೊಳ್ಳುತ್ತಿವೆ ಎಂದು ಸಂಸ್ಥೆಯ ಸಂಚಾಲಕ ಕೆ.ಎಸ್. ರಾಜಾರಾಮ್ ಅವರು ತಿಳಿಸಿದ್ದಾರೆ.

ರಜತ ಮಹೋತ್ಸವದ ಪೂರ್ವಭಾವಿಯಾಗಿ, ಹಂಪಿ ವಿಶ್ವವಿದ್ಯಾಲಯ 1995ರಲ್ಲಿ ಹೊರತಂದ ಡಿ.ವಿ. ರಾವ್ ಅವರ 'ಭಾವಾಭಿವ್ಯಂಜಕ' (ಪಿಕ್ಟೋರಿಯಲ್) ಛಾಯಾಚಿತ್ರ ಕಲೆ ಪುಸ್ತಕದ ಆಧಾರದ ಮೇಲೆ ತರಬೇತಿ ಕಮ್ಮಟವೂ ನಡೆಯಲಿದೆ. ಭಾಗವಹಿಸಲು ಇಚ್ಛಿಸುವವರು ವಾಟ್ಸ್ ಆ್ಯಪ್ ಸಂಖ್ಯೆ 98459 31306ಕ್ಕೆ ಸಂಪರ್ಕಿಸಿ ನೋಂದಾಯಿಸಿಕೊಳ್ಳಬೇಕು ಎಂದು ಹೇಳಿದ್ದಾರೆ.

ನ್ಯಾಷನಲ್ ಹೆರಾಲ್ಡ್ ವಿರುದ್ಧ ಪ್ರಕರಣ ದಾಖಲು ವಿರೋಧಿಸಿ ಸುವರ್ಣ ವಿಧಾನಸೌಧದ ಬಳಿ ಧರಣಿ

ಕೇಂದ್ರದ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ನ್ಯಾಷನಲ್ ಹೆರಾಲ್ಡ್' ವಿರುದ್ಧದ ಪ್ರಕರಣದಲ್ಲಿ ಕೇಂದ್ರ ಸರ್ಕಾರವು ರಾಜಕೀಯಪ್ರೇರಿತ ಕ್ರಮ ಕೈಗೊಳ್ಳುತ್ತಿದೆ ಎಂದು ದೂರಿ ರಾಜ್ಯದ ಕಾಂಗ್ರೆಸ್ ನಾಯಕರು ಬುಧವಾರ ಸುವರ್ಣ ವಿಧಾನಸೌಧದ ಗಾಂಧೀಜಿ ಪ್ರತಿಮೆ ಬಳಿ ಪ್ರತಿಭಟನೆ ನಡೆಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಕೆಲ ಸಚಿವರು, ಶಾಸಕರು, ವಿಧಾನ ಪರಿಷತ್ ಸದಸ್ಯರು ಒಂದೂವರೆ ತಾಸು, ಸದನ ಕಲಾಪಗಳಿಂದ ಹೊರಗುಳಿದು ಧರಣಿ ಕುಳಿತರು. ಬೆಳಿಗ್ಗೆ 11.40ರ ನಂತರ ಸದನದೊಳಗೆ ಹೋದರು.

ಕೇಂದ್ರ ಸರ್ಕಾರ, ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಹಾಗೂ ಜಾರಿ ನಿರ್ದೇಶನಾಲಯ (ಇ.ಡಿ) ವಿರುದ್ಧ ಧಿಕ್ಕಾರ ಕೂಗಿದರು. 'ಪ್ರಧಾನಿ ಮೋದಿ ಲಜ್ಜೆಗೇಡಿ, ಅಮಿತ್ ಶಾಗೆ ಛೀಮಾರಿ, ದಮನಕಾರಿ ನೀತಿಯ ಕೇಂದ್ರ ಸರ್ಕಾರ ಮತಿಗೇಡಿ' ಎಂದು ಶಾಸಕರು, ಸಚಿವರು ನಿರಂತರ ಘೋಷಣೆ ಕೂಗಿದರು.

'ಬಿಜೆಪಿಯವರಿಗೆ ಮಹಾತ್ಮ ಗಾಂಧಿ ಅವರನ್ನು ಕಂಡರೆ ಆಗಿಬರುವುದಿಲ್ಲ. ಅಂಬೇಡ್ಕರ್ ಅವರನ್ನು ಸಹಿಸಿಕೊಳ್ಳಲ್ಲ. ಗಾಂಧಿ ಪರಿವಾರ ನಾಶಪಡಿಸಲು ಇನ್ನಿಲ್ಲದ ಸುಳ್ಳು ಆರೋಪ ಹೊರೆಸಿದ್ದಾರೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಹೆಸರನ್ನು ಜಿ ರಾಮ್ ಜಿ ಎಂದು ಬದಲಿಸಿದ್ದಾರೆ. ಗಾಂಧೀಜಿ ವಿರುದ್ಧವೂ ಸರ್ವಾಧಿಕಾರಿ ಧೋರಣೆ ತಾಳಿದ್ದಾರೆ' ಎಂದು ಸಿದ್ದರಾಮಯ್ಯ ಹೇಳಿದರು.

'ಬಿಜೆಪಿ ದ್ವೇಷ ರಾಜಕಾರಣದಲ್ಲಿ ತೊಡಗಿದ್ದು, ಕಾಂಗ್ರೆಸ್ ನಾಯಕರ ಮೇಲೆ ಸುಳ್ಳು ಕೇಸುಗಳನ್ನು ಹಾಕಿ ಅಪಪ್ರಚಾರ ಮಾಡುತ್ತಿದೆ. ಬಿಜೆಪಿಯ ಈ ಕುತಂತ್ರಕ್ಕೆ ಉತ್ತರವಾಗಿ ನ್ಯಾಯಾಲಯದಲ್ಲಿ ನ್ಯಾಯ ಸಿಕ್ಕಿದೆ. ಬಿಜೆಪಿ ಸರ್ಕಾರದ ತಪ್ಪುಗಳನ್ನು ಮರೆಮಾಚಲು ವಿರೋಧ ಪಕ್ಷದ ನಾಯಕರ ಮೇಲೆ ಇಂಥ ಆರೋಪ ಮಾಡಿ, ನ್ಯಾಯಾಲಯಕ್ಕೆ ಓಡಾಡುವಂತೆ ಮಾಡುವುದು ಇವರ ಕುತಂತ್ರ' ಎಂದು ದೂರಿದರು.

ಸಚಿವರಾದ ಎಚ್.ಕೆ.ಪಾಟೀಲ, ಲಕ್ಷ್ಮೀ ಹೆಬ್ಬಾಳಕರ, ಕೃಷ್ಣ ಬೈರೇಗೌಡ, ಬೈರತಿ ಸುರೇಶ್ ಮಾತನಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಧರಣಿ ನಡೆಸಲಾಯಿತು –ಚಿತ್ರ: ರಂಜು ಪಿ

'ಷೇರು ಇಟ್ಟುಕೊಂಡರೂ ಪ್ರಕರಣ'

'ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಗಾಂಧಿ ಕುಟುಂಬ ಸಾವಿರಾರು ಕೋಟಿ ಮೌಲ್ಯದ ಆಸ್ತಿಯನ್ನು ಪಕ್ಷಕ್ಕೆ ಕೊಟ್ಟುಬಿಟ್ಟರು. ಒಂದೆರಡು ಷೇರುಗಳು ಅವರವರಿಗೆ ಬರುತ್ತವೆ. ಅದನ್ನೇ ಅಕ್ರಮ ಎನ್ನುವುದು ಎಷ್ಟು ಸರಿ' ಎಂದು ಡಿ.ಕೆ.ಶಿವಕುಮಾರ್ ಪ್ರಶ್ನಿಸಿದರು.

'ದುರುದ್ದೇಶದಿಂದ ಕಾಂಗ್ರೆಸ್ ನಾಯಕರ ಮೇಲೆ ಪ್ರಕರಣ ದಾಖಲಿಸಿ ಕೇಂದ್ರ ಹಿಂಸೆ ನೀಡಿದೆ. ಇವರು ಎಂಥವರು ಎಂಬುದನ್ನು ನ್ಯಾಯಾಲಯದ ಆದೇಶವೇ ಬಹಿರಂಗ ಮಾಡಿದೆ. ಇವತ್ತಿನಿಂದ ಬಿಜೆಪಿ ಅವನತಿ ಆರಂಭವಾಗಿದೆ' ಎಂದು ಕಿಡಿ ಕಾರಿದರು. 'ನ್ಯಾಷನಲ್ ಹೆರಾಲ್ಡ್' ಪತ್ರಿಕೆಯನ್ನು ನೆಹರೂ ಅವರು ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ಆರಂಭಿಸಿದರು. ಕಾಂಗ್ರೆಸ್‌ನವರಾದ ನಾವು ಪತ್ರಿಕೆಗೆ ಹಣ ಕೊಟ್ಟಿದ್ದೇವೆ. ನನ್ನ ಮೇಲೆ, ನನ್ನ ತಮ್ಮನ ಮೇಲೂ ಈ ಸಂಬಂಧ ಪ್ರಕರಣ ದಾಖಲಿಸಿದ್ದಾರೆ. ನ್ಯಾಷನಲ್ ಹೆರಾಲ್ಡ್‌ನ ಹಣ ಕಾಂಗ್ರೆಸ್ ನಾಯಕರ ಮನೆಗೇನೂ ಹೋಗಿಲ್ಲ. ದ್ವೇಷದ ರಾಜಕಾರಣ ಬಿಟ್ಟುಬಿಡಿ ಎಂದು ನ್ಯಾಯಾಲಯ ಕೇಂದ್ರ ಸರ್ಕಾರಕ್ಕೆ ಚಾಟಿ ಬೀಸಿದೆ' ಎಂದರು.

> ನರೇಗಾ ಯೋಜನೆಯ ಹೆಸರಿನಲ್ಲಿ ಈಗ ಗಾಂಧೀಜಿ ಹೆಸರು ತೆಗೆದು ಜಿ.ರಾಮ್ ಜಿ ಹೆಸರು ಸೇರಿಸಿದ್ದಾರೆ. ಮುಂದಿನ ದಿನಗಳಲ್ಲಿ ಜಿ.ರಾಮ್ ಜಿ ಹೋಗಿ ಜಿ ಮೋದಿ ಜಿ ಆಗುವುದರಲ್ಲಿ ಸಂದೇಹವಿಲ್ಲ
>
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

> ಯೋಜನೆಗಳ ಹೆಸರಿನಿಂದ ಗಾಂಧೀಜಿ ಹೆಸರು ತೆಗೆದಿದ್ದೀರಿ. ನೋಟುಗಳ ಮೇಲೆ ಇರುವ ಗಾಂಧೀಜಿ ಭಾವಚಿತ್ರ ತೆಗೆದು ಗೋಡ್ಸೆ ಭಾವಚಿತ್ರ ಹಾಕುತ್ತೀರೇನು?
>
> **ಡಿ.ಕೆ.ಶಿವಕುಮಾರ್**
> ಉಪಮುಖ್ಯಮಂತ್ರಿ

10 ಮಸೂದೆಗಳಿಗೆ ಅಂಗೀಕಾರ

ಸುವರ್ಣ ವಿಧಾನಸೌಧ (ಬೆಳಗಾವಿ): ವಿಧಾನ ಸಭೆಯಲ್ಲಿ ಅಂಗೀಕೃತವಾಗಿದ್ದ 10 ಮಸೂದೆಗಳಿಗೆ ಬುಧವಾರ ವಿಧಾನ ಪರಿಷತ್‌ನಲ್ಲೂ ಅಂಗೀಕಾರ ದೊರೆಯಿತು.

ಚಂದ್ರಗುತ್ತಿ ಶ್ರೀ ರೇಣುಕಾಂಬ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಮಸೂದೆ, ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಮತ್ತು ಇತರೆ ಕೆಲ ಕಾನೂನುಗಳ ತಿದ್ದುಪಡಿ ಮಸೂದೆ, ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮರಾಯ ದತ್ತಿ ತಿದ್ದುಪಡಿ ಮಸೂದೆ, ಕರ್ನಾಟಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ ಕ್ಷೇಮಾಭಿವೃದ್ಧಿ ಮಸೂದೆ, ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ತಿದ್ದುಪಡಿ ಮಸೂದೆ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಮಸೂದೆ, ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ತಿದ್ದುಪಡಿ ಮಸೂದೆ, ಕರ್ನಾಟಕ ಮನೆ ಬಾಡಿಗೆ ಮಸೂದೆ, ಶ್ರೀ ಮಲೆ ಮಾದೇಶ್ವರ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ತಿದ್ದುಪಡಿ ಮಸೂದೆ ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಎರಡನೇ ತಿದ್ದುಪಡಿ ಮಸೂದೆಗಳನ್ನು ಪರಿಷತ್ ಅಂಗೀಕರಿಸಿತು.

ಹೊರಗೆ ಕಾಂಗ್ರೆಸ್–ಒಳಗೆ ವಿರೋಧ ಪಕ್ಷ ಧರಣಿ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಸೇರಿದಂತೆ ಕಾಂಗ್ರೆಸ್ ನಾಯಕರ ವಿರುದ್ಧ ಜಾರಿ ನಿರ್ದೇಶನಾಲಯ ಸುಳ್ಳು ಪ್ರಕರಣ ದಾಖಲಿಸಿದ್ದನ್ನು ಖಂಡಿಸಿ ಇಲ್ಲಿನ ಗಾಂಧಿ ಪ್ರತಿಮೆ ಮುಂದೆ ಕಾಂಗ್ರೆಸ್ ನಾಯಕರು ಧರಣಿ ನಡೆಸಿದರೆ, ಸಮಯಕ್ಕೆ ಸರಿಯಾಗಿ ಕಲಾಪಕ್ಕೆ ಹಾಜರಾಗದ ಸಚಿವರು, ಕಾಂಗ್ರೆಸ್ ಸದಸ್ಯರ ಧೋರಣೆ ಖಂಡಿಸಿ ಬಿಜೆಪಿ–ಜೆಡಿಎಸ್ ಸದಸ್ಯರು ವಿಧಾನ ಪರಿಷತ್‌ನಲ್ಲಿ ಪ್ರತಿಭಟನೆ ನಡೆಸಿದರು.

ಬುಧವಾರ ಬೆಳಿಗ್ಗೆ 10 ಗಂಟೆಗೆ ನಿಗದಿಯಾಗಿದ್ದ ಕಲಾಪ ಆರಂಭವಾದಾಗ ಕಾಂಗ್ರೆಸ್‌ನ ಕೆ.ಶಿವಕುಮಾರ್, ರಾಮೋಜಿ ಗೌಡ ಹೊರತುಪಡಿಸಿ, ಉಳಿದ ಯಾವ ಸಚಿವರೂ, ಸದಸ್ಯರೂ ಹಾಜರಿರಲಿಲ್ಲ. ನಂತರ ಸಚಿವ ಸತೀಶ ಜಾರಕಿಹೊಳಿ ಬಂದರು. ಆಡಳಿತ ಪಕ್ಷದ ಧೋರಣೆಗೆ ವಿರೋಧ ಪಕ್ಷಗಳ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು. ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಮುಖ್ಯಸಚೇತಕ ಎನ್.ರವಿಕುಮಾರ್, ಭಾರತಿಶೆಟ್ಟಿ, ಸಿ.ಟಿ.ರವಿ ಕಾಂಗ್ರೆಸ್ ನಡೆಯನ್ನು ಟೀಕಿಸಿದರು. ನಂತರ ಸಭಾಪತಿ ಸ್ಥಾನದಲ್ಲಿದ್ದ ಉಪಸಭಾಪತಿ ಎಂ.ಕೆ.ಪ್ರಾಣೇಶ್ ಕಲಾಪವನ್ನು ಕೆಲ ಹೊತ್ತು ಮುಂದೂಡಿದರು.

ಒಂದೂವರೆ ಗಂಟೆ ತಡವಾಗಿ ಕಲಾಪ ಆರಂಭವಾಯಿತು. ಆಗಲೂ ವಿರೋಧ ಪಕ್ಷಗಳ ಸದಸ್ಯರು ಗದ್ದಲ ಮುಂದುವರಿಸಿದರು. 'ಸತ್ಯಕ್ಕೆ ಸಾವಿಲ್ಲ, ಸುಳ್ಳು ಪ್ರಕರಣಕ್ಕೆ ಆಯಸ್ಸಿಲ್ಲ' ಎಂಬ ಫಲಕವನ್ನು ಕಾಂಗ್ರೆಸ್ ಸದಸ್ಯರು ಪ್ರದರ್ಶಿಸಿದರು. ತಡವಾಗಿ ಕಲಾಪ ಆರಂಭಕ್ಕೆ ಮನವಿ ಸಲ್ಲಿಸಿದ್ದರೂ ನಿಗದಿತ ಸಮಯಕ್ಕೆ ಆರಂಭಿಸಿದ ಸಭಾಪತಿ ವಿರುದ್ಧ ಆಡಳಿತ ಪಕ್ಷದ ಮುಖ್ಯಸಚೇತಕ ಸಲೀಂ ಅಹಮದ್ ಅಸಮಾಧಾನ ವ್ಯಕ್ತಪಡಿಸಿದರು.

ಚಟಕೆ ಸುದ್ದಿ

ಜೈಲು ಆವರಣಕ್ಕೆ ಚೆಂಡಿನಲ್ಲಿ ಗಾಂಜಾ

ಬಳ್ಳಾರಿ: ಚೆಂಡಿನಲ್ಲಿ ಗಾಂಜಾ ಇರಿಸಿ, ಅದಕ್ಕೆ ಟೇಪ್ ಸುತ್ತಿ ದುಷ್ಕರ್ಮಿಗಳು ಬಳ್ಳಾರಿ ಕೇಂದ್ರ ಕಾರಾಗೃಹದ ಆವರಣಕ್ಕೆ ಎಸೆದಿದ್ದಾರೆ. ಈ ಸಂಬಂಧ ಬ್ರೂಸ್‌ಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಂಗಳವಾರ (ಡಿ. 16) ಜೈಲಿನಲ್ಲಿ ಗಸ್ತು ತಿರುಗುತ್ತಿದ್ದ ಸಿಬ್ಬಂದಿಗೆ ಗೋಡೆ ಪಕ್ಕದಲ್ಲಿ ಟೇಪ್ ಸುತ್ತಿದ್ದ ಚೆಂಡು ಬಿದ್ದಿದ್ದು ಕಂಡಿದೆ. ಅದನ್ನು ಜೈಲರ್‌ಗೆ ಒಪ್ಪಿಸಲಾಗಿತ್ತು. ಚೆಂಡು ಸಿಕ್ಕ ಜಾಗದಲ್ಲಿನ ಸಿಸಿಟಿವಿ ಕ್ಯಾಮೆರಾ ಪರಿಶೀಲಿಸಿದಾಗ ಅಪರಿಚಿತ ವ್ಯಕ್ತಿ ಜೈಲಿನ ಆವರಣಕ್ಕೆ ಚೆಂಡು ತೂರುತ್ತಿರುವುದು ಕಂಡು ಬಂದಿದೆ ಎನ್ನಲಾಗಿದೆ.

ಆತ ಚೆಂಡು ತೂರಿದ್ದ ಜಾಗ ಪರಿಶೀಲಿಸಿದಾಗ, ಮತ್ತೊಂದು ಚೆಂಡು ಪತ್ತೆಯಾಗಿತ್ತು. ಎರಡೂ ಚೆಂಡುಗಳನ್ನು ತೆರೆದು ನೋಡಿದಾಗ ಅದರಲ್ಲಿ ಗಾಂಜಾ ರೀತಿಯ ವಸ್ತು ಪತ್ತೆಯಾಗಿದೆ ಎಂದು ಗೊತ್ತಾಗಿದೆ.

ಗಾಯಕ ಮ್ಯೂಸಿಕ್ ಮೈಲಾರಿ ಬಂಧನ

ಮಹಾಲಿಂಗಪುರ (ಬಾಗಲಕೋಟೆ ಜಿಲ್ಲೆ): ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇಲೆ ಗಾಯಕ ಮ್ಯೂಸಿಕ್ ಮೈಲಾರಿಯನ್ನು ಮಹಾಲಿಂಗಪುರ ಠಾಣೆ ಪೊಲೀಸರು ಬುಧವಾರ ಬೆಳಿಗ್ಗೆ ವಿಜಯಪುರ ಜಿಲ್ಲೆಯ ತಿಕೋಟಾದಲ್ಲಿ ಬಂಧಿಸಿದ್ದಾರೆ.

ಮ್ಯೂಸಿಕ್ ಮೈಲಾರಿ

ಪೋಕ್ಸೊ ಪ್ರಕರಣ ದಾಖಲಾಗಿದೆ.

'ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲ್ಲೂಕಿನ ಕುಡಗುಂಟಿ ಗ್ರಾಮದ ಮೈಲಾರಿ, ಕಾರ್ಯಕ್ರಮಕ್ಕೆ ನೃತ್ಯ ಮಾಡಿಸಲು ಕರೆದೊಯ್ದಿದ್ದಾಗ ದೌರ್ಜನ್ಯ ಎಸಗಿದ್ದಾರೆ' ಎಂದು ಬಾಲಕಿ ದೂರು ನೀಡಿದ್ದರು.

ಪುರಸ್ಕಾರಕ್ಕೆ ಆಯ್ಕೆ

ಮಡಿಕೇರಿ: ರಾಯಚೂರಿನಲ್ಲಿ ಡಿ.20 ಹಾಗೂ 21ರಂದು ನಡೆಯುವ 11ನೇ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನದಲ್ಲಿ ನೀಡಲಿರುವ ಸಾವಿತ್ರಿಬಾಯಿಫುಲೆ ರಾಷ್ಟ್ರೀಯ ಪುರಸ್ಕಾರಕ್ಕೆ ಕೊಡಗಿನ ಸಾಮಾಜಿಕ ಕಾರ್ಯಕರ್ತೆ ಎಚ್.ಎಂ.ಕಾವೇರಿ ಸೇರಿ ಐವರು ಆಯ್ಕೆಯಾಗಿದ್ದಾರೆ. ಕೊಡಗಿನ ಕವಯಿತ್ರಿ ರಮ್ಯ ಮೂರ್ನಾಡು (ಕಾವ್ಯ), ಮಾರುತಿ ದಾಸಣ್ಣವರ್ (ಪುಸ್ತಕ) ಟಿ.ಎಸ್.ಮಹಾಲಕ್ಷ್ಮಿ (ಸಾಧಕ ಬರಹಗಾರ್ತಿ), ಎ.ಧನುಷ್ (ಲಾಂಛನ ರಚನೆ) ಅವರು ರಾಷ್ಟ್ರೀಯ ಪುರಸ್ಕಾರಕ್ಕೆ ಆಯ್ಕೆ ಆಗಿದ್ದಾರೆ ಎಂದು ಕೊಡಗು ಜಿಲ್ಲಾ ದಲಿತ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಅರ್ಜುನ್ ಮೌರ್ಯ ತಿಳಿಸಿದ್ದಾರೆ.

ಸಿ.ಎಂ ಸಿದ್ದರಾಮಯ್ಯ ಆರೋಗ್ಯ ವಿಚಾರಿಸಿದ ರಮೇಶ ಜಾರಕಿಹೊಳಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಆರೋಗ್ಯದಲ್ಲಿ ತುಸು ಏರುಪೇರಾಗಿ ವಿಶ್ರಾಂತಿ ಪಡೆಯುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾದ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ, ಆರೋಗ್ಯ ವಿಚಾರಿಸಿದರು.

ಸಿದ್ದರಾಮಯ್ಯ

ಬುಧವಾರ ಮಧ್ಯಾಹ್ನ ನಗರದ ಪ್ರವಾಸಿ ಮಂದಿರಕ್ಕೆ ಬಂದ ರಮೇಶ ಜಾರಕಿಹೊಳಿ ಕೆಲಹೊತ್ತು ಸಿದ್ದರಾಮಯ್ಯ ಅವರೊಂದಿಗೆ ಮಾತನಾಡಿದರು.

ಬಳಿಕ ಪ್ರತಿಕ್ರಿಯಿಸಿದ ಅವರು, 'ರಾಜಕೀಯ, ಅಭಿವೃದ್ಧಿ ವಿಷಯ ಚರ್ಚಿಸಿಲ್ಲ. ಸಿ.ಎಂ ಅವರ ಆರೋಗ್ಯ ವಿಚಾರಿಸಿ ಧೈರ್ಯ ಹೇಳಲು ಬಂದಿದ್ದೆ. ಅವರೇ ಧೈರ್ಯ ಹೇಳುವಷ್ಟು ಆರೋಗ್ಯವಾಗಿದ್ದಾರೆ' ಎಂದು ಹೇಳಿದರು.

ನಂತರ ಬಂದ ಸಚಿವ ಬೈರತಿ ಸುರೇಶ್, 'ಮುಖ್ಯಮಂತ್ರಿ ಅವರಿಗೆ ಹೊಟ್ಟೆನೋವು ಕಾಣಿಸಿಕೊಂಡಿದೆ. ಆರೋಗ್ಯ ಸುಧಾರಿಸಿದೆ. ನಾಳೆ ಸದನದಲ್ಲಿ ಉತ್ತರ ಕೊಡಬೇಕಾದ ವಿಷಯಗಳ ಮಾಹಿತಿ ಸಂಗ್ರಹಿಸುತ್ತಿದ್ದಾರೆ' ಎಂದು ಹೇಳಿದರು.

ಬೆಳಿಗ್ಗೆ ಮಹಾತ್ಮಗಾಂಧಿ ಪ್ರತಿಮೆ ಬಳಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಸಿದ್ದರಾಮಯ್ಯ ಒಂದು ತಾಸು ಧರಣಿ ಕುಳಿತರು. ಬಳಿಕ ಸದನಕ್ಕೆ ತೆರಳಿದ್ದರು. ಕೆಲ ಸಮಯದ ನಂತರ ಪ್ರವಾಸಿ ಮಂದಿರಕ್ಕೆ ಮರಳಿ, ಇಡೀ ದಿನ ಅಲ್ಲಿಯೇ ವಿಶ್ರಾಂತಿ ಪಡೆದರು.

ಆರೋಗ್ಯ ವಿಚಾರಿಸಿದ ಬಳಿಕ ಮಾತನಾಡಿದ, ಮುಖ್ಯಮಂತ್ರಿ ಅವರ ಪುತ್ರರೂ ಆದ, ವಿಧಾನ ಪರಿಷತ್ ಸದಸ್ಯ ಯತೀಂದ್ರ ಅವರು, 'ತಂದೆಯವರ ಆರೋಗ್ಯ ಚೆನ್ನಾಗಿದೆ. ಗ್ಯಾಸ್ಟ್ರೋಕೇಷನ್ ಇನ್ಫೆಕ್ಷನ್ ಆಗಿದೆ. ವೈದ್ಯರು ತಪಾಸಣೆ ನಡೆಸಿ ಮಾತ್ರೆ ಕೊಟ್ಟಿದ್ದಾರೆ. ನಾಳೆ ಅಧಿವೇಶನಕ್ಕೆ ಬರುತ್ತಾರೆ' ಎಂದು ಹೇಳಿದರು.

ಶಾಸಕ ಜಿ.ಟಿ.ದೇವೇಗೌಡ ಅವರು ಭೇಟಿಯಾಗಿದ್ದರು.

ಶಾಸಕರ ವೈದ್ಯ ಸಹೋದರನ ವರ್ಗ ರದ್ದುಗೊಳಿಸಿ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ ಅವರ ಸೂಚನೆಯ ಮೇರೆಗೆ, ಗದಗ ವೈದ್ಯಕೀಯ ವಿಜ್ಞಾನ ಸಂಸ್ಥೆಯ (ಜಿಐಎಂಎಸ್) ಪ್ರಾಧ್ಯಾಪಕ ಡಾ.ಕೇಶವ ಅಬ್ಬಯ್ಯ ಅವರನ್ನು ಹುಬ್ಬಳ್ಳಿಯ, ಕರ್ನಾಟಕ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ (ಕಿಮ್ಸ್) ದಂತ ಚಿಕಿತ್ಸಾ ವಿಭಾಗಕ್ಕೆ ನಿಯಮಬಾಹಿರವಾಗಿ ವರ್ಗಾವಣೆ ಮಾಡಲಾಗಿದೆ' ಎಂದು ಹೈಕೋರ್ಟ್, ರಾಜ್ಯ ಸರ್ಕಾರವನ್ನು ಕಟುವಾಗಿ ತರಾಟೆಗೆ ತೆಗೆದುಕೊಂಡಿದೆ.

ವರ್ಗಾವಣೆ ಪ್ರಶ್ನಿಸಿ ಕಿಮ್ಸ್‌ನ ಪ್ರಾಧ್ಯಾಪಕ ಸುನೀಲ್ ಜಿ. ಪಾಟೀಲ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಸಂಬಂಧ ಸರ್ಕಾರ ಹೊರಡಿಸಿದ್ದ ವರ್ಗಾವಣೆ ಆದೇಶವನ್ನು ರದ್ದುಪಡಿಸಿದೆ.

'ಡಾ.ಅಬ್ಬಯ್ಯ ಅವರನ್ನು ಕಾಯಂ ಆಗಿ ಕಿಮ್ಸ್‌ನಲ್ಲಿ ನಿಯೋಜನೆಗೊಳಿಸಿರುವುದು ಮತ್ತು ಅರ್ಜಿದಾರರನ್ನು ಅವರ ಅಧೀನದಲ್ಲಿ ಇರುವಂತೆ ನಿಯೋಜಿಸಿರುವುದು ಶಾಸನಬದ್ಧ ಮಾರ್ಗಸೂಚಿಗಳ ಉಲ್ಲಂಘನೆಯಾಗಿದೆ. ಈ ಪ್ರಕರಣದಲ್ಲಿನ ರಾಜಕೀಯ ಪ್ರಭಾವ ಅಳಿಸಲಾಗದಷ್ಟು ಕಳಂಕಿತವಾದ ನಡೆ. ಕಿಮ್ಸ್ ಆಸ್ಪತ್ರೆಯು ಡಾ.ಕೇಶವ್ ಅವರ ಸಹೋದರ ಪ್ರತಿನಿಧಿಸುವ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲೇ ಬರುತ್ತದೆ ಎಂಬುದು ಗಮನಾರ್ಹ' ಎಂದು ನ್ಯಾಯಪೀಠ ಕಿಡಿಕಾರಿದೆ.

'ಶಾಸನಬದ್ಧವಾಗಿ ಬಡ್ತಿಗೆ ಅರ್ಹರಿದ್ದಾಗ ಮತ್ತು ಇಲಾಖೆಯಲ್ಲಿ ಲಭ್ಯವಿರುವ ಏಕೈಕ ಹುದ್ದೆಗೆ ಹೊರಗಿನವರನ್ನು ಆಮದು ಮಾಡಿಕೊಂಡಿರುವುದರಿಂದ ಅರ್ಜಿದಾರರ ಸೇವಾ ಹಿರಿತನ, ಶಾಸನಬದ್ಧ, ಮೂಲಭೂತ ಹಕ್ಕು ಹಾಗೂ ಬಡ್ತಿಯ ಕಾನೂನುಬದ್ಧ ಪರಿಗಣನೆಯನ್ನು ಕಸಿದುಕೊಂಡಂತಾಗಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ. ಕಿಮ್ಸ್ 2025ರ ಮಾರ್ಚ್ 5ರಂದು ಹೊರಡಿಸಿದ ವರ್ಗಾವಣೆ ಆದೇಶ, 2025ರ ಜನವರಿ 21 ರಂದು ಹೊರಡಿಸಿದ ತಾತ್ಕಾಲಿಕ ಹಿರಿತನದ ಪಟ್ಟಿಯನ್ನು ನ್ಯಾಯಪೀಠ ರದ್ದುಗೊಳಿಸಿದೆ.

'ದೇಶ ಮೊದಲೆಂಬ ಭಾವ ಮೂಡಲಿ'

ಪ್ರಜಾವಾಣಿ ವಾರ್ತೆ

ಎಬಿವಿಪಿ ರಾಜ್ಯ ದಕ್ಷಿಣ ಪ್ರಾಂತ ಸಮ್ಮೇಳನ

ಮಡಿಕೇರಿ: 'ದೇಶ ಮೊದಲು ಎಂಬ ಮನೋಭಾವ ಎಲ್ಲರಲ್ಲೂ ಮೂಡಬೇಕು' ಎಂದು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನ ರಾಷ್ಟ್ರೀಯ ಸಹ ಸಂಘಟನಾ ಕಾರ್ಯದರ್ಶಿ ಎಸ್.ಬಾಲಕೃಷ್ಣ ಪ್ರತಿಪಾದಿಸಿದರು.

ಇಲ್ಲಿನ ಗೌಡ ಸಮಾಜದಲ್ಲಿ ಬುಧವಾರ ಆರಂಭವಾದ 3 ದಿನಗಳ ಎಬಿವಿಪಿಯ 45ನೇ ಕರ್ನಾಟಕ ದಕ್ಷಿಣ ಪ್ರಾಂತ ಸಮ್ಮೇಳನದಲ್ಲಿ ಅವರು ಮಾತನಾಡಿದರು.

'ಲವ್ ಜಿಹಾದ್', 'ಲ್ಯಾಂಡ್ ಜಿಹಾದ್'ನ ನಂತರ ಈಗ 'ವೈಟ್ ಕಾಲರ್' ಭಯೋತ್ಪಾದನೆ ಬಂದಿದೆ. ಇಂತಹ ಕಾಲಘಟ್ಟದಲ್ಲಿ ದೇಶ ಮೊದಲೆಂಬುದೇ ಮುಖ್ಯವಾಗಬೇಕು' ಎಂದರು.

ಸಮ್ಮೇಳನಕ್ಕೆ ಚಾಲನೆ ನೀಡಿದ ಅಂತರರಾಷ್ಟ್ರೀಯ ಅಥ್ಲೀಟ್ ತೀತಮಾಡ ಅರ್ಜುನ್ ದೇವಯ್ಯ, 'ವಿಚಾರ ಮತ್ತು ತತ್ವ ಅಳವಡಿಸಿಕೊಂಡರೆ ಮಾತ್ರ ಬದಲಾಗುತ್ತದೆ' ಎಂದು ಹೇಳಿದರು.

ಕೊಡಗು, ಮೈಸೂರು, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ದಾವಣಗೆರೆ, ದಕ್ಷಿಣ ಕನ್ನಡ, ಉಡುಪಿ, ಮಂಡ್ಯ, ಚಾಮರಾಜನಗರ ಬೆಂಗಳೂರು ನಗರ ಸೇರಿ ದಕ್ಷಿಣದ ಜಿಲ್ಲೆಗಳ ಪ್ರತಿನಿಧಿಗಳು ಭಾಗಿಯಾಗಿದ್ದಾರೆ.

ಹಿರಿಯ ಕಲಾವಿದೆ ರಾಣಿ ಮಾಚಯ್ಯ, ಕರ್ನಾಟಕ ದಕ್ಷಿಣ ಪ್ರಾಂತ ಅಧ್ಯಕ್ಷ ರವಿ ಮಂಡ್ಯ, ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷ ಎಂ.ಈಶ್ವರ ಭಟ್, ಪ್ರಧಾನ ಕಾರ್ಯದರ್ಶಿ ರಮೇಶ್ ಹೊಳ್ಳ ಭಾಗವಹಿಸಿದ್ದರು.

ನಿಧನ ವಾರ್ತೆ

ಪ್ರೊ.ಎಸ್.ಎನ್.ಹೆಗ್ಡೆ

ಮೈಸೂರು: ಮೈಸೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಎಸ್.ಎನ್. ಹೆಗ್ಡೆ (83) ಅವರು ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ಬುಧವಾರ ನಿಧನರಾದರು.

ವಿಜಯನಗರದ ನಿವಾಸದಲ್ಲಿ ಮಂಗಳವಾರ ರಕ್ತದೊತ್ತಡದಿಂದ ಕುಸಿದು ಬಿದ್ದಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಬಹುಅಂಗಾಂಗ ವೈಫಲ್ಯದಿಂದ ನಿಧನರಾದರು ಎಂದು ವೈದ್ಯರು ತಿಳಿಸಿದ್ದಾರೆ. 6 ತಿಂಗಳ ಹಿಂದೆ ಅವರ ಪತ್ನಿ ನಿಧನರಾಗಿದ್ದರು. ಅವರಿಗೆ ಇಬ್ಬರು ಪುತ್ರಿಯರು ಇದ್ದಾರೆ.

ಮಂಗಳೂರು ವಿಶ್ವವಿದ್ಯಾಲಯದ ಪ್ರಾಣಿ ವಿಜ್ಞಾನ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಆರಂಭಿಸಿದ್ದ ಹೆಗ್ಡೆ ಅವರು 1997ರಿಂದ 2003ರವರೆಗೆ ಎರಡು ಅವಧಿಯಲ್ಲಿ ಮೈಸೂರು ವಿ.ವಿ. ಕುಲಪತಿಯಾಗಿ ಸೇವೆ ಸಲ್ಲಿಸಿದ್ದರು. ವಿದೇಶದಲ್ಲಿರುವ ಪುತ್ರಿ ಬಂದ ಬಳಿಕ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬವು ತಿಳಿಸಿದೆ.

ಎಸ್ಐಟಿ ತನಿಖೆ: ಮಾಡಿದ ಖರ್ಚು– ವೆಚ್ಚ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ರಾಜ್ಯ ಸರ್ಕಾರ 2023 ರಿಂದ ಇಲ್ಲಿಯವರೆಗೆ 32 ಕ್ರಿಮಿನಲ್ ಪ್ರಕರಣಗಳ ವಿಚಾರಣೆಗೆ ವಿಶೇಷ ತನಿಖಾ ತಂಡಗಳನ್ನು (ಎಸ್ಐಟಿ) ರಚಿಸಿದ್ದು, ಈ ಪ್ರಕರಣಗಳಲ್ಲಿ ಸರ್ಕಾರದ ಪರವಾಗಿ ವಾದ ಮಂಡಿಸಲು ಕೋಟ್ಯಂತರ ರೂಪಾಯಿ ವೆಚ್ಚ ಮಾಡಿದೆ.

ಮುನಿರತ್ನ

ವಿಧಾನ ಸಭೆಯಲ್ಲಿ ಬಿಜೆಪಿಯ ಮುನಿರತ್ನ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಗೃಹ ಸಚಿವ ಜಿ.ಪರಮೇಶ್ವರ ಅವರು ನೀಡಿದ ಲಿಖಿತ ಉತ್ತರದಲ್ಲಿ ಈ ವಿವರಗಳಿವೆ.

ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ದೌರ್ಜನ್ಯದ ಪ್ರಕರಣದಲ್ಲಿ ವಿಶೇಷ ಅಭಿಯೋಜಕ ಪ್ರೊ.ರವಿಕುಮಾರ್ ವರ್ಮ ಅವರಿಗೆ ₹2.41 ಕೋಟಿ ಸಂಭಾವನೆ ಪಾವತಿಸಲಾಗಿದೆ. ಇದೇ ಪ್ರಕರಣದಲ್ಲಿ ಸುಪ್ರೀಂಕೋರ್ಟ್‌ನಲ್ಲಿ ವಾದ ಮಂಡಿಸಲು ಹಿರಿಯ ವಕೀಲ ಕಪಿಲ್ ಸಿಬಲ್ ಅವರಿಗೆ ಪ್ರತಿ ಹಾಜರಿಗೆ ₹15.50 ಲಕ್ಷ ಹಾಗೂ ಬಿ.ಎನ್.ಜಗದೀಶ್ ಅವರಿಗೆ ₹23.37 ಲಕ್ಷ ಪಾವತಿಸಲಾಗಿದೆ ಎಂದು ಹೇಳಿದ್ದಾರೆ.

ವಿಶೇಷ ತನಿಖಾ ತಂಡಕ್ಕೆ(ಎಸ್ಐಟಿ) ಮಾಡಿದ ವೆಚ್ಚ(₹ಗಳಲ್ಲಿ)	
ಬಿಟ್ ಕಾಯಿನ್ ಪ್ರಕರಣ	39,98.068
ಪ್ರಜ್ವಲ್ ರೇವಣ್ಣ ಪ್ರಕರಣ	33,91,855
ಮುನಿರತ್ನ ಪ್ರಕರಣ	23,52,864
ವಾಲ್ಮೀಕಿ ನಿಗಮದ ಹಗರಣ	1,55,818

ಇದೇ ಪ್ರಕರಣದಲ್ಲಿ ಮ್ಯಾಜಿಸ್ಟ್ರೇಟ್ ಮತ್ತು ಜಿಲ್ಲಾ ನ್ಯಾಯಾಲಯದಲ್ಲಿ ವಾದಿಸಲು ಬಿ.ಎನ್. ಜಗದೀಶ್ ಮತ್ತು ಅಶೋಕ್ ನಾಯಕ್ ಅವರಿಗೆ ₹12.70 ಲಕ್ಷ ಪಾವತಿಸಲಾಗಿದೆ.

ಬಿಟ್‌ಕಾಯಿನ್ ಪ್ರಕರಣದಲ್ಲಿ ಹೈಕೋರ್ಟ್‌ನಲ್ಲಿ ವಾದಿಸಲು ವಿಶೇಷ ಅಭಿಯೋಜಕ ಪಿ. ಪ್ರಸನ್ನ ಕುಮಾರ್ ಅವರಿಗೆ ₹15.70 ಲಕ್ಷ, ಬಿ.ಎನ್.ಜಗದೀಶ್ ಅವರಿಗೆ ₹91 ಸಾವಿರ ಪಾವತಿಸಲಾಗಿದೆ. ವಾಲ್ಮೀಕಿ ಹಗರಣದಲ್ಲಿ ಬಿ.ಎನ್.ಜಗದೀಶ್ ಅವರಿಗೆ ₹7.28 ಲಕ್ಷ, ಮುನಿರತ್ನ ಪ್ರಕರಣದಲ್ಲಿ ಸಿ.ಎಸ್.ಪ್ರದೀಪ್ ಅವರಿಗೆ ₹21.08 ಲಕ್ಷ ಪಾವತಿಸಲಾಗಿದೆ.

ಧರ್ಮಸ್ಥಳ ಪ್ರಕರಣ ಮತ್ತು ಆಳಂದ ಮತ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಹಿತಿ ನೀಡಿಲ್ಲ.

ನಕಲಿ ಔಷಧಿ: ಜಾಮೀನು ರಹಿತ ವಾರಂಟ್

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ನಕಲಿ ಔಷಧಿ ತಯಾರಿಸುವವರು, ಕಲಬೆರಕೆ ಮಾಡುವವರ ವಿರುದ್ಧ ಜಾಮೀನು ರಹಿತ ವಾರಂಟ್ ಹೊರಡಿಸುವ ಮತ್ತು ಶಿಕ್ಷಾರ್ಹ ಅಪರಾಧವಾಗಿ ಪರಿಗಣಿಸುವ ಉದ್ದೇಶದ 'ಔಷಧ ಮತ್ತು ಪ್ರಸಾಧನ ಸಾಮಗ್ರಿ ಮಸೂದೆ'ಗೆ ವಿಧಾನಸಭೆ ಅಂಗೀಕಾರ ನೀಡಿತು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಮಸೂದೆಯನ್ನು ಪರ್ಯಾಲೋಚನೆಗೆ ಮಂಡಿಸಿದರು. 'ಆದರೆ, ಈ ಮಸೂದೆಯಲ್ಲಿ ಜೀವಾವಧಿ ಶಿಕ್ಷೆಯ ಅಂಶವನ್ನು ಕೈಬಿಡಲಾಗಿದೆ' ಎಂದು ಹೇಳಿದರು.

ವಿಷಕಾರಿ, ನಕಲಿ, ಕಳಪೆ ಔಷಧ ತಯಾರಿಸುವುದು ಮತ್ತು ಮಾರುವುದು ನಿಷಿದ್ಧ. ಈ ಹಿಂದೆ ನಕಲಿ ಔಷಧಿ ಜಪ್ತಿ ಮಾಡಿ ಪ್ರಕರಣ ದಾಖಲಾದ ಸಂದರ್ಭದಲ್ಲಿ ಮಾರಾಟಗಾರರು ಔಷಧ ಎಲ್ಲಿಂದ ತರಿಸಿದ್ದರು ಎಂಬುದನ್ನು ಆರೋಗ್ಯ ಇಲಾಖೆಯೇ ನ್ಯಾಯಾಲಯದಲ್ಲಿ ನಿರೂಪಿಸಬೇಕಿತ್ತು. ಆದರೆ, ಇನ್ನು ಮುಂದೆ ಮಾರಾಟ ಮಾಡುವವರೇ ಎಲ್ಲಿಂದ ತಂದಿದ್ದು ಎಂಬುದನ್ನು ನಿರೂಪಿಸಬೇಕಾಗುತ್ತದೆ ಎಂದು ಅವರು ಹೇಳಿದರು.

1940ರ ಔಷಧ ಮತ್ತು ಪ್ರಸಾಧನ ಸಾಮಗ್ರಿ ಕೇಂದ್ರ ಅಧಿನಿಯಮ ಕರ್ನಾಟಕಕ್ಕೆ ಅನ್ವಯವಾಗುವಂತೆ, ಕೇಂದ್ರ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ರಾಜ್ಯದಲ್ಲಿ ಕೇಂದ್ರ ಔಷಧ ಪ್ರಯೋಗಾಲಯ ಸ್ಥಾಪಿಸಲು ಉದ್ದೇಶಿಸಲಾಗಿದೆ ಎಂದು ತಿಳಿಸಿದರು.

ಅಂಗೀಕಾರಗೊಂಡ ಮಸೂದೆಗಳು: ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ ಮಸೂದೆ, ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ಮಸೂದೆ, ಬಾಂಬೆ ಸಾರ್ವಜನಿಕ ನ್ಯಾಸ (ಟ್ರಸ್ಟ್) ತಿದ್ದುಪಡಿ ಮಸೂದೆ, ನಾಡುಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ ಮಸೂದೆಗೆ ಅಂಗೀಕಾರ ನೀಡಲಾಯಿತು.

ಹಕ್ಕುಚ್ಯುತಿ: ಕೃಷ್ಣಮೂರ್ತಿ ಅಮಾನತು

ಸುವರ್ಣ ವಿಧಾನಸೌಧ (ಬೆಳಗಾವಿ): ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಕೊಡಗು ಜಿಲ್ಲಾ ಅಧಿಕಾರಿ ಕೆ.ಆರ್.ಕೃಷ್ಣಮೂರ್ತಿ ಅವರನ್ನು ಸರ್ಕಾರ ಅಮಾನತು ಮಾಡಿದೆ.

ವಸತಿನಿಲಯಗಳ ಅವ್ಯವಸ್ಥೆ ಬಗ್ಗೆ ಆರೋಪ ಮಾಡಿದ್ದ ವಿಧಾನ ಪರಿಷತ್ತಿನ ಸದಸ್ಯ ಎಂ.ಪಿ.ಕುಶಾಲಪ್ಪ ಅವರಿಗೆ ಸವಾಲು ಹಾಕಿದ್ದ ಕೃಷ್ಣಮೂರ್ತಿ, 'ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯ ವಸತಿನಿಲಯಗಳಿಗೆ ಭೇಟಿ ನೀಡಿ, ವರದಿ ನೀಡಲಿ' ಎಂದು ಮಾಧ್ಯಮಗಳಿಗೆ ಹೇಳಿಕೆ ನೀಡಿದ್ದರು.

'ಅಧಿಕಾರಿಯ ಹೇಳಿಕೆ ಸದನಕ್ಕೆ ಮಾಡಿರುವ ಅವಮಾನ' ಎಂದು ಕುಶಾಲಪ್ಪ ಪರಿಷತ್‌ನಲ್ಲಿ ಪ್ರಸ್ತಾಪ ಮಾಡಿದ್ದರು. ಈ ವಿಚಾರವನ್ನು ಸಭಾಪತಿ ಬಸವರಾಜ ಹೊರಟ್ಟಿ ಅವರು ಸದನದ ಹಕ್ಕು ಬಾಧ್ಯತಾ ಸಮಿತಿಗೆ ವಹಿಸಿದ್ದರು.

ಎ.ಐ ತಂತ್ರಜ್ಞಾನ ಅಳವಡಿಕೆಗೆ ಚಿಂತನೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನದ ಮೊರೆ ಹೋಗಲು ಕಾರಾಗೃಹ ಹಾಗೂ ಸುಧಾರಣಾ ಸೇವೆಗಳ ಇಲಾಖೆಯ ಚಿಂತನೆ ನಡೆಸಿದೆ.

'ಜೈಲಿಗೆ ಹೊರಭಾಗದಿಂದ ನಿಷೇಧಿತ ವಸ್ತುಗಳು ಬರುತ್ತಿವೆ. ಕೆಲವೆಡೆ ತಡೆಗೋಡೆಯಿಂದ ಒಳಗೆ ವಸ್ತುಗಳನ್ನು ಎಸೆಯಲಾಗುತ್ತಿದೆ. ಜೈಲಿನ ಆವರಣದಲ್ಲಿ ಕೈದಿಗಳು ಬೇರೆ ಬ್ಯಾರಕ್‌ಗಳಿಗೆ ಹೋಗುತ್ತಿರುವುದು, ಜೈಲು ಸಿಬ್ಬಂದಿ ಕೆಲವು ಕೈದಿಗಳ ಜತೆಗೆ ಸಂಪರ್ಕ ಹೊಂದಿರುವುದನ್ನು ಪತ್ತೆ ಹಚ್ಚಲು ತಂತ್ರಜ್ಞಾನ ಅಳವಡಿಸಲು ಚಿಂತನೆ ನಡೆಸಲಾಗುತ್ತಿದೆ' ಎಂದು ಮೂಲಗಳು ಹೇಳಿವೆ.

'ಅಕ್ರಮ ತಡೆಗಟ್ಟಲು ತಂತ್ರಜ್ಞಾನ ಅಳವಡಿಸುವ ಸಂಬಂಧ ಅಧಿಕಾರಿಗಳ ಜತೆಗೆ ಸಭೆ ನಡೆಸಿದ್ದೇನೆ. ಪ್ರಾಯೋಗಿಕವಾಗಿ ತಂತ್ರಜ್ಞಾನ ಅಳವಡಿಕೆ ಮಾಡಲಾಗುವುದು. ಅದರ ಸಾಧಕ-ಬಾಧಕಗಳ ನೋಡಿಕೊಂಡು ಮುಂದಿನ ತೀರ್ಮಾನ ಮಾಡಲಾಗುವುದು' ಎಂದು ಡಿಜಿಪಿ ಅಲೋಕ್ ಕುಮಾರ್ ಹೇಳಿದ್ದಾರೆ.

ಪ್ರಜಾವಾಣಿ ಪತ್ರಿಕೆ ಚಂದಾದಾರರಾಗಲು/ದೂರುಗಳಿಗೆ

(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)

ಸಂಪರ್ಕಿಸಿ 90083 66666

support@deccanherald.co.in

ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ https://bit.ly/40dPCqy

‘ಜಕ್ಕೂರು: ಹಸಿರು ನೆಲೆಯಾಗಿಯೇ ಇರಲಿ’

ತರಬೇತಿ ಶಾಲೆ, ಸ್ವಚ್ಛ ಗಾಳಿ ನೀಡುವ ಪ್ರದೇಶವಾಗಿ ಸಂರಕ್ಷಿಸಲು ಆಗ್ರಹ

• ಆರ್.ಮಂಜುನಾಥ್

ಬೆಂಗಳೂರು: ಮೈಸೂರು ಮಹಾರಾಜರು ವಿಧಿಸಿದ್ದ ಷರತ್ತನ್ನು ಪಾಲಿಸುವ ಮೂಲಕ ಜಕ್ಕೂರಿನಲ್ಲಿರುವ ವೈಮಾನಿಕ ತರಬೇತಿ ಶಾಲೆ ಹಾಗೂ ಜಕ್ಕೂರು ವಾಯುನೆಲೆಯನ್ನು ಉಳಿಸಿಕೊಳ್ಳಬೇಕು. ಅಲ್ಲದೆ ನಗರಕ್ಕೆ ಅತ್ಯಗತ್ಯವಾಗಿರುವ ‘ಹಸಿರು ನೆಲೆಯನ್ನಾಗಿ’ ಸಂರಕ್ಷಿಸಲು ಸರ್ಕಾರ ಮುಂದಾಗಬೇಕು ಎಂಬುದು ತಜ್ಞರು, ಪರಿಸರ ಕಾರ್ಯಕರ್ತರ ಒತ್ತಾಸೆಯಾಗಿದೆ.

ಬೃಹತ್ ಕಟ್ಟಡಗಳ ಕಾಂಕ್ರೀಟ್ ಕಾಡಾಗುತ್ತಿರುವ ಬೆಂಗಳೂರು ನಗರದ ಉತ್ತರ ಭಾಗದಲ್ಲಿ ಇರುವ ಜಕ್ಕೂರು ವಾಯುನೆಲೆ, ಹೆಲಿಕಾಪ್ಟರ್ ಹಾಗೂ ಸಣ್ಣ ವಿಮಾನಗಳ ಹಾರಾಟದ ತಾಣವಾಗಿರದೆ, ನಗರದ ಶ್ವಾಸಕೋಶದಂತೆ ಇದೆ. 75 ವರ್ಷಗಳ ಇತಿಹಾಸ ಇರುವ 218 ಎಕರೆಯ ಈ ಜಾಗದ ಬಗ್ಗೆ ಸರ್ಕಾರ ವಾಣಿಜ್ಯ ಉದ್ದೇಶದಿಂದ ಆಲೋಚಿಸದೆ, ಪರಿಸರ ಕಾಳಜಿಯಿಂದ ನೋಡಬೇಕು. ಇದು ನಗರಕ್ಕೆ ಅತ್ಯಮೂಲ್ಯ ಹಸಿರು–ಪಾರಂಪರಿಕ ತಾಣವಾಗಲಿದೆ ಎಂಬುದು ಪರಿಸರ ಕಾರ್ಯಕರ್ತರ ಅಭಿಪ್ರಾಯ.

1948ರಲ್ಲಿ ಮೈಸೂರು ಮಹಾರಾಜರ ಕಾಲದಲ್ಲಿ ಆರಂಭವಾದ ವಾಯುನೆಲೆ, ನಾಗರಿಕ ವಿಮಾನಯಾನ ಇತಿಹಾಸದ ಆರಂಭಕ್ಕೆ ಸಾಕ್ಷಿಯಾಗಿದೆ. ಐತಿಹಾಸಿಕ ಮಹತ್ವವುಳ್ಳ ಜಾಗವನ್ನು ರಕ್ಷಿಸುವುದು ಸಾಂಸ್ಕೃತಿಕ ಜವಾಬ್ದಾರಿಯಾಗಿದೆ. ಜಕ್ಕೂರು ಕೆರೆಯೂ ಸಮೀಪದಲ್ಲೇ ಇರುವುದರಿಂದ ಈ ಪ್ರದೇಶದಲ್ಲಿ ನೂರಾರು ಜಾತಿಯ ಹಕ್ಕಿಗಳಿಗೆ, ಸಣ್ಣಪುಟ್ಟ ಪ್ರಾಣಿಗಳಿಗೆ ಮತ್ತು ವೈವಿಧ್ಯಮಯ ಸಸ್ಯರಾಶಿಗೆ ಆಸರೆಯಾಗಿದೆ. ನಗರದ ತಾಪಮಾನ ಏರುತ್ತಿರುವ ಈ ದಿನಗಳಲ್ಲಿ, ಇಂತಹ ವಿಶಾಲವಾದ ಮುಕ್ತ ಪ್ರದೇಶಗಳು ಹವಾನಿಯಂತ್ರಕಗಳಂತೆ ಕೆಲಸ ಮಾಡುತ್ತವೆ. ಇದನ್ನು ಅಭಿವೃದ್ಧಿಯ ಹೆಸರಿನಲ್ಲಿ ಕಟ್ಟಡಗಳನ್ನಾಗಿ ಪರಿವರ್ತಿಸಿದರೆ, ಅಂತರ್ಜಲ ಮರುಪೂರಣಕ್ಕೆ ದೊಡ್ಡ ಹೊಡೆತ ಬೀಳುತ್ತದೆ ಮತ್ತು ನಗರದ ಪರಿಸರ ಸಮತೋಲನ ಏರುಪೇರಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಜಕ್ಕೂರು ವಾಯು ನೆಲೆಯನ್ನು ‘ಲಿವಿಂಗ್ ಮ್ಯೂಸಿಯಂ’ ಅಥವಾ ‘ಹೆರಿಟೇಜ್ ಗಾರ್ಡನ್’ ಮಾದರಿಯಲ್ಲಿ ಅಭಿವೃದ್ಧಿಪಡಿಸಿದರೆ, ವಿಮಾನಯಾನದ ಇತಿಹಾಸವನ್ನು ಸಾರುವ ವಸ್ತುಸಂಗ್ರಹಾಲಯ, ಸಾರ್ವಜನಿಕರಿಗೆ ವಿಶಾಲವಾದ ಉದ್ಯಾನ ಮತ್ತು ಪರಿಸರ ಸ್ನೇಹಿ ನಡಿಗೆ ಪಥಗಳನ್ನು ನಿರ್ಮಿಸಬಹುದಾಗಿದೆ ಎಂದಿದ್ದಾರೆ.

‘ಅಭಿವೃದ್ಧಿ ಎಂದರೆ ಕೇವಲ ಎತ್ತರದ ಕಟ್ಟಡಗಳಲ್ಲ, ಬದಲಿಗೆ ನಮ್ಮ ಇತಿಹಾಸ ಮತ್ತು ಹಸಿರನ್ನು ಉಳಿಸಿಕೊಳ್ಳುವುದೂ ಆಗಿದೆ. ಜಕ್ಕೂರು ವಾಯುನೆಲೆಯನ್ನು ಕಾಂಕ್ರೀಟ್ ಆಕ್ರಮಣದಿಂದ ರಕ್ಷಿಸಿ, ಅದನ್ನು ಮುಂದಿನ ಪೀಳಿಗೆಗಾಗಿ ಹಸಿರು ಮತ್ತು ಪಾರಂಪರಿಕ ತಾಣವನ್ನಾಗಿ ಉಳಿಸಿಕೊಳ್ಳಬೇಕು. ಪರಿಸರವನ್ನು ರಕ್ಷಿಸಿಕೊಳ್ಳಬೇಕೆಂಬ ದೃಷ್ಟಿಯಲ್ಲಿ ಸರ್ಕಾರ ಆಲೋಚಿಸಬೇಕು. ಬೃಹತ್ ಕಟ್ಟಡಗಳನ್ನು ನಿರ್ಮಿಸಲು, ಕ್ರೀಡಾ ಸಂಕೀರ್ಣಗಳಿಗೆ ಬೇರೆಡೆ ಅವಕಾಶ ಮಾಡಿಕೊಡಬಹುದು. ಆದರೆ, ಇಂತಹ ಐತಿಹಾಸಿಕ ಸ್ಥಳವನ್ನು ಕಟ್ಟಡಗಳಿಗಾಗಿ ಬಲಿ ಕೊಡಬಾರದು’ ಎಂದು ಪರಿಸರಕ್ಕಾಗಿ ನಾವು ಸಂಘಟನೆಯ ಅಧ್ಯಕ್ಷ ಎ.ಟಿ.ರಾಮಸ್ವಾಮಿ ಹೇಳಿದರು.

ಖಾಸಗಿ ವಿಮಾನ ಸಂಸ್ಥೆಗಳು ಇಲ್ಲಿ ಕಾರ್ಯಾಚರಣೆ ನಡೆಸುತ್ತಿರುವುದರಿಂದ ಲಘು ವಿಮಾನಗಳ ಹಾರಾಟ ಇಲ್ಲಿದೆ. ಹೆಲಿಕಾಪ್ಟರ್‌ಗಳ ಹಾರಾಟಕ್ಕೂ ಇದೇ ಪ್ರಮುಖ ತಾಣ. ಹೀಗಾಗಿ, ಲಘು ವಿಮಾನ, ಹೆಲಿಕಾಪ್ಟರ್‌ಗಳ ಹಾರಾಟಕ್ಕೆ ಮತ್ತಷ್ಟು ಪ್ರೋತ್ಸಾಹ ನೀಡಬೇಕು. ಏರ್ ಆಂಬುಲೆನ್ಸ್ ತಾಣವನ್ನಾಗಿಯೂ ಇದನ್ನು ಅಭಿವೃದ್ಧಿಗೊಳಿಸಬಹುದು ಎಂಬ ಸಲಹೆಗಳನ್ನೂ ತಜ್ಞರು ನೀಡಿದ್ದಾರೆ.

ಜಕ್ಕೂರು ವಾಯುನೆಲೆ

ಗಿರವಿ ಇಡಬೇಡಿ: ಕ್ಯಾಪ್ಟನ್ ಗೋಪಿನಾಥ್

‘ಜಕ್ಕೂರು ವಾಯುನೆಲೆ ಪಾರಂಪರಿಕವಾದ ತಾಣ. ಮಹಾರಾಜರು ದೂರದೃಷ್ಟಿಯಿಂದ ಈ ಜಾಗವನ್ನು ಕೊಟ್ಟಿದ್ದಾರೆ. ಅಭಿವೃದ್ಧಿಯ ಹೆಸರಿನಲ್ಲಿ ಇದನ್ನು ರಿಯಲ್ ಎಸ್ಟೇಟ್‌ನವರಿಗೆ ಗಿರವಿ ಇಡಬಾರದು’ ಎಂದು ಕ್ಯಾಪ್ಟನ್ ಗೋಪಿನಾಥ್ ಅಭಿಪ್ರಾಯಪಟ್ಟರು.

‘ವೈಮಾನಿಕ ತರಬೇತಿ ಶಾಲೆಯನ್ನು ಸ್ಥಳಾಂತರ ಮಾಡುವ ಸಂಬಂಧ ಚರ್ಚಿಸಲು ಕರೆದಿದ್ದ ಸಭೆಯಲ್ಲಿ, ನನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳಿದ್ದೇನೆ. ಯಾವುದೇ ಕಾರಣಕ್ಕೂ ಇದನ್ನು ಸ್ಥಳಾಂತರ ಮಾಡಬಾರದು. ತರಬೇತಿ ಶಾಲೆಯನ್ನು ಇಲ್ಲಿಯೇ ಉಳಿಸಿಕೊಳ್ಳಬೇಕು’ ಎಂದು ಅವರು ಒತ್ತಾಯಿಸಿದರು.

‘ರನ್‌ವೇ ಅನ್ನು ವಿಸ್ತರಿಸಿ, ಇದನ್ನು ಅಭಿವೃದ್ಧಿಪಡಿಸಿದರೆ ಇಲ್ಲಿಂದಲೇ ಸಣ್ಣ ವಿಮಾನಗಳ ಸಂಚಾರಕ್ಕೆ ಅನುಕೂಲವಾಗಲಿದೆ. ಸರ್ಕಾರ ರಿಯಲ್ ಎಸ್ಟೇಟ್ ಲಾಬಿಗೆ ಮಣಿಯದೆ, ಈ ಜಾಗವನ್ನು ಉಳಿಸಿಕೊಳ್ಳಬೇಕು’ ಎಂಬುದು ಅವರ ಆಗ್ರಹ.

ರನ್‌ವೇ ವಿಸ್ತರಣೆ ಭರವಸೆ ನೀಡಿದ್ದ ಸಿದ್ದರಾಮಯ್ಯ

ಜಕ್ಕೂರು ವಾಯುನೆಲೆಯ ರನ್‌ವೇ ವಿಸ್ತರಿಸಲು ಮತ್ತು ಜಾಗವನ್ನು ಸಂಪೂರ್ಣವಾಗಿ ಸಾರ್ವಜನಿಕ ಉಪಯೋಗಕ್ಕೆ ಬಳಸಿಕೊಳ್ಳಲು ಇರುವ ಅವಕಾಶಗಳ ಬಗ್ಗೆ ಚಿಂತನೆ ನಡೆಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೆಪ್ಟೆಂಬರ್‌ನಲ್ಲಿ ತಿಳಿಸಿದ್ದರು.

ವೈಮಾನಿಕ ತರಬೇತಿ ಶಾಲೆ ಮತ್ತು ವಾಯುನೆಲೆ ಅಭಿವೃದ್ಧಿ ಸಂಬಂಧ ಮುಖ್ಯ ಕಾರ್ಯದರ್ಶಿ ಹಾಗೂ ಅಧಿಕಾರಿಗಳೊಂದಿಗೆ ಸಭೆ ನಡೆಸಿದ್ದರು. ವೈಮಾನಿಕ ತರಬೇತಿ ಶಾಲೆ ನಡೆಸುವಂತೆ ಕೋರ್ಟ್ ಆದೇಶ ಇದೆ. ಇದರ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳಲಾಗುತ್ತದೆ ಎಂದೂ ಸಿದ್ದರಾಮಯ್ಯ ಹೇಳಿದ್ದರು. ಆದರೆ, ನಂತರದ ಬೆಳವಣಿಗೆಗಳಲ್ಲಿ ತರಬೇತಿ ಶಾಲೆಯನ್ನು ಸ್ಥಳಾಂತರಿಸಿ, ವಾಯುನೆಲೆಯನ್ನೇ ಮುಚ್ಚಲು ಅಧಿಕಾರಿಗಳು ಪ್ರಸ್ತಾವ ಸಲ್ಲಿಸಿದ್ದಾರೆ.

ಅಪಾರ್ಟ್‌ಮೆಂಟ್ ಅಸೋಸಿಯೇಷನ್ ವಿರುದ್ಧ ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪಾರ್ಟ್‌ಮೆಂಟ್ ಆವರಣ, ಫ್ಲ್ಯಾಟ್‌ಗಳಲ್ಲಿ ನಡೆಯುತ್ತಿದ್ದ ಕಾನೂನು ಬಾಹಿರ ಚಟುವಟಿಕೆಗಳ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡದೇ ಮುಚ್ಚಿಟ್ಟಿದ್ದ ಪ್ರಾವಿಡೆಂಟ್ ಸನ್ ವರ್ತ್ ಅಪಾರ್ಟ್‌ಮೆಂಟ್ ಅಸೋಸಿಯೇಷನ್ ಹಾಗೂ ಅಪಾರ್ಟ್‌ಮೆಂಟ್‌ಗೆ ಸೆಕ್ಯೂರಿಟಿ ಕಲ್ಪಿಸಿರುವ ‘ಟೈಕೊ ಸೆಕ್ಯೂರಿಟಿಯ ಏಜೆನ್ಸಿ’ ವಿರುದ್ಧ ಕುಂಬಳಗೋಡು ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ, ಸುಲಿಗೆ, ದರೋಡೆ, ಡ್ರಗ್ಸ್ ದಂಧೆಯಲ್ಲಿ ತೊಡಗಿದ್ದ ಹೊರ ರಾಜ್ಯದವರಿಗೆ ಸೆಕ್ಯೂರಿಟಿ ಏಜೆನ್ಸಿ ಹಾಗೂ ಅಪಾರ್ಟ್‌ಮೆಂಟ್ ಅಸೋಸಿಯೇಷನ್ ನೆರವು ನೀಡುತ್ತಿರುವುದು ತನಿಖೆಯಿಂದ ಪತ್ತೆಯಾಗಿದೆ ಎಂದು ಪೊಲೀಸರು ಹೇಳಿದರು.

ಆರೋಪಿಗಳ ವಿರುದ್ಧ ಭಾರತೀಯ ನ್ಯಾಯ ಸಂಹಿತೆ(ಬಿಎನ್‌ಎಸ್) 211, 238, 239, 3(5), 3(6) ಹಾಗೂ ಎನ್‌ಡಿಪಿಎಸ್ ಕಾಯ್ದೆ ಸೆಕ್ಷನ್ 25ರ ಅಡಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಬಿಹಾರ, ಒಡಿಶಾ, ಅಸ್ಸಾಂ ಛತ್ತೀಸಗಢ, ಸೇರಿ ಹೊರ ರಾಜ್ಯಗಳಿಂದ ಕೆಲಸ ಅರಸಿ ನಗರಕ್ಕೆ ಬಂದಿರುವ ಮಂದಿ ಈ ಅಪಾರ್ಟ್‌ಮೆಂಟ್‌ನಲ್ಲಿ ಆಶ್ರಯ ಪಡೆದು ಕೊಂಡಿದ್ದಾರೆ. ಅವರಲ್ಲಿ ಕೆಲವರು ಅಕ್ರಮ ಚಟುವಟಿಕೆಯಲ್ಲಿ ಭಾಗಿಯಾಗಿದ್ದಾರೆಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಅಪರಾಧ ಕೃತ್ಯದಲ್ಲಿ ಭಾಗಿ ಆದವರಿಗೆ ಕಾನೂನು ಬಾಹಿರವಾಗಿ ದಂಡ ವಿಧಿಸುವಂತಹ ಬೈಲಾ ರಚಿಸಿಕೊಂಡು ಕೃತ್ಯದಲ್ಲಿ ಭಾಗಿಯಾದವರನ್ನು ಕಾನೂನು ಬಾಹಿರವಾಗಿ ವಿಚಾರಣೆ ನಡೆಸಲಾಗುತ್ತಿತ್ತು. ಅಲ್ಲದೇ ದಂಡವನ್ನು ಸಂಗ್ರಹಿಸಿ ಆರೋಪಿಗಳನ್ನು ಬಿಡುತ್ತಿದ್ದರು. ಇದರಿಂದ ನೊಂದವರಿಗೆ ನ್ಯಾಯ ಕಲ್ಪಿಸಲು ಸಾಧ್ಯವಾಗುತ್ತಿರಲಿಲ್ಲ’ ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ನಗರದಲ್ಲಿ ಇತ್ತೀಚೆಗೆ ಹೊರ ರಾಜ್ಯದವರಿಂದ ಅತಿ ಹೆಚ್ಚು ಅಕ್ರಮ ಚಟುವಟಿಕೆಗಳು ನಡೆಯುತ್ತಿವೆ. ನಕಲಿ ದಾಖಲೆ ನೀಡಿ ಡೆಲಿವರಿ ಬಾಯ್‌ಗಳಾಗಿ ಕೆಲಸಕ್ಕೆ ಸೇರಿಕೊಂಡು ಗ್ರಾಹಕರಿಗೆ ತಲುಪಿಸಬೇಕಾದ ಬೆಲೆಬಾಳುವ ಮೊಬೈಲ್, ಲ್ಯಾಪ್‌ಟಾಪ್ ಸಮೇತ ಪರಾರಿ ಆಗುತ್ತಿದ್ದಾರೆ. ಲೈಂಗಿಕ ದೌರ್ಜನಗಳಂತಹ ಪ್ರಕರಣಗಳಲ್ಲಿ ಹೊರ ರಾಜ್ಯದವರು ಭಾಗಿ ಆಗುತ್ತಿರುವುದು ತನಿಖೆಯಿಂದ ಪತ್ತೆಯಾಗಿದೆ. ಈ ರೀತಿ ಬೈಲಾ ಮಾಡಿಕೊಂಡು ಅಪರಾಧ ಚಟುವಟಿಕೆ ಮುಚ್ಚಿಟ್ಟವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

₹ 2 ಲಕ್ಷ ಸುಲಿಗೆ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುಟ್ಕಾ ಮಾರಾಟಗಾರರು ತೆರಳುತ್ತಿದ್ದ ಕಾರು ಅಡ್ಡಗಟ್ಟಿ ಹಲ್ಲೆ ನಡೆಸಿ, ಹಣ ಸುಲಿಗೆ ಮಾಡಿದ್ದ ಆರೋಪಿಗಳ ಪೈಕಿ ಮಾಗಡಿ ಮಂಜ ಎಂಬಾತನನ್ನು ಬ್ಯಾಡರಹಳ್ಳಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಮುಖೇಶ್ ಭಾಯ್ ಬಿ ರಬಾರಿ ಅವರು ನೀಡಿದ ದೂರಿನ ಮೇರೆಗೆ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

‘ಮುಖೇಶ್ ಭಾಯ್ ಬಿ. ರಬಾರಿ ಹಾಗೂ ಜಮಾಭಾಯ್ ಅವರು ₹3.65 ಲಕ್ಷ ಮೌಲ್ಯದ ವಿವಿಧ ಮಾದರಿಯ ಗುಟ್ಕಾ ಪದಾರ್ಥಗಳನ್ನು ಕಾರಿನಲ್ಲಿ ತುಂಬಿಕೊಂಡು ಬಿಇಎಲ್ ಲೇಔಟ್‌ನಲ್ಲಿ ತೆರಳುತ್ತಿದ್ದರು. ಪಾವನಿ ಚಾಟ್ಸ್ ಬಳಿ ಕಾರು ಅಡ್ಡಗಟ್ಟಿದ ಮಾಗಡಿ ಮಂಜ ಮತ್ತು ಸಹಚರರು, ಕಾರಿನ ಗಾಜು ಒಡೆದು ಹಾಕಿದ್ದರು. ನಂತರ ಮೊಬೈಲ್ ಕಸಿದುಕೊಂಡು ₹ 10 ಲಕ್ಷ ನೀಡುವಂತೆ ಬೆದರಿಕೆ ಹಾಕಿದ್ದರು. ಬಳಿಕ ಮುಖೇಶ್ ಭಾಯ್ ಬಿ ರಬಾರಿ ಹಾಗೂ ಜಮಾಭಾಯ್ ಅವರ ಬಳಿಯಿದ್ದ ₹2 ಲಕ್ಷ ಕಸಿದುಕೊಂಡು ಪರಾರಿ ಆಗಿದ್ದರು’ ಎಂದು ಪೊಲೀಸರು ಹೇಳಿದರು.

ಚಿಟಿಕೆ ಸುದ್ದಿ

ಶಿಕ್ಷಾ ಅಧಿಷ್ಠಾನ್ ಮಸೂದೆಗೆ ವಿರೋಧ

ಬೆಂಗಳೂರು: ಕೇಂದ್ರ ಸರ್ಕಾರವು ಸಂಸತ್ತಿನಲ್ಲಿ ಮಂಡಿಸಿರುವ ವಿಕಸಿತ್ ಶಿಕ್ಷಾ ಅಧಿಷ್ಠಾನ್ ಮಸೂದೆಯನ್ನು ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್) ವಿರೋಧಿಸಿದೆ.

ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಒಂದೇ ನಿಯಂತ್ರಣ ಸಂಸ್ಥೆ ಸ್ಥಾಪಿಸುವ ಉದ್ದೇಶದಿಂದ ಈ ಮಸೂದೆ ಮಂಡಿಸಲಾಗಿದೆ. ದೇಶದಲ್ಲಿ ಅಸ್ತಿತ್ವದಲ್ಲಿರುವ ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗ (ಯುಜಿಸಿ), ಅಖಿಲ ಭಾರ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ) ಮತ್ತು ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿ (ಎನ್‌ಸಿಟಿಇ) ವಿಲೀನಗೊಳಿಸುವ ಹುನ್ನಾರ ಇದೆ. ಇದರಿಂದ ಸ್ವಾಯತ್ತ ಶಿಕ್ಷಣ ವ್ಯವಸ್ಥೆ ಸಂಪೂರ್ಣವಾಗಿ ನಿರ್ನಾಮವಾಗಲಿದೆ’ ಎಂದು ಎಸ್‌ಯುಸಿಐ–ಸಿ ರಾಜ್ಯ ಕಾರ್ಯದರ್ಶಿ ಕೆ. ಉಮಾ ತಿಳಿಸಿದ್ದಾರೆ.

ಸಸ್ಯಾನ್ವೇಷಣ ಕಾರ್ಯಕ್ರಮ

ಬೆಂಗಳೂರು: ಮಾಗಡಿ ರಸ್ತೆ, ತಿಪ್ಪಗೊಂಡನಹಳ್ಳಿ ಜಲಾಶಯದ ಬಳಿಯ ಸಿಂಗದಾಸನಹಳ್ಳಿ ಗ್ರಾಮದ ನೇಚರ್ ಇನ್‌ಸ್ಪೈರ್ಸ್–ಚಿಗುರು ಇಕೋಸ್ಪೇಸ್ ತೋಟದಲ್ಲಿ ಭಾನುವಾರ (ಡಿ.21) ಸಸ್ಯಾನ್ವೇಷಣ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಪ್ರಕೃತಿದತ್ತವಾಗಿ ಬೆಳೆದರೂ ಕಳೆಗಳೆಂದು ನಿರ್ಲಕ್ಷಿಸಲ್ಪಡುವ ಗಿಡಗಳನ್ನು ಆಹಾರವಾಗಿ ಗುರುತಿಸಿ, ಗುಂಪಿನವರೆಲ್ಲಾ ಸೇರಿ ಸ್ವಾದಿಷ್ಟ ಖಾದ್ಯಗಳನ್ನು ತಯಾರಿಸಿ ಸವಿಯುವುದು, ಅವುಗಳ ಔಷಧೀಯ ಗುಣ ತಿಳಿಸಿಕೊಡುವುದು ಇದರಲ್ಲಿ ಸೇರಿದೆ ಎಂದು ಆಯೋಜಕ ಶ್ರೀವತ್ಸ ಗೋವಿಂದರಾಜು ತಿಳಿಸಿದ್ದಾರೆ.

ಆಸಕ್ತರು 9845707043ಕ್ಕೆ ಕರೆ ಮಾಡಿ ನೋಂದಾಯಿಸಿಕೊಳ್ಳಬಹುದು.

ಅರ್ಜಿ ಆಹ್ವಾನ

ಬೆಂಗಳೂರು: ಉದ್ಯೋಗಿನಿ ಯೋಜನೆಯಡಿ ಆರ್ಥಿಕ ಸೌಲಭ್ಯ ಪಡೆದು ಸ್ವಂತ ಉದ್ಯೋಗ ಪ್ರಾರಂಭಿಸಲು ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ಅರ್ಜಿ ಆಹ್ವಾನಿಸಿದೆ.

ನಿರುದ್ಯೋಗಿ ಮಹಿಳೆಯರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಮಹಿಳೆಯರು, ವಿಧವೆಯರು, ಅಂಗವಿಕಲರು, ಅಲ್ಪಸಂಖ್ಯಾತರು, ಲಿಂಗತ್ವ ಅಲ್ಪಸಂಖ್ಯಾತರು, ಹೆಚ್‌ಐವಿ ಸೋಂಕಿತ ಮತ್ತು ಬಾಧಿತ ಮಹಿಳೆಯರು ಅರ್ಜಿ ಸಲ್ಲಿಸಬಹುದು.

ಆಸಕ್ತರು ಸೇವಾ ಸಿಂಧು ಪೋರ್ಟಲ್‌ನಲ್ಲಿ https// sevasindhu.karnataka. gov.in ಅರ್ಜಿಗಳನ್ನು ಜನವರಿ 15 ರೊಳಗೆ ಬಾಪೂಜಿ ಸೇವಾ ಕೇಂದ್ರ, ಗ್ರಾಮ ಒನ್, ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಕೇಂದ್ರಗಳಲ್ಲಿ ಸಲ್ಲಿಸುವಂತೆ ಕೋರಲಾಗಿದೆ.

ಉಚಿತ ಜ್ಯೋತಿಷ ತರಗತಿ

ಬೆಂಗಳೂರು: ಜ್ಞಾನಜ್ಯೋತಿ ಜ್ಯೋತಿಷ ಕೇಂದ್ರದಿಂದ ಡಿ. 21ರಿಂದ ಉಚಿತ ಜ್ಯೋತಿಷ, ವಾಸ್ತು, ಹಸ್ತ ಮುದ್ರಿಕಾ ತರಗತಿಗಳು ಪ್ರಾರಂಭವಾಗಲಿವೆ.

ತರಗತಿಗಳು ಪ್ರತಿ ಭಾನುವಾರ ಬೆಳಿಗ್ಗೆ 11 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ನಡೆಯಲಿವೆ ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ವಿದ್ಯಾಜ್ಯೋತಿ ಶಾಲೆ, ಮೂರನೇ ಅಡ್ಡರಸ್ತೆ, 30ನೇ ಮುಖ್ಯರಸ್ತೆ, ಬಿಟಿಎಂ ಎರಡನೇ ಹಂತ, ಬೆಂಗಳೂರು–560068. ಮಾಹಿತಿಗೆ: 99455 23296.

ಸಚಿವ ಪ್ರಿಯಾಂಕ್ ಖರ್ಗೆ ಅಸಹಾಯಕತೆ

‘ನೀರಿನ ಘಟಕ ನಿರ್ವಹಣೆ ಸವಾಲು’

ಪ್ರಜಾವಾಣಿ ವಾರ್ತೆ

ಸುವರ್ಣಸೌಧ (ಬೆಳಗಾವಿ): ‘ರಾಜ್ಯದಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳ ನಿರ್ವಹಣೆ ಸರ್ಕಾರಕ್ಕೆ ಸವಾಲಾಗಿದ್ದು, ಪರಿಹಾರ ಕಂಡುಕೊಳ್ಳಲು ಮತ್ತಷ್ಟು ಸಮಯ ಬೇಕು’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ಅಸಹಾಯಕತೆ ವ್ಯಕ್ತಪಡಿಸಿದರು.

ವಿಧಾನಸಭೆಯಲ್ಲಿ ಕಾಂಗ್ರೆಸ್‌ನ ಯು.ಬಿ. ಬಣಕಾರ್ ಅವರು ಹಾವೇರಿ ಜಿಲ್ಲೆಯಲ್ಲಿ ಫ್ಲೋರೈಡ್ ಯುಕ್ತ ನೀರು ಹೆಚ್ಚಾಗಿರುವ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಪ್ರಿಯಾಂಕ್, ‘ರಾಜ್ಯದಲ್ಲಿ ನೀರಿನ ಗುಣಮಟ್ಟ ಪರೀಕ್ಷೆ ಕಾರ್ಯ ಭರದಿಂದ ಸಾಗಿದೆ. ಕಳೆದ ಸರ್ಕಾರದ ಅವಧಿಯಲ್ಲಿ 5.13 ಲಕ್ಷ ನೀರಿನ ಗುಣಮಟ್ಟ ಪರೀಕ್ಷೆ ನಡೆದಿತ್ತು. ಕಳೆದ ಎರಡೂವರೆ ವರ್ಷಗಳಲ್ಲಿ 13.20 ಲಕ್ಷ ಪರೀಕ್ಷೆ ಮಾಡಲಾಗಿದೆ. ಈ ವರ್ಷದಲ್ಲಿ ಮಾತ್ರ 6.50 ಪಕ್ಷ ಪರೀಕ್ಷೆ ನಡೆಸಲಾಗಿದೆ’ ಎಂದರು.

‘ಶುದ್ಧ ಕುಡಿಯುವ ನೀರು ಪೂರೈಸುವ ಉದ್ದೇಶದೊಂದಿಗೆ ರಾಜ್ಯದಲ್ಲಿ ಸಾವಿರಾರು ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅಳವಡಿಸಲಾಗಿದೆ. ಹೀಗೆ ಅಳವಡಿಕೆ ಮಾಡಲಾಗಿರುವ ಘಟಕಗಳ ನಿರ್ವಹಣೆ ದೊಡ್ಡ ಸಮಸ್ಯೆಯಾಗಿದ್ದು, ಅದನ್ನು ಯಾವ ರೀತಿ ಮಾಡಬೇಕು ಎಂಬ ಬಗ್ಗೆ ಚರ್ಚೆ ನಡೆಸುತ್ತಿದೆ’ ಎಂದರು.

‘ರಾಜ್ಯದಲ್ಲಿ ಸಂಸದರ, ಶಾಸಕರ ಹಾಗೂ ಸಿಎಸ್‌ಆರ್ ಅನುದಾನ ಸೇರಿದಂತೆ ಮತ್ತಿತರ ಅನುದಾನಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಲಾಗಿದೆ. ಹೀಗೆ ಸ್ಥಾಪಿಸುವ ಘಟಕಗಳ ನಿರ್ವಹಣೆಯನ್ನು ಯಾರು ಮಾಡಬೇಕು ಎಂಬ ಪ್ರಶ್ನೆ ಉದ್ಭವಿಸುತ್ತಿದೆ. ಆಯಾ ಗ್ರಾಮ ಪಂಚಾಯಿತಿಗಳಿಂದ ನಿರ್ವಹಣೆ ಮಾಡಲು ಅನುದಾನದ ಕೊರತೆಯಿದೆ. ಅಲ್ಲದೆ, ಘಟಕಗಳನ್ನು ಹಸ್ತಾಂತರಿಸದ ಕಾರಣ ಸಮಸ್ಯೆ ಉಂಟಾಗುತ್ತಿದೆ’ ಎಂದರು.

ಆಗ ಕಾಂಗ್ರೆಸ್‌ನ ಕೆ. ಷಡಕ್ಷರಿ, ‘ಆಯಾ ಜಿಲ್ಲಾ ಪಂಚಾಯಿತಿಗಳಿಗೆ ಶುದ್ಧ ಕುಡಿಯುವ ನೀರಿನ ಘಟಕಗಳ ನಿರ್ವಹಣೆ ಹೊಣೆ ನೀಡಬೇಕು’ ಎಂದು ಸಲಹೆ ನೀಡಿದರು.

ತಿಗಳ, ವಹ್ನಿಕುಲ ಕ್ಷತ್ರಿಯ ಉಪಜಾತಿ: ಆಯೋಗಕ್ಕೆ ಮನವಿ ಸಲ್ಲಿಸಿ

‘ರಾಜ್ಯದಲ್ಲಿ ತಿಗಳ, ವಹ್ನಿಕುಲ ಕ್ಷತ್ರಿಯ ಸೇರಿದಂತೆ ಇತರ ಉಪಜಾತಿಗಳಿಗೆ ಪ್ರತ್ಯೇಕ ಕ್ರಮ ಸಂಖ್ಯೆ ನೀಡಿ, ಜಾತಿ ಪಟ್ಟಿಗಳಲ್ಲಿ ಸೇರಿಸುವ ಸಂಬಂಧ ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗಕ್ಕೆ ಮನವಿ ಸಲ್ಲಿಸಿದರೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು’ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ್ ತಂಗಡಗಿ ಹೇಳಿದರು.

ಜೆಡಿಎಸ್‌ನ ಶಾರದಾ ಪೂರ್‍ಯಾನಾಯಕ್ ಅವರ ಪ್ರಶ್ನೆಗೆ ಉತ್ತರಿಸಿದ ತಂಗಡಗಿ, ‘ಈ ಹಿಂದೆ ಜಾತಿ ಆಧಾರಿತ ಜನಗಣತಿ ಸಂಬಂಧ ಕಾಂತರಾಜ ವರದಿ, ಜಯಪ್ರಕಾಶ್ ಹೆಗ್ಡೆ ವರದಿಗಳನ್ನು ಸರ್ಕಾರ ಸ್ವೀಕರಿಸಿದ್ದರೂ ಅನುಷ್ಠಾನ ಸಾಧ್ಯವಾಗಿಲ್ಲ. ಇದೀಗ ರಾಜ್ಯ ಹಿಂದುಳಿದ ವರ್ಗಗಳ ಆಯೋಗಕ್ಕೆ ಮಧುಸೂದನ್ ನಾಯಕ್ ಅವರನ್ನು ಅಧ್ಯಕ್ಷರನ್ನಾಗಿ ಮಾಡಿ, ಸಮೀಕ್ಷೆ ಮಾಡಲಾಗಿದೆ. ಸಮೀಕ್ಷಾ ವರದಿ ಇನ್ನೂ ಸರ್ಕಾರಕ್ಕೆ ಸಲ್ಲಿಕೆ ಆಗಿಲ್ಲ. ಹೀಗಾಗಿ ತಿಗಳ, ವಹ್ನಿಕುಲ ಕ್ಷತ್ರಿಯ ಸೇರಿದಂತೆ ಇತರ ಉಪಜಾತಿಗಳಿಗೆ ಪ್ರತ್ಯೇಕ ಕ್ರಮ ಸಂಖ್ಯೆ ನೀಡುವ ಕುರಿತಂತೆ ಆಯೋಗಕ್ಕೆ ಮನವಿ ಸಲ್ಲಿಸಿದರೆ, ಆಯೋಗವು ಸಾರ್ವಜನಿಕ ವಿಚಾರಣೆ ನಡೆಸಿ ಸರ್ಕಾರಕ್ಕೆ ಶಿಫಾರಸು ಮಾಡಲಿದೆ. ಬಳಿಕ ಸರ್ಕಾರ ಕ್ರಮ ಕೈಗೊಳ್ಳಲಿದೆ’ ಎಂದು ಹೇಳಿದರು.

ರಕ್ತದಲ್ಲಿ ಪತ್ರ, ಪರಪ್ಪನ ಅಗ್ರಹಾರ ಜೈಲಿಗೆ ‘ಪ್ರೀತ್ಸೆ ಪ್ರೀತ್ಸೆ’ ಎಂದು ಕಾಡಿದ ಮಹಿಳೆ

ಪ್ರೀತಿಸುವಂತೆ ಇನ್‌ಸ್ಪೆಕ್ಟರ್‌ಗೆ ದುಂಬಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯಾರೊ ಪ್ರೀತಿಸುವಂತೆ ಒತ್ತಾಯಿಸುತ್ತಿದ್ದಾರೆ. ನನಗೆ ರಕ್ಷಣೆ ಬೇಕು’ ಎಂದು ಸಾಮಾನ್ಯವಾಗಿ ಪೊಲೀಸ್ ಠಾಣೆಗೆ ಬರುತ್ತಾರೆ. ಆದರೆ, ಮಹಿಳೆಯೊಬ್ಬರು ಇನ್‌ಸ್ಪೆಕ್ಟರ್‌ಗೇ ರಕ್ತದಲ್ಲಿಯೇ ಪ್ರೇಮಪತ್ರ ಬರೆದು ಪ್ರೀತಿಸುವಂತೆ ದುಂಬಾಲು ಬಿದ್ದಿದ್ದರು. ಇನ್‌ಸ್ಪೆಕ್ಟರ್‌ಗೆ ಕಾಡಿದ ಮಹಿಳೆ ಕೊನೆಗೂ ಪರಪ್ಪನ ಅಗ್ರಹಾರ ಜೈಲು ಸೇರಿದ್ದಾರೆ.

‘ನಾನು ನಿಮ್ಮನ್ನು ಪ್ರೀತಿಸುತ್ತಿದ್ದೇನೆ. ನೀವೂ ಪ್ರೀತಿಸಬೇಕು’ – ಹೀಗೆ ರಾಮಮೂರ್ತಿನಗರ ಠಾಣೆಯ ಇನ್‌ಸ್ಪೆಕ್ಟರ್ ಜಿ.ಜೆ.ಸತೀಶ್ ಅವರಿಗೆ ಅಯ್ಯಪ್ಪನಗರದ ನಿವಾಸಿ ಸಂಜನಾ ಅಲಿಯಾಸ್ ವನಜಾ ಅವರು ಕಳೆದ ಕೆಲವು ದಿನಗಳಿಂದ ಕಾಟ ನೀಡುತ್ತಿದ್ದರು.

ಮಹಿಳೆಯಿಂದ ತೊಂದರೆಗೆ ಸಿಲುಕಿದ್ದ ಇನ್‌ಸ್ಪೆಕ್ಟರ್ ಸತೀಶ್ ಅವರು, ಕರ್ತವ್ಯ ನಿರ್ವಹಿಸುತ್ತಿರುವ ಠಾಣೆಗೇ ದೂರು ನೀಡಿದ್ದರು. ದೂರಿನ ಬೆನ್ನಲ್ಲೇ ಮಹಿಳೆ ವಾಸವಿದ್ದ ಸ್ಥಳವನ್ನು ಪೊಲೀಸರು ಪತ್ತೆಹಚ್ಚಿ ಬಂಧಿಸಿದ್ದಾರೆ. ಆರೋಪಿಗೆ ನ್ಯಾಯಾಂಗ ಬಂಧನ ವಿಧಿಸಲಾಗಿದ್ದು, ‘ಪ್ರೀತ್ಸೆ ಪ್ರೀತ್ಸೆ’ ಎಂದು ಕರೆ ಮಾಡುತ್ತಿದ್ದ ಮಹಿಳೆ ಕಾರಾಗೃಹ ಸೇರಿದ್ದಾರೆ.

‘ಮೂರು ತಿಂಗಳಿಂದ ರಾಮಮೂರ್ತಿನಗರ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಆಗಿ ಕೆಲಸ ಮಾಡುತ್ತಿದ್ದೇನೆ. ಅಕ್ಟೋಬರ್ 30ರಂದು ಠಾಣೆಯಲ್ಲಿದ್ದಾಗ ಕರೆ ಬಂದಿತ್ತು. ಯಾರೊ ದೂರುದಾರರು ಇರಬಹುದೆಂದು ಭಾವಿಸಿ, ಕರೆ ಸ್ವೀಕರಿಸಿದ್ದೆ. ರಾಮಮೂರ್ತಿನಗರ ನಿವಾಸಿ ಸಂಜನಾ ಎಂದು ಪರಿಚಯಿಸಿ ಕೊಂಡಿದ್ದರು. ಬಳಿಕ ಅಸಂಬದ್ಧವಾಗಿ ಮಾತನಾಡಲು ಆರಂಭಿಸಿದ್ದರು. ನಾನು ನಿಮ್ಮನ್ನು ಪ್ರೀತಿಸುತ್ತಿದ್ದೇನೆ. ನೀವೂ ಪ್ರೀತಿಸಬೇಕು’ ಎಂದು ಹೇಳಿದ್ದರು. ತಮಾಷೆ ಮಾಡಿರಬೇಕು ಎಂಬುದಾಗಿ ಭಾವಿಸಿದ್ದೆ. ಅದಾದ ಮೇಲೆ ಬೇರೆ ಬೇರೆ ನಂಬರ್‌ಗಳಿಂದ ಕರೆ ಮಾಡಿದ್ದರು. ಎಲ್ಲ ಸಂಖ್ಯೆಗಳನ್ನೂ ಬ್ಲಾಕ್ ಲೀಸ್ಟ್‌ಗೆ ಹಾಕಿದ್ದೇನೆ’ ಎಂದು ಸತೀಶ್ ಅವರು ನೀಡಿದ ದೂರಿನಲ್ಲಿ ಉಲ್ಲೇಖಿಸಲಾಗಿದೆ.

ವನಜಾ

ಶಿಫಾರಸು ಮಾಡಿಸುತ್ತೇನೆ: ‘ನಾನು ಕಾಂಗ್ರೆಸ್ ಕಾರ್ಯಕರ್ತೆ ಎಂದು ವನಜಾ ಹೇಳಿಕೊಂಡಿದ್ದರು. ಮುಖ್ಯಮಂತ್ರಿ, ಡಿಸಿಎಂ, ಗೃಹ ಸಚಿವರು, ಮೋಟಮ್ಮ ಹಾಗೂ ಲಕ್ಷ್ಮಿ ಹೆಬ್ಬಾಳಕರ ಅವರ ಜತೆಯಲ್ಲಿರುವ ಫೋಟೊಗಳನ್ನು ವಾಟ್ಸ್‌ಆ್ಯಪ್‌ಗೆ ಕಳುಹಿಸಿ, ಇವರಿಂದ ಶಿಫಾರಸು ಮಾಡಿಸುತ್ತೇನೆ. ನನ್ನನ್ನು ಪ್ರೀತಿಸಿ ಎಂದು ಪದೇ ಪದೇ ಹೇಳುತ್ತಿದ್ದರು. ಅದಾದ ಮೇಲೆ ಡಿಸಿಎಂ ಹಾಗೂ ಗೃಹ ಸಚಿವರಿಂದ ಕರೆ ಬಂದಿತ್ತು. ಮಹಿಳೆ ನೀಡಿದ ದೂರು ಏಕೆ ಸ್ವೀಕರಿಸುತ್ತಿಲ್ಲ ಎಂದು ವಿಚಾರಿಸಿದ್ದರು. ಅವರು ಠಾಣೆಗೆ ಬಂದು ದೂರು ನೀಡಿಲ್ಲ. ಅಲ್ಲದೇ ಕರೆ ಮಾಡಿ ಅಸಂಬದ್ಧವಾಗಿ ಮಾತನಾಡಿದ್ದಾರೆ. ಠಾಣೆಗೆ ಬಂದು ದೂರು ಕೊಟ್ಟರೆ ಸ್ವೀಕರಿಸುತ್ತೇನೆ ಎಂಬುದಾಗಿ ತಿಳಿಸಿದ್ದೆ’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ನಾನು ಇಲ್ಲದಿರುವಾಗ ಮಹಿಳೆ ಠಾಣೆಗೆ ಬಂದು ಇನ್‌ಸ್ಪೆಕ್ಟರ್ ಸಂಬಂಧಿಕರು ಎಂದು ಹೇಳಿ ಕೊಂಡಿದ್ದರು. ಅಲ್ಲದೇ ಹೂಗುಚ್ಛ, ಡಬ್ಬಿ ಇಟ್ಟು ಹೋಗಿದ್ದರು. ಈ ರೀತಿ ಯಾವುದೇ ವಸ್ತುಗಳನ್ನು ನೀಡಬಾರದೆಂದು ಕರೆ ಮಾಡಿ ಅವರಿಗೆ ತಿಳಿಸಿದ್ದೆ’ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಕಟ್ಟಡ ಕಬಳಿಸಲು ಯತ್ನ

ಗುತ್ತಿಗೆದಾರ ಸತೀಶ್ ರೆಡ್ಡಿ ಅವರಿಗೆ ಸೇರಿದ ಮೂರು ಅಂತಸ್ತಿನ ಕಟ್ಟಡವನ್ನು ಕಬಳಿಸಲು ವನಜಾ ಅವರು ಯತ್ನಿಸಿದ್ದರು ಎಂದು ಕೆ.ಆರ್. ಪುರ ಠಾಣೆಯಲ್ಲಿ 2023ರ ಸೆಪ್ಟೆಂಬರ್ 27ರಂದು ಪ್ರಕರಣ ದಾಖಲಾಗಿತ್ತು.

‘ವನಜಾ ಅವರು ಕಟ್ಟಡವನ್ನು ತಮ್ಮ ವಶಕ್ಕೆ ಪಡೆದುಕೊಳ್ಳುವ ಉದ್ದೇಶದಿಂದ ಸತೀಶ್ ರೆಡ್ಡಿಯೊಂದಿಗೆ ಸಲುಗೆಯಿಂದ ಇದ್ದರು. ನಂತರ, ಇಬ್ಬರ ಸ್ನೇಹ ಕಡಿತವಾಗಿತ್ತು. ಆದರೂ ರೌಡಿಗಳಿದ್ದಾರೆಂದು ಮಹಿಳೆ ಬೆದರಿಸುತ್ತಿದ್ದರು’ ಎಂದು ಎಂದು ಪೊಲೀಸರು ಹೇಳಿದರು.

‘ಪೊಲೀಸ್ ಕಾನ್‌ಸ್ಟೆಬಲ್, ಹಿರಿಯ ಅಧಿಕಾರಿಗಳನ್ನು ಗುರಿಯಾಗಿಸಿ ಇದೇ ರೀತಿ ಕೃತ್ಯ ಎಸಗುತ್ತಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸರು ಹೇಳಿದರು.

'ಲವ್ ಯು ಚಿನ್ನಿ' ಎಂದು ಬರೆದಿದ್ದ ಮಹಿಳೆ

‘ನ.7ರಂದು ದೂರುಗಳ ವಿಚಾರಣೆ ನಡೆಸುತ್ತಿರುವಾಗ ಕಚೇರಿಗೆ ಬಂದಿದ್ದ ವನಜಾ ಅವರು ಲಕೋಟೆಯೊಂದನ್ನು ನೀಡಿದ್ದರು. ಅದರಲ್ಲಿ ಮೂರು ಪತ್ರಗಳಿದ್ದವು. ಅಲ್ಲದೇ 20 ಮಾತ್ರೆಗಳೂ ಲಕೋಟೆಯಲ್ಲಿ ಇದ್ದವು. ಪತ್ರದಲ್ಲಿ ಪ್ರೇಮ ನಿವೇದನೆ ಮಾಡಿಕೊಂಡಿದ್ದು ಕಂಡುಬಂತು. ನಿಮಗೆ ತೊಂದರೆ ನೀಡಲು ಇಷ್ಟವಿಲ್ಲ. ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂಬುದಾಗಿ ಬೆದರಿಕೆ ಹಾಕಿದ್ದರು. ತನ್ನ ಸಾವಿಗೆ ನೀವೇ ಕಾರಣ ಎಂದೂ ಬರೆದಿದ್ದರು. ಒಂದು ಹಾಳೆಯಲ್ಲಿ ‘ಲವ್ ಯು ಚಿನ್ನಿ...’ ಎಂದು ರಕ್ತದಲ್ಲಿ ಬರೆದಿರುತ್ತೇನೆ ಎಂಬುದಾಗಿಯೂ ಮಹಿಳೆ ಹೇಳಿದ್ದರು’ ಎಂದು ಇನ್‌ಸ್ಪೆಕ್ಟರ್ ತಿಳಿಸಿದ್ದಾರೆ.

ನ್ಯಾಷನಲ್ ಪಬ್ಲಿಕ್ ಶಾಲೆಯ ಶಿಕ್ಷಣ ಸಂಸ್ಥೆ ದಾನವಾಗಿ ನೀಡಿದ ಆಂಬುಲೆನ್ಸ್ ಅನ್ನು ಶಾಸಕ ಎಸ್‌.ಟಿ.ಸೋಮಶೇಖರ್ ಅವರು ಅಗರ ಗ್ರಾಮದಲ್ಲಿ ಜನಾರ್ಪಣೆ ಮಾಡಿದರು. ಮುಖಂಡರಾದ ಜಿ.ಪೆಮೇಶ್, ಲತಾ ಸೋಮಶೇಖರ್, ದೇವರಾಜು, ಟಿ.ನಾರಾಯಣಪ್ಪ ಉಪಸ್ಥಿತರಿದ್ದರು

ಕಾಂಗ್ರೆಸ್ ಕಾರ್ಯಕರ್ತರ ವಶ, ಬಿಡುಗಡೆ

ಬೆಂಗಳೂರು: ನ್ಯಾಷನಲ್ ಹೆರಾಲ್ಡ್ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಮುಖಂಡರಾದ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ವಿರುದ್ಧ ಇ.ಡಿ ಸಲ್ಲಿಸಿದ್ದ ಆರೋಪ ಪಟ್ಟಿಯನ್ನು ದೆಹಲಿ ಕೋರ್ಟ್ ತಿರಸ್ಕರಿಸಿದ್ದರಿಂದ ಕಾಂಗ್ರೆಸ್ ಕಾರ್ಯಕರ್ತರು, ನಗರದ ಬಿಜೆಪಿ ಕಚೇರಿ ಎದುರು ಸಿಹಿ ಹಂಚಲು ಮುಂದಾಗಿದ್ದರು. ಅವರನ್ನು ವಶಕ್ಕೆ ಪಡೆದು ವೈಯಾಲಿಕಾವಲ್ ಠಾಣೆಗೆ ಪೊಲೀಸರು ಕರೆದೊಯ್ದರು. ವಶಕ್ಕೆ ಪಡೆದವರನ್ನು ಬಿಡುಗಡೆ ಮಾಡುವಂತೆ ಕಾಂಗ್ರೆಸ್ ಕಾರ್ಯಕರ್ತರು ಠಾಣೆ ಎದುರು ಬುಧವಾರ ರಾತ್ರಿ ಪ್ರತಿಭಟನೆ ಮಾಡಿದರು. ಬಳಿಕ ಬಿಡುಗಡೆ ಮಾಡಲಾಯಿತು.

ಸಿ.ಎಂ ಆಪ್ತರಿಗೆ ‘ಡಿನ್ನರ್ ಪಾರ್ಟಿ’ ನೀಡಿದ ಸಚಿವ ಸತೀಶ ಜಾರಕಿಹೊಳಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ನಗರದ ಖಾಸಗಿ ಹೋಟೆಲ್ ನಲ್ಲಿ ಬುಧವಾರ, ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಮತ್ತೊಂದು 'ಡಿನ್ನರ್ ಪಾರ್ಟಿ' ಆಯೋಜನೆ ಮಾಡಿದರು. ಈ ಊಟದ ಕೂಟದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತರೇ ಭಾಗವಹಿಸಿದರು.

ಸಿ.ಎಂ ಪುತ್ರ ಯತೀಂದ್ರ ಸಿದ್ದರಾಮಯ್ಯ, ಶಾಸಕರಾದ ಕೆ.ಎನ್. ರಾಜಣ್ಣ, ಗಣೇಶ ಹುಕ್ಕೇರಿ, ಬಿ.ಆರ್. ಪಾಟೀಲ, ಆಸಿಫ್ ಸೇಠ್, ವಿಶ್ವಾಸ ವೈದ್ಯ, ಮಹಾಂತೇಶ ಕೌಜಲಗಿ, ಚಳ್ಳಕೆರೆ ಶಾಸಕ ಟಿ.ರಘುಮೂರ್ತಿ ಸೇರಿ 20ಕ್ಕೂ ಹೆಚ್ಚು ಶಾಸಕರು ಈ ಪಾರ್ಟಿಯಲ್ಲಿ ಭಾಗಿಯಾದರು ಎಂದು ಮೂಲಗಳು ಖಚಿತಪಡಿಸಿವೆ.

ಈಚೆಗಷ್ಟೇ ಪರಿಶಿಷ್ಟ ಸಮುದಾಯಕ್ಕೆ ಸೇರಿದ ಶಾಸಕರಿಗೆ ಮಾತ್ರ 'ಡಿನ್ನರ್ ಪಾರ್ಟಿ' ನೀಡಿದ್ದ ಸತೀಶ ಈಗ ಮತ್ತೊಮ್ಮೆ ಸಿದ್ದರಾಮಯ್ಯ ಆಪ್ತರನ್ನು ಒಂದೆಡೆ ಸೇರಿಸಿದ್ದಾರೆ.

ಬೆಳಗಾವಿಯಲ್ಲಿ ಚಳಿಗಾಲದ ಅಧಿವೇಶನ ಆರಂಭವಾದಾಗಿನಿಂದ ಒಂದಿಲ್ಲೊಂದು ಕಡೆ 'ಡಿನ್ನರ್ ಪಾರ್ಟಿ'ಗಳು ನಡೆಯುತ್ತಲೇ ಇರುವುದು ರಾಜಕೀಯ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ.

ಸಂಕ್ಷಿಪ್ತ ಸುದ್ದಿ

ಸರಣಿ ಅಪಘಾತ: ವಕೀಲ ಸಾವು

ಬೆಂಗಳೂರು: ವಿದ್ಯಾರ್ಥಿಯೊಬ್ಬ ಚಲಿಸುತ್ತಿದ್ದ ಕಾರೊಂದು ನಿಯಂತ್ರಣ ತಪ್ಪಿ ಸರಣಿ ಅಪಘಾತ ಎಸಗಿದ ಪರಿಣಾಮ ಹೈಕೋರ್ಟ್ ವಕೀಲರೊಬ್ಬರು ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಸಂಜಯನಗರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಎಚ್‌ಎಸ್‌ಆರ್ ಲೇಔಟ್ ನಿವಾಸಿ ರಾಮರೆಡ್ಡಿ(56) ಮೃತ ವಕೀಲ. ಕೃತ್ಯ ಎಸಗಿದ ಹುಬ್ಬಳ್ಳಿಯ ಬಿಇ ವಿದ್ಯಾರ್ಥಿ ಶ್ರೇಯಸ್ (19) ಎಂಬಾತನನ್ನು ವಶಕ್ಕೆ ಪಡೆಯಲಾಗಿದೆ. ಆರ್‌ಎಂವಿ 2ನೇ ಹಂತದ ರಸ್ತೆಯಲ್ಲಿ ರಾತ್ರಿ 9 ಗಂಟೆಗೆ ದುರ್ಘಟನೆ ನಡೆದಿದೆ ಎಂದು ಸಂಚಾರ ಪೊಲೀಸರು ಮಾಹಿತಿ ನೀಡಿದರು.

ಶ್ರೇಯಸ್ ನಗರದ ಖಾಸಗಿ ಕಾಲೇಜಿನಲ್ಲಿ ಬಿಇ ವ್ಯಾಸಂಗ ಮಾಡುತ್ತಿದ್ದ. ಬುಧವಾರ ರಾತ್ರಿ ಬಿಇಎಲ್ ರಸ್ತೆ ಮಾರ್ಗವಾಗಿ ಆರ್‌ಎಂವಿ 2ನೇ ಹಂತದ ರಸ್ತೆ ಕಡೆ ಕಾರಿನಲ್ಲಿ ಬರುತ್ತಿದ್ದ. ನಿಯಂತ್ರಣ ತಪ್ಪಿ ಮೊದಲಿಗೆ ರಾಮರೆಡ್ಡಿ ಅವರಿಗೆ ಕಾರು ಡಿಕ್ಕಿ ಹೊಡೆದಿದೆ. ನಂತರ ಒಂದು ಬೈಕ್‌ಗೆ ಗುದ್ದಿದೆ.

ಬಳಿಕ ರಸ್ತೆ ಬಂದಿ ನಿಂತಿದ್ದ ಕಾರಿಗೆ ಡಿಕ್ಕಿ ಹೊಡೆದಿದೆ. ಅದರಿಂದ ಆರೋಪಿಯ ಕಾರು ಸೇರಿ 2 ಕಾರು ಮತ್ತು 1 ಬೈಕ್ ಜಖಂಗೊಂಡಿವೆ. ಬೈಕ್ ಚಾಲಕ ಹಾಗೂ ಕಾರಿನಲ್ಲಿದ್ದ ಯುವಕ-ಯುವತಿಗೆ ಗಾಯವಾಗಿದ್ದು, ಮೂವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ವಕೀಲ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸಂಜಯನಗರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಬೀದಿ ವ್ಯಾಪಾರಿಗಳಿಗೆ ಗುರುತಿನ ಚೀಟಿ ಕೊಡಿ’

ಬೆಂಗಳೂರು: ನಗರದಲ್ಲಿ ಬೀದಿ ವ್ಯಾಪಾರಿಗಳಿಗೆ ಕಿರುಕುಳ ನೀಡುವುದನ್ನು ನಿಲ್ಲಿಸಬೇಕು. ಅವರಿಗೆ ಗುರುತಿನ ಚೀಟಿಗಳನ್ನು ವಿತರಿಸಬೇಕು ಎಂದು ಕರ್ನಾಟಕ ಪ್ರಗತಿಪರ ಬೀದಿ ವ್ಯಾಪಾರಿಗಳ ಸಂಘದ (ಕೆಪಿಬಿವಿಎಸ್) ಅಧ್ಯಕ್ಷ ಬಾಬು ಆಗ್ರಹಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಈಗಾಗಲೇ ಗುರುತಿನ ಚೀಟಿಗಳು ಮುದ್ರಣಗೊಂಡಿವೆ. ಆದರೂ ಬೀದಿ ವ್ಯಾಪಾರಿಗಳಿಗೆ ವಿತರಿಸಿಲ್ಲ. ಪೊಲೀಸರು ಕಾನೂನುಬಾಹಿರವಾಗಿ ದಂಡ ವಿಧಿಸುತ್ತಿದ್ದಾರೆ. ಹಲವೆಡೆ ಎತ್ತಂಗಡಿಯನ್ನೂ ಮಾಡಲಾಗುತ್ತಿದೆ’ ಎಂದು ತಿಳಿಸಿದರು.

ಗಾಂಧಿ ಬಜಾರ್‌ನ ಹೂವಿನ ವ್ಯಾಪಾರಿ ವನಜಾಕ್ಷಿ ಮಾತನಾಡಿ, ‘ಮಹಿಳಾ ವ್ಯಾಪಾರಿಗಳಿಗೆ ಉಚಿತವಾಗಿ ಶೌಚಾಲಯ ವ್ಯವಸ್ಥೆ ಕಲ್ಪಿಸಿಕೊಡಬೇಕು’ ಎಂದರು.

ವಕೀಲರ ಕೆಲಸ ಕಡಿಮೆಯಾಗುವ ಬಗ್ಗೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಕಳವಳ

‘ನ್ಯಾಯಾಂಗ ಕ್ಷೇತ್ರದ ಮೇಲೂ ಎಐ ಪ್ರಭಾವ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನ್ಯಾಯಾಂಗ ಕ್ಷೇತ್ರದ ಮೇಲೂ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನದ ಪ್ರಭಾವ ಹೆಚ್ಚುತ್ತಿದೆ. ಈ ಸಂದರ್ಭದಲ್ಲಿ ವಕೀಲರು ಕೆಲಸ ಉಳಿಸಿಕೊಳ್ಳಲು ಹೊಸ ಹೊಸ ಆಯಾಮಕ್ಕೆ ತೆರೆದುಕೊಳ್ಳಬೇಕು’ ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಅಭಿಪ್ರಾಯಪಟ್ಟರು.

ವಕೀಲರ ಸಂಘ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ‘ಎಐ ಕಾಲಘಟ್ಟದಲ್ಲಿ ನಾವು ಜೀವಿಸುತ್ತಿದ್ದೇವೆ. ನ್ಯಾಯಾಂಗ ಸೇರಿ ಎಲ್ಲ ಕ್ಷೇತ್ರವನ್ನೂ ತಂತ್ರಜ್ಞಾನ ಆವರಿಸಿಕೊಂಡಿದೆ. ಈ ಸಂದರ್ಭದಲ್ಲಿ ವಕೀಲರ ಕೆಲಸ ಕಡಿಮೆಯಾಗುವ ಸಾಧ್ಯತೆಯಿದೆ. ಅವರು ಬದುಕು ಕಟ್ಟಿಕೊಳ್ಳಲು ಇರುವ ಅವಕಾಶಗಳ ಬಗ್ಗೆ ಚರ್ಚೆಗಳು ನಡೆಯಬೇಕಿದೆ. ಮುಂದಿನ ದಿನಗಳಲ್ಲಿ ನ್ಯಾಯಾಂಗ ಕ್ಷೇತ್ರಕ್ಕೆ ಸಂಬಂಧಿಸಿದ ಸಾಂಪ್ರದಾಯಿಕ ಕೆಲಸಗಳು ಎಐ ತಂತ್ರಜ್ಞಾನದ ನೆರವಿನಿಂದ ಸುಲಭಸಾಧ್ಯವಾಗಲಿದೆ. ಕ್ರಯ ಪತ್ರ, ಭೋಗ್ಯ ಪತ್ರ, ಚೆಕ್ ಬೌನ್ಸ್ ಪ್ರಕರಣದಲ್ಲಿ ನೋಟಿಸ್ ನೀಡುವಿಕೆಯಂತಹ ಕೆಲಸಗಳನ್ನು ಚಾಟ್ ಜಿಟಿಪಿ ನೆರವಿನಿಂದ ಜನಸಾಮಾನ್ಯರು ಮಾಡಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ’ ಎಂದು ಹೇಳಿದರು.

‘ಭಾರತೀಯ ಭಾಷೆಗಳಲ್ಲಿ ಕೆಲ ಭಾಷೆಗಳು ನಶಿಸಿ ಹೋಗುತ್ತಿವೆ. ಒಂದು ಭಾಷೆ ಮರೆಯಾದರೆ ಆ ಭಾಷೆಯಲ್ಲಿನ ಜ್ಞಾನ ಮತ್ತು ಅನುಭವವನ್ನು ಕಳೆದುಕೊಳ್ಳುತ್ತೇವೆ. ಬಹುಭಾಷೆ, ಬಹು ಸಂಸ್ಕೃತಿಯನ್ನು ರಕ್ಷಿಸಬೇಕಿದೆ. ಈಗ ಮತ್ತೆ ಹಿಂದಿ ಹೇರಿಕೆಯ ಕೂಗು ಕೇಳಿಬರುತ್ತಿದೆ. ಅನ್ಯ ಭಾಷೆ ಹೇರಿಕೆಗೆ ಅವಕಾಶ ನೀಡದೆ ಕನ್ನಡ ಉಳಿಸಬೇಕು. ಜಿಲ್ಲಾ ಮತ್ತು ತಾಲ್ಲೂಕು ನ್ಯಾಯಾಲಯಗಳಲ್ಲಿ ಕನ್ನಡವನ್ನು ಹೆಚ್ಚಾಗಿ ಬಳಸಬೇಕು. ವಕೀಲರು ವಿವಿಧ ಪ್ರಕರಣಗಳಲ್ಲಿನ ವಿಷಯ ವಸ್ತುವನ್ನು ಕಥೆಯ ರೂಪದಲ್ಲಿ ಬರೆಯುವ ಮೂಲಕ ಕನ್ನಡ ಸಾಹಿತ್ಯಕ್ಕೆ ಕೊಡುಗೆ ನೀಡಬೇಕು’ ಎಂದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ‘ಇತ್ತೀಚೆಗೆ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ವರದಿಯ ಪ್ರಕಾರ 254 ಭಾಷೆಗಳು ಈಗಾಗಲೇ ಮರೆಯಾಗಿವೆ. ಕರ್ನಾಟಕದ ಒಳಗಡೆ ವಿವಿಧ ಭಾಷೆಗಳನ್ನು ಮಾತನಾಡುವ ಜನರಿದ್ದಾರೆ. ರಾಜ್ಯದಲ್ಲಿ 230ಕ್ಕೂ ಹೆಚ್ಚು ಭಾಷೆಗಳಿವೆ. ಭಾರತದ ಭಾಷೆಗಳು ರಂಗೋಲಿ ರೀತಿಯಿದ್ದು, ಒಂದೇ ಬಣ್ಣದ ರಂಗೋಲಿ ಸುಂದರವಾಗಿ ಕಾಣುವುದಿಲ್ಲ. ಆದ್ದರಿಂದ ದೇಶದಲ್ಲಿರುವ ಎಲ್ಲ ಭಾಷೆಗಳನ್ನು ಉಳಿಸಬೇಕು’ ಎಂದು ಹೇಳಿದರು.

ವಕೀಲರ ಸಂಘದ ಉಪಾಧ್ಯಕ್ಷ ಗಿರೀಶ್ ಕುಮಾರ್, ‘ಕನ್ನಡವು ಶ್ರೀಮಂತ ಭಾಷೆಯಾಗಿದೆ. ಆದ್ದರಿಂದಲೇ ಬೇರೆ ರಾಷ್ಟ್ರದಲ್ಲಿ ನೆಲೆಸಿರುವ ಕನ್ನಡಿಗರೂ ರಾಜ್ಯೋತ್ಸವ ಆಚರಿಸುತ್ತಾ ಬಂದಿದ್ದಾರೆ. ಈ ಆಚರಣೆ ಒಂದು ದಿನಕ್ಕೆ ಸೀಮಿತವಾಗದೆ, ವರ್ಷಪೂರ್ತಿ ಭಾಷೆಯನ್ನು ಬಳಸಿ ಬೆಳೆಸಬೇಕು’ ಎಂದರು.

ಕನ್ನಡದಲ್ಲಿ ತೀರ್ಪು ನೀಡಿದ ನ್ಯಾಯಾಧೀಶರನ್ನು ಇದೇ ವೇಳೆ ಗೌರವಿಸಲಾಯಿತು. ಬಳಿಕ ಡಿ.ಆರ್. ರಾಜಪ್ಪ ಮತ್ತು ತಂಡದಿಂದ ಜನಪದ ಗೀತೆಗಳ ಗಾಯನ ನಡೆಯಿತು.

ಸಮಾರಂಭದಲ್ಲಿ ಎಚ್‌.ಎನ್‌. ನಾಗಮೋಹನ್ ದಾಸ್ ಅವರು ಭುವನೇಶ್ವರಿ ಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಕಲಾವಿದ ಸುಚೇಂದ್ರ ಪ್ರಸಾದ್, ಪುರುಷೋತ್ತಮ ಬಿಳಿಮಲೆ, ಗಿರೀಶ್ ಕುಮಾರ್ ಸಿ.ಎಸ್‌., ಶ್ವೇತಾ ರವಿಶಂಕರ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಬಾಲ ಭವನ ಸೊಸೈಟಿ,
ಕಬ್ಬನ್‌ಪಾರ್ಕ್, ಬೆಂಗಳೂರು – 560 001
ಸಂಖ್ಯೆ: ಬಾಭಸೊ : ವಾ.ಬ.ಹ: ಟೆಂಡರ್ 2025–26 ದಿನಾಂಕ: 10.12.2025

ಬಹಿರಂಗ ಹರಾಜು/ಟೆಂಡರ್ ಪ್ರಕಟಣೆ

ಮೇಲ್ಕಂಡ ಕಛೇರಿಯು ಕೆಲವು **ಷರತ್ತಿಗೊಳಪಟ್ಟು “ಪ್ರಸ್ತುತ ಹೇಗಿದೆಯೋ ಅದೇ ಸ್ಥಿತಿಯಲ್ಲಿ”** ಈ ಕೆಳಕಂಡ ವಾಹನವನ್ನು ಬಹಿರಂಗ ಹರಾಜು/ಟೆಂಡರ್ ಮೂಲಕ ವಿಲೇವಾರಿ ಮಾಡಲು ನಿರ್ಧರಿಸಿದೆ. ವಾಹನದ ಹೆಸರು: ಇನ್ನೋವಾ. ಕಾರು ಮಾಡೆಲ್: 2011. ವಾಹನ ಸಂಖ್ಯೆ : ಕೆ.ಎ.01 ಎಂ.ಜಿ.7622. ಹರಾಜು ನಡೆಯುವ **ದಿನಾಂಕ: 29.12.2025 ಸಂಜೆ 4.00 ಗಂಟೆಗೆ.** ಹರಾಜು ನಡೆಯುವ ಸ್ಥಳ: ಬಾಲಭವನ ಆಡಳಿತ ಕಛೇರಿ, ಕಬ್ಬನ್ ಪಾರ್ಕ್, ಬೆಂಗಳೂರು. ಇಎಂಡಿ: **ರೂ. 25,000/–.** ಷರತ್ತುಗಳು ಹಾಗೂ ಹೆಚ್ಚಿನ ಮಾಹಿತಿಗೆ ಮೇಲ್ಕಂಡ ಕಛೇರಿಯ ಕಾರ್ಯದರ್ಶಿಯವರನ್ನು ಸಂಪರ್ಕಿಸುವುದು.

ಸಹಿ/– ಕಾರ್ಯದರ್ಶಿ, ಬಾಲ ಭವನ ಸೊಸೈಟಿ, ಬೆಂಗಳೂರು
ವಾಸಾಸಂಇ/ಉನಿ–ಸಿ.ಪಿ/4478/ಕೆಎಸ್‌ಎಂಸಿಎ/2025–26

ನಿನ್ನ ಬಳಿ ನಿನ್ನ ಹಣ ಬರುವವರೆಗೂ
ಅದನ್ನು ಖರ್ಚು ಮಾಡಬೇಡ
ಥಾಮಸ್ ಜೆಫರ್ಸನ್
ಅಮೆರಿಕದ ಬರಹಗಾರ

ದುಡ್ಡಿನಂಥಾ ಮಾತು

ಆ್ಯನ್ಯುಟಿ ಇದು ವೈಯಕ್ತಿಕ ಪಿಂಚಣಿ

• ಸವ್ಯಸಾಚಿ ಸರ್ಕಾರ್

ವ್ಯಕ್ತಿ ನಿವೃತ್ತನಾದ ನಂತರ ಆತನಿಗೆ ನಿರಂತರ ಆದಾಯ ನೀಡುವ ಮೂಲವೊಂದು ಬೇಕಲ್ಲ? ಅಂತಹ ಮೂಲವನ್ನು ಒದಗಿಸುವುದು ಆ್ಯನ್ಯುಟಿ ಯೋಜನೆ. ಜೀವ ವಿಮಾ ಕಂಪನಿಗಳು ಆ್ಯನ್ಯುಟಿ ಯೋಜನೆಯನ್ನು ಸಾಮಾನ್ಯವಾಗಿ ಹೊಂದಿರುತ್ತವೆ, ಗ್ರಾಹಕರಿಗೆ ಅದನ್ನು ಒದಗಿಸುತ್ತವೆ. ನಿವೃತ್ತಿಯ ವಯಸ್ಸಿನ ನಂತರ, ವ್ಯಕ್ತಿಯ ಜೀವಿತಾವಧಿಯವರೆಗೆ ಆತನಿಗೆ ನಿರಂತರವಾಗಿ ಆದಾಯ ಒದಗಿಸುವ ಯೋಜನೆ ಇದು.

ಆ್ಯನ್ಯುಟಿ ಅಂದರೇನು?: ಇದೊಂದು ಬಗೆಯ ಹಣಕಾಸಿನ ಉತ್ಪನ್ನ. ಜೀವ ವಿಮಾ ಕಂಪನಿಗಳು ನಿರ್ವಹಿಸುವ ಈ ಹಣಕಾಸಿನ ಉತ್ಪನ್ನದಲ್ಲಿ ನಿಗದಿತ ಮೊತ್ತವನ್ನು ತೊಡಗಿಸಲಾಗುತ್ತದೆ. ಈ ಮೊತ್ತವನ್ನು ಒಂದೇ ಬಾರಿಗೆ ಅಥವಾ ಹಲವು ಕಂತುಗಳಲ್ಲಿ ಪಾವತಿ ಮಾಡಬಹುದು. ವಿಮಾ ಕಂಪನಿಯು ಈ ಮೊತ್ತವನ್ನು ನಿರ್ವಹಣೆ ಮಾಡುತ್ತಿರುತ್ತದೆ, ಹಣ ತೊಡಗಿಸಿದ ವ್ಯಕ್ತಿಯ ಜೀವಿತಾವಧಿಯವರೆಗೆ ನಿರಂತರವಾಗಿ ಆದಾಯ ಸಿಗುವಂತೆ ಕಂಪನಿ ನೋಡಿಕೊಳ್ಳುತ್ತದೆ.

ಹೂಡಿಕೆಯ ನಂತರದಲ್ಲಿ ಸಿಗುವ ನಿರಂತರವಾದ ಆದಾಯವು ಆ್ಯನ್ಯುಟಿ ಯೋಜನೆಯ ಬಹುಮುಖ್ಯ ಪ್ರಯೋಜನ. ಹೂಡಿಕೆ ಮಾಡುವ ಅವಧಿ ಪೂರ್ಣಗೊಂಡ ನಂತರದಲ್ಲಿ, ಅಲ್ಲಿಯವರೆಗಿನ ಹೂಡಿಕೆಯಿಂದ ಒಗ್ಗೂಡಿದ ಮೊತ್ತವನ್ನು, ಹೂಡಿಕೆ ಮಾಡಿದ ವ್ಯಕ್ತಿಗೆ ಜೀವಿತಾವಧಿಯವರೆಗೆ ನಿರಂತರ ವರಮಾನ ತಂದುಕೊಡಲು ಬಳಸಲಾಗುತ್ತದೆ. ಇದೊಂದು ಬಗೆಯಲ್ಲಿ ವೈಯಕ್ತಿಕ ಪಿಂಚಣಿ ಯೋಜನೆ ಇದ್ದಂತೆ. ಇದರಲ್ಲಿ ಹಣಕಾಸಿನ ಭದ್ರತೆ ಇದೆ, ನಿವೃತ್ತಿಯ ನಂತರದಲ್ಲಿ ಎಷ್ಟು ಮೊತ್ತ ಸಿಗುತ್ತದೆ ಎಂಬುದನ್ನು ಅಂದಾಜು ಮಾಡಲು ಕೂಡ ಸಾಧ್ಯವಿದೆ.

ಆ್ಯನ್ಯುಟಿ ಯೋಜನೆಗಳು ಹೂಡಿಕೆಯಲ್ಲೂ ಆದಾಯವನ್ನು ಪಡೆದುಕೊಳ್ಳುವ ವಿಚಾರದಲ್ಲಿಯೂ ಒಂದಿಷ್ಟು ಅನುಕೂಲಗಳನ್ನು ಒದಗಿಸುತ್ತವೆ. ಆ್ಯನ್ಯುಟಿ ಯೋಜನೆಗೆ ಯಾವ ಬಗೆಯಲ್ಲಿ ಹೂಡಿಕೆ ಮಾಡಬೇಕು ಎಂಬುದನ್ನು ಹೂಡಿಕೆದಾರ ಆಯ್ಕೆ ಮಾಡಿಕೊಳ್ಳಬಹುದು. ಯೋಜನೆಯಿಂದ ಸಿಗುವ ಆದಾಯವನ್ನು ಪ್ರತಿ ತಿಂಗಳೂ ಪಡೆದುಕೊಳ್ಳಬೇಕೋ, ಮೂರು ತಿಂಗಳಿಗೆ ಒಮ್ಮೆ ಪಡೆದುಕೊಳ್ಳಬೇಕೋ ಅಥವಾ ವರ್ಷಕ್ಕೆ ಒಮ್ಮೆ ಪಡೆದುಕೊಳ್ಳಬೇಕೋ ಎಂಬುದನ್ನೂ ಹೂಡಿಕೆದಾರ ತೀರ್ಮಾನಿಸಬಹುದು. ಅಂದರೆ ಹೂಡಿಕೆದಾರ ನಿವೃತ್ತಿಯ ನಂತರದಲ್ಲಿ ತನ್ನ ಜೀವನಶೈಲಿಗೆ ಅನುಗುಣವಾಗಿ ವರಮಾನವನ್ನು ಪಡೆದುಕೊಳ್ಳಬಹುದು. ಹೂಡಿಕೆದಾರನ ಜೀವಿತಾವಧಿಯ ಉದ್ದಕ್ಕೂ ನಿರಂತರವಾದ, ನಿಶ್ಚಿತ ಮೊತ್ತದ ಆದಾಯವನ್ನು ನೀಡುವುದು ಆ್ಯನ್ಯುಟಿ ಯೋಜನೆಗಳ ವೈಶಿಷ್ಟ್ಯ.

ಇದು ಕಡಿಮೆ ರಿಸ್ಕ್‌ನ ಹೂಡಿಕೆ: ಕಡಿಮೆ ರಿಸ್ಕ್ ಇರುವ ಬಗೆಯಲ್ಲಿ ಈ ಯೋಜನೆಗಳನ್ನು ರೂಪಿಸಲಾಗಿರುತ್ತದೆ. ಇದರಿಂದಾಗಿ ಬಂಡವಾಳ ಮಾರುಕಟ್ಟೆಗಳ ಅನಿಶ್ಚಿತತೆಗಳಿಂದ ಹೂಡಿಕೆದಾರರ ಹಣವು ಸುರಕ್ಷಿತವಾಗಿರುತ್ತದೆ. ಹೂಡಿಕೆ ಮಾಡಿದ ಮೊತ್ತವನ್ನು ಜತನದಿಂದ ಕಾಯುವುದಕ್ಕೆ ನೀಡುವ ಆದ್ಯತೆಯು, ವ್ಯಕ್ತಿಯು ತನ್ನ ಸಂಧ್ಯಾಕಾಲಕ್ಕಾಗಿ ಉಳಿತಾಯ ಮಾಡಿಟ್ಟುಕೊಂಡ ಹಣವು ಸುರಕ್ಷಿತವಾಗಿ ಇರುವಂತೆ ಮಾಡುತ್ತದೆ. ಆ ಹಣವೇ ವ್ಯಕ್ತಿಯ ಮುಂದಿನ ದಿನಗಳಿಗೆ ಹಾಗೂ ಆತನ ಕುಟುಂಬದ ಹಣಕಾಸಿನ ಆರೋಗ್ಯಕ್ಕೆ ಭದ್ರ ಬುನಾದಿಯೊಂದನ್ನು ಹಾಕಿಕೊಡುತ್ತದೆ. ಈ ಹೂಡಿಕೆಯಿಂದ ಸಾಮಾನ್ಯವಾಗಿ ನಿಶ್ಚಿತ ಪ್ರಮಾಣದ ಲಾಭ ಸಿಗುತ್ತದೆ. ಇದು ಮನಸ್ಸಿಗೆ ನೆಮ್ಮದಿ ತರುವುದಂತೂ ಖಚಿತ.

ಹೂಡಿಕೆ, ಪಾವತಿಯಲ್ಲಿ ಹಲವು ಆಯ್ಕೆಗಳು

ಆ್ಯನ್ಯುಟಿ ಯೋಜನೆಗಳು ಹಲವು ಬಗೆಯ ಆಯ್ಕೆಗಳನ್ನು ನೀಡುತ್ತವೆ. ಈ ಯೋಜನೆಗಳಲ್ಲಿ ನಿರ್ದಿಷ್ಟ ಮೊತ್ತವನ್ನು ಪೇರಿಸಲು ಒಂದೇ ಬಾರಿಗೆ ಹೂಡಿಕೆ ಮಾಡುವ ಅಥವಾ ನಿಯಮಿತವಾಗಿ ಕಂತುಗಳಲ್ಲಿ ಹೂಡಿಕೆ ಮಾಡುವ ಅವಕಾಶ ಮಾತ್ರವಲ್ಲದೆ, ಆ್ಯನ್ಯುಟಿ ಯೋಜನೆಗಳಿಂದ ಸಿಗುವ ಮೊತ್ತವನ್ನು ತಕ್ಷಣವೇ ಪಡೆದುಕೊಳ್ಳುವ, ಮುಂದೊಂದು ಸಮಯದಲ್ಲಿ ಪಡೆದುಕೊಳ್ಳುವ ಅವಕಾಶ ಕೂಡ ಇರುತ್ತದೆ.

ಹಣಕಾಸಿನ ಭದ್ರತೆ, ಸ್ಥಿರ ಆದಾಯ: ಆ್ಯನ್ಯುಟಿ ಯೋಜನೆಗಳ ಪ್ರಾಥಮಿಕ ಗುರಿ ಸಾಟಿಯಿಲ್ಲದ ಹಣಕಾಸಿನ ಭದ್ರತೆಯನ್ನು ಒದಗಿಸುವುದು. ಈ ಯೋಜನೆಗಳಲ್ಲಿ ಹೂಡಿಕೆ ಮಾಡಿದವರಿಗೆ ಖಚಿತ ಆದಾಯದ ಭರವಸೆ ಇರುತ್ತದೆ, ಹೂಡಿಕೆ ಮಾಡಿದ ವ್ಯಕ್ತಿಯ ಜೀವಿತಾವಧಿಯವರೆಗೆ ಕಾಲಕಾಲಕ್ಕೆ ಖಚಿತ ಮೊತ್ತವು ಆದಾಯದ ರೂಪದಲ್ಲಿ ಸಿಗುತ್ತಿರುತ್ತದೆ. ಇದರಿಂದಾಗಿ ಹೂಡಿಕೆದಾರನಿಗೆ ತನ್ನ ಜೀವನಶೈಲಿಯನ್ನು ಕಾಯ್ದುಕೊಳ್ಳಲು, ನಿತ್ಯದ ಖರ್ಚುಗಳನ್ನು ಸರಿದೂಗಿಸಲು, ಆರೋಗ್ಯ ವೆಚ್ಚಗಳನ್ನು ನಿಭಾಯಿಸಲು, ಹಣಕಾಸಿನ ಒತ್ತಡವಿಲ್ಲದೆ ನಿವೃತ್ತಿ ನಂತರದ ಗುರಿಗಳನ್ನು ತಲುಪಲು ಆಗುತ್ತದೆ. ನಿರಂತರವಾದ ಹಾಗೂ ಖಚಿತವಾದ ಆದಾಯವು ಒತ್ತಡಮುಕ್ತ ಜೀವನಕ್ಕೆ ಬಹುದೊಡ್ಡ ನೆರವು ನೀಡುತ್ತದೆ.



ಸಂಗಾತಿಗೂ ಆದಾಯ: ಹಲವು ಆ್ಯನ್ಯುಟಿ ಯೋಜನೆಗಳಲ್ಲಿ 'ಜಾಯಿಂಟ್-ಲೈಫ್' ಎಂಬ ಆಯ್ಕೆ ಇರುತ್ತದೆ. ಇದನ್ನು ಆಯ್ಕೆ ಮಾಡಿಕೊಂಡರೆ, ಹೂಡಿಕೆ ಮಾಡಿದ ವ್ಯಕ್ತಿಯ ಜೀವಿತಾವಧಿಯ ನಂತರ ಸಂಗಾತಿಗೆ ಆದಾಯ ಪಾವತಿ ಆಗುತ್ತಿರುತ್ತದೆ.

ಆದಾಯ ಈಗ ಬೇಡ ಎನ್ನುವವರಿಗೆ...

ಆದಾಯವು ತಕ್ಷಣಕ್ಕೆ ಬೇಡ, ಮುಂದೊಂದು ದಿನದಿಂದ ಅದು ಸಿಗುವಂತೆ ಆಗಲಿ ಎಂದು ಹೇಳುವ ಅವಕಾಶ ಕೂಡ ಹಲವು ಆ್ಯನ್ಯುಟಿ ಯೋಜನೆಗಳಲ್ಲಿ ಇರುತ್ತದೆ. ಅಂದರೆ, ಹೂಡಿಕೆ ಮಾಡಿದ ನಿರ್ದಿಷ್ಟ ಅವಧಿಯ ನಂತರದಿಂದ ಆದಾಯ ಸಿಗುವಂತೆ ಮಾಡಲು ಅವಕಾಶ ಇರುತ್ತದೆ. ಈ ಅವಧಿಯಲ್ಲಿ ಹೂಡಿಕೆ ಮೊತ್ತವು ಹೆಚ್ಚಳ ಕಂಡಿರುತ್ತದೆ.

ದೀರ್ಘಾವಧಿಗೆ ಆದಾಯ ತಂದುಕೊಡುವುದು ಆ್ಯನ್ಯುಟಿ ಯೋಜನೆಗಳ ಉದ್ದೇಶವಾಗಿದ್ದರೂ, ಕೆಲವು ಯೋಜನೆಗಳು ಅವಧಿಗೆ ಮೊದಲೇ ಅದನ್ನು ಮುಕ್ತಾಯಗೊಳಿಸುವ ಅವಕಾಶವನ್ನು ಹೂಡಿಕೆದಾರರಿಗೆ ನೀಡುತ್ತವೆ. ಹೀಗೆ ಅವಧಿಗೆ ಮುಂಚಿತವಾಗಿ ಮುಕ್ತಾಯಗೊಳಿಸಿದಾಗ ಹೂಡಿಕೆದಾರರಿಗೆ ನಿರ್ದಿಷ್ಟ ಮೊತ್ತ ವಾಪಸ್ ಸಿಗುತ್ತದೆ. ಆದರೆ ಈ ರೀತಿ ಮಾಡಿದಾಗ ಆದಾಯದ ರೂಪದಲ್ಲಿ ಸಿಗುವ ಮೊತ್ತವು ಕಡಿಮೆ ಆಗುತ್ತದೆ, ಅವಧಿಗೆ ಮೊದಲೇ ಮುಕ್ತಾಯಗೊಳಿಸಿದ್ದಕ್ಕಾಗಿ ಒಂದಿಷ್ಟು ಶುಲ್ಕವನ್ನು ಪಾವತಿಸಬೇಕಾಗುತ್ತದೆ. ಹೀಗಿದ್ದರೂ, ಈ ಒಂದು ಸೌಲಭ್ಯವು ಹೂಡಿಕೆದಾರರಿಗೆ ಅನಿವಾರ್ಯ ಸಂದರ್ಭಗಳಲ್ಲಿ ನಗದು ಲಭ್ಯತೆಯನ್ನು ಖಾತರಿಪಡಿಸುತ್ತದೆ.

ಇತರ ಪ್ರಯೋಜನಗಳು

ಆ್ಯನ್ಯುಟಿ ಯೋಜನೆಗಳಲ್ಲಿ ಹೂಡಿಕೆ ಮಾಡಿದ ಮೊತ್ತಕ್ಕೆ ಪ್ರತಿಯಾಗಿ ಸಿಗುವ ಖಚಿತ ಹಾಗೂ ಸಾಮಾನ್ಯ ಸಂದರ್ಭಗಳಲ್ಲಿ ಹಣದುಬ್ಬರದ ಪ್ರಮಾಣಕ್ಕಿಂತ ಹೆಚ್ಚಿನ ಮಟ್ಟದ ಗಳಿಕೆಯು ಉತ್ತಮ ಮೊತ್ತವನ್ನು ಒಗ್ಗೂಡಿಸಲು ನೆರವಾಗುತ್ತದೆ.

ಸರಿಯಾಗಿ ಯೋಜಿಸಿ ಆ್ಯನ್ಯುಟಿ ಪಡೆದಲ್ಲಿ, ನಿವೃತ್ತಿಯ ನಂತರದಲ್ಲಿ ಹೂಡಿಕೆದಾರರು ನಿಜ ಅರ್ಥದಲ್ಲಿ ಹಣಕಾಸಿನ ಸ್ವಾತಂತ್ರ್ಯವನ್ನು ಹೊಂದಲು ಸಾಧ್ಯ. ನಿತ್ಯ ಜೀವನದ ವೆಚ್ಚಗಳನ್ನು ನಿಭಾಯಿಸಲು ಸಾಲ ಪಡೆಯುವ ಪ್ರಮೇಯ ಎದುರಾಗುವುದಿಲ್ಲ, ಜೀವನದ ಪ್ರಮುಖವಾದ ಕೆಲವು ಹಣಕಾಸಿನ ಗುರಿಗಳನ್ನು ಈಡೇರಿಸಿಕೊಳ್ಳುವುದಕ್ಕೂ ಸಾಲದ ಅಗತ್ಯ ಇರುವುದಿಲ್ಲ. ಹಣಕಾಸಿನ ಚಿಂತೆಗಳಿಂದ ಮುಕ್ತರಾದಾಗ ನಿವೃತ್ತಿ ನಂತರದ ಜೀವನವನ್ನು ಹೆಚ್ಚು ಖುಷಿಯಿಂದ ಕಳೆಯಲು ಸಾಧ್ಯ.

ಹೂಡಿಕೆದಾರ ಮೃತಪಟ್ಟ ಸಂದರ್ಭದಲ್ಲಿ ಹಲವು ಆ್ಯನ್ಯುಟಿ ಯೋಜನೆಗಳು ವಿಶೇಷ ಪ್ರಯೋಜನಗಳನ್ನು ಕಲ್ಪಿಸುತ್ತವೆ. ಇವು ಒಂದು ಬಗೆಯಲ್ಲಿ ಜೀವ ವಿಮೆಯ ರೀತಿಯಲ್ಲಿ ಪ್ರಯೋಜನಕ್ಕೆ ಬರುತ್ತವೆ. ಈ ಪ್ರಯೋಜನವು, ಹೂಡಿಕೆದಾರ ಅಕಾಲಿಕವಾಗಿ ಸಾವನ್ನಪ್ಪಿದರೂ ಅವರ ಸಂಗಾತಿಗೆ ಹಣಕಾಸಿನ ಭದ್ರತೆಯನ್ನು ಒದಗಿಸುತ್ತದೆ. ಅಕಾಲಿಕ ಮರಣದ ನಂತರದಲ್ಲಿ ಸಂಗಾತಿಗೆ ಒಂದು ಬಾರಿಗೆ ದೊಡ್ಡ ಇಡುಗಂಟು ಸಿಗಬಹುದು ಅಥವಾ ಅವರಿಗೆ ನಿರಂತರ ಆ್ಯನ್ಯುಟಿ ಆದಾಯ ಸಿಗಬಹುದು.

ನಿರಂತರವಾದ ಹಾಗೂ ನಿಶ್ಚಿತವಾದ ಆದಾಯವು ನಿವೃತ್ತಿಯ ನಂತರದಲ್ಲಿ ಅಲ್ಪಾವಧಿಯ ಮತ್ತು ದೀರ್ಘಾವಧಿಯ ಹಣಕಾಸಿನ ಗುರಿಗಳ ಈಡೇರಿಕೆಗೆ ಭದ್ರವಾದ ಬುನಾದಿಯೊಂದನ್ನು ಹಾಕಿಕೊಡುತ್ತದೆ. ಪ್ರವಾಸ, ಹೊಸ ಹವ್ಯಾಸಗಳನ್ನು ಅಳವಡಿಸಿಕೊಳ್ಳುವುದು ಅಥವಾ ಮುಂದೆ ಬರಲಿರುವ ದೊಡ್ಡ ವೆಚ್ಚವೊಂದನ್ನು ನಿಭಾಯಿಸಲು ಇದು ನೆರವಾಗುತ್ತದೆ.

ತೆರಿಗೆ ಪ್ರಯೋಜನ ಆ್ಯನ್ಯುಟಿ ಯೋಜನೆಗಳು ಆಕರ್ಷಕವಾದ ತೆರಿಗೆ ಪ್ರಯೋಜನಗಳನ್ನೂ ಹೊತ್ತು ತರುತ್ತವೆ. ಆ್ಯನ್ಯುಟಿ ಪಾಲಿಸಿಗೆ ಪಾವತಿಸುವ ಪ್ರೀಮಿಯಂ ಮೊತ್ತಕ್ಕೆ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 80ಸಿ ಅಡಿಯಲ್ಲಿ ವಿನಾಯಿತಿ ಇರುತ್ತದೆ. ಇದರಿಂದಾಗಿ, ನಿವೃತ್ತಿ ನಂತರದ ಬದುಕಿಗೆ ಮಾಡುವ ಯೋಜನೆಯು ಇನ್ನಷ್ಟು ಆಕರ್ಷಕವಾಗುತ್ತದೆ.

ಆ್ಯನ್ಯುಟಿ ಯೋಜನೆಗಳಲ್ಲಿ ಮಾಡುವ ಹೂಡಿಕೆಗಳು ಬಹಳ ಖಚಿತವಾದ ಗಳಿಕೆಯನ್ನು ತಂದುಕೊಡುತ್ತವೆ. ಇಲ್ಲಿ ಮಾಡುವ ಹೂಡಿಕೆಗಳಲ್ಲಿ ರಿಸ್ಕ್ ಬಹಳ ಕಡಿಮೆ. ತೊಡಗಿಸಿದ ಬಂಡವಾಳವು ಕರಗುವುದಿಲ್ಲ ಎಂಬ ಖಾತರಿ ನೀಡುತ್ತವೆ. ವರ್ಷಗಳು ಕಳೆದಂತೆ ಹೂಡಿಕೆದಾರರ ಸಂಪತ್ತು ವೃದ್ಧಿಸುತ್ತದೆ, ಹಲವು ಆ್ಯನ್ಯುಟಿ ಯೋಜನೆಗಳನ್ನು ಹಣದುಬ್ಬರದ ಪರಿಣಾಮವನ್ನು ನಿಭಾಯಿಸಲು ಸಾಧ್ಯವಾಗುವಂತೆ ರೂಪಿಸಲಾಗಿರುತ್ತದೆ. ಇದರಿಂದಾಗಿ ಹೂಡಿಕೆದಾರರ ಖರೀದಿ ಶಕ್ತಿಯು ಅವರ ನಿವೃತ್ತಿಯ ನಂತರವೂ ಕುಗ್ಗುವುದಿಲ್ಲ.

ಒಟ್ಟಾರೆಯಾಗಿ ಹೇಳುವುದಾದರೆ, ಆ್ಯನ್ಯುಟಿ ಯೋಜನೆಗಳು ಹಣಕಾಸಿನ ಭವಿಷ್ಯವನ್ನು ಭದ್ರಪಡಿಸಿಕೊಳ್ಳಲು ಬಹಳ ಶಕ್ತಿಶಾಲಿಯಾದ ಹೂಡಿಕೆ ಉತ್ಪನ್ನಗಳು. ಒಳ್ಳೆಯ ಆ್ಯನ್ಯುಟಿ ಉತ್ಪನ್ನವನ್ನು ಖರೀದಿಸುವ ಮೂಲಕ ವ್ಯಕ್ತಿಗಳು ತಮ್ಮ ಉಳಿತಾಯದ ಮೊತ್ತವನ್ನು ಬಹಳ ನಂಬಿಕಸ್ಥವಾದ ಆದಾಯ ಮೂಲವನ್ನಾಗಿ ಪರಿವರ್ತಿಸಿಕೊಳ್ಳಬಹುದು. ಇದರಿಂದ ಹಣಕಾಸಿನ ಅಗತ್ಯಗಳನ್ನು ಪೂರೈಸಿಕೊಳ್ಳಲು, ಜೀವನದ ಮುಸ್ಸಂಜೆಯ ದಿನಗಳನ್ನು ಹಣಕಾಸಿನ ಚಿಂತೆ ಇಲ್ಲದೆ ಕಳೆಯಲು ಸಾಧ್ಯವಾಗುತ್ತದೆ.

ಲೇಖಕ ಗೋಡಿಜಿಟ್ ಜೀವ ವಿಮಾ ಕಂಪನಿಯ ಎಂ.ಡಿ ಹಾಗೂ ಸಿಇಒ

ಆರ್‌ಬಿಐ ಒಂಬುಡ್ಸ್‌ಮನ್‌ಗೆ ದೂರು ನೀಡುವುದು ಹೇಗೆ?

ಮಾಹಿತಿ ಕಣಜ

ಹಣಕಾಸು ಕಂಪನಿಗಳು ಒದಗಿಸುವ ಸೇವೆಗಳಲ್ಲಿ ಲೋಪಗಳು ಇದ್ದರೆ, ಅದರ ಬಗ್ಗೆ ದೂರು ದಾಖಲಿಸಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಅಡಿಯಲ್ಲಿ ಒಂಬುಡ್ಸ್‌ಮನ್ ವ್ಯವಸ್ಥೆ ಕಾರ್ಯನಿರ್ವಹಿಸುತ್ತಿದೆ. ಈ ವ್ಯವಸ್ಥೆಯಲ್ಲಿ ಒಂದು ತಿಂಗಳಿಗಿಂತ ಹೆಚ್ಚಿನ ಅವಧಿಯಿಂದ ಬಾಕಿ ಇರುವ ದೂರುಗಳನ್ನು ಇತ್ಯರ್ಥಪಡಿಸಲು ಆರ್‌ಬಿಐ ಅಭಿಯಾನವೊಂದನ್ನು ಜನವರಿಯಿಂದ ಆರಂಭಿಸಲಿದೆ. ಎರಡು ತಿಂಗಳು ಈ ಅಭಿಯಾನ ನಡೆಯಲಿದೆ.

ಈ ಹೊತ್ತಿನಲ್ಲಿ ಒಂಬುಡ್ಸ್‌ಮನ್ ವ್ಯವಸ್ಥೆ ಅಂದರೆ ಏನು, ಅದು ಯಾವ ಬಗೆಯ ದೂರುಗಳನ್ನು ಇತ್ಯರ್ಥಪಡಿಸುತ್ತದೆ ಎಂಬುದನ್ನು ತಿಳಿದುಕೊಳ್ಳುವುದು ಸೂಕ್ತವಾಗಬಹುದು.

ಆರ್‌ಬಿಐ ನೋಂದಾಯಿತ ಹಣಕಾಸಿನ ಕಂಪನಿಗಳ 'ಸೇವೆಗಳಲ್ಲಿ ಲೋಪ'ಗಳ ವಿಚಾರವಾಗಿ ಒಂಬುಡ್ಸ್‌ಮನ್ ವ್ಯವಸ್ಥೆಗೆ ದೂರು ಸಲ್ಲಿಸಬಹುದು. 'ನೋಂದಾಯಿತ ಕಂಪನಿಯು ಒದಗಿಸಬೇಕಿರುವ ಯಾವುದೇ ಹಣಕಾಸಿನ ಸೇವೆಯಲ್ಲಿನ ಕೊರತೆ ಅಥವಾ ಅಸಮರ್ಪಕ ಸೇವೆಯು ದೂರು ನೀಡುವುದಕ್ಕೆ ಅರ್ಹವಾಗುತ್ತದೆ' ಎಂದು ಆರ್‌ಬಿಐ ವ್ಯಾಖ್ಯಾನಿಸಿದೆ.

ಆದರೆ, ಸೇವೆಯು ಸಮರ್ಪಕವಾಗಿ ದೊರೆತಿಲ್ಲ ಎಂದಾದರೆ ಅದರ ಕುರಿತ ದೂರನ್ನು ಮೊದಲ ಹಂತದಲ್ಲೇ ಒಂಬುಡ್ಸ್‌ಮನ್‌ಗೆ ಸಲ್ಲಿಸಬಾರದು ಎಂದು ಕೂಡ ಆರ್‌ಬಿಐ ಹೇಳಿದೆ.

ಸೇವೆಗಳು ಸರಿಯಾಗಿ ಸಿಕ್ಕಿಲ್ಲ ಎಂದಾದರೆ ವ್ಯಕ್ತಿಯು ಮೊದಲಿಗೆ ದೂರನ್ನು ಸಂಬಂಧಪಟ್ಟ ಹಣಕಾಸಿನ ಕಂಪನಿಗೆ ಸಲ್ಲಿಸಬೇಕು. ದೂರನ್ನು ಸ್ವೀಕರಿಸಿದ ಆ ಕಂಪನಿಯು 30 ದಿನಗಳಲ್ಲಿ ಯಾವುದೇ ಪ್ರತಿಕ್ರಿಯೆ ನೀಡದಿದ್ದರೆ, ಕಂಪನಿಯು ಆ ದೂರನ್ನು ಪೂರ್ತಿಯಾಗಿ ಅಥವಾ ದೂರಿನ ಒಂದಿಷ್ಟು ಅಂಶಗಳನ್ನು ತಿರಸ್ಕರಿಸಿದರೆ, ಕಂಪನಿಯು ತೆಗೆದುಕೊಂಡ ಪರಿಹಾರ ಕ್ರಮವು ದೂರುದಾರ ವ್ಯಕ್ತಿಗೆ ಸಮಾಧಾನ ನೀಡದೆ ಇದ್ದರೆ ಒಂಬುಡ್ಸ್‌ಮನ್‌ಗೆ ದೂರು ದಾಖಲಿಸಬಹುದು.

ದೂರನ್ನು ಮೊದಲು ಸಂಬಂಧಪಟ್ಟ ಹಣಕಾಸಿನ ಕಂಪನಿಗೆ ಸಲ್ಲಿಸದೆ ಅಥವಾ ಹಣಕಾಸು ಕಂಪನಿಗೆ ದೂರು ಸಲ್ಲಿಸಿದ 30 ದಿನಗಳು ಕಳೆಯುವ ಮೊದಲೇ ಒಂಬುಡ್ಸ್‌ಮನ್‌ಗೆ ದೂರು ಸಲ್ಲಿಸಿದರೆ ಅದು ಪರಿಗಣನೆಗೆ ಯೋಗ್ಯವಾಗುವುದಿಲ್ಲ.

ದೂರು ಸಲ್ಲಿಸುವುದು ಹೇಗೆ?: ಅಂಚೆಯ ಮೂಲಕವೂ ದೂರನ್ನು ಸಲ್ಲಿಸಬಹುದು. ಆದರೆ ಆನ್‌ಲೈನ್ ಮೂಲಕ ದೂರು ಸಲ್ಲಿಸುವಿಕೆ ಸುಲಭ ಎಂಬುದು ಹಲವರ ಅಭಿಪ್ರಾಯ. ದೂರು ಸ್ವೀಕರಿಸಲಿಕ್ಕೆಂದು cms.rbi.org.in ವಿಳಾಸದ ಪೋರ್ಟಲ್ ರೂಪಿಸಲಾಗಿದೆ.

ದೂರು ಸಲ್ಲಿಸುವ ವ್ಯಕ್ತಿಯು ಕೆಲವು ವಿವರಗಳನ್ನು ಅಗತ್ಯವಾಗಿ ಒದಗಿಸಬೇಕು. ಹೆಸರು, ಲಿಂಗ ಮತ್ತು ವಯಸ್ಸು ನಮೂದಿಸಬೇಕು. ದೂರುದಾರನ ಪೂರ್ಣ ಅಂಚೆ ವಿಳಾಸ, ಇ-ಮೇಲ್ ವಿಳಾಸ, ಮೊಬೈಲ್ ದೂರವಾಣಿ ಸಂಖ್ಯೆ ನೀಡಬೇಕು.

ಯಾವ ಕಂಪನಿಯ ವಿರುದ್ಧ ದೂರು ನೀಡಲಾಗುತ್ತಿದೆಯೋ ಆ ಕಂಪನಿಯ ಹೆಸರು ಮತ್ತು ಶಾಖೆಯ ವಿಳಾಸ, ದೂರು ನೀಡಬೇಕಾದ ಪರಿಸ್ಥಿತಿ ಸೃಷ್ಟಿಯಾಗಿದ್ದುದರ ಸಂಪೂರ್ಣ ವಿವರ, ವಹಿವಾಟಿನ ವಿವರಗಳು, ದೂರುದಾರ ವ್ಯಕ್ತಿಯ ಖಾತೆ ಸಂಖ್ಯೆ, ದೂರಿಗೆ ಅಗತ್ಯವಿದ್ದಲ್ಲಿ ಡೆಬಿಟ್ ಕಾರ್ಡ್ ಅಥವಾ ಕ್ರೆಡಿಟ್ ಕಾರ್ಡ್ ಸಂಖ್ಯೆಯನ್ನು ಒದಗಿಸಬೇಕು.

ಹಣಕಾಸಿನ ಕಂಪನಿಗೆ ಮೊದಲು ಸಲ್ಲಿಸಿದ್ದ ದೂರಿನ ವಿವರಗಳನ್ನು ನೀಡಬೇಕು, ಅಲ್ಲಿಂದ ದೊರೆತ ಪ್ರತಿಕ್ರಿಯೆಯ ಬಗ್ಗೆಯೂ ಉಲ್ಲೇಖಿಸಬೇಕು. ದೂರು ದಾಖಲಿಸಿದ ನಂತರದಲ್ಲಿ ಅದರ ಸ್ಥಿತಿಗತಿಯ ಬಗ್ಗೆ ಪೋರ್ಟಲ್ ಮೂಲಕವೇ ವಿವರ ಪಡೆದುಕೊಳ್ಳಬಹುದು.

(ಆಧಾರ: ಆರ್‌ಬಿಐ)

ಅಸ್ತ್ರಾ ಮೈಕ್ರೊವೇವ್ ಪ್ರಾಡಕ್ಟ್ಸ್ ಲಿಮಿಟೆಡ್

ಬ್ರೋಕರೇಜ್ ಮಾತು

ಅಸ್ತ್ರಾ ಮೈಕ್ರೊವೇವ್ ಪ್ರಾಡಕ್ಟ್ಸ್ ಲಿಮಿಟೆಡ್‌ನ (ಎಎಂಪಿಎಲ್) ಷೇರಿನ ಬೆಲೆ ₹1,100 ಆಗಲಿದೆ ಎಂದು ಮೋತಿಲಾಲ್ ಫೈನಾನ್ಶಿಯಲ್ ಸರ್ವಿಸಸ್ ಹೇಳಿದೆ. ಅಸ್ತ್ರಾ ಮೈಕ್ರೊವೇವ್ ಪ್ರಾಡಕ್ಟ್ಸ್ ಲಿಮಿಟೆಡ್, ರೇಡಿಯೊ ಫ್ರೀಕ್ವೆನ್ಸಿ ಮತ್ತು ಮೈಕ್ರೊವೇವ್ ಸಿಸ್ಟಮ್ಸ್‌ಗಳನ್ನು ಭಾರತದಲ್ಲಿ ವಿನ್ಯಾಸಗೊಳಿಸಿ ಮತ್ತು ತಯಾರಿಸುತ್ತದೆ.

ಎಎಂಪಿಎಲ್, ಪ್ರಸಕ್ತ ವರ್ಷದ ಸೆಪ್ಟೆಂಬರ್ ವೇಳೆಗೆ ₹2,200 ಕೋಟಿ ಮೌಲ್ಯದ ಕಾರ್ಯಾದೇಶ ಪಡೆದುಕೊಂಡು, ವಿತರಣೆ ಮಾಡಿದೆ. 2020–21ರಿಂದ 2024–25ರವರೆಗೆ ಕಂಪನಿಯ ವರಮಾನದ ಸಂಯುಕ್ತ ವಾರ್ಷಿಕ ಬೆಳವಣಿಗೆ ದರ (ಸಿಎಜಿಆರ್) ಶೇ 13ರಷ್ಟಿದೆ. ಕಂಪನಿಯ ತೆರಿಗೆ, ಬಡ್ಡಿ, ಸಾಲ ತೀರುವಳಿ (ಇಬಿಐಟಿಡಿಎ) ನಂತರದ ಲಾಭವು ಶೇ 25.6ರಷ್ಟಾಗಿದೆ.

2024–25ರಿಂದ 2027–28ರವರೆಗೆ ವರಮಾನದ ಸಿಎಜಿಆರ್ ಶೇ 18ರಷ್ಟಿರುವ ನಿರೀಕ್ಷೆ ಇದೆ. ತೆರಿಗೆ ನಂತರದ ಲಾಭದ (ಪಿಎಟಿ) ಸಿಎಜಿಆರ್ ಶೇ 23ರಷ್ಟಾಗಲಿದೆ ಎಂದು ಹೇಳಿದೆ.

ರಕ್ಷಣಾ ವಲಯದ ಎಲೆಕ್ಟ್ರಾನಿಕ್ಸ್ ವಿಭಾಗದಲ್ಲಿ ಎಎಂಪಿಎಲ್‌ಗೆ ದೀರ್ಘಾವಧಿ ಅವಕಾಶ ಇದೆ.

ರಕ್ಷಣಾ ಸಚಿವಾಲಯ ಮತ್ತು ಸರ್ಕಾರಿ ಸ್ವಾಮ್ಯದ ರಕ್ಷಣಾ ಕಂಪನಿಗಳಿಂದ ಹೆಚ್ಚಿನ ಕಾರ್ಯಾದೇಶ ಲಭ್ಯವಾಗಲಿದೆ.

ಹೀಗಾಗಿ 2026–27ರಿಂದ 2029–30ರಲ್ಲಿ ಕಂಪನಿಯ ವರಮಾನ ಹೆಚ್ಚಾಗುವ ನಿರೀಕ್ಷೆ ಇದೆ ಎಂದು ಹೇಳಿದೆ.

ಬುಧವಾರದ ವಹಿವಾಟಿನ ಅಂತ್ಯದ ವೇಳೆಗೆ ಅಸ್ತ್ರಾ ಮೈಕ್ರೊವೇವ್ ಪ್ರಾಡಕ್ಟ್ಸ್ ಲಿಮಿಟೆಡ್‌ನ ಷೇರಿನ ಬೆಲೆ ₹893.35 ಇದೆ.

(ಬ್ರೋಕರೇಜ್ ಕಂಪನಿಗಳು ನೀಡುವ ವಿವರ, ಮಾಹಿತಿಗೆ ಪತ್ರಿಕೆ ಹೊಣೆಯಲ್ಲ)

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ — ಇಂಗ್ಲಿಷ್

ಎಸ್ಸೆಸ್ಸೆಲ್ಸಿ ದ್ವಿತೀಯ ಭಾಷೆ ಇಂಗ್ಲಿಷ್ ವ್ಯಾಕರಣ ಮಾದರಿ ಪ್ರಶ್ನೋತ್ತರಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಮಾಹಿತಿ: ಶಂಕರನಾರಾಯಣ ರಾವ್, ನಿವೃತ್ತ ಇಂಗ್ಲಿಷ್ ಅಧ್ಯಾಪಕ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

Second Language ENGLISH

Prose- Chapter 6 :The Discovery

Check Your Understanding

Share Your Responses

1. Some physical features of Columbus are described/ given in the text. Based on your reading complete the table.

Physical Features of Columbus

Physique	Age	Hair	Complexion	Face

Ans: Physical Features of Columbus
1. **Physique** - Tall and well built
2. **Age** – 46 years
3. **Hair** – Prematurely white
4. **Complexion**- fair almost ruddy
5. **Face**- in repose is melancholi

2. Usually, we sing songs to express our joys and sorrows. Here the play begins with a song. What mood does this convey?
Ans: The play begins with a song. The song was sung by Seamen. The song conveys the dissatisfied and discontented mood.

3.'There are limits to patients', says Diego. What does this suggest about Diego's state of mind?
Ans: Diego had lost his hopes. He was not happy with his captain's decision. He thought that going to discover the new land was a waste of time. So he had impatience. Whenever Pedro asked him, he said the above words that show his angry mood.

4. Who do you think has the lives of fifty in his hands? How?
Ans: Columbus had the lives of fifty in his hands, He was the captain of the ship. After many days of their voyage, it didn't give success. All are home-sick and wanted to go back home. But the captain did not agree for this. So all had thought their lives were in his hand.

Share your Responses :

1. "A good sailor knows his place," Says Columbus to Diego. The statement is .... (Choose the right answer from the options and complete the sentence).
a) a piece of advice
b) an indirect command
c) a statement
Ans: (b) an indirect command

2. Which reaction of Diego to the sentence above justifies your choice? Quote the phrase indicating his reaction.
Ans: By hearing the above statement Diego with repressed firry said yes sir. The phrase is scarcely concealing a scowl, goes off the above reaction of Diego states that it was an indirect command.

3. **How does Pedro try to defend the drunken, seamen? Was he right in defending them?**
Ans: Pedro defends the drunken seamen by saying that they are simple men without the vision of Columbus, and they need relaxation. Pedro is right because the seamen follow the orders of Columbus without sharing his passion. Often they are likely to get frustrated with the feeling that their voyage is a purposeless one and they are risking their lives for nothing. At times like this, they need to drink to get over their frustration.

4 **What is termed as his worst enemy by Columbus?**
Ans: Columbus felt sorry because he had a short (quick) temper and an uncontrolled tongue. His worst enemy was his uncontrolled tongue.

5 **The dialogue between Columbus and Pedro in section 2 reveals this trait of Columbus – (Choose the most appropriate response).**
a. dictatorial attitude
b. quick temper
c. hatred towards the seamen
d. selfishness
Ans: a. dictatorial attitude
Expln:- indicates that Columbus possesses a dictatorial attitude. He is portrayed as a strict captain who believes in absolute discipline and authority, as evidenced by his statement "Discipline knows no buts". This high-handed approach leads him to disregard the seamen's feelings and grievances.

6. Columbus is always furious when he hears the song 'Here's a keg o' rum,' What makes him react so?
Ans: Being a Captain, Columbus had a great responsibility. By nature, he had a strong will. He was not ready to give up his task. But the Seamen are very simple and ordinary persons and they were homesick. The discontented seamen are sung the song to criticize his captain. So whenever he heard the song he became furious because of this reason.

Share your Responses:

1.This section reveals the behavior of ________ (Fill in the blank).
Ans:This section reveals the behavior of Pepe.

2. Why do you think Pepe prefers to be in the company of Columbus?
Ans: Pepe was a young boy. He had great respect for Columbus. Pepe was an obedient, loyal and devoted servant of Columbus. The Seamen were against Columbus. So Pepe likes or prefers to be in the company of his beloved captain than any other.

3. Pepe is always eager to say that he is ever….. to Columbus. (Fill in the blank).
Ans: Pepe is always eager to say that he is ever believed in Columbus.

4. Pepe warns Columbus about some people. Who are they?
Ans: Pepe warns Columbus about Seamen, the Seamen were discontented, and sometimes they were desperate

(Contd………)

ಪಿಯುಸಿ ಪರೀಕ್ಷೆ ದಿಕ್ಸೂಚಿ — Biology

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

MOLECULAR BASIS OF INHERITANCE

47. Why doesn't both the strands of DNA act as template for RNA synthesis? (…..Contd)
Ans:- (c)If two strands of RNA are formed from one DNA molecule simultaneously, being complementary, RNA will become double stranded. It will stop the translation step and protein formation will not be there. Thus, transcription step will not be of any use for protein synthesis.

48. Which are the important features of the mRNA?
Ans:- The important features of the mRNA are –
(a) It is a single stranded polynucleotide chain with a small pseudohelix.
(b) The length of the mRNA is more than the length of the protein that is to be synthesised.
(c) Eukaryotic mRNA has a cap structure but the prokaryotic mRNA does not have the cap structure.
(e) There is a leader sequence that is a noncoding region next to the cap which is made up of about 200 or more number of nucleotides.
(f) The leader sequence is followed by the initiator codon, which is generally the AUG.
(g) The coding region follows the initiator codon.
(h) The terminator codon follows the coding region.
(i) ploy A tail is present in the mRNA of eukaryotic cells but not present prokaryotic cells.

49. What are the characteristics of Genetic Code?
Ans:- The characteristics of Genetic Code are –
a) Triplet nature – Genetic code is triplet code where three adjacent nitrogen bases specify one amino acid, e.g., UGG for tryptophan, AUG for methionine.
b) Non-overlapping – Three successive nucleotides or nitrogen bases code for only one amino acid. None of these nitrogen bases become part of any other codon.
c) Commaless – Genetic code does not possess punctuations. Reading of the genetic code, when once started, is continuous till the end.
d) Specificity or Unambiguity – genetic code is specific as well as unambiguous.
e) Universality – Same codon specifies the same amino acid from bacteria to human beings. Exceptions, however, occur in some mitochondrial and viral genes.
f) Number – The total codons are 64 in number. Most of them specify amino acids with some functioning as start and stop signals.
g) Initiation Codons – They function as start signals for the synthesis of polypeptides. Their number is two, AUG or methionine codon an d GUG or valine codon.
h) Termination Codons – They are stop signals which when encountered cause termination of polypeptide synthesis. These codons are also called nonsense codons because they do not specify any amino acid. The various termination codons are UAA (ochre), UAG (amber) and UGA (opal).
i) Polarity – The code is read in 5` → 3` direction. Usually the code present on mRNA is recognised as genetic code. Its complementary code present on template DNA is not considered. If DNA code is to be mentioned, the same is the one which is present on the sense strand because of it the sense strand is also called coding strand. Here the code is similar to that of mRNA with replacement of U with T.
j) Degeneracy – Out of 64 codons only 3 signify stop signals. Only two codons specify a single amino acids. They are AUG for methionine and UGG for tryptophan. Three amino acids have 6 codons each, 5 amino acids 4 codons, one amino acid with 3 codons and 9 amino acids are specified by two codons each.
k) Collinearity – Both DNA (mRNA) and polypeptide have linear arrangements of components. The sequence of amino acids present in polypeptide corresponds to sequence of nitrogen bases of DNA with three successive nitrogen bases forming a single codon. A change in any codon due to addition, deletion or replacement of nucleotides results in change in the reading of genetic code as well as incorporation of amino acids in polypeptide.

50. What is a sensor gene?
Ans:- A sensor gene is meant for picking up information of the intracellular environment. The information is contained in various metabolites, vitamins, hormones, ions, pathogens etc. Any of them can function as a transcription factor.

As soon as it attaches to the sensor gene, the nearby integrater gene is activated to produce activator RNA for controlling and coordinating functioning of one to several structural genes of metabolic pathway.

51. What are Enhancer – Silencer Genes?
Ans:- Enhancer – Silencer Genes are genes which change the rate of transcription of structural genes.

(Contd……..)

27 ಲಕ್ಷ ಜನರಲ್ಲಿ ಮಧುಮೇಹ ಪತ್ತೆ

ಗೃಹ ಆರೋಗ್ಯ: ರೋಗ ಪತ್ತೆಗೆ 30 ವರ್ಷ ಮೇಲ್ಪಟ್ಟವರಿಗೆ ಮನೆ ಬಾಗಿಲಿನಲ್ಲೇ ತಪಾಸಣೆ

• ವರುಣ ಹೆಗಡೆ

ಬೆಂಗಳೂರು: ಬದಲಾದ ಜೀವನಶೈಲಿ, ಆಹಾರ ಪದ್ಧತಿ ಸೇರಿ ವಿವಿಧ ಕಾರಣಗಳಿಂದ ಮಧುಮೇಹ ರೋಗಿಗಳ ಸಂಖ್ಯೆ ಹೆಚ್ಚುತ್ತಿದ್ದು, ಆರೋಗ್ಯ ಇಲಾಖೆಯು ‘ಗೃಹ ಆರೋಗ್ಯ’ ಯೋಜನೆಯಡಿ ನಡೆಸಿದ ತಪಾಸಣೆಯಲ್ಲಿ 27.62 ಲಕ್ಷಕ್ಕೂ ಅಧಿಕ ಮಂದಿಯಲ್ಲಿ ಮಧುಮೇಹ ಪತ್ತೆಯಾಗಿದೆ.

ಆರಂಭಿಕ ಹಂತದಲ್ಲಿಯೇ ರೋಗ ಪತ್ತೆ ಮಾಡಿ, ಚಿಕಿತ್ಸೆ ಒದಗಿಸುವ ಉದ್ದೇಶದಿಂದ ‘ಗೃಹ ಆರೋಗ್ಯ’ ಯೋಜನೆಯಡಿ ರಾಜ್ಯದಾದ್ಯಂತ ತಪಾಸಣೆ ನಡೆಸಲಾಗುತ್ತಿದೆ. ಮನೆ ಬಾಗಿಲಲ್ಲಿಯೇ ವಿವಿಧ ಅನಾರೋಗ್ಯ ಸಮಸ್ಯೆಗಳ ಪತ್ತೆಗೆ ಈ ಯೋಜನೆಯನ್ನು ಪ್ರಾಯೋಗಿಕವಾಗಿ 2024ರ ಅಕ್ಟೋಬರ್‌ನಲ್ಲಿ ಕೋಲಾರದಲ್ಲಿ ಪ್ರಾರಂಭಿಸಲಾಗಿತ್ತು. 2025ರ ಜೂನ್‌ನಲ್ಲಿ ಈ ಯೋಜನೆಯನ್ನು ರಾಜ್ಯದಾದ್ಯಂತ ವಿಸ್ತರಿಸಲಾಗಿತ್ತು. ಮಧುಮೇಹ ಪತ್ತೆಗೆ ಸಂಬಂಧಿಸಿದಂತೆ ನವೆಂಬರ್‌ವರೆಗೆ ನಡೆಸಲಾದ ತಪಾಸಣೆಯಲ್ಲಿ 13.29 ಲಕ್ಷ ಪುರುಷರಲ್ಲಿ ಮಧುಮೇಹ ದೃಢಪಟ್ಟರೆ, 14.33 ಲಕ್ಷ ಮಹಿಳೆಯರಲ್ಲಿ ಈ ರೋಗ ಪತ್ತೆಯಾಗಿದೆ.

ಈ ವರ್ಷ ಏಪ್ರಿಲ್‌ನಿಂದ ನವೆಂಬರ್ ಅವಧಿಯಲ್ಲಿ ತಪಾಸಣೆಗೆ ಒಳಪಟ್ಟ 32.99 ಲಕ್ಷ ಪುರುಷರಲ್ಲಿ 3.64 ಲಕ್ಷ ಮಂದಿ, 33.92 ಲಕ್ಷ ಮಹಿಳೆಯಲ್ಲಿ 4 ಲಕ್ಷ ಮಂದಿಯಲ್ಲಿ ಮಧುಮೇಹ ಸಮಸ್ಯೆ ಹೊಸದಾಗಿ ಪತ್ತೆಯಾಗಿದೆ. ಯೋಜನೆಯಡಿ ಮಧುಮೇಹಿಗಳಿಗೆ ಅಗತ್ಯ ಔಷಧಗಳನ್ನು ಒದಗಿಸಿ, ಚಿಕಿತ್ಸೆಗಳನ್ನು ನೀಡಲಾಗಿದೆ. ಆರಂಭಿಕ ಹಂತದ ಸಮಸ್ಯೆ ಎದುರಿಸುತ್ತಿರುವವರಿಗೆ ಜೀವನಶೈಲಿ ಹಾಗೂ ಆಹಾರ ಪದ್ಧತಿಯಲ್ಲಿ ಬದಲಾವಣೆ ಸೇರಿ ವಿವಿಧ ಮಾರ್ಗದರ್ಶನವನ್ನು ವೈದ್ಯರನ್ನು ಒಳಗೊಂಡ ತಂಡ ನಿಯಮಿತವಾಗಿ ನೀಡುತ್ತಿದೆ.

20.50 ಲಕ್ಷ ಮನೆ ಭೇಟಿ: ಯೋಜನೆಯಡಿ ವೈದ್ಯರನ್ನೊಳಗೊಂಡ ತಂಡವು ಗ್ರಾಮೀಣ ಪ್ರದೇಶಗಳಲ್ಲಿ 30 ವರ್ಷ ಮೇಲ್ಪಟ್ಟವರನ್ನು ತಪಾಸಣೆ ಮಾಡುತ್ತಿದೆ. ಸಮುದಾಯ ಆರೋಗ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಸಂರಕ್ಷಣಾಧಿಕಾರಿಗಳು ಹಾಗೂ ಆಶಾ ಕಾರ್ಯಕರ್ತೆಯರನ್ನು ಒಳಗೊಂಡ ತಂಡವು 20.50 ಲಕ್ಷಕ್ಕೂ ಅಧಿಕ ಮನೆಗಳಿಗೆ ಭೇಟಿ ನೀಡಿದೆ. ಮಧುಮೇಹ ಮತ್ತು ಅಧಿಕ ರಕ್ತದೊತ್ತಡ ಸಮಸ್ಯೆ ಎದುರಿಸುತ್ತಿರುವವರಿಗೆ ಒಂದು ತಿಂಗಳಿಗೆ ಸಾಕಾಗುವಷ್ಟು ಮಾತ್ರೆಗಳನ್ನೂ ನೀಡಲಾಗುತ್ತಿದೆ. ಈ ಔಷಧವನ್ನು ಪ್ರತಿ ತಿಂಗಳು ಪರಿಶೀಲಿಸಿ, ಮುಂದುವರಿಕೆಗೆ ಅಗತ್ಯವಿರುವ ಮಾತ್ರೆಗಳನ್ನು ಒದಗಿಸಲಾಗುತ್ತಿದೆ.

‘ಯೋಜನೆಯು ಸದ್ಯ ಗ್ರಾಮೀಣ ಪ್ರದೇಶದಲ್ಲಿ ಜಾರಿಯಲ್ಲಿದ್ದು, ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ಆರಂಭಿಕ ಹಂತದಲ್ಲಿಯೇ ರೋಗ ಪತ್ತೆಗೆ ಯೋಜನೆ ಸಹಕಾರಿಯಾಗಿದೆ’ ಎಂದು ಆರೋಗ್ಯ ಇಲಾಖೆಯ ಸಾಂಕ್ರಾಮಿಕವಲ್ಲದ ರೋಗಗಳ ವಿಭಾಗದ ಉಪ ನಿರ್ದೇಶಕ ಡಾ. ರಘುನಂದನ್ ತಿಳಿಸಿದರು.

ಅಂಕಿ–ಅಂಶಗಳು

37,972 ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಆಶಾ ಕಾರ್ಯಕರ್ತೆಯರು

5,738 ಸಮುದಾಯ ಆರೋಗ್ಯಾಧಿಕಾರಿಗಳು

5,972 ಪ್ರಾಥಮಿಕ ಆರೋಗ್ಯ ಸಂರಕ್ಷಣಾಧಿಕಾರಿಗಳು

14 ರೋಗಗಳ ಪತ್ತೆಗೆ ತಪಾಸಣೆ

ಗೃಹ ಆರೋಗ್ಯ ಯೋಜನೆಯಡಿ 14 ಸಾಂಕ್ರಾಮಿಕವಲ್ಲದ ರೋಗಗಳ ಪತ್ತೆಗೆ ತಪಾಸಣೆ ಮಾಡಲಾಗುತ್ತಿದೆ. ಮಧುಮೇಹ, ಅಧಿಕ ರಕ್ತದೊತ್ತಡ, ಬಾಯಿ, ಸ್ತನ ಹಾಗೂ ಗರ್ಭಕಂಠದ ಕ್ಯಾನ್ಸರ್, ಮಾನಸಿಕ ಅಸ್ವಸ್ಥತೆ, ಮೂತ್ರಪಿಂಡ ಸಮಸ್ಯೆ, ಶ್ವಾಸಕೋಶ ಕಾಯಿಲೆ, ರಕ್ತಹೀನತೆ, ಕಣ್ಣಿನ ಸಮಸ್ಯೆ ಸೇರಿ ವಿವಿಧ ಅನಾರೋಗ್ಯ ಸಮಸ್ಯೆಗಳನ್ನು ಪತ್ತೆ ಮಾಡಲಾಗುತ್ತಿದೆ.

ಈ ಯೋಜನೆಯಡಿ ಅಗತ್ಯ ಇದ್ದವರಿಗೆ ಹೆಚ್ಚಿನ ಚಿಕಿತ್ಸೆಯನ್ನೂ ಒದಗಿಸಲಾಗುತ್ತಿದೆ. ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಶಂಕಿತ ಪ್ರಕರಣಗಳನ್ನು ದೃಢಪಡಿಸಿ, ಹೆಚ್ಚಿನ ಚಿಕಿತ್ಸೆಗೆ ಶಿಫಾರಸು ಮಾಡುತ್ತಾರೆ.

> **ಆರಂಭಿಕ ಹಂತದಲ್ಲಿಯೇ ರೋಗ ಪತ್ತೆಯಿಂದ ಮರಣ ತಡೆಯಲು ಸಾಧ್ಯ. ಆರೋಗ್ಯ ಭರವಸೆ ಒದಗಿಸುವ ಈ ಯೋಜನೆಯಡಿ ವಿವಿಧ ಅನಾರೋಗ್ಯ ಸಮಸ್ಯೆ ಪತ್ತೆ ಮಾಡಿ, ಉಚಿತವಾಗಿ ಚಿಕಿತ್ಸೆ ನೀಡಲಾಗುತ್ತಿದೆ**
> **ದಿನೇಶ್ ಗುಂಡೂರಾವ್,** ಆರೋಗ್ಯ ಸಚಿವ

ಪ್ರಜಾವಾಣಿ ಸಾಧಕಿಯರು
ನಾಮ ನಿರ್ದೇಶನಗಳಿಗೆ ಆಹ್ವಾನ

ಪ್ರಜಾವಾಣಿ ಸಾಧಕಿಯರು

‘ಪ್ರಜಾವಾಣಿ ಸಾಧಕಿಯರು’ ಪ್ರಶಸ್ತಿಗೆ ನಾಮ ನಿರ್ದೇಶನಗಳನ್ನು ಆಹ್ವಾನಿಸಲಾಗಿದೆ. ತಮ್ಮ ವೃತ್ತಿ ಅಥವಾ ಪ್ರವೃತ್ತಿ ಮೂಲಕ ಸುತ್ತಲಿನ ಜನರ ಬದುಕು ಪರಿವರ್ತನೆಗೊಳ್ಳಲು, ಇನ್ನಷ್ಟು ಉತ್ತಮಗೊಳ್ಳಲು ಕಾರಣರಾದ ಅಸಾಮಾನ್ಯ ಮಹಿಳೆಯರಿಗೆ ಈ ಪ್ರಶಸ್ತಿ ನೀಡಲಾಗುತ್ತಿದೆ. ನೀವು ಅಂಥವರಲ್ಲಿ ಒಬ್ಬರಾಗಿದ್ದರೆ ಅಥವಾ ನಿಮ್ಮ ಪರಿಚಿತ ವಲಯದಲ್ಲಿ ಅಂತಹ ಅಪೂರ್ವ ಮಹಿಳೆಯರು ಇದ್ದರೆ ಅವರ ವಿವರಗಳನ್ನು ನಮಗೆ ಕಳುಹಿಸಿ ಕೊಡಿ.

ವಿವರ ನಮ್ಮ ಕೈಸೇರಬೇಕಾದ ಕೊನೆಯ ದಿನಾಂಕ
ಜನವರಿ 05, 2026

ಕಳುಹಿಸಬೇಕಾದ ವಿಳಾಸ
pv@prajavani.co.in

(ಕ್ಯುಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕವೂ ನಾಮ ನಿರ್ದೇಶನಗಳನ್ನು ಕಳುಹಿಸಬಹುದು)

ಖರೀದಿ ಜೋರು

ಪ್ರಜಾವಾಣಿ ಚಿತ್ರ: ಸತೀಶ್ ಬಡಿಗೇರ

ದಾವಣಗೆರೆಯ ಪಿ.ಜೆ ಬಡಾವಣೆಯ ಚರ್ಚ್ ರಸ್ತೆಯಲ್ಲಿನ ಮಳಿಗೆಯೊಂದರಲ್ಲಿ ಕ್ರಿಸ್‌ಮಸ್ ಆಚರಣೆ ಅಂಗವಾಗಿ ವಿವಿಧ ಆಲಂಕಾರಿಕ ವಸ್ತುಗಳನ್ನು ಮಹಿಳೆಯರು ಖರೀದಿಸಿದರು

ಭೇದವಿಲ್ಲ, ಸರ್ವರೂ ಸಮಾನ

• ಜಯಸಿಂಹ ಆರ್.

ಸಂವಿಧಾನವೇ ಬೆಳಕು

ದೇಶದ ಸಮಸ್ತ ನಾಗರಿಕರು ಸಮಾನರು ಎಂದು ಸಾರಿ ಹೇಳುವ ನಮ್ಮ ಹೆಮ್ಮೆಯ ಸಂವಿಧಾನವು, ಪ್ರತಿಯೊಬ್ಬರಿಗೂ ಸಮಾನವಾದ ಹಕ್ಕು ಗಳನ್ನು ನೀಡಿದೆ. ಧರ್ಮ, ಜಾತಿ, ಲಿಂಗ, ಜನ್ಮಸ್ಥಳ, ಆರ್ಥಿಕ ಸ್ಥಿತಿ ಯಾವುದನ್ನೂ ಪರಿಗಣಿಸದೆ ಮೂಲಭೂತ ಹಕ್ಕುಗಳು ಎಲ್ಲರಿಗೂ ಅನ್ವಯವಾಗುತ್ತವೆ. ಪ್ರತಿ ನಾಗರಿಕರೂ ಸಂವಿಧಾನದ ಮುಂದೆ ಒಂದೇ ಎಂದು ಮೂಲಭೂತ ಹಕ್ಕುಗಳು ಪ್ರತಿಪಾದಿಸುತ್ತವೆ.

ಸಮಾನತೆ ಹಕ್ಕು: ಸಮಾನತೆಯ ವಿವಿಧ ಸ್ವರೂಪ ಮತ್ತು ಅವುಗಳನ್ನು ಕಾಯ್ದುಕೊಳ್ಳಬೇಕಾದ ಬಗೆಯನ್ನು ಸಂವಿಧಾನದ 14ರಿಂದ 18ನೇ ವಿಧಿಯವರೆಗೆ ವಿವರಿಸಲಾಗಿದೆ.

ಕಾನೂನಿನ ಮುಂದೆ ಸಮಾನತೆ: ದೇಶದ ಕಾನೂನಿನ ಮುಂದೆ ಪ್ರತಿಯೊಬ್ಬರೂ ಸಮಾನರು ಮತ್ತು ಕಾನೂನಿನ ರಕ್ಷಣೆ ಎಲ್ಲರಿಗೂ ಸಮಾನವಾಗಿ ದೊರೆಯಬೇಕು ಎಂದು ಈ ಹಕ್ಕು ಪ್ರತಿಪಾದಿಸುತ್ತದೆ.

ತಾರತಮ್ಯ ನಿಷೇಧ: ಧರ್ಮ, ಮೂಲವಂಶ, ಜಾತಿ, ಲಿಂಗ, ಭಾಷೆ, ಜನ್ಮಸ್ಥಳದ ಆಧಾರದಲ್ಲಿ ವ್ಯಕ್ತಿಯನ್ನು ತಾರತಮ್ಯಕ್ಕೆ ಗುರಿ ಮಾಡುವಂತಿಲ್ಲ ಎಂದು ಈ ಹಕ್ಕು ಪ್ರತಿಪಾದಿಸುತ್ತದೆ. ಇವುಗಳ ಆಧಾರದಲ್ಲಿ ಯಾವುದೇ ವ್ಯಕ್ತಿಗೆ ಹೋಟೆಲು, ಅಂಗಡಿ, ದೇವಾಲಯ, ಸಾರ್ವಜನಿಕ ಮನೋರಂಜನ ಸ್ಥಳಕ್ಕೆ ಪ್ರವೇಶ ನಿರಾಕರಿಸುವಂತಿಲ್ಲ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು, ಹಿಂದುಳಿದ ವರ್ಗಗಳು, ಆರ್ಥಿಕವಾಗಿ ದುರ್ಬಲ ವರ್ಗಗಳ ಜನರಿಗೆ ಶೈಕ್ಷಣಿಕ ಸಂಸ್ಥೆಗಳ ಪ್ರವೇಶಾತಿಯಲ್ಲಿ ವಿಶೇಷ ಸವಲತ್ತು ಕಲ್ಪಿಸಬಹುದು ಎಂದು 15 (2ಬಿ, 3, 4, 5, 6)ನೇ ಉಪವಿಧಿಗಳಲ್ಲಿ ವಿವರಿಸಲಾಗಿದೆ.

ಸರ್ಕಾರಿ ನೇಮಕಾತಿಯಲ್ಲಿ ಸಮಾನ ಅವಕಾಶ: ಸರ್ಕಾರದ ಯಾವುದೇ ನೇಮಕಾತಿಯಲ್ಲಿ ದೇಶದ ಎಲ್ಲ ನಾಗರಿಕರಿಗೂ ಸಮಾನ ಅವಕಾಶ ಇರಬೇಕು. ಪರಿಶಿಷ್ಟ ಜಾತಿ, ಪಂಗಡಗಳು, ಹಿಂದುಳಿದ ವರ್ಗಗಳು, ಆರ್ಥಿಕವಾಗಿ ದುರ್ಬಲ ವರ್ಗಗಳ ಜನರಿಗೆ, ಸರ್ಕಾರಿ ನೇಮಕಾತಿಯಲ್ಲಿ ವಿಶೇಷ ಸವಲತ್ತು ಕಲ್ಪಿಸಲು 16ನೇ ವಿಧಿಯಲ್ಲಿ ಅವಕಾಶ ಕಲ್ಪಿಸಲಾಗಿದೆ.

ಅಸ್ಪೃಶ್ಯತೆಯ ನಿರ್ಮೂಲನೆಯನ್ನು 18ನೇ ವಿಧಿಯಲ್ಲಿ ವಿವರಿಸಲಾಗಿದೆ. ಯಾವುದೇ ರೂಪದ ಅಸ್ಪೃಶ್ಯತೆ ಆಚರಣೆಯನ್ನು ಈ ವಿಧಿಯು ನಿಷೇಧಿಸುತ್ತದೆ. ಜತೆಗೆ ಅಸ್ಪೃಶ್ಯತೆಯ ಆಚರಣೆಯು ದಂಡನೀಯ ಅಪರಾಧ ಎಂಬುದನ್ನೂ ಈ ವಿಧಿ ವಿವರಿಸುತ್ತದೆ.

ಸ್ವಾತಂತ್ರ್ಯದ ಹಕ್ಕು: ಸಂವಿಧಾನ 19ನೇ ವಿಧಿಯಲ್ಲಿ ಸ್ವಾತಂತ್ರ್ಯದ ಹಕ್ಕುಗಳನ್ನು ವಿವರಿಸಲಾಗಿದೆ. ಯಾವುದೇ ವ್ಯಕ್ತಿಯು ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ, ಶಾಂತಿಯುತವಾಗಿ, ನಿರಾಯುಧರಾಗಿ ಸಭೆ ಸೇರುವ, ಸಂಘ–ಸಂಸ್ಥೆಗಳನ್ನು ಸ್ಥಾಪಿಸುವ ಮತ್ತು ಅವುಗಳ ಮೂಲಕ ಕಾರ್ಯನಿರ್ವಹಿಸುವ ಸ್ವಾತಂತ್ರ್ಯ, ದೇಶದ ಯಾವುದೇ ಭಾಗದಲ್ಲಿ ತನ್ನ ಇಚ್ಛೆಯ ಕುಲಕಸುಬು/ಕಸುಬು/ಉದ್ಯೋಗ/ವ್ಯವಹಾರ/ವ್ಯಾಪಾರ ನಡೆಸುವ ಸ್ವಾತಂತ್ರ್ಯವನ್ನು ಈ ಹಕ್ಕು ನೀಡುತ್ತದೆ.

- ಜೀವಿಸುವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ಹಕ್ಕನ್ನು 21ನೇ ವಿಧಿಯು ನೀಡುತ್ತದೆ. ಈ ಪ್ರಕಾರ ಪ್ರತಿಯೊಬ್ಬ ವ್ಯಕ್ತಿಗೂ ಜೀವಿಸುವ ಹಕ್ಕಿದೆ. ಯಾವುದೇ ವ್ಯಕ್ತಿ, ಗುಂಪು, ಸಂಸ್ಥೆ, ಸರ್ಕಾರವು ದೇಶದ ನಾಗರಿಕರ ಜೀವಿಸುವ ಹಕ್ಕಿಗೆ ಧಕ್ಕೆ ತರುವಂತಿಲ್ಲ.
- **ಉಚಿತ ಮತ್ತು ಕಡ್ಡಾಯ ಶಿಕ್ಷಣ:** ದೇಶದ ಪ್ರತಿಯೊಂದು ಮಗುವಿಗೂ ಅದರ 6ನೇ ವಯಸ್ಸಿನಿಂದ 14ನೇ ವಯಸ್ಸಿನವರೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸಬೇಕು ಎಂದು 21(ಎ) ವಿಧಿ ಹೇಳುತ್ತದೆ.
- **ಕಾನೂನು ಬಾಹಿರ ಬಂಧನದಿಂದ ರಕ್ಷಣೆ:** ಕಾರಣವನ್ನು ತಿಳಿಸದೆ ಮತ್ತು ನ್ಯಾಯಾಲಯಕ್ಕೆ ಹಾಜರುಪಡಿಸದೆ ಯಾವುದೇ ವ್ಯಕ್ತಿಯನ್ನು 24 ಗಂಟೆಗಳಿಗಿಂತ ಹೆಚ್ಚು ಅವಧಿಗೆ ಬಂಧನದಲ್ಲಿ ಇರಿಸುವಂತಿಲ್ಲ.

4. ಧಾರ್ಮಿಕ ಸ್ವಾತಂತ್ರ್ಯದ ಹಕ್ಕು

ಪ್ರತಿ ನಾಗರಿಕರು ತಮ್ಮ ಇಷ್ಟದ ಧರ್ಮವನ್ನು ಅನುಸರಿಸುವ, ಅದರ ಆಚರಣೆಗಳಲ್ಲಿ ಭಾಗಿಯಾಗುವ, ಆ ಧರ್ಮವನ್ನು ಪ್ರಚಾರ ಮಾಡುವ ಹಕ್ಕನ್ನು ಸಂವಿಧಾನದ 25ನೇ ವಿಧಿ ನೀಡುತ್ತದೆ. ವ್ಯಕ್ತಿಯು ತಾನು ಅನುಸರಿಸುತ್ತಿರುವ ಧರ್ಮಕ್ಕೆ ಸಂಬಂಧಿಸಿದ ಧರ್ಮಾರ್ಥ ಉದ್ದೇಶಗಳಿಗಾಗಿ ಸಂಸ್ಥೆಗಳನ್ನು ಸ್ಥಾಪಿಸುವ, ಧಾರ್ಮಿಕ ವ್ಯವಹಾರಗಳನ್ನು ನಿರ್ವಹಿಸುವ, ಆ ಸಂಸ್ಥೆ ಮೂಲಕ ಚರ, ಸ್ಥಿರಾಸ್ತಿ ಹೊಂದುವ, ನಿರ್ವಹಣೆ ಮಾಡುವ ಹಕ್ಕನ್ನು 26ನೇ ವಿಧಿಯು ನೀಡುತ್ತದೆ.

ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕುಗಳು

ಅಲ್ಪಸಂಖ್ಯಾತರ ಹಕ್ಕುಗಳು: ದೇಶದ ಅಲ್ಪಸಂಖ್ಯಾತ ಸಮುದಾಯದ ನಾಗರಿಕರು ತಮ್ಮದೇ ವಿಭಿನ್ನ ಭಾಷೆ, ಲಿಪಿ ಅಥವಾ ಸಂಸ್ಕೃತಿಯನ್ನು ಹೊಂದಿದ್ದರೆ, ಅದನ್ನು ಅವರು ರಕ್ಷಿಸಿಕೊಳ್ಳಬಹುದಾಗಿದೆ. ಅದು ಸರ್ಕಾರದ ಹೊಣೆಗಾರಿಕೆಯೂ ಹೌದು. ಅಲ್ಪಸಂಖ್ಯಾತ ಸಮುದಾಯವು ತನ್ನದೇ ಶೈಕ್ಷಣಿಕ ಸಂಸ್ಥೆಯನ್ನು ಸ್ಥಾಪಿಸುವ, ಅದನ್ನು ನಡೆಸುವ ಹಕ್ಕನ್ನು 30ನೇ ವಿಧಿಯು ನೀಡುತ್ತದೆ.

ಸಾಂವಿಧಾನಿಕ ಪರಿಹಾರದ ಹಕ್ಕು: ದೇಶದ ಯಾವುದೇ ನಾಗರಿಕರೂ ಯಾವುದೇ ವಿಚಾರದಲ್ಲಿ ಸಂವಿಧಾನಬದ್ಧ ಪರಿಹಾರ ಕೋರಿ ಅಧೀನ ನ್ಯಾಯಾಲಯಗಳು, ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನ ಮೊರೆ ಹೋಗುವ ಹಕ್ಕನ್ನು 32ನೇ ವಿಧಿಯು ನೀಡುತ್ತದೆ.

ಕರ್ತವ್ಯಗಳು

ದೇಶದ ಪ್ರತಿಯೊಬ್ಬ ನಾಗರಿಕರೂ ನಿರ್ವಹಿಸಲೇಬೇಕಾದ ಮೂಲಭೂತ ಕರ್ತವ್ಯಗಳನ್ನು ಸಂವಿಧಾನವು ವಿವರಿಸಿದೆ. ಇವುಗಳನ್ನು ನಿರ್ವಹಿಸದೇ ಇರುವುದು ಶಿಕ್ಷಾರ್ಹ ಅಪರಾಧವಾಗುತ್ತದೆ.

- ಸಂವಿಧಾನಕ್ಕೆ ಬದ್ಧವಾಗಿರಬೇಕು. ಅದರ ಆದರ್ಶ ಮತ್ತು ಸಂಸ್ಥೆಗಳನ್ನು ಗೌರವಿಸುವುದು
- ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸಬೇಕು
- ಭಾರತದ ಸಾರ್ವಭೌಮತ್ವ, ಏಕತೆ ಮತ್ತು ಅಖಂಡತೆಯನ್ನು ಎತ್ತಿಹಿಡಿಯಬೇಕು ಹಾಗೂ ಸಂರಕ್ಷಿಸಬೇಕು
- ದೇಶವನ್ನು ರಕ್ಷಿಸುವುದು ಮತ್ತು ಕರೆಬಂದಾಗ ದೇಶದ ಸೇವೆಗೆ ಧಾವಿಸಬೇಕು
- ಧರ್ಮ, ಭಾಷೆ, ಪ್ರದೇಶ, ಜಾತಿ-ಪಂಗಡಗಳ ಭೇದಭಾವಗಳನ್ನು ಬಿಟ್ಟು, ದೇಶದ ಎಲ್ಲ ನಾಗರಿಕರಲ್ಲೂ ಸಾಮರಸ್ಯ ಮತ್ತು ಭ್ರಾತೃತ್ವ ಭಾವನೆಯನ್ನು ಬೆಳೆಸುವುದು. ಮಹಿಳೆಯರ ಗೌರವಕ್ಕೆ ಧಕ್ಕೆತರುವಂತಹ ಆಚರಣೆಗಳನ್ನು ಬಿಟ್ಟುಬಿಡಬೇಕು
- ನಮ್ಮ ಸಮ್ಮಿಶ್ರ ಮತ್ತು ವೈವಿಧ್ಯ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸಬೇಕು ಹಾಗೂ ಕಾಪಾಡಬೇಕು
- ದೇಶದ ನೈಸರ್ಗಿಕ ಸಂಪತ್ತಿನ ರಕ್ಷಣೆ ಮತ್ತು ಅಭಿವೃದ್ಧಿ. ವನ್ಯಜೀವಿಗಳಿಗೆ ಅನುಕಂಪ ತೋರಬೇಕು
- ವೈಜ್ಞಾನಿಕ, ಮಾನವೀಯತೆ, ಪ್ರಶ್ನಿಸುವ ಮತ್ತು ಸುಧಾರಣೆಯ ಮನೋಭಾವನೆಗಳನ್ನು ಬೆಳೆಸಿಕೊಳ್ಳಬೇಕು
- ಹಿಂಸೆಯನ್ನು ತ್ಯಜಿಸಬೇಕು ಮತ್ತು ಸಾರ್ವಜನಿಕ ಆಸ್ತಿಗಳನ್ನು ರಕ್ಷಿಸಬೇಕು
- ದೇಶವು ನಿರಂತರ ಸಾಧನೆಯ ಹಾದಿಯಲ್ಲಿರಲು ಮತ್ತು ಉನ್ನತ ಸಾಧನೆಗಳನ್ನು ಸಿದ್ಧಿಸಲು ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಬೇಕು

An Initiative by:
SOCIAL WELFARE DEPARTMENT
For the Educational, Social & Economic Upliftment of Scheduled Castes
In Association with:
KSSKDC
LIDKAR
ಕರ್ನಾಟಕ ತಾಂಡಾ
KARNATAKA BHOVI DEVELOPMENT CORPORATION
ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ

‘ರಾಮನ ಹೆಸರಲ್ಲಿ ರಾಜ್ಯಗಳ ಕತ್ತು ಹಿಸುಕುತ್ತಿರುವ ಕೇಂದ್ರ’

ಪ್ರಜಾವಾಣಿ ವಾರ್ತೆ

ಎಚ್‌.ಸಿ. ಮಹದೇವಪ್ಪ

ಬೆಂಗಳೂರು: ‘ದೇಶದ ಆರ್ಥಿಕ ವ್ಯವಸ್ಥೆ ಸಮಸ್ಯೆಗೆ ಟಾನಿಕ್‌ನಂತಿದ್ದ ಮನರೇಗಾ ಯೋಜನೆಯ ರೆಕ್ಕೆ ಪುಕ್ಕಗಳನ್ನು ಕತ್ತರಿಸಿ, ಗ್ರಾಮ ಪಂಚಾಯಿತಿಗಳಿಗಿದ್ದ ಸ್ವಾತಂತ್ರ್ಯವನ್ನು ಕಿತ್ತು ಹಾಕಿರುವ ಕೇಂದ್ರ ಸರ್ಕಾರವು ಈ ಯೋಜನೆಯ ಹೆಸರ ಬದಲಾಯಿಸಿ ‘ರಾಮನ ಯೋಜನೆ’ ಎಂದು ಮಾಡಿದೆ. ರಾಮನ ಹೆಸರಲ್ಲಿ ರಾಜ್ಯಗಳ ಕತ್ತು ಹಿಸುಕುತ್ತಿದೆ ಎಂದು ಸಮಾಜ ಕಲ್ಯಾಣ ಸಚಿವ ಎಚ್‌. ಸಿ. ಮಹದೇವಪ್ಪ ದೂರಿದ್ದಾರೆ.

ನರೇಗಾ ಯೋಜನೆಯಡಿ ಸಂಪೂರ್ಣ ಕೂಲಿ ಪಾವತಿಯ ಜವಾಬ್ದಾರಿ ಇಲ್ಲಿವರೆಗೆ ಕೇಂದ್ರ ಸರ್ಕಾರದ್ದಾಗಿತ್ತು. ರಾಜ್ಯ ಸರ್ಕಾರವು ಸಾಮಗ್ರಿಗಳ ಒಟ್ಟು ವೆಚ್ಚದಲ್ಲಿ ಶೇ 25ರಷ್ಟು ಮಾತ್ರವೇ ಭರಿಸುತ್ತಿತ್ತು. ಆದರೆ ಈಗ ಕೇಂದ್ರ ಸರ್ಕಾರವು ಈಗ ರಾಜ್ಯಗಳ ಮೇಲೆ ಹೊರೆ ಹೊರಸಲು ಮುಂದಾಗಿದೆ. ಕರ್ನಾಟಕದಂತಹ ರಾಜ್ಯಗಳಿಗೆ ಶೇ 60ರಷ್ಟು ಮಾತ್ರ ನೀಡುತ್ತೇವೆ. ಉಳಿದ ಶೇ 40ರಷ್ಟು ಹಣವನ್ನು ರಾಜ್ಯ ಸರ್ಕಾರವೇ ಭರಿಸಬೇಕು ಎಂದು ಬಾಂಬ್ ಹಾಕಿದೆ ಎಂದು ಟೀಕಿಸಿದರು.

ಗ್ರಾಮಗಳ ಸ್ವಾವಲಂಬನೆಯ ಮಾರ್ಗ ವನ್ನು ಅನುಸರಿಸಲು ಹಿಂದೆ ಯುಪಿಎ ಸರ್ಕಾರವು ಈ ಯೋಜನೆಯನ್ನು ಜಾರಿಗೆ ತಂದಿತ್ತು. ಗ್ರಾಮ ಸ್ವರಾಜ್ಯದ ಕನಸು ಕಂಡಿದ್ದ ಮಹಾತ್ಮ ಗಾಂಧಿ ಅವರ ಹೆಸರನ್ನು ಈ ಉದ್ಯೋಗ ಖಾತರಿ ಯೋಜನೆಗೆ ಇಟ್ಟಿತ್ತು. ಈಗ ಹೆಸರನ್ನೂ ಬದಲಾಯಿಸಿ, ಸ್ಥಳೀಯಾಡಳಿತಗಳ ಸ್ವಾತಂತ್ರ್ಯವನ್ನೂ ಕಿತ್ತುಕೊಂಡು ಜನವಿರೋಧಿ ಕಾರ್ಯಕ್ರಮವನ್ನಾಗಿ ಮಾಡಿದೆ ಎಂದು ದೂರಿದರು.

ಯೋಜನೆಯ ಹೆಸರು ಹಾಗೂ ಮೂಲ ಸ್ವರೂಪವನ್ನೂ ಬದಲಾಯಿಸಬಾರದು ಎಂದು ಆಗ್ರಹಿಸಿದರು.

ಜಿಡಿಪಿ ಬೆಳವಣಿಗೆ ಶೇ 7ರಷ್ಟು: ಗೀತಾ

ನವದೆಹಲಿ (ಪಿಟಿಐ): ‘ಪ್ರಸಕ್ತ ಆರ್ಥಿಕ ವರ್ಷದಲ್ಲಿ ಭಾರತದ ಒಟ್ಟು ಆಂತರಿಕ ಉತ್ಪಾದನೆಯು (ಜಿಡಿಪಿ) ಸುಮಾರು ಶೇ 7ರಷ್ಟು ಹೆಚ್ಚಳ ಕಾಣುವ ನಿರೀಕ್ಷೆ ಇದೆ’ ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ಮಾಜಿ ಮುಖ್ಯ ಅರ್ಥಶಾಸ್ತ್ರಜ್ಞೆ ಗೀತಾ ಗೋಪಿನಾಥ್ ಹೇಳಿದ್ದಾರೆ.

ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ‘ಅಂತರರಾಷ್ಟ್ರೀಯ ಹಣಕಾಸು ನಿಧಿ ಭಾರತದ ಜಿಡಿಪಿ ಬೆಳವಣಿಗೆಯು ಶೇ 6.4ರಷ್ಟು ಆಗಲಿದೆ ಎಂದು ಈ ಮೊದಲು ಅಂದಾಜಿಸಿತ್ತು. ಅಕ್ಟೋಬರ್‌ನಲ್ಲಿ ಈ ದರವನ್ನು ಪರಿಷ್ಕರಿಸಿ ಶೇ 6.6ಕ್ಕೆ ಹೆಚ್ಚಿಸಿದೆ’ ಎಂದು ತಿಳಿಸಿದ್ದಾರೆ.

ಸಾಕ್ಷಿದಾರರನ್ನು ಪಾಟೀಸವಾಲಿಗೆ ಒಳಪಡಿಸಿದ ಪವಿತ್ರಾ ಪರ ವಕೀಲ

ರೇಣುಕಸ್ವಾಮಿ ತಂದೆ, ತಾಯಿ ಹೇಳಿಕೆ ದಾಖಲು

ಪ್ರಜಾವಾಣಿ ವಾರ್ತೆ

ದರ್ಶನ್

ರೇಣುಕಸ್ವಾಮಿ

ಬೆಂಗಳೂರು: ಕೊಲೆಯಾದ ಚಿತ್ರದುರ್ಗದ ರೇಣುಕಸ್ವಾಮಿ ಅವರ ತಂದೆ ಕಾಶೀನಾಥಯ್ಯ ಶಿವನಗೌಡರ್ (ಸಾಕ್ಷಿ -7) ಹಾಗೂ ತಾಯಿ ರತ್ನಪ್ರಭಾ (ಸಾಕ್ಷಿ–8)ಅವರು 57ನೇ ಎಸಿಎಂಎಂ ನ್ಯಾಯಾಲಯಕ್ಕೆ ಬುಧವಾರ ಹಾಜರಾಗಿ ಪ್ರಕರಣದ ಸಂಬಂಧ ತಮ್ಮ ಹೇಳಿಕೆ ದಾಖಲಿಸಿದರು.

ನಟ ದರ್ಶನ್, ಪವಿತ್ರಾಗೌಡ, ದರ್ಶನ್ ಅವರ ವ್ಯವಸ್ಥಾಪಕ ಆರ್. ನಾಗರಾಜ್, ಕಾರು ಚಾಲಕ ಲಕ್ಷ್ಮಣ್, ಉದ್ಯಮಿ ಪ್ರದೂಷ್ ರಾವ್ ಹಾಗೂ ಚಿತ್ರದುರ್ಗದ ಆಟೊ ಚಾಲಕರಾದ ಅನುಕುಮಾರ್ ಅಲಿಯಾಸ್ ಅನು, ಜಗದೀಶ್ ಅಲಿಯಾಸ್ ಜಗ್ಗ ಅವರು ಪರಪ್ಪನ ಅಗ್ರಹಾರ ಜೈಲಿನಲ್ಲಿ ನ್ಯಾಯಾಂಗ ಬಂಧನದಲ್ಲಿದ್ದು, ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆಗೆ ಹಾಜರಾದರು. ಉಳಿದ ಆರೋಪಿಗಳು ನ್ಯಾಯಾಲಯಕ್ಕೆ ಖುದ್ದು ಹಾಜರಾಗಿದ್ದರು.

ನ್ಯಾಯಾಧೀಶರ ಎದುರು ರೇಣುಕಸ್ವಾಮಿ ತಂದೆ -ತಾಯಿ ಒಂದು ತಾಸು ಹೇಳಿಕೆ ದಾಖಲಿಸಿದರು. ಪ್ರಕರಣಕ್ಕೆ ಸಂಬಂಧಪಟ್ಟ ವಕೀಲರು ಹಾಗೂ ಸಾಕ್ಷಿದಾರರನ್ನು ಹೊರತುಪಡಿಸಿ ಉಳಿದವರನ್ನು ವಿಚಾರಣೆ ನಡೆದ ಸ್ಥಳದಿಂದ ಹೊರಕ್ಕೆ ಕಳುಹಿಸಲಾಗಿತ್ತು.

‘2024ರ ಜೂನ್ 8ರಂದು ಪುತ್ರ ರೇಣುಕಸ್ವಾಮಿ ಬೆಳಿಗ್ಗೆ ಫಾರ್ಮಸಿ ಕೆಲಸಕ್ಕೆ ಹೋಗಿದ್ದ. ಮಧ್ಯಾಹ್ನ ಕರೆ ಮಾಡಿ ಸ್ನೇಹಿತರ ಜತೆ ಊಟಕ್ಕೆ ಹೋಗುತ್ತೇನೆ, ಬರುವುದು ತಡವಾಗುತ್ತದೆ ಎಂಬುದಾಗಿ ಹೇಳಿದ್ದ. ಸಂಜೆ 7 ಗಂಟೆಯಾದರೂ ಮನೆಗೆ ಬಂದಿರಲಿಲ್ಲ. ಕರೆ ಮಾಡಿದಾಗ ಮೊಬೈಲ್ ಸ್ವಿಚ್ಡ್ ಆಫ್ ಆಗಿತ್ತು. ಎಲ್ಲೆಡೆ ಹುಡುಕಾಟ ನಡೆಸಿದ್ದೆವು. ಜೂನ್ 10ರಂದು ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ಕರೆ ಮಾಡಿ, ನಿಮ್ಮ ಮಗನ ವಿಚಾರವಾಗಿ ಬೆಂಗಳೂರಿಗೆ ಬನ್ನಿ ಎಂದು ಸೂಚಿಸಿದ್ದರು. ಬಂದು ನೋಡಿದಾಗ ಮಗ ಮೃತಪಟ್ಟಿರುವುದು ಗೊತ್ತಾಗಿತ್ತು. ಮೃತದೇಹದ ಮೇಲೆ ಸುಟ್ಟಗಾಯವಿತ್ತು’ ಎಂಬುದಾಗಿ ಕಾಶೀನಾಥಯ್ಯ ಹಾಗೂ ರತ್ನಪ್ರಭಾ ಅವರು ಹೇಳಿಕೆ ನೀಡಿದ್ದಾರೆ.

ಅದಾದ ಮೇಲೆ ಪ್ರಕರಣದ ಮೊದಲ ಆರೋಪಿ ಪವಿತ್ರಾಗೌಡ ಪರ ವಕೀಲ ಬಾಲನ್ ಅವರು ರತ್ನಪ್ರಭಾ ಅವರನ್ನು ಪಾಟೀಸವಾಲಿಗೆ ಒಳಪಡಿಸಿದರು.

‘ರೇಣುಕಸ್ವಾಮಿ ಅವರು 2024ರ ಜೂನ್ 8ರಂದು ನಾಪತ್ತೆ ಆಗಿದ್ದಾರೆ’ ಎಂದು ಪೊಲೀಸರು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಗಳಲ್ಲಿ ಉಲ್ಲೇಖಿಸಿದ್ದಾರೆ. ನಾಪತ್ತೆ ಆಗುವುದಕ್ಕೂ ಮುನ್ನ ಪುತ್ರ ನಿಮ್ಮನ್ನು ಸಂಪರ್ಕಿಸಿದ್ದರೆ ಎಂದು ಬಾಲನ್ ಪ್ರಶ್ನಿಸಿದರು. ಆಗ ರತ್ನಪ್ರಭಾ ಅವರು ಪ್ರತಿಕ್ರಿಯಿಸಿ, ‘ಹೌದು ಊಟಕ್ಕೆ ಬರುವುದಿಲ್ಲ ಎಂಬುದಾಗಿ ಹೇಳಿ ಹೋಗಿದ್ದ’ ಎಂದರು.

ಚಿತ್ರದುರ್ಗದ ಬಾಲಾಜಿ ಬಾರ್‌ಗೆ ರೇಣುಕಸ್ವಾಮಿ ಅವರು ಆಗಾಗ್ಗೆ ಹೋಗುತ್ತಿದ್ದರು ಅಲ್ಲವೇ ಎಂದು ಬಾಲನ್ ಪ್ರಶ್ನಿಸಿದರು. ‘ಸ್ನೇಹಿತರೊಂದಿಗೆ ಪುತ್ರ ಬಾಲಾಜಿ ಬಾರ್‌ಗೆ ಊಟಕ್ಕೆ ಹೋಗಿಲ್ಲ’ ಎಂದು ರತ್ನಪ್ರಭಾ ಅವರು ಪ್ರತಿಕ್ರಿಯಿಸಿದರು.

‘ಜೂನ್ 8ರಂದು ಸಂಜೆ 5ರಿಂದ 7ರವರೆಗೂ ಚಿತ್ರದುರ್ಗದಲ್ಲೇ ರೇಣುಕಸ್ವಾಮಿ ಇದ್ದರು ಎನ್ನುವ ಮಾಹಿತಿಯಿದೆ. ನಂತರ, ಕೆಎಸ್‌ಆರ್‌ಟಿಸಿ ಬಸ್ ಹತ್ತಿ ಹೋಗಿದ್ದು ನಿಮಗೆ ಗೊತ್ತಿತ್ತಾ? ನಿಮ್ಮ ಪುತ್ರ ಎಲ್ಲಿ ಹೋಗಿದ್ದರು ಎಂಬುದು ನಿಮಗೆ ಗೊತ್ತಿತ್ತೇ? ನೀವು ಏಕೆ ದೂರು ಕೊಟ್ಟಿಲ್ಲ’ ಎಂದು ಬಾಲನ್ ಪ್ರಶ್ನಿಸಿದರು.

‘ಮಧ್ಯಾಹ್ನ 2 ಗಂಟೆಗೆ ಕರೆ ಮಾಡಿದ್ದ. ನಂತರ, 7 ಗಂಟೆಗೆ ಕರೆ ಮಾಡಿದಾಗ ಸ್ವಿಚ್ಡ್ ಆಫ್ ಇತ್ತು. ಕೆಎಸ್‌ಆರ್‌ಟಿಸಿ ಬಸ್ ಹತ್ತಿ ಹೋಗಿದ್ದರೆಂಬುದು ಸರಿಯಲ್ಲ. ಮಗ ಎಲ್ಲಿ ಹೋಗಿದ್ದ ಎಂಬುದು ಗೊತ್ತಿರಲಿಲ್ಲ. ಶನಿವಾರ, ಭಾನುವಾರ ಕೆಲಸಕ್ಕೆ ಹೋಗುವಾಗ ಯೂನಿಫಾರ್ಮ್ ಹಾಕುತ್ತಿರಲಿಲ್ಲ’ ಎಂದು ತಾಯಿ ಉತ್ತರಿಸಿದ್ದಾರೆ.

ವಿಚಾರಣೆ ಮುಂದುವರಿಕೆ

ಪ್ರಕರಣದ ಮುಂದಿನ ವಿಚಾರಣೆಯನ್ನು ಗುರುವಾರ (ಡಿ.18) ಮಧ್ಯಾಹ್ನ 12.30ಕ್ಕೆ ಮುಂದೂಡಿ ನ್ಯಾಯಾಧೀಶರು ಆದೇಶಿಸಿದ್ದಾರೆ. ಸಾಕ್ಷಿದಾರರನ್ನು ದರ್ಶನ್ ಪರ ವಕೀಲರು ಪಾಟೀಸವಾಲಿಗೆ ಒಳಪಡಿಸಲಿದ್ದಾರೆ.

ಭಾರತ, ಒಮಾನ್ ನಡುವೆ ವ್ಯಾಪಾರ ಒಪ್ಪಂದ ಇಂದು

ನವದೆಹಲಿ (ಪಿಟಿಐ): ಭಾರತ ಮತ್ತು ಒಮಾನ್ ದೇಶದ ನಡುವೆ ಮಸ್ಕತ್‌ನಲ್ಲಿ ಗುರುವಾರ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ ಬೀಳಲಿದೆ. ಈ ಒಪ್ಪಂದವು ಎರಡೂ ದೇಶಗಳ ನಡುವಿನ ಆರ್ಥಿಕ ಸಂಬಂಧವನ್ನು ಬಲಪಡಿಸುವ ನಿರೀಕ್ಷೆ ಇದೆ.

ಪ್ರಧಾನಿ ನರೇಂದ್ರ ಮೋದಿ ಸಮ್ಮುಖದಲ್ಲಿ ಒಪ್ಪಂದಕ್ಕೆ ಸಹಿ ಹಾಕಲಾಗುತ್ತದೆ. ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.

‘ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದ’ ಎಂಬುದು ಈ ಮುಕ್ತ ವ್ಯಾಪಾರ ಒಪ್ಪಂದದ ಅಧಿಕೃತ ಹೆಸರು. ಇದಕ್ಕೆ ಸಂಬಂಧಿಸಿದ ಮಾತುಕತೆಗಳು 2023ರ ನವೆಂಬರ್‌ನಲ್ಲಿ ಶುರುವಾದವು. ಈ ವರ್ಷದಲ್ಲಿ ಮಾತುಕತೆ ಪೂರ್ಣಗೊಂಡಿತು.

ಗಲ್ಫ್ ಸಹಕಾರ ಮಂಡಳಿಯ ಸದಸ್ಯ ರಾಷ್ಟ್ರಗಳ ಪೈಕಿ ಭಾರತದ ಸರಕುಗಳನ್ನು ಅತಿಹೆಚ್ಚಿನ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುವ ದೇಶಗಳ ಸಾಲಿನಲ್ಲಿ ಒಮಾನ್ ಮೂರನೆಯ ಸ್ಥಾನದಲ್ಲಿದೆ.

ಗಣಿ: ₹770 ಕೋಟಿ ಅಕ್ರಮ

ಒಂದನೇ ಪುಟದಿಂದ...

ಚಿತ್ರದುರ್ಗದಲ್ಲಿ ನೀರು ಸಂಸ್ಕರಣಾ ಘಟಕ, ಅಂತರ್ಜಲವೃದ್ಧಿ, ಜಲ ಮೂಲಗಳ ಸಂರಕ್ಷಣೆಯಂತಹ ಕಾರ್ಯಕ್ರಮಗಳು ಆದ್ಯತಾ ಪಟ್ಟಿಯಲ್ಲಿ ಇದ್ದವು. ಅವನ್ನು ಕಡೆಗಣಿಸಿ, ಜೋಗಿಮಟ್ಟಿ ಉದ್ಯಾನವನದಲ್ಲಿ ಚಿರತೆ ಮನೆ, ತಡೆಗೋಡೆಗಳನ್ನು ನಿರ್ಮಿಸಲಾಗಿದೆ. ಐದೂ ಜಿಲ್ಲೆಗಳಲ್ಲಿ ಶಾಲಾ ಕಟ್ಟಡ ನಿರ್ಮಾಣ, ಪ್ರಯೋಗಾಲಯ, ಶೌಚಾಲಯಗಳು, ಕುಡಿಯುವ ನೀರಿನ ಘಟಕಗಳನ್ನು ನಿರ್ಮಾಣ ಮಾಡಬೇಕಿತ್ತು. ಬದಲಿಗೆ ಮುಖ್ಯೋಪಾಧ್ಯಾಯರು ಮತ್ತು ಶಿಕ್ಷಕರಿಗೆ ಆರ್ಥಿಕ ನೆರವು, ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡಲು, ವಿಶ್ವವಿದ್ಯಾಲಯಗಳ ಕಟ್ಟಡ ನವೀಕರಣಕ್ಕೆ ₹119.78 ಕೋಟಿಯನ್ನು ನಿಯಮಬಾಹಿರವಾಗಿ ಬಳಕೆ ಮಾಡಲಾಗಿದೆ ಎಂದಿದೆ ವರದಿ.

ಗಣಿಗಾರಿಕೆಯಿಂದ ತೊಂದರೆಗೆ ಒಳಗಾದ ಪ್ರದೇಶದಲ್ಲಿ ರಸ್ತೆ, ರೈಲು ಸಂಪರ್ಕದಂತಹ ಮೂಲ ಸೌಕರ್ಯ ಗಳನ್ನು ಒದಗಿಸಬೇಕಿತ್ತು. ಅದಕ್ಕೆ ಸಂಬಂಧಿಸಿದ ನಿಧಿಯನ್ನು ಬಳಸಿಕೊಂಡು ಸಭಾಂಗಣ, ಸಭಾ ಭವನ, ನಾಡಕಚೇರಿ ಕಟ್ಟಡ, ಜಿಲ್ಲಾಧಿಕಾರಿ ಕಚೇರಿಗೆ ಹೊಸ ಕಟ್ಟಡ, ಪೀಠೋಪಕರಣ, ಮಿನಿ ವಿಧಾನಸೌಧ ನಿರ್ಮಾಣ ಮಾಡಲಾಗಿದೆ. ಐದೂ ಟ್ರಸ್ಟ್‌ಗಳು ಈ ವಿಚಾರದಲ್ಲಿ ನಿಧಿಯ ಸದ್ಬಳಕೆಯಲ್ಲಿ ವಿಫಲವಾಗಿವೆ ಎಂಬ ಮಾಹಿತಿ ವರದಿಯಲ್ಲಿದೆ.

ಕಂಪ್ಯೂಟರ್ ಖರೀದಿ, ಅನರ್ಹರಿಗೆ ಸಹಾಯಧನ ಮತ್ತು ಆರ್ಥಿಕ ನೆರವು ಹಂಚಿಕೆ, ದಂಡದ ಮೇಲೆ ಡಿಎಂಎಫ್ ಸಂಗ್ರಹಿಸದೇ ಇರುವುದು ಮತ್ತು ಈ ಕಾರ್ಯಕ್ರಮಗಳ ಅಡಿಯಲ್ಲಿ ಖರೀದಿಸಲಾದ ಸಾಮಗ್ರಿ ಹಾಗೂ ನಿರ್ಮಿಸಲಾದ ಸವಲತ್ತುಗಳನ್ನು ಬಳಸದೇ ಇರುವುದರಿಂದ ನೂರಾರು ಕೋಟಿ ನಷ್ಟವಾಗಿದೆ. ಇಂತಹ ಸಣ್ಣ-ಸಣ್ಣ ನಿಯಮಬಾಹಿರ ಬಳಕೆ ಮತ್ತು ಕಾರ್ಯಕ್ರಮಗಳ ಒಟ್ಟು ಮೊತ್ತವು ₹770 ಕೋಟಿಯಷ್ಟಾಗುತ್ತದೆ. ಸರ್ಕಾರವು ಈ ಬಗ್ಗೆ ಗಮನ ಹರಿಸಿ, ಯೋಜನೆಯ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಸಿಎಜಿ ಹೇಳಿದೆ.



ಡಿಎಂಎಫ್ ಕಂಪ್ಯೂಟರ್‌ಗೆ ಶಾಸಕರ ಚಿತ್ರ

ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ಶಾಲಾ ಕಾಲೇಜುಗಳಿಗೆ ಡಿಎಂಎಫ್‌ನ ₹4 ಕೋಟಿ ವೆಚ್ಚದಲ್ಲಿ ಕಂಪ್ಯೂಟರ್‌ಗಳನ್ನು ಖರೀದಿಸಲಾಗಿದೆ. ಈ ಎಲ್ಲ ಕಂಪ್ಯೂಟರ್‌ಗಳನ್ನು ಕಿಯೋನಿಕ್ಸ್ ಪೂರೈಕೆ ಮಾಡಿದೆ. ಆದರೆ ಈ ಕಂಪ್ಯೂಟರ್‌ಗಳನ್ನು ಅಳವಡಿಸಿರುವ ಶಾಲೆಗಳಲ್ಲಿ, ಸ್ಥಳೀಯ ಶಾಸಕ ಬಿಜೆಪಿಯ ‘ಎಂ.ಚಂದ್ರಪ್ಪ ಅವರ ವಿಧಾನಸಭಾ ಅನುದಾನದಲ್ಲಿ ಕೈಗೊಳ್ಳಲಾದ ಕಾಮಗಾರಿ’ ಎಂದು ಫಲಕ ಹಾಕಲಾಗಿದೆ ಎಂದು ಸಿಎಜಿ ಹೇಳಿದೆ.

ಚಿತ್ರದುರ್ಗ, ವಿಜಯನಗರದ ಹಲವು ಶಾಲಾ ಕಾಲೇಜು ಮತ್ತು ವಿದ್ಯಾರ್ಥಿ ನಿಲಯಗಳಿಗೆ ನೀಡಿರುವ ಕಂಪ್ಯೂಟರ್‌ಗಳನ್ನು ಬಳಕೆ ಮಾಡುತ್ತಿಲ್ಲ. ಕೆಲವನ್ನು ಈವರೆಗೆ ತೆರೆದೇ ಇಲ್ಲ. ಇನ್ನೂ ಕೆಲವನ್ನು ಮೂಲೆಗಳಲ್ಲಿ ಇಡಲಾಗಿದೆ. ಇವುಗಳನ್ನು ಬಳಕೆ ಮಾಡಿಕೊಳ್ಳುತ್ತಿರುವ ಬಗ್ಗೆ ಮೇಲ್ವಿಚಾರಣೆ ನಡೆಸುವ ಹೊಣೆಗಾರಿಕೆ ಡಿಎಂಎಫ್ ಟ್ರಸ್ಟ್‌ಗಳದ್ದು. ಆದರೆ ಟ್ರಸ್ಟ್‌ಗಳು ಈ ಕೆಲಸವನ್ನು ಮಾಡದೇ ಇರುವ ಕಾರಣಕ್ಕೆ, ಇದಕ್ಕಾಗಿ ಮಾಡಿದ ವೆಚ್ಚವೆಲ್ಲವೂ ವ್ಯರ್ಥವಾಗಿದೆ. ಟ್ರಸ್ಟ್‌ಗಳು ತಮ್ಮ ಎಲ್ಲ ಕಾರ್ಯಕ್ರಮಗಳಿಗೆ ಫಲಾನುಭವಿಗಳನ್ನು ಆಯ್ಕೆ ಮಾಡುವಲ್ಲಿ ಯಾವುದೇ ಮಾನದಂಡಗಳನ್ನು ರೂಪಿಸಿಕೊಂಡಿಲ್ಲ. ಈ ಕಾರಣದಿಂದ ಅನರ್ಹರಿಗೆ ನಿಧಿಯ ಹಣ ಹಂಚಿಕೆಯಾಗಿದೆ. ಕೆಲವೆಡೆ ತೀರಾ ವೈಯಕ್ತಿಕ ಕೆಲಸಗಳಿಗೆ ಈ ನಿಧಿಯನ್ನು ಬಳಕೆ ಮಾಡಲಾಗಿದೆ ಎಂದು ವಿವರಿಸಿದೆ.

ಎಲ್ಲ ಟ್ರಸ್ಟ್‌ಗಳು ನಿಯಮಬಾಹಿರವಾಗಿ ಅಧಿಕಾರಿಗಳ ಓಡಾಟಕ್ಕೆ ವಾಹನಗಳನ್ನು ಖರೀದಿಸಿವೆ. ಹೀಗೆ ಅನಗತ್ಯ ವೆಚ್ಚ, ಅರ್ಹ ಫಲಾನುಭವಿಗಳನ್ನು ಗುರುತಿಸುವಲ್ಲಿ ವಿಫಲ, ನಿಧಿ ಸಂಗ್ರಹ ಕಡೆಗಣನೆಯಂತಹ ನಡೆಗಳಿಂದಾಗಿ ಈ ಯೋಜನೆಯ ಮೂಲ ಉದ್ದೇಶವೇ ಈಡೇರದಂತಾಗಿದೆ ಎಂಬುದರತ್ತ ಸಿಎಜಿ ವರದಿ ಬೊಟ್ಟು ಮಾಡಿದೆ.

‘ಸಾಲ ತಗ್ಗಿಸಲು ರಾಜ್ಯಗಳು ಶ್ರಮಿಸಲಿ’

ನವದೆಹಲಿ (ಪಿಟಿಐ): ‘ವಿತ್ತೀಯ ನಿರ್ವಹಣೆಯಲ್ಲಿ ಪಾರದರ್ಶಕತೆಗಾಗಿ ಕೇಂದ್ರವು ಸ್ಪಷ್ಟ ಗುರಿಗಳನ್ನು ಹಾಕಿಕೊಂಡಿದೆ. ಇದರಿಂದಾಗಿ ಸಾಲದ ಮಟ್ಟ ಕಡಿಮೆ ಆಗಿದೆ. ಇದೇ ಕ್ರಮಗಳನ್ನು ರಾಜ್ಯ ಸರ್ಕಾರಗಳು ಸಹ ಅಳವಡಿಸಿಕೊಳ್ಳಬೇಕು’ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ನಿರ್ಮಲಾ ಸೀತಾರಾಮನ್

ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ‘ಮುಂದಿನ ಆರ್ಥಿಕ ವರ್ಷದಿಂದ ವಿತ್ತೀಯ ಕೊರತೆ ಸೇರಿದಂತೆ ಸಾಲದ ಮಟ್ಟವನ್ನು ಕಡಿಮೆ ಮಾಡುವುದರತ್ತ ಹೆಚ್ಚಿನ ಗಮನ ನೀಡಲಾಗುತ್ತದೆ. 2047ರ ವೇಳೆಗೆ ದೇಶವು ಅಭಿವೃದ್ಧಿ ಹೊಂದಿದ ರಾಷ್ಟ್ರವಾಗುವ ಗುರಿಯನ್ನು ಸಾಧಿಸಲು ರಾಜ್ಯಗಳು ತಮ್ಮ ಸಾಲದ ಮಟ್ಟವನ್ನು ಕಡಿಮೆ ಮಾಡಬೇಕು’ ಎಂದು ರಾಜ್ಯಗಳಿಗೆ ಹೇಳಿದ್ದಾರೆ.

ಕೇಂದ್ರ ಸರ್ಕಾರವು ಬಜೆಟ್ ರೂಪಿಸುವಿಕೆಯಲ್ಲಿ ಪಾರದರ್ಶಕತೆಗಾಗಿ ಸ್ಪಷ್ಟವಾದ ಗುರಿಗಳನ್ನು ನಿಗದಿಪಡಿಸಿದೆ. ಕೋವಿಡ್ ನಂತರದ ಅವಧಿಯಲ್ಲಿ ಸಾಲ–ಜಿಡಿಪಿ ಅನುಪಾತ ಶೇ 60ರಷ್ಟಿತ್ತು. ಇದು ಈಗ ಇಳಿಕೆಯ ಹಾದಿ ಹಿಡಿದಿದೆ ಎಂದಿದ್ದಾರೆ.

ಕೋವಿಡ್ ನಂತರದ ಅವಧಿಯಲ್ಲಿ ದೇಶದ ಸಾಲ–ಜಿಡಿಪಿಯು ಶೇ 61.4ರಷ್ಟಿತ್ತು. ಆದರೆ, ಕೇಂದ್ರ ಸರ್ಕಾರ ಅಳವಡಿಸಿಕೊಂಡ ನಿಯಮಗಳಿಂದಾಗಿ 2023–24ರಲ್ಲಿ ಈ ಪ್ರಮಾಣ ಶೇ 57.1ಕ್ಕೆ ಇಳಿಯಿತು. ಪ್ರಸಕ್ತ ವರ್ಷದಲ್ಲಿ ಇದು ಶೇ 56.1ಕ್ಕೆ ಬರುವ ನಿರೀಕ್ಷೆ ಇದೆ.

ಪ್ರತಿ ವರ್ಷ ಸಾಲದ ಮಟ್ಟವನ್ನು ಕಡಿಮೆ ಮಾಡುತ್ತಿರುವ ಕೇಂದ್ರ ಸರ್ಕಾರದಂತೆ, ರಾಜ್ಯಗಳು ಹಣಕಾಸು ನಿರ್ವಹಣೆಯಲ್ಲಿ ಹೊಣೆಗಾರಿಕೆ ಮತ್ತು ಪಾರದರ್ಶಕತೆಯನ್ನು ಆದ್ಯತೆಯಾಗಿ ತೆಗೆದುಕೊಳ್ಳಬೇಕೆಂದು ಸಚಿವರು ಕರೆ ನೀಡಿದ್ದಾರೆ.

ನಿವೃತ್ತಿ ಬಳಿಕ ಕಾಯಂ ಭಾಗ್ಯ

ಒಂದನೇ ಪುಟದಿಂದ...

ಒಂದು ವೇಳೆ ಈ ಸೇವಾ ಕ್ರಮಬದ್ಧತೆಯನ್ನು ಪರಿಗಣಿಸಲು ನಿರಾಕರಿಸಿದ್ದೇ ಆದರೆ ಅದು ನೇಮಕಾತಿಯ ಶೋಷಣೆಗೆ ಹಿಡಿದ ಕೈಗನ್ನಡಿಯಾಗುತ್ತದೆ’ ಎಂದು ಹೇಳಿದೆ.

‘ಅರ್ಜಿದಾರರು 1994ರಿಂದ 21 ವರ್ಷಗಳ ಕಾಲ ಅಟೆಂಡರ್ ಕಮ್ ಬಿಲ್ ಕಲೆಕ್ಟರ್ ಆಗಿ ಗುತ್ತಿಗೆ ಆಧಾರದಡಿ ಕೆಲಸ ನಿರ್ವಹಿಸಿ ಸೇವಾ ನಿವೃತ್ತಿ ಹೊಂದಿದ್ದು, ಅವರ ಸೇವೆಯನ್ನು ಕಾಯಮಾತಿ ವ್ಯಾಪ್ತಿಯಲ್ಲಿ ಪರಿಗಣಿಸಲೇಬೇಕಾಗುತ್ತದೆ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

ಸೇವಾ ಕಾಯಮಾತಿಗೆ ಸಂಬಂಧಿಸಿದಂತೆ 2006ರ ಕರ್ನಾಟಕ ಸರ್ಕಾರ ಮತ್ತು ಉಮಾದೇವಿ ಮತ್ತಿತರರ ನಡುವಿನ ಪ್ರಕರಣ, 2015ರ ಧರ್ಮಸಿಂಗ್ ಮತ್ತು ಉತ್ತರ ಪ್ರದೇಶ ನಡುವಿನ ಪ್ರಕರಣಗಳಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪುಗಳನ್ನು ಉಲ್ಲೇಖಿಸಿರುವ ನ್ಯಾಯಪೀಠ, ‘ಈ ಮಹತ್ವದ ತೀರ್ಪುಗಳನ್ನು ಕಡೆಗಣಿಸಿ ರಾಜ್ಯ ಸರ್ಕಾರ ಅರ್ಜಿದಾರರನ್ನು ಮತ್ತೊಂದು ಮೊಕದ್ದಮೆಯ ಚಕ್ರಕ್ಕೆ ತಳ್ಳಬಾರದು’ ಎಂದು ಹೇಳಿದೆ.

ಸೇವೆಯನ್ನು ಕಾಯಂಗೊಳಿಸುವಂತೆ 2014ರಲ್ಲೇ ಹೈಕೋರ್ಟ್ ಆದೇಶಿಸಿತ್ತು. ಇದರನ್ವಯ ಗ್ರಾಮ ಪಂಚಾಯಿತಿ ಕೂಡ ಸರ್ಕಾರಕ್ಕೆ ಶಿಫಾರಸು ಮಾಡಿತ್ತು. ಆದರೆ, ಸರ್ಕಾರ ಅರ್ಜಿದಾರರ ಸೇವೆಯನ್ನು ಕಾಯಂಗೊಳಿಸಿರಲಿಲ್ಲ. ಹೀಗಾಗಿ, ರಮೇಶ್ ವೆಂಕಟರಮಣ ಹೆಗಡೆ ಪುನಃ ಹೈಕೋರ್ಟ್ ಮೆಟ್ಟಿಲೇರಿದ್ದರು.

> **ಉದ್ಯೋಗಿಯನ್ನು ತಾತ್ಕಾಲಿಕ, ಗುತ್ತಿಗೆ, ದಿನಗೂಲಿ, ನಿಗದಿತ ವೇತನದಡಿ ನಿಯೋಜಿಸಿಕೊಂಡರೆ, 10 ವರ್ಷ ಸೇವೆ ಪೂರೈಸುತ್ತಿದ್ದಂತೆ ಅವರು ಹುದ್ದೆ ಪಡೆಯಲು, ಸೇವಾ ಕಾಯಮಾತಿ ಕೋರಲು ಅರ್ಹರಾಗಿರುತ್ತಾರೆ.**
> **ನ್ಯಾ. ಎಂ.ನಾಗಪ್ರಸನ್ನ**

‘ಎಲ್ಲ ಭತ್ಯೆಗಳಿಗೂ ಅರ್ಹ’

‘ರಮೇಶ್ ವೆಂಕಟರಾಮ ಹೆಗಡೆಯವರ 10 ವರ್ಷಗಳ ಅವಧಿ ಸೇವೆ ಸಲ್ಲಿಸಿದ ನಂತರದ ಅವಧಿಯ ಸೇವೆಯನ್ನು ಕಾಯಂಗೊಳಿಸಲು, ಅಂದರೆ 2004ರ ಜನವರಿ 9ರಿಂದ ಅನ್ವಯವಾಗುವಂತೆ ಅವರ ಸೇವೆ ಕಾಯಂಗೊಳಿಸಬೇಕು’ ಎಂದು ನ್ಯಾಯಪೀಠ ನಿರ್ದೇಶಿಸಿದೆ.

‘ಬಾಕಿ ವೇತನ ಹೊರತುಪಡಿಸಿ 1994ರಿಂದ 2015ರವರೆಗೆ ಎಲ್ಲಾ ಭತ್ಯೆ ಮತ್ತು ಪಿಂಚಣಿಗೂ ಅರ್ಹರಾಗಿದ್ದು, ಅವರಿಗೆ ಎಲ್ಲಾ ಭತ್ಯೆಗಳನ್ನು ನೀಡಬೇಕು’ ಎಂದು ಸರ್ಕಾರಕ್ಕೆ ತಾಕೀತು ಮಾಡಿದೆ.

ಗುರುವಾರ • ಡಿಸೆಂಬರ್ 18, 2025
ಪ್ರಜಾವಾಣಿ

ಕಾಶ್ಮೀರ ಕಣಿವೆಗೆ ರೈಲಿನಲ್ಲಿ ಫಿರಂಗಿ

ಜಮ್ಮು (ಪಿಟಿಐ): ವಿಶೇಷ ರೈಲಿನ ಮೂಲಕ ಕಾಶ್ಮೀರ ಕಣಿವೆಗೆ ಟ್ಯಾಂಕ್‌ಗಳು ಮತ್ತು ಫಿರಂಗಿಗಳನ್ನು ಸಾಗಿಸುವ ಮೂಲಕ ಭಾರತೀಯ ಸೇನೆಯು ಪ್ರಮುಖ ಮೈಲಿಗಲ್ಲು ಸಾಧಿಸಿದೆ.

ಅಣುಶಕ್ತಿ: ಖಾಸಗಿ ಹೂಡಿಕೆ

ಮಸೂದೆಗೆ ಲೋಕಸಭೆ ಅಸ್ತು: ಜೆಪಿಸಿಗೆ ಆಗ್ರಹಿಸಿ ವಿಪಕ್ಷಗಳ ಸಭಾತ್ಯಾಗ

ನವದೆಹಲಿ(ಪಿಟಿಐ): ಅಣು ವಿದ್ಯುತ್ ಕ್ಷೇತ್ರದಲ್ಲಿ ಖಾಸಗಿ ಹೂಡಿಕೆಗೆ ಅವಕಾಶ ಕಲ್ಪಿಸುವ ಮಸೂದೆಯನ್ನು ಲೋಕಸಭೆಯಲ್ಲಿ ಬುಧವಾರ ಅಂಗೀಕರಿಸಲಾಯಿತು.

ಕೂಲಂಕಷ ಪರಾಮರ್ಶೆಗಾಗಿ ಮಸೂದೆಯನ್ನು ಜಂಟಿ ಸಂಸದೀಯ ಸಮಿತಿಗೆ (ಜೆಪಿಸಿ) ಒಪ್ಪಿಸಬೇಕು ಎಂಬ ವಿರೋಧ ಪಕ್ಷಗಳ ಬೇಡಿಕೆಗೆ ಕೇಂದ್ರ ಸರ್ಕಾರ ಒಪ್ಪಲಿಲ್ಲ. ನಂತರ, ವಿಪಕ್ಷಗಳ ಸದಸ್ಯರು ಸಭಾತ್ಯಾಗ ಮಾಡಿದರು.

ಇದರ ನಡುವೆಯೇ, 'ಭಾರತದ ಪ್ರಗತಿಗಾಗಿ ಅಣು ಶಕ್ತಿಯ ಸುಸ್ಥಿರ ಉತ್ಪಾದನೆ (ಎಸ್‌ಎಚ್‌ಎಎನ್‌ಟಿಐ–ಶಾಂತಿ ಮಸೂದೆ) ಮಸೂದೆ'ಯನ್ನು ಧ್ವನಿಮತ ಮೂಲಕ ಸದನ ಅಂಗೀಕರಿಸಿತು.

ಮಸೂದೆ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಕೇಂದ್ರ ಸಚಿವ ಜಿತೇಂದ್ರ ಸಿಂಗ್, '2047ರ ವೇಳೆಗೆ 100 ಗಿಗಾವಾಟ್ ಅಣು ವಿದ್ಯುತ್ ಉತ್ಪಾದನೆ ಗುರಿ ಸಾಧಿಸಲು ಈ ಮಸೂದೆ ನೆರವಾಗಲಿದೆ' ಎಂದು ಹೇಳಿದರು.

ಪರ–ವಿರೋಧ ಮಾತು: ಇದಕ್ಕೂ ಮುನ್ನ ನಡೆದ ಚರ್ಚೆ ವೇಳೆ, ಆಡಳಿತಾರೂಢ ಎನ್‌ಡಿಎ ಮೈತ್ರಿಕೂಟದ ಸಂಸದರು ಈ ಮಸೂದೆಯನ್ನು ಬೆಂಬಲಿಸಿದರೆ, ವ್ಯಾಪಕ ಸಮಾಲೋಚನೆಗಳಿಗಾಗಿ ಈ ಮಸೂದೆಯನ್ನು ಜಂಟಿ ಸಂಸದೀಯ ಸಮಿತಿಗೆ(ಜೆಪಿಸಿ) ಒಪ್ಪಿಸಬೇಕು ಎಂದು ವಿರೋಧ ಪಕ್ಷಗಳ ಸಂಸದರು ಪಟ್ಟು ಹಿಡಿದರು.

ವಿದ್ಯುತ್ ಉತ್ಪಾದನೆಯಲ್ಲಿ ದೇಶವನ್ನು ಸ್ವಾವಲಂಬಿಯನ್ನಾಗಿ ಮಾಡಲು ಈ ಮಸೂದೆ ನೆರವಾಗಲಿದೆ

> **ಜಗತ್ತು ಈಗ ಶುದ್ಧ ಇಂಧನ ಯುಗದತ್ತ ಹೆಜ್ಜೆ ಹಾಕುತ್ತಿದೆ. ನಾವು ಕೂಡ 2047ರ ವೇಳೆಗೆ 100 ಗಿಗಾವಾಟ್ ಅಣುಶಕ್ತಿ ಉತ್ಪಾದಿಸುವ ಗುರಿ ನಿಗದಿ ಮಾಡಿದ್ದೇವೆ**
> **ಜಿತೇಂದ್ರ ಸಿಂಗ್** ಕೇಂದ್ರ ಸಚಿವ

ಎಂಬುದು ಎನ್‌ಡಿಎ ಪಾಳಯದ ಸಂಸದರ ಪ್ರತಿಪಾದನೆಯಾದರೆ, ಈ ಕ್ಷೇತ್ರವನ್ನು ಖಾಸಗಿ ವಲಯಕ್ಕೆ ಮುಕ್ತಗೊಳಿಸುವುದು ಅಪಾಯಕಾರಿ ಎಂದು ಹೇಳುವ ಮೂಲಕ ವಿಪಕ್ಷಗಳ ಸಂಸದರು ಮಸೂದೆಗೆ ಬಲವಾದ ಪ್ರತಿರೋಧ ವ್ಯಕ್ತಪಡಿಸಿದರು.

ಬಿಜೆಪಿಯ ಶಶಾಂಕ ಮಣಿ ಮಾತನಾಡಿ, 'ನಾಗರಿಕ ಅಣು ವಿದ್ಯುತ್ ಕ್ಷೇತ್ರ ಪ್ರವೇಶಿಸುವುದಕ್ಕೆ ಖಾಸಗಿಯವರಿಗೂ ಅವಕಾಶ ಕಲ್ಪಿಸುವುದರಿಂದ ಪ್ರತಿಯೊಬ್ಬ ಭಾರತೀಯನಿಗೂ ಪ್ರಯೋಜನವಾಗಲಿದೆ' ಎಂದು ಹೇಳಿದರು. ಅಣು ಶಕ್ತಿ ಕಾಯ್ದೆ–1962 ಹಾಗೂ ನಾಗರಿಕ ಹೊಣೆಗಾರಿಕೆ (ಪರಮಾಣು ಹಾನಿ) ಕಾಯ್ದೆ–2010ರಲ್ಲಿದ್ದ ಅಂಶಗಳನ್ನು ನೂತನ ಮಸೂದೆಯಲ್ಲಿ ತೆಗೆದು ಹಾಕಿರುವುದಕ್ಕೂ ತಿವಾರಿ ವಿರೋಧ ವ್ಯಕ್ತಪಡಿಸಿದರು.

'ಈ ಮಸೂದೆ ಕುರಿತು ಕೂಲಂಕಷ ಪರಿಶೀಲನೆ ಅಗತ್ಯ ಇದೆ. ಹೀಗಾಗಿ ಇದನ್ನು ಜಂಟಿ ಸದನ ಸಮಿತಿಗೆ ಒಪ್ಪಿಸಬೇಕು' ಎಂದು ತಿವಾರಿ ಆಗ್ರಹಿಸಿದರು.

ಈ ವಿಷಯವಾಗಿ ಮಾತನಾಡಿದ ಡಿಎಂಕೆಯ ಅರುಣ್ ನೆಹರು, ಟಿಎಂಸಿಯ ಸೌಗತ ರಾಯ್, ಶಿವಸೇನಾದ(ಯುಬಿಟಿ) ಅರವಿಂದ ಸಾವಂತ್ ಕೂಡ, ಮಸೂದೆಯನ್ನು ಜಂಟಿ ಸಂಸದೀಯ ಸಮಿತಿಗೆ ಒಪ್ಪಿಸಬೇಕು ಎಂದು ಒತ್ತಾಯಿಸಿದರು.

ಲೋಕಸಭೆಯಲ್ಲಿ ಬುಧವಾರ ಅಣು ಶಕ್ತಿ ಮಸೂದೆ ಕುರಿತ ಚರ್ಚೆಯಲ್ಲಿ ಪಾಲ್ಗೊಂಡು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಮಾತನಾಡಿದರು ಪಿಟಿಐ ಚಿತ್ರ

ಯಾರು ಏನಂದರು?

ಅಣು ಶಕ್ತಿ ಉತ್ಪಾದನೆ ಹೆಚ್ಚಿಸುವುದಕ್ಕಾಗಿ ಈ ಕ್ಷೇತ್ರವನ್ನು ಖಾಸಗೀಕರಣ ಮಾಡಲು ಹೊರಟಿರುವುದು ಅಪಾಯಕಾರಿ ನಡೆ. ಈ ಕ್ಷೇತ್ರದಲ್ಲಿ ಖಾಸಗಿಯವರಿಗೆ ಮಣೆ ಹಾಕುವುದು ಸರಿಯಲ್ಲ
ಶಶಿ ತರೂರ್, ಕಾಂಗ್ರೆಸ್ ಸದಸ್ಯ

ಸಾರ್ವಜನಿಕ ವಲಯದ ಸಂಸ್ಥೆ ಒದಗಿಸುವಷ್ಟೇ ಸುರಕ್ಷತೆಯನ್ನು ಖಾಸಗಿ ಕಂಪನಿಯೊಂದು ಕಲ್ಪಿಸುತ್ತದೆ ಎಂಬುದನ್ನು ಸರ್ಕಾರ ಹೇಗೆ ಖಾತ್ರಿಪಡಿಸುತ್ತದೆ
ಅರವಿಂದ ಸಾವಂತ್, ಶಿವಸೇನಾ(ಯುಬಿಟಿ) ಸದಸ್ಯ

ಅಣು ವಿದ್ಯುತ್ ಸ್ಥಾವರಗಳ ಕಾರ್ಯಾಚರಣೆಗೆ ಪರವಾನಗಿ ನೀಡುವ ವ್ಯವಸ್ಥೆ ಅತ್ಯುತ್ತಮವಾಗಿರುವಂತೆ ನೋಡಿಕೊಳ್ಳಬೇಕು. ವಿಕಿರಣಶೀಲ ತ್ಯಾಜ್ಯ ವಿಲೇವಾರಿಗೆ ವಿಶೇಷ ಅವಕಾಶಗಳನ್ನು ಕಲ್ಪಿಸಬೇಕು
ಅಲೋಕ್ ಕುಮಾರ್ ಸುಮನ್, ಜೆಡಿಯು ಸದಸ್ಯ

ಅಮೆರಿಕ ಹಾಗೂ ಫ್ರಾನ್ಸ್ ಕಂಪನಿಗಳಿಗೆ ರತ್ನಗಂಬಳಿ ಹಾಸಿ, ಆಹ್ವಾನಿಸುವ ಪ್ರಯತ್ನ ಇದಾಗಿದೆ. ಖಾಸಗಿಯವರಿಗೆ ಅವಕಾಶ ನೀಡಿದರೆ ನಿಮ್ಮ 'ಮೇಕ್ ಇನ್ ಇಂಡಿಯಾ' ಕಾರ್ಯಕ್ರಮದ ಗತಿ ಏನು?
ಆದಿತ್ಯ ಯಾದವ್, ಸಮಾಜವಾದಿ ಪಕ್ಷದ ಸದಸ್ಯ

ಅಣು ವಿದ್ಯುತ್ ಉತ್ಪಾದನೆಗೆ ಬೇಕಾದ ಕಚ್ಚಾ ವಸ್ತುಗಳು ಅಗತ್ಯ ಪ್ರಮಾಣದಲ್ಲಿ ಭಾರತದಲ್ಲಿ ಇಲ್ಲ. ಈ ಮಸೂದೆ ಮೂಲಕ ಸರ್ಕಾರವು, ವಿದೇಶಿ ಹೂಡಿಕೆ ಹಾಗೂ ಕಚ್ಚಾವಸ್ತುಗಳನ್ನು ತರುವ ಜವಾಬ್ದಾರಿಯನ್ನು ಖಾಸಗಿ ಕಂಪನಿಗಳಿಗೆ ವಹಿಸುತ್ತಿದೆ
ಸೌಗತ ರಾಯ್, ಟಿಎಂಸಿ ಸದಸ್ಯ

ಸುದ್ದಿ 2 ನಿಮಿಷ

'ಸ್ಪಷ್ಟವಾಗಿ ಔಷಧ ಚೀಟಿ ಬರೆಯುವ ತರಬೇತಿ ನೀಡಿ'

ನವದೆಹಲಿ (ಪಿಟಿಐ): ಜನರಿಗೆ ಅರ್ಥವಾಗುವ ರೀತಿಯಲ್ಲಿ ಔಷಧಿ ಚೀಟಿ ಬರೆಯುವುದನ್ನು ವೈದ್ಯಕೀಯ ಶಿಕ್ಷಣದ ಅವಧಿಯಲ್ಲೇ ತರಬೇತಿ ನೀಡುವಂತೆ ದೇಶದ ಎಲ್ಲ ವೈದ್ಯಕೀಯ ಕಾಲೇಜುಗಳಿಗೆ ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ) ಸೂಚಿಸಿದೆ.

ಈ ಕುರಿತ ಮೇಲ್ವಿಚಾರಣೆಗಾಗಿ ಉಪ ಸಮಿತಿಗಳನ್ನು ರಚಿಸುವಂತೆ ಅದು ನಿರ್ದೇಶನ ನೀಡಿದೆ. ಈ ಸಮಿತಿಯು ಔಷಧ ಚೀಟಿಯ ಸ್ವರೂಪದ ವಿಶ್ಲೇಷಣೆ ಮಾಡಲಿದೆ, ನಿಯಮ ಉಲ್ಲಂಘನೆಯನ್ನು ಗುರುತಿಸಲಿದೆ ಮತ್ತು ಸರಿಯಾದ ಕ್ರಮಗಳನ್ನು ಶಿಫಾರಸು ಮಾಡಲಿದೆ.

ಈ ಸಂಬಂಧ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಆರೋಗ್ಯ ಇಲಾಖೆಯ ಕಾರ್ಯದರ್ಶಿಗಳು ಮತ್ತು ಪ್ರಧಾನ ಕಾರ್ಯದರ್ಶಿಗಳು ಹಾಗೂ ಎಲ್ಲಾ ವೈದ್ಯಕೀಯ ಸಂಸ್ಥೆಗಳ ನಿರ್ದೇಶಕರು, ಡೀನ್‌ಗಳಿಗೆ ಡಿಸೆಂಬರ್ 15ರಂದು ಸುತ್ತೋಲೆ ಹೊರಡಿಸಲಾಗಿದೆ ಎಂದು ಎನ್‌ಎಂಸಿ ತಿಳಿಸಿದೆ.

'ಮತ್ತೊಂದು ಅರ್ಜಿ ಬೇಡ'

ನವದೆಹಲಿ (ಪಿಟಿಐ): ನವೆಂಬರ್ ಮತ್ತು ಡಿಸೆಂಬರ್‌ನಲ್ಲಿ ಟಿಕೆಟ್ ರದ್ದು ಮಾಡಲಾದ ಪ್ರಯಾಣಿಕರಿಗೆ, ಟಿಕೆಟ್ ದರದ ನಾಲ್ಕು ಪಟ್ಟು ಅಧಿಕ ಪರಿಹಾರ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಮತ್ತು ಇಂಡಿಗೊ ಸಂಸ್ಥೆಗೆ ನಿರ್ದೇಶನ ನೀಡುವಂತೆ ಕೋರಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ವಿಚಾರಣೆ ನಡೆಸಲು ದೆಹಲಿ ಹೈಕೋರ್ಟ್ ಬುಧವಾರ ನಿರಾಕರಿಸಿದೆ.

'ಇದೇ ವಿಚಾರದ ಬಗ್ಗೆ ಈಗಾಗಲೇ ಸಲ್ಲಿಕೆಯಾಗಿರುವ ಅರ್ಜಿಯ ಕುರಿತು ನಾವು ವಿಚಾರಣೆ ನಡೆಸುತ್ತಿದ್ದೇವೆ. ಆದ್ದರಿಂದ, ನಿಮ್ಮ ಮನವಿಯನ್ನು ವಿಚಾರಣೆ ಹಂತದಲ್ಲಿರುವ ಅರ್ಜಿಯ ಮೂಲಕವೇ ಮಾಡಿಕೊಳ್ಳಿ' ಎಂದು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ದೇವೇಂದ್ರ ಕುಮಾರ್ ಉಪಾಧ್ಯಾಯ ಮತ್ತು ನ್ಯಾಯಮೂರ್ತಿ ತುಷಾರ್ ರಾವ್ ಗೆಡೇಲಾ ಅವರ ಪೀಠ ಹೇಳಿತು.

'ಇಂಡಿಗೊ ಸಂಸ್ಥೆಯ ನೂರಾರು ವಿಮಾನಗಳು ರದ್ದಾಗಿ ಸೃಷ್ಟಿಯಾದ ಬಿಕ್ಕಟ್ಟಿಗೆ ಸಂಬಂಧಿಸಿ ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯದ (ಡಿಜಿಸಿಎ) ನಿರ್ಲಕ್ಷ್ಯ ಮತ್ತು ಲೋಪದ ಕುರಿತು ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆ ನಡೆಸಬೇಕು' ಎಂದು ಅರ್ಜಿಯಲ್ಲಿ ಮಾನವಿ ಮಾಡಲಾಗಿತ್ತು.

ಟಿಡಿಬಿಯ ಮಾಜಿ ಆಡಳಿತಾಧಿಕಾರಿ ಬಂಧನ

ತಿರುವನಂತಪುರ (ಪಿಟಿಐ): ಶಬರಿಮಲೆ ಅಯ್ಯಪ್ಪ ದೇವಸ್ಥಾನದ ದ್ವಾರಪಾಲಕ ಮೂರ್ತಿಗಳ ಕವಚದಲ್ಲಿನ ಚಿನ್ನ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ವಿಶೇಷ ತನಿಖಾ ತಂಡವು (ಎಸ್‌ಐಟಿ) ತಿರುವಾಂಕೂರು ದೇವಸ್ವಂ ಮಂಡಳಿಯ (ಟಿಡಿಬಿ) ಮಾಜಿ ಆಡಳಿತಾಧಿಕಾರಿ ಎಸ್. ಶ್ರೀಕುಮಾರ್ ಅವರನ್ನು ಬುಧವಾರ ಬಂಧಿಸಿದೆ.

ಎರಡು ವಾರಗಳ ಹಿಂದೆ ಎಸ್ ಶ್ರೀಕುಮಾರ್ ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಕೇರಳ ಹೈಕೋರ್ಟ್ ವಜಾಗೊಳಿಸಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ಈವರೆಗೆ ಶ್ರೀಕುಮಾರ್ ಸೇರಿದಂತೆ ಏಳು ಜನರನ್ನು ಬಂಧಿಸಲಾಗಿದೆ.

'ಆರೋಪಿಗಳಿಗೆ ನಿರೀಕ್ಷಣಾ ಜಾಮೀನು ನೀಡಿದರೆ, ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆಯ ಮಟ್ಟ ಕುಸಿಯುತ್ತದೆ ಎಂದು ನ್ಯಾಯಾಲಯವು ಹೇಳಿತ್ತು.

1.36 ಕೋಟಿ ಮತದಾರರ ವಿಚಾರಣೆ'

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ಭಾಗವಾಗಿ ಸುಮಾರು 1.36 ಕೋಟಿ ಮತದಾರರನ್ನು ವಿಚಾರಣೆಗೆ ಕರೆಯಲಾಗುವುದು ಎಂದು ರಾಜ್ಯದ ಮುಖ್ಯ ಚುನಾವಣಾ ಅಧಿಕಾರಿ ಮನೋಜ್ ಕುಮಾರ್ ಅಗರ್ವಾಲ್ ತಿಳಿಸಿದರು. ರಾಜ್ಯದಲ್ಲಿ ನಿಗದಿಪಡಿಸಿದ ಕಾಲಮಿತಿಯ ಒಳಗಾಗಿ ಎಸ್‌ಐಆರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು ಎಂದು ಹೇಳಿದರು.

'1.36 ಕೋಟಿ ಮತದಾರರನ್ನು ವಿಚಾರಣೆಗೆ ಕರೆಯಲಾಗುವುದು. ಈ ಸಂಖ್ಯೆ ಇನ್ನೂ ಕಡಿಮೆಯಾಗುವ ಸಾಧ್ಯತೆ ಇದೆ. ಒಂದು ವೇಳೆ ನೈಜ ಕಾರಣಗಳಿಂದ ಕೆಲವರಿಗೆ ಪಾಲ್ಗೊಳ್ಳಲು ಸಾಧ್ಯವಾಗದಿದ್ದರೆ ಅದನ್ನು ಪರಿಗಣಿಸಲಾಗುವುದು' ಎಂದು ಅವರು ಹೇಳಿದರು.

ಮಾಹಿತಿ ತಾಳೆಯಾಗದ ಕಾರಣ ಕೆಲವು ಹೆಸರುಗಳನ್ನು ಕರಡು ಮತದಾರರ ಪಟ್ಟಿಯಿಂದ ಅಳಿಸಲಾಗಿದೆ ಎಂದು ಅವರು ತಿಳಿಸಿದರು.

ಆಯೋಗವು ಮಂಗಳವಾರ ಪಶ್ಚಿಮ ಬಂಗಾಳದಲ್ಲಿ ಮತದಾರರ ಕರಡು ಪಟ್ಟಿಯನ್ನು ಪ್ರಕಟಿಸಿದೆ. ಸಾವು, ಶಾಶ್ವತ ವಲಸೆ ಮತ್ತು ಅರ್ಜಿ ನಮೂನೆಗಳನ್ನು ಸಲ್ಲಿಸದಿರುವುದು ಸೇರಿದಂತೆ ವಿವಿಧ ಕಾರಣಗಳಿಗಾಗಿ 58 ಲಕ್ಷಕ್ಕೂ ಹೆಚ್ಚು ಮತದಾರರ ಹೆಸರನ್ನು ಕೈಬಿಟ್ಟಿದೆ.

'ಕರಡು ಪಟ್ಟಿಯಿಂದ ಹೆಸರು ತೆಗೆದುಹಾಕಲ್ಪಟ್ಟವರು ಫಾರ್ಮ್ 6 ಮತ್ತು ಅಗತ್ಯ ದಾಖಲೆಗಳೊಂದಿಗೆ ತಮ್ಮ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಬಹುದು' ಎಂದು ತಿಳಿಸಿದರು.

ಬೂತ್ ಮಟ್ಟದ ಅಧಿಕಾರಿಗಳು ಮನೆಮನೆಗೆ ಭೇಟಿ ನೀಡಿ ವಿಚಾರಣೆಗೆ ಹಾಜರಾಗಬೇಕಿರುವ ಮತದಾರರಿಗೆ ಮಾಹಿತಿ ನೀಡುತ್ತಿದ್ದಾರೆ ಎಂದು ಹೇಳಿದರು.

'ಕಲಾಮ್‌ಗೂ ಮುನ್ನ ಅಟಲ್ ಹೆಸರು'

ನವದೆಹಲಿ (ಪಿಟಿಐ): ರಾಷ್ಟ್ರಪತಿ ಹುದ್ದೆಗೆ ಎಪಿಜೆ ಅಬ್ದುಲ್ ಕಲಾಂ ಅವರಿಗೂ ಮೊದಲು ಆಗಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರನ್ನು ಉಮೇದುವಾರಿಕೆಗೆ ಪರಿಗಣಿಸಲು ಬಿಜೆಪಿಯಲ್ಲಿ ಚರ್ಚೆ ನಡೆದಿತ್ತು ಎಂದು ವಾಜಪೇಯಿ ಅವರ ಮಾಧ್ಯಮ ಸಲಹೆಗಾರರಾಗಿದ್ದ ಅಶೋಕ್ ಟಂಡನ್ ಅವರು 'ಅಟಲ್ ಸಂಸ್ಮರಣ್' ಕೃತಿಯಲ್ಲಿ ಉಲ್ಲೇಖಿಸಿದ್ದಾರೆ.

ಕೃತಿಯನ್ನು ಪ್ರಭಾತ್ ಪ್ರಕಾಶನ ಪ್ರಕಟಿಸಿದೆ. ವಾಜಪೇಯಿ ಅವರು ಪ್ರಧಾನಿ ಆಗಿದ್ದ ಅವಧಿಯಲ್ಲಿ ನಡೆದ ಅನೇಕ ಘಟನೆಗಳು ಮತ್ತು ಹಲವು ನಾಯಕರ ಜತೆಗೆ ವಾಜಪೇಯಿ ಅವರ ಸಂಬಂಧಗಳ ಬಗ್ಗೆ ಕೃತಿಯಲ್ಲಿ ವಿವರಿಸಿದ್ದಾರೆ.

ಪ್ರಮುಖ ಅಂಶಗಳು

- ಯಾವುದೇ ಜನಪ್ರಿಯ ಪ್ರಧಾನಿಯು ತನ್ನ ಬಹುಮತದ ಬಲದಿಂದ ರಾಷ್ಟ್ರಪತಿ ಆಗುವುದು ಭಾರತದ ಸಂಸದೀಯ ಪ್ರಜಾಪ್ರಭುತ್ವಕ್ಕೆ ಒಳ್ಳೆಯ ಸಂಕೇತವಲ್ಲ. ಅದು ತಪ್ಪು ಸಂಪ್ರದಾಯಕ್ಕೆ ನಾಂದಿಯಾಗುತ್ತದೆ. ಅಂಥ ನಡೆಯನ್ನು ಬೆಂಬಲಿಸುವ ಕೊನೆಯ ವ್ಯಕ್ತಿ ತಾನು ಎಂದು ವಾಜಪೇಯಿ ಹೇಳಿದ್ದರು.
- ರಾಷ್ಟ್ರಪತಿ ಹುದ್ದೆಗೆ ಒಮ್ಮತ ಮೂಡಿಸಲು ವಾಜಪೇಯಿ ಅವರು ಪ್ರಮುಖ ವಿರೋಧ ಪಕ್ಷವಾದ ಕಾಂಗ್ರೆಸ್‌ನ ನಾಯಕರನ್ನು ಸಭೆಗೆ ಆಹ್ವಾನಿಸಿದ್ದರು.
- ಸೋನಿಯಾ ಗಾಂಧಿ, ಪ್ರಣಬ್ ಮುಖರ್ಜಿ, ಮನಮೋಹನ ಸಿಂಗ್ ಅವರು ಪ್ರಧಾನಿ ಜತೆಗಿನ ಸಭೆಗೆ ಬಂದಿದ್ದರು. ಈ ವೇಳೆ ರಾಷ್ಟ್ರಪತಿ ಚುನಾವಣೆಗೆ ಎಪಿಜೆ ಅಬ್ದುಲ್ ಕಲಾಂ ಅವರನ್ನು ಎನ್‌ಡಿಎ ಅಭ್ಯರ್ಥಿಯಾಗಿ ನಾಮನಿರ್ದೇಶನ ಮಾಡಲು ನಿರ್ಧರಿಸಲಾಗಿದೆ ಎಂದು ವಾಜಪೇಯಿ ಮೊದಲ ಬಾರಿಗೆ ಅಧಿಕೃತವಾಗಿ ಬಹಿರಂಗಪಡಿಸಿದರು. ಆಗ ಸಭೆಯಲ್ಲಿ ಒಂದು ಕ್ಷಣ ಮೌನ ಆವರಿಸಿತ್ತು.
- ಕೆಲ ಕ್ಷಣದ ಬಳಿಕ ಮೌನ ಮುರಿದ ಸೋನಿಯಾ ಗಾಂಧಿ ಅವರು ಈ ಆಯ್ಕೆಗೆ ಆಶ್ಚರ್ಯ ವ್ಯಕ್ತಪಡಿಸಿದರು. ಕಲಾಂ ಅವರನ್ನು ಬೆಂಬಲಿಸುವುದನ್ನು ಬಿಟ್ಟು ಬೇರೆ ದಾರಿಯಿಲ್ಲ ಎಂದೂ ಹೇಳಿದರು. ಅದಾಗ್ಯೂ ಈ ಪ್ರಸ್ತಾವವನ್ನು ಚರ್ಚಿಸಿ, ಬಳಿಕ ನಿರ್ಧಾರ ತೆಗೆದುಕೊಳ್ಳುವುದಾಗಿ ತಿಳಿಸಿದ್ದರು.

ಅಟಲ್, ಸೋನಿಯಾ ಸಂಭಾಷಣೆ

2001ರ ಡಿಸೆಂಬರ್ 13ರಂದು ಸಂಸತ್ತಿನ ಮೇಲೆ ಭಯೋತ್ಪಾದಕ ದಾಳಿ ನಡೆದಾಗ, ವಾಜಪೇಯಿ ಮತ್ತು ಲೋಕಸಭೆಯ ವಿರೋಧ ಪಕ್ಷದ ನಾಯಕಿ ಸೋನಿಯಾ ಗಾಂಧಿ ಅವರ ನಡುವೆ ಫೋನ್ ಸಂಭಾಷಣೆ ನಡೆಯಿತು ಎಂದು ಟಂಡನ್ ಉಲ್ಲೇಖಿಸಿದ್ದಾರೆ. ದಾಳಿಗೆ ಪ್ರತಿಯಾಗಿ ಭದ್ರತಾ ಪಡೆಗಳು ನಡೆಸುತ್ತಿದ್ದ ಕಾರ್ಯಾಚರಣೆಯನ್ನು ಅಟಲ್ ಅವರು ಟಿ.ವಿಯಲ್ಲಿ ವೀಕ್ಷಿಸುತ್ತಿದ್ದರು. ಈ ವೇಳೆ ಸೋನಿಯಾ ಗಾಂಧಿ ಅವರ ಕರೆ ಬಂದಿತು. 'ನನಗೆ ನಿಮ್ಮ ಬಗ್ಗೆ ಚಿಂತೆಯಾಗಿದೆ, ನೀವು ಸುರಕ್ಷಿತರಾಗಿದ್ದೀರಾ?' ಎಂದು ಅವರು ಪ್ರಧಾನಿ ಅವರಲ್ಲಿ ಕೇಳಿದರು. ಅದಕ್ಕೆ ಪ್ರತಿಕ್ರಿಯಿಸಿದ ವಾಜಪೇಯಿ ಅವರು, 'ಸೋನಿಯಾ ಜಿ, ನಾನು ಸುರಕ್ಷಿತವಾಗಿದ್ದೇನೆ. ನೀವು ಸಂಸತ್ತಿನ ಕಟ್ಟಡದಲ್ಲಿ ಇರಬಹುದೆಂದು ನನಗೆ ಚಿಂತೆಯಾಗಿತ್ತು... ನಿಮ್ಮ ಬಗ್ಗೆ ಕಾಳಜಿವಹಿಸಿ' ಎಂದು ಉತ್ತರಿಸಿದ್ದರು ಎಂಬುದಾಗಿ ಬರೆದಿದ್ದಾರೆ.

ಬಿಜೆಪಿ – ಕಾಂಗ್ರೆಸ್ ವಾಗ್ದಾಳಿ

ನ್ಯಾಷನಲ್ ಹೆರಾಲ್ಡ್ ಪ್ರಕರಣ: ಕೋರ್ಟ್ ತೀರ್ಮಾನದ ಬಳಿಕ

ನವದೆಹಲಿ (ಪಿಟಿಐ): 'ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ದೆಹಲಿಯ ವಿಚಾರಣಾ ನ್ಯಾಯಾಲಯ ಮಂಗಳವಾರ ಪ್ರಕಟಿಸಿದ ತೀರ್ಮಾನದ ಬಗ್ಗೆ ಕಾಂಗ್ರೆಸ್ – ಬಿಜೆಪಿ ನಡುವೆ ವಾಕ್ಸಮರ ತೀವ್ರಗೊಂಡಿದೆ.

'ಕಾಂಗ್ರೆಸ್ ದೇಶದ ಜನರ ದಾರಿ ತಪ್ಪಿಸುವ ಕೆಲಸ ಮಾಡುತ್ತಿದೆ' ಎಂದು ಬಿಜೆಪಿ ಆರೋಪಿಸಿದೆ.

ಈ ಪ್ರಕರಣದಲ್ಲಿ ಬಿಜೆಪಿ ಸೇಡಿನ ರಾಜಕಾರಣ ಮಾಡುತ್ತಿದೆ. ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಂಡಿದೆ ಎಂದು ಆರೋಪಿಸಿ ಕಾಂಗ್ರೆಸ್ ಬುಧವಾರ ದೇಶದಾದ್ಯಂತ ಪ್ರತಿಭಟನೆ ನಡೆಸಿದೆ.

ದೆಹಲಿಯಲ್ಲಿ ಬಿಜೆಪಿ ಕಚೇರಿ ಎದುರು ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರು, 'ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ದೆಹಲಿ ಕೋರ್ಟ್ ಬಿಜೆಪಿಗೆ ಕಪಾಳಮೋಕ್ಷ ಮಾಡಿದೆ. ಆದ್ದರಿಂದ ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರು ಸಾರ್ವಜನಿಕವಾಗಿ ಕ್ಷಮೆಯಾಚಿಸಬೇಕು ಅಥವಾ ರಾಜೀನಾಮೆ ನೀಡಬೇಕು' ಎಂದು ಒತ್ತಾಯಿಸಿದರು.

'ಇ.ಡಿ, ಸಿಬಿಐ, ಆದಾಯ ತೆರಿಗೆ ಇಲಾಖೆಯನ್ನು ದುರ್ಬಳಕೆ ಮಾಡಿಕೊಂಡು ಮೋದಿ ಸರ್ಕಾರ ಕಳೆದ 11 ವರ್ಷಗಳಲ್ಲಿ ವಿರೋಧ ಪಕ್ಷಗಳ 50ಕ್ಕೂ ಹೆಚ್ಚು ಮುಖಂಡರನ್ನು ಬ್ಲ್ಯಾಕ್‌ಮೇಲ್ ಮಾಡಿದೆ' ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ವಿಚಾರಣೆ ನಡೆಯುತ್ತಿದೆ: ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ರಾಷ್ಟ್ರೀಯ ವಕ್ತಾರ ಗೌರವ್ ಭಾಟಿಯಾ, 'ನ್ಯಾಷನಲ್ ಹೆರಾಲ್ಡ್ ಪ್ರಕರಣದ ವಿಚಾರಣೆ ದೆಹಲಿ ಹೈಕೋರ್ಟ್‌ನಲ್ಲಿ ನಡೆಯುತ್ತಿದೆ. ವಿಚಾರಣಾ ನ್ಯಾಯಾಲಯವು ತಾಂತ್ರಿಕ ಕಾರಣಗಳಿಂದ ಜಾರಿ ನಿರ್ದೇಶನಾಲಯ ಸಲ್ಲಿಸಿದ್ದ ಆರೋಪ ಪಟ್ಟಿಯನ್ನು ಪರಿಗಣಿಸುವುದಿಲ್ಲ ಎಂದು ಹೇಳಿದೆಯಷ್ಟೇ. ಆದರೆ, ಕಾಂಗ್ರೆಸ್ ಈ ಪ್ರಕರಣದಲ್ಲಿ ಜನರ ದಿಕ್ಕು ತಪ್ಪಿಸುತ್ತಿದೆ. ಗಾಂಧಿ ಕುಟುಂಬವು ಮೋಸ, ವಂಚನೆಯಿಂದಲೇ ಅಭಿವೃದ್ಧಿ ಕಂಡಿದೆ' ಎಂದು ದೂರಿದರು.

ಕಾಂಗ್ರೆಸ್ ಸಂಸದರು ಬುಧವಾರ ನವದೆಹಲಿಯ ಸಂಸತ್ ಭವನದ ಆವರಣದಲ್ಲಿ 'ಸತ್ಯಮೇವ ಜಯತೆ' ಬ್ಯಾನರ್ ಹಿಡಿದು ಬಿಜೆಪಿ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿದರು – ಪಿಟಿಐ ಚಿತ್ರ

ಸಂಸತ್ ಆವರಣದಲ್ಲಿ ಕಾಂಗ್ರೆಸ್ ಪ್ರತಿಭಟನೆ

'ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಕೇಂದ್ರ ಬಿಜೆಪಿ ಸರ್ಕಾರವು ಜಾರಿ ನಿರ್ದೇಶನಾಲಯವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ' ಎಂದು ಆರೋಪಿಸಿ ಕಾಂಗ್ರೆಸ್ ಸಂಸದರು ಸಂಸತ್ ಆವರಣದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು. ಇ.ಡಿ ಸಲ್ಲಿಸಿದ್ದ ಆರೋಪ ಪಟ್ಟಿಯನ್ನು ತಿರಸ್ಕರಿಸುವ ಮೂಲಕ ಕೋರ್ಟ್ ಸತ್ಯವನ್ನು ಎತ್ತಿ ಹಿಡಿದಿದೆ ಎಂದ ಕಾಂಗ್ರೆಸ್ ಮುಖಂಡರು, 'ಸತ್ಯಮೇವ ಜಯತೆ' ಎಂಬ ಬರಹದ ಬ್ಯಾನರ್ ಪ್ರದರ್ಶಿಸಿ, ಮೋದಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ ವೇಣುಗೋಪಾಲ್, ಮುಕುಲ್ ವಾಸ್ನಿಕ್, ಸಂಸದರಾದ ಶಶಿ ತರೂರ್, ತಾರಿಖ್ ಅನ್ವರ್, ಕುಮಾರಿ ಸೆಲ್ಜಾ, ಕೆ. ಸುರೇಶ್, ಮಾಣಿಕ್ಯಂ ಟ್ಯಾಗೋರ್ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಸಂಕ್ಷಿಪ್ತ ಸುದ್ದಿ

ಶೂ ಎಸೆತ: ಮಾರ್ಗಸೂಚಿ ರೂಪಿಸಲಿರುವ ಸುಪ್ರೀಂ

ನವದೆಹಲಿ (ಪಿಟಿಐ): ಭಾರತದ ನಿವೃತ್ತ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಬಿ.ಆರ್.ಗವಾಯಿ ಅವರ ಮೇಲೆ ನ್ಯಾಯಾಲಯದ ಕಲಾಪ ನಡೆಸುತ್ತಿದ್ದಾಗಲೇ ಶೂ ಎಸೆಯಲು ಯತ್ನಿಸಿದ ಪ್ರಕರಣದ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್, 'ಭವಿಷ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಿರಲು ಸೂಕ್ತ ಸಲಹೆಗಳನ್ನು ನೀಡುವಂತೆ ಕೇಂದ್ರ ಸರ್ಕಾರ ಮತ್ತು ಸುಪ್ರೀಂಕೋರ್ಟ್ ಬಾರ್ ಅಸೋಸಿಯೇಷನ್‌ಗೆ (ಎಸ್‌ಸಿಬಿಎ) ಸೂಚಿಸಿದೆ.

ಇಂತಹ ಘಟನೆಗಳನ್ನು ವರದಿ ಮಾಡುವುದಕ್ಕೆ ಸಂಬಂಧಿಸಿದಂತೆ ಮಾಧ್ಯಮಕ್ಕೆ ಪ್ರಮಾಣಿತ ಕಾರ್ಯಚರಣೆ ವಿಧಾನವೊಂದನ್ನು (ಎಸ್‌ಒಪಿ) ರೂಪಿಸಬೇಕು ಎಂಬ ಸಲಹೆಯನ್ನೂ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್, ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರು ಪೀಠವು ಮುಂದಿಟ್ಟಿದೆ.

ಇದಕ್ಕೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ಹೊರಡಿಸಲು ಸಲಹೆಗಳನ್ನು ಸಲ್ಲಿಸುವಂತೆ ಕೇಂದ್ರದ ಪರವಾಗಿ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಮತ್ತು ಎಸ್‌ಸಿಬಿಎ ಅಧ್ಯಕ್ಷ ವಿಕಾಸ್ ಸಿಂಗ್ ಅವರಿಗೆ ನ್ಯಾಯಪೀಠ ಸೂಚಿಸಿದೆ. ಜಂಟಿ ವರದಿ ಸಲ್ಲಿಸುವುದಾಗಿ' ತುಷಾರ್ ಮೆಹ್ತಾ ಮತ್ತು ವಿಕಾಸ್ ಸಿಂಗ್ ಪೀಠದ ಗಮನಕ್ಕೆ ತಂದರು.

2026ರ ಅಂತ್ಯಕ್ಕೆ ಎಐ ಆಧಾರಿತ ಡಿಜಿಟಲ್ ಟೋಲ್: ಗಡ್ಕರಿ

ನವದೆಹಲಿ (ಪಿಟಿಐ): ದೇಶದಾದ್ಯಂತ ಬಹು ಪಥ ಮುಕ್ತ ಹರಿವು (ಎಂಎಲ್‌ಎಫ್‌ಎಫ್) ಟೋಲ್ ಮತ್ತು ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಆಧಾರಿತ ಹೆದ್ದಾರಿ ನಿರ್ವಹಣೆ ವ್ಯವಸ್ಥೆಯು 2026ರ ಅಂತ್ಯದ ಒಳಗೆ ಪೂರ್ಣಗೊಳ್ಳಲಿದೆ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ತಿಳಿಸಿದರು.

ಈ ಯೋಜನೆ ಮತ್ತು ತಂತ್ರಜ್ಞಾನದ ಅನುಷ್ಠಾನದ ನಂತರ ಟೋಲ್ ಪ್ಲಾಜಾಗಳಲ್ಲಿ ಪ್ರಯಾಣಿಕರು ಕಾಯುವುದು ತಪ್ಪಲಿದೆ ಎಂದು ರಾಜ್ಯಸಭೆಯಲ್ಲಿ ಬುಧವಾರ ತಿಳಿಸಿದರು.

ಪ್ರಶ್ನೋತ್ತರ ಅವಧಿ ವೇಳೆ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಅವರು, 'ನೂತನ ತಂತ್ರಜ್ಞಾನವು ಕೃತಕ ಬುದ್ಧಿಮತ್ತೆ ಆಧಾರಿತವಾಗಿರಲಿದೆ. ಇದರಿಂದ ಪ್ರಯಾಣಿಕರ ಸಮಯ ಮತ್ತು ₹1,500 ಕೋಟಿ ಮೌಲ್ಯದ ಇಂಧನವು ಉಳಿತಾಯವಾಗಲಿದೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ₹6,000 ಕೋಟಿ ಹೆಚ್ಚುವರಿ ವರಮಾನ ಬರಲಿದೆ' ಎಂದು ತಿಳಿಸಿದರು.

2026ರ ಅಂತ್ಯದೊಳಗೆ ಈ ಯೋಜನೆಯನ್ನು ಅನುಷ್ಠಾನಕ್ಕೆ ತರುವುದು ನಿಶ್ಚಿತ. ಆ ಬಳಿಕ ಪ್ರಯಾಣಿಕರು ಟೋಲ್ ಪ್ಲಾಜಾಗಳಲ್ಲಿ ಕಾದು ನಿಲ್ಲಬೇಕಾದ ಅಗತ್ಯವೇ ಇರುವುದಿಲ್ಲ ಎಂದರು.

ಲೂಥ್ರಾ ಸಹೋದರರು ಪೊಲೀಸ್ ಕಸ್ಟಡಿಗೆ

ಪಣಜಿ (ಪಿಟಿಐ): ಉತ್ತರ ಗೋವಾದ ನೈಟ್ ಕ್ಲಬ್ ಅಗ್ನಿ ಅವಘಡಕ್ಕೆ ಸಂಬಂಧಿಸಿದಂತೆ ಮಾಲೀಕರಾದ ಸೌರಭ್ ಮತ್ತು ಗೌರವ್ ಲೂಥ್ರಾ ಸಹೋದರರನ್ನು ಬಂಧಿಸಿರುವ ಗೋವಾ ಪೊಲೀಸರು, ಬುಧವಾರ ಬೆಳಿಗ್ಗೆ ಮಾಪುಸಾ ಜಿಲ್ಲಾ ಆಸ್ಪತ್ರೆಯಲ್ಲಿ ವೈದ್ಯಕೀಯ ತಪಾಸಣೆಗೆ ಒಳಪಡಿಸಿ, ಅವರನ್ನು ಕೋರ್ಟ್‌ಗೆ ಹಾಜರುಪಡಿಸಿದರು. ಕೋರ್ಟ್ ಇಬ್ಬರನ್ನೂ ಐದು ದಿನ ಪೊಲೀಸ್ ಕಸ್ಟಡಿಗೆ ನೀಡಿದೆ.

'ಪೊಲೀಸ್ ಕಸ್ಟಡಿಗೆ ವಹಿಸುವ ಮುನ್ನ ತಮ್ಮ ಹದಗೆಟ್ಟಿರುವ ಆರೋಗ್ಯ ಸ್ಥಿತಿಯನ್ನು ವಿಶೇಷವಾಗಿ ಪರಿಗಣಿಸಬೇಕು' ಎಂದು ಲೂಥ್ರಾ ಸಹೋದರರು ಕೋರ್ಟ್‌ಗೆ ಮನವಿ ಮಾಡಿದರು. ಇದರಿಂದ ಅವರನ್ನು ಎರಡನೆಯ ಬಾರಿ ವೈದ್ಯಕೀಯ ತಪಾಸಣೆಗೆ ಒಳಪಡಿಸುವಂತೆ ಕೋರ್ಟ್ ಸೂಚಿಸಿತು. ಪೊಲೀಸರು ಅವರನ್ನು ಮತ್ತೆ ಮಾಪುಸಾ ಜಿಲ್ಲಾ ಆಸ್ಪತ್ರೆಗೆ ಕರೆತಂದು ತಪಾಸಣೆಗೆ ಒಳಪಡಿಸಿದರು. ನೈಟ್ ಕ್ಲಬ್ ಅಗ್ನಿ ಅವಘಡದಲ್ಲಿ ತಮ್ಮ ಕುಟುಂಬದ ನಾಲ್ವರನ್ನು ಕಳೆದುಕೊಂಡ ಭಾವನಾ ಜೋಶಿ ಅವರ ಪರವಾಗಿ ಹಾಜರಾದ ವಕೀಲ ವಿಷ್ಣು ಜೋಶಿ ಅವರು, 'ಲೂಥ್ರಾ ಸಹೋದರರನ್ನು ಎರಡನೆಯ ಬಾರಿ ವೈದ್ಯಕೀಯ ತಪಾಸಣೆಗೆ ಒಳಪಡಿಸಿದಾಗಲೂ ಅವರಿಗೆ ಯಾವುದೇ ಆರೋಗ್ಯ ಸಮಸ್ಯೆಗಳು ಇಲ್ಲ ಎನ್ನುವುದು ಸ್ಪಷ್ಟವಾಗಿದೆ. ಈ ಪ್ರಕರಣದ ಗಂಭೀರತೆ ಪರಿಗಣಿಸಿ ಕೋರ್ಟ್ ಅವರನ್ನು ಪೊಲೀಸ್ ಕಸ್ಟಡಿಗೆ ನೀಡಿದೆ. ತಮಗೆ ಒಳ್ಳೆಯ ಹಾಸಿಗೆ ಒದಗಿಸುವಂತೆ ಅವರು ಸಲ್ಲಿಸಿದ್ದ ಮನವಿಯನ್ನೂ ಕೋರ್ಟ್ ತಿರಸ್ಕರಿಸಿದೆ' ಎಂದರು.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಜಲಭವನ, 5ನೇ ಮಹಡಿ, ನಂ.5, 1ನೇ ಹಂತ, 1ನೇ ಘಟ್ಟ, ಬಿಟಿಎಂ ಲೇಔಟ್, ಬನ್ನೇರುಘಟ್ಟ ಮುಖ್ಯರಸ್ತೆ, ಬೆಂಗಳೂರು – 560029

ಟೆಂಡರ್‌ಗಾಗಿ ಆಹ್ವಾನ (ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಸಂಖ್ಯೆ: KWB/TEC/CE(B)/Chitradurga DC Works/1407/2025-26, Dated: 17.12.2025

ಕಾಮಗಾರಿಯ ಹೆಸರು: ಚಿತ್ರದುರ್ಗ ನಗರ ಸಭೆ ಠೇವಣಿ ಕೊಡುಗೆ ಕಾಮಗಾರಿಯಡಿಯಲ್ಲಿ ಮಲ್ಲಾಪುರ ಕೆರೆಗೆ ಹರಿದು ಬರುತ್ತಿರುವ ತ್ಯಾಜ್ಯ ನೀರನ್ನು ಮಾರ್ಗಾಂತರ ಮಾಡಲು ಪಿಲ್ಲೆಕೆರೆನಹಳ್ಳಿ ನಾಲೆಯಲ್ಲಿ Interception and Diversion ಕಾಮಗಾರಿಗಳನ್ನು 3 ವರ್ಷಗಳ ಅವಧಿಗೆ (1 ವರ್ಷದ ದೋಷ ಹೊಣೆಗಾರಿಕೆ ಸೇರಿ) ಕಾರ್ಯಾಚರಣೆ ಮತ್ತು ನಿರ್ವಹಣೆ Lumpsum Mode (No Variation) ಮಾದರಿಯಲ್ಲಿ ಕೈಗೊಳ್ಳುವ ಬಗ್ಗೆ.

ಇಂಡೆಂಟ್ ಸಂಖ್ಯೆ: KUWSDB/2025-26/WS/WORK_INDENT449/Call-2

ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://kppp.karnataka.gov.inನಲ್ಲಿ ಸಂಪರ್ಕಿಸಬಹುದು.

ಸಹಿ/– ಮುಖ್ಯ ಅಭಿಯಂತರರು (ಬೆಂ),
ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರು
ಡಿಐಪಿಆರ್/ಸಿಪಿ/4495/ಸಿಸಿಎಲ್/2025–26

ಕರ್ನಾಟಕ ಸರ್ಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು – 560001.
ದೂರವಾಣಿ: 080–22215601, 22211246 ಫ್ಯಾಕ್ಸ್ : 22215602

ಸಂಖ್ಯೆ: ಕಕ್ರೀಪ್ರಾ/ಸಿ5/53/ 2024–25 [ಭಾಗ–01] ದಿನಾಂಕ: 17.12.2025

ಪ್ರಕಟಣೆ

ಕರ್ನಾಟಕ ಕ್ರೀಡಾ ಪ್ರಾಧಿಕಾರದಿಂದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕ್ರೀಡಾ ವಸತಿ ನಿಲಯದ ಕ್ರೀಡಾಪಟುಗಳಿಗೆ ತರಬೇತಿ ನೀಡುವ ಸಲುವಾಗಿ ನೇಮಕಾತಿ ಆದೇಶ ನೀಡುವ ದಿನಾಂಕದಿಂದ ದಿನಾಂಕ 30–11–2026 ರವರೆಗೆ ತಾತ್ಕಾಲಿಕವಾಗಿ ಮಾಸಿಕ ಸಂಚಿತ ವೇತನ, ಗುತ್ತಿಗೆ ಆಧಾರದ ಮೇಲೆ ತರಬೇತುದಾರರ ಸೇವೆ ಪಡೆಯಲು ಭಾರತದ ಅರ್ಹ ನಾಗರೀಕರಿಂದ ಅರ್ಜಿಯನ್ನು ಆಹ್ವಾನಿಸಿದೆ. ವಿವರಗಳು ಈ ಕೆಳಕಂಡಂತಿದೆ.

(01) ಬೀದರ್ ಜಿಲ್ಲೆ : ಅಥ್ಲೆಟಿಕ್ಸ್ : 01, (02) ರಾಮನಗರ ಜಿಲ್ಲೆ : ಅಥ್ಲೆಟಿಕ್ಸ್ : 01 (3) ಮೈಸೂರು ಜಿಲ್ಲೆ : ಜಿಮ್ನಾಸ್ಟಿಕ್ಸ್ : 01 (04) ಬಾಗಲಕೋಟೆ ಜಿಲ್ಲೆ : ಹಾಕಿ : 01 (05) ರಾಯಚೂರು ಜಿಲ್ಲೆ : ಹಾಕಿ : 01, ಫುಟ್ಬಾಲ್ : 01.

ಅರ್ಜಿ ಮತ್ತು ಇನ್ನಿತರೆ ಪೂರಕ ದಾಖಲೆಗಳನ್ನು ದಿನಾಂಕ 05–01–2026 ರಂದು ಸಂಜೆ 4.00 ಗಂಟೆಯೊಳಗೆ ಮಹಾ ನಿರ್ದೇಶಕರು, ಕರ್ನಾಟಕ ಕ್ರೀಡಾ ಪ್ರಾಧಿಕಾರ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–56001 ಇವರಿಗೆ ಸಲ್ಲಿಸಬೇಕಾಗಿರುತ್ತದೆ. ಮಾಸಿಕ ಸಂಚಿತ ವೇತನ, ವಿದ್ಯಾರ್ಹತೆ ಮತ್ತು ಇತರೆ ಅರ್ಹತೆ ಮಾನದಂಡ ವಿವರಗಳು ಮತ್ತು ಅರ್ಜಿ ನಮೂನೆ ಹಾಗೂ ಅಧಿಸೂಚನೆಯನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವೆಬ್ ಸೈಟ್ dyes.karnataka.gov.in ನಲ್ಲಿ ಮತ್ತು ಹೆಚ್ಚಿನ ಮಾಹಿತಿಯನ್ನು ಮೇಲೆ ತಿಳಿಸಿರುವ ಕಾರ್ಯಾಲಯದಲ್ಲಿ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ

ಸಹಿ/–
ಆಯುಕ್ತರು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಹಾಗೂ ಮಹಾ ನಿರ್ದೇಶಕರು ಕರ್ನಾಟಕ ಕ್ರೀಡಾ ಪ್ರಾಧಿಕಾರ
DIPR/CP/4508/Zen/2025-26

ಜಿಲ್ಲಾಧಿಕಾರಿ ಮತ್ತು ಜಿಲ್ಲಾ ದಂಡಾಧಿಕಾರಿಗಳು ಚಿಕ್ಕಮಗಳೂರು ಹಾಗೂ ಅಧ್ಯಕ್ಷರು ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸೊಸೈಟಿ, 'ಕಾರ್ಮಿಕ ಭವನ', ಆರ್.ಟಿ.ಒ ಕಛೇರಿ ಹತ್ತಿರ, ಕೆ.ಎಂ ರಸ್ತೆ, ಜ್ಯೋತಿನಗರ ಅಂಚೆ, ಚಿಕ್ಕಮಗಳೂರು.
ಇ–ಮೇಲ್ : alcckm@gmail.com ದೂರವಾಣಿ: 08262-295787
ಸಂಖ್ಯೆ: ಜಿ.ಬಾ.ಕಾ.ಯೋ.ಸೊ.ಚಿ/2025-26 ದಿನಾಂಕ : 15-12-2025

ಅರ್ಜಿ ಅಹ್ವಾನ

ಚಿಕ್ಕಮಗಳೂರು ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸೊಸೈಟಿಯಲ್ಲಿ ಖಾಲಿ ಇರುವ ಯೋಜನಾ ನಿರ್ದೇಶಕರ (Project Director) ಹುದ್ದೆಯನ್ನು (ಹುದ್ದೆ–01) ತುಂಬಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಇದು ಗೌರವಧನ ಆಧಾರದ ಹುದ್ದೆಯಾಗಿದ್ದು ಈ ಕೆಳಕಂಡ ಮಾರ್ಗ ಸೂಚಿಗಳು ಅರ್ಹತೆಗಳು ಅನ್ವಯಿಸುತ್ತವೆ.

1. ಅಭ್ಯರ್ಥಿಗಳ ವಯಸ್ಸು ಈ ಅಧಿಸೂಚನೆಯ ದಿನಾಂಕಕ್ಕೆ 40 ವರ್ಷಗಳನ್ನು ಮೀರಬಾರದು. (ಈ ಸಂಬಂಧ ಎಸ್.ಎಸ್.ಎಲ್.ಸಿ ದೃಢೀಕೃತ ಅಂಕಪಟ್ಟಿಯನ್ನು ಲಗತ್ತಿಸಬೇಕು).
2. ಸಮಾಜಶಾಸ್ತ್ರದಲ್ಲಿ ಸ್ನಾತಕೋತರ ಪದವಿ/ಎಂ.ಎಸ್.ಡಬ್ಲ್ಯು/ಅಭಿವೃದ್ಧಿ ಅಧ್ಯಯನ /ಎನ್.ಜಿ.ಒ ನಿರ್ವಹಣಾ ಶಾಸ್ತ್ರ ಸ್ನಾತಕೋತ್ತರ ಪದವಿ ಹೊಂದಿರಬೇಕು.
3. ಕನ್ನಡ ಮತ್ತು ಇಂಗ್ಲೀಷ್ ಮಾತನಾಡುವ ಹಾಗೂ ಉತ್ತಮವಾಗಿ ಬರೆಯುವ ಕೌಶಲ್ಯವನ್ನು ಹೊಂದಿರಬೇಕು.
4. ಕಂಪ್ಯೂಟರ್ ಜ್ಞಾನವನ್ನು ಹೊಂದಿರುವುದು ಅವಶ್ಯಕವಾಗಿರುತ್ತದೆ. (MS Office, Internet operation DTP)
5. ಕಛೇರಿಯ ಲೆಕ್ಕಪತ್ರಗಳ ವ್ಯವಹಾರಗಳನ್ನು ನಿರ್ವಹಿಸುವ ವ್ಯವಹಾರ ಕೌಶಲ್ಯ ಹೊಂದಿರಬೇಕು.
6. ಯಾವುದೇ ಸರ್ಕಾರಿ ಕೆಲಸದಿಂದ ವಜಾಗೊಂಡಿರುವ ಹಾಗೂ ನಿವೃತ್ತಿ ಹೊಂದಿರುವ ಮತ್ತು ಸರ್ಕಾರಿ ಕೆಲಸ ನಿರ್ವಹಿಸುತ್ತಿರುವ ವ್ಯಕ್ತಿಗಳಾಗಿರಬಾರದು.

ಈ ಮೇಲಿನ ಅರ್ಹತೆಯುಳ್ಳ ಆಸಕ್ತ ಅಭ್ಯರ್ಥಿಗಳು ದೃಢೀಕೃತ ಅಂಕಪಟ್ಟಿಗಳ ಪ್ರತಿಗಳು, ಹಾಗೂ ದಾಖಲೆಗಳೊಡನೆ ತಮ್ಮ ಸ್ವ–ವಿವರವುಳ್ಳ Resume ನೊಡನೆ ತಮ್ಮ ಪೂರ್ಣ ಸ್ವ–ವಿಳಾಸದ ರಿಜಿಸ್ಟರ್ ಅಂಚೆ ಲಕೋಟೆಯೊಡನೆ ಅರ್ಜಿಯನ್ನು ಖುದ್ದಾಗಿ ಅಥವಾ ನೋಂದಾಯಿತ ಅಂಚೆ ಮೂಲಕ **ಸಹಾಯಕ ಕಾರ್ಮಿಕ ಆಯುಕ್ತರು, ಹಾಗೂ ಸದಸ್ಯ ಕಾರ್ಯದರ್ಶಿಯವರು, ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸೊಸೈಟಿ, ಕಾರ್ಮಿಕ ಭವನ, ಆರ್.ಟಿ.ಒ ಕಛೇರಿ ಹತ್ತಿರ, ಕೆ.ಎಂ ರಸ್ತೆ, ಜ್ಯೋತಿನಗರ ಅಂಚೆ, ಚಿಕ್ಕಮಗಳೂರು, 577102.** ವಿಳಾಸಕ್ಕೆ ದಿನಾಂಕ:30–12–2025 ರ ಸಂಜೆ 05–00 ಗಂಟೆ ಒಳಗಾಗಿ ಸಲ್ಲಿಸಲು ತಿಳಿಸಲಾಗಿದೆ.

ಸಹಿ/–
ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ಜಿಲ್ಲಾ ಬಾಲ
ಕಾರ್ಮಿಕ ಯೋಜನಾ ಸೊಸೈಟಿ ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ ಬಾಗಲಕೋಟ
ಜಿಲ್ಲಾ ಆಡಳಿತ ಭವನ ಕೊಠಡಿ ಸಂಖ್ಯೆ:130 ನವನಗರ,ಬಾಗಲಕೋಟ–587103
NATIONAL HEALTH MISSION,
Email ID:dhobagalkote@gmail.com ದೂರವಾಣಿ ಸಂಖ್ಯೆ:08354–236028
ಸಂಖ್ಯೆ:ಆರ್.ಸಿ.ಹೆಚ್.ಓ/ಎನ್.ಹೆಚ್.ಎಮ್/ಕ/ /2025–26 ದಿನಾಂಕ:16–12–2025

ಪತ್ರಿಕಾ ಪ್ರಕಟಣೆ

2025–26ನೇ ಸಾಲಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ಆಯುಷ್ ಚಿಕಿತ್ಸಾಲಯಗಳಿಗೆ/ತಾಲೂಕಾ ಆಯುಷ್ ಆಸ್ಪತ್ರೆಗಳಿಗೆ ಮತ್ತು ಆಯುಷ್ ಘಟಕಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಗ್ರೂಪ್–ಡಿ ಹುದ್ದೆಗಳ ಹುದ್ದೆಗಳ ಸೇವೆಯನ್ನು ಒದಗಿಸಲು ನೊಂದಾಯಿತ ಮಾನವ ಸಂಪನ್ಮೂಲ ಸಂಸ್ಥೆಗಳಿಂದ ಇ–ಪ್ರೊಕ್ಯೂರಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ಅರ್ಜಿ ಸಲ್ಲಿಸಲು ಕಾಲಾವಧಿ ವಿವರ
E-Procurement Tender Information

1	ಟೆಂಡರ್ ಪ್ರಕಟಣೆ ದಿನಾಂಕ	16–12–2025
2	ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ	16–12–2025
3	ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ವೇಳೆ	17–01–2026 ಸಾಯಂಕಾಲ 4.00 ಗಂಟೆ ವರೆಗೆ
4	ತಾಂತ್ರಿಕ ಬಿಡ್ ತೆರೆಯುವ ಸ್ಥಳ, ದಿನಾಂಕ ಮತ್ತು ವೇಳೆ	19–01–2026 ಬೆಳಿಗ್ಗೆ 11.00 ಗಂಟೆಗೆ
5	ಹಣಕಾಸಿನ ಬಿಡ್ ತೆರೆಯುವ ಸ್ಥಳ, ದಿನಾಂಕ ಮತ್ತು ವೇಳೆ	21–01–2026 ಬೆಳಿಗ್ಗೆ 11.00 ಗಂಟೆಗೆ
6	ಪಾವತಿಸಬೇಕಾದ ಇ.ಎಂ.ಡಿ ಮೊತ್ತ	ಒಟ್ಟು ಟೆಂಡರ್ ನ ಮೊತ್ತ ರೂ.1558776/– ಇ.ಎಮ್.ಡಿ ಪಾವತಿಸುವ ರೂ.31175/–
7	ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ	ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಛೇರಿ, ಕೊಠಡಿ ಸಂಖ್ಯೆ: 128 ಜಿಲ್ಲಾ ಆಡಳಿತ ಭವನ ನವನಗರ ಬಾಗಲಕೋಟೆ,–587103. ದೂರವಾಣಿ : 9449843041

ಒಂದು ವೇಳೆ ತಾಂತ್ರಿಕ ಹಾಗೂ ಹಣಕಾಸು ಬಿಡ್‌ನ ತೆರೆಯುವ ದಿನಾಂಕದಂದು ಸರ್ಕಾರಿ ರಜೆ ಘೋಷಣೆಯಾದಲ್ಲಿ, ಆಡಳಿತಾತ್ಮಕ ಹಾಗೂ ತಾಂತ್ರಿಕ ತೊಂದರೆಯಾದಲ್ಲಿ ಮುಂದಿನ ಕರ್ತವ್ಯದ ದಿನದಂದು ಟೆಂಡರ್ ತೆರೆಯಲಾಗುವುದು. ತಾಂತ್ರಿಕ ಹಾಗೂ ಹಣಕಾಸು ಬಿಡ್ ತೆರೆಯುವ ದಿನಾಂಕಗಳು ಬದಲಾವಣೆಯಾಗಬಹುದು.

ಸಹಿ/–ಜಿಲ್ಲಾ ಆರೋಗ್ಯ ಮತ್ತು ಕುಟುಂಬ
ಅಧಿಕಾರಿಗಳು ಬಾಗಲಕೋಟೆ.
DIPR/BGK/RO-NO-455/KSMCA/2025-26

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ನೋಂದಣಿ ಕಚೇರಿ: 30/1, 1ನೇ ಮತ್ತು 2ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ಮಿಲ್ಲರ್ಸ್ ಟ್ಯಾಂಕ್ ಬಂಡ್ ಪ್ರದೇಶ, ವಸಂತ ನಗರ, ಬೆಂಗಳೂರು– 560051.

ಸಂಖ್ಯೆ: ಡಿಜಿಎಂ–3/ಬಿಎಸ್‌ಡಬ್ಲ್ಯೂಎಂಎಲ್/ಪಿಆರ್/716/2025–26 ದಿನಾಂಕ: 17.12.2025

ಆಸಕ್ತಿ ಅಭಿವ್ಯಕ್ತಿಪಡಿಸುವಿಕೆಗಾಗಿ ಆಹ್ವಾನ (ಜಿಒಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಲಿಮಿಟೆಡ್ "ಸಾಮರ್ಥ್ಯವರ್ಧನೆ ಕಾರ್ಯಕ್ರಮದ ಭಾಗವಾಗಿ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಂತ್ರಿಕ ಅಧಿಕಾರಿಗಳು ಮತ್ತು ಪೌರಕಾರ್ಮಿಕರಿಗೆ ಪ್ರವಾಸ ಅಧ್ಯಯನ ಸೇವೆಯನ್ನು ಒದಗಿಸುವ" ಕಾಮಗಾರಿಗೆ ಅರ್ಹ ಸಂಸ್ಥೆಗಳಿಂದ ಆಸಕ್ತಿ ಅಭಿವ್ಯಕ್ತಪಡಿಸುವಿಕೆ (EOI)ಯನ್ನು ಆಹ್ವಾನಿಸುತ್ತದೆ

ಕಾಮಗಾರಿಯ ಹೆಸರು
ಸಾಮರ್ಥ್ಯವರ್ಧನೆ ಕಾರ್ಯಕ್ರಮದ ಭಾಗವಾಗಿ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಂತ್ರಿಕ ಅಧಿಕಾರಿಗಳು ಮತ್ತು ಪೌರಕಾರ್ಮಿಕರಿಗೆ ಪ್ರವಾಸ ಅಧ್ಯಯನ ಸೇವೆಯನ್ನು ಒದಗಿಸುವುದು.

1. ಅಂದಾಜುಗಳನ್ನು ತಯಾರಿಸಲು ಮಾರುಕಟ್ಟೆ ದರಗಳನ್ನು ಪಡೆಯಲು ಮಾತ್ರ ಈ ಆಸಕ್ತಿ ಅಭಿವ್ಯಕ್ತಿಯನ್ನು ಆಹ್ವಾನಿಸಲಾಗಿದೆ.
2. ಆಸಕ್ತಿಯ ಅಭಿವ್ಯಕ್ತಿಯ (ಇಒಐ) ವಿವರಗಳನ್ನು ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ https://kppp.karnataka.gov.in/ ನಲ್ಲಿ ದಿನಾಂಕ: 19.12.2025 ರಿಂದ ತೆಗೆದುಕೊಳ್ಳಬಹುದು ಅಥವಾ ಡೌನ್‌ಲೋಡ್ ಮಾಡಬಹುದು.
3. ಪ್ರತಿಕ್ರಿಯೆಗಳನ್ನು ಕೆಪಿಪಿ ಪೋರ್ಟಲ್ ಮುಖಾಂತರ ತೆರೆಯುವ ದಿನಾಂಕ: **29.12.2025 ರಂದು ಸಂಜೆ 4.00 ಗಂಟೆಯವರೆಗೆ.**
4. ಕೆಪಿಪಿಪಿ ಪೋರ್ಟಲ್ ಮುಖಾಂತರ ಪ್ರತಿಕ್ರಿಯೆಗಳನ್ನು ತೆರೆಯುವ **ದಿನಾಂಕ: 30.12.2025 ರಂದು ಸಂಜೆ 4.30 ಗಂಟೆಯ ನಂತರ.**
5. ಸ್ವೀಕರಿಸಿದ ಯಾವುದೇ ಅಥವಾ ಎಲ್ಲಾ ಪ್ರತಿಕ್ರಿಯೆಗಳನ್ನು ಸ್ವೀಕರಿಸುವ / ತಿರಸ್ಕರಿಸುವ ಹಕ್ಕನ್ನು ಯಾವುದೇ ಕಾರಣಗಳನ್ನು ನೀಡದೆ ಬಿಎಸ್‌ಡಬ್ಲ್ಯೂಎಂಎಲ್‌ನ ಉಪ ಪ್ರಧಾನ ವ್ಯವಸ್ಥಾಪಕರು–3 ರವರಿಗೆ ಕಾಯ್ದಿರಿಸಲಾಗಿದೆ.

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–3, ಬಿಎಸ್‌ಡಬ್ಲ್ಯೂಎಂಎಲ್
ವಾಸಾಸಂಇ/ವಾ.ಪ್ರ/4513/2025–26

ಪಲ್ಸ್ ಪೋಲಿಯೊ 62 ಲಕ್ಷ ಮಕ್ಕಳು ಗುರಿ

ಪ್ರಜಾವಾಣಿ ವಾರ್ತೆ

ದಿನೇಶ್ ಗುಂಡೂರಾವ್

ಬೆಳಗಾವಿ: ಆರೋಗ್ಯ ಇಲಾಖೆಯು ರಾಜ್ಯದಾದ್ಯಂತ ಇದೇ ಭಾನುವಾರ (ಡಿ.21) ಪಲ್ಸ್ ಪೋಲಿಯೊ ಹನಿ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, 5 ವರ್ಷದೊಳಗಿನ 62.40 ಲಕ್ಷ ಮಕ್ಕಳನ್ನು ತಲುಪುವ ಗುರಿ ಹಾಕಿಕೊಂಡಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, 'ಪೋಲಿಯೊ ಹನಿ ವಿತರಣೆಗೆ 33,258 ಬೂತ್‌ಗಳನ್ನು ಗುರುತಿಸಲಾಗಿದೆ. 1,030 ಸಂಚಾರಿ ತಂಡಗಳು ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ ಸೇರಿದಂತೆ ವಿವಿಧ ಸಾರ್ವಜನಿಕ ಪ್ರದೇಶಗಳಲ್ಲಿ ಲಸಿಕೆ ವಿತರಿಸಲಿವೆ. 2,096 ಟ್ರಾನ್ಸಿಟ್ ತಂಡಗಳನ್ನೂ ರಚಿಸಲಾಗಿದೆ. ಈ ಕಾರ್ಯಕ್ರಮಕ್ಕೆ 1.13 ಲಕ್ಷ ಕಾರ್ಯಕರ್ತರನ್ನು ಬಳಸಿಕೊಳ್ಳಲಾಗುತ್ತಿದೆ. 7,322 ಮೇಲ್ವಿಚಾರಕರನ್ನು ನೇಮಿಸಲಾಗಿದೆ' ಎಂದು ಹೇಳಿದರು.

'ಐದು ವರ್ಷದೊಳಗಿನ ಎಲ್ಲ ಮಕ್ಕಳೂ ಲಸಿಕೆ ಪಡೆದುಕೊಳ್ಳಬೇಕು. ಈ ಮೂಲಕ ಪೋಲಿಯೊ ವಿರುದ್ಧದ ಹೋರಾಟದಲ್ಲಿ ವಿಜಯ ಸಾಧಿಸುವುದನ್ನು ಮುಂದುವರಿಸಲು ಕೈಜೋಡಿಸಬೇಕು. ರಾಜ್ಯದ ಎಲ್ಲ ಆಸ್ಪತ್ರೆಗಳು, ಗ್ರಾಮೀಣ ಪ್ರದೇಶ, ಗುಡ್ಡಗಾಡು ಪ್ರದೇಶ ಸೇರಿದಂತೆ ವಿವಿಧೆಡೆ ಲಸಿಕೆ ಹಾಕಲು ವ್ಯವಸ್ಥೆ ಮಾಡಲಾಗಿದೆ. ಪೋಲಿಯೊ ಹನಿ ಸಂಪೂರ್ಣ ಸುರಕ್ಷಿತವಾಗಿದ್ದು, ಯಾವುದೇ ವದಂತಿಗಳಿಗೆ ಕಿವಿಗೊಡಬಾರದು' ಎಂದರು.

'ಹತ್ತಿರದ ಲಸಿಕಾ ಕೇಂದ್ರ ಪತ್ತೆಗೆ 'Nearby Vaccination centre Karnataka' ಆ್ಯಪ್ ಇನ್‌ಸ್ಟಾಲ್ ಮಾಡಿಕೊಂಡು, ಕೇಂದ್ರ ಹುಡುಕಬಹುದು' ಎಂದು ಹೇಳಿದರು.

'ಜ್ಯೇಷ್ಠತಾ ಪಟ್ಟಿ ಪ್ರಕರಣ: ಪಿಡಿಒಗಳಿಗೆ ನ್ಯಾಯ ಸಿಕ್ಕಿದೆ'

ಪ್ರಜಾವಾಣಿ ವಾರ್ತೆ

ಪ್ರಿಯಾಂಕ್ ಖರ್ಗೆ

ಬೆಳಗಾವಿ (ಸುವರ್ಣ ವಿಧಾನಸೌಧ): 'ದಶಕದಿಂದ ಜಟಿಲ ಸಮಸ್ಯೆಯಿಂದ ಬಾಕಿ ಉಳಿದಿದ್ದ ಜ್ಯೇಷ್ಠತಾ ಪಟ್ಟಿಯ ಪ್ರಕರಣವು ನ್ಯಾಯಾಲಯದಲ್ಲಿ ತಾರ್ಕಿಕವಾಗಿ ಬಗೆಹರಿದ ಪರಿಣಾಮ ಸಾವಿರಾರು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ (ಪಿಡಿಒ) ನ್ಯಾಯ ಸಿಕ್ಕಿದೆ. ಅಲ್ಲದೆ, ಕಾರ್ಯದರ್ಶಿ, ನೀರುಗಂಟಿ, ಬಿಲ್ ಕಲೆಕ್ಟರ್‌ಗಳ ಪದೋನ್ನತಿಗೂ ಸಹಕಾರಿ ಆಗಲಿದೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಈ ಬಗ್ಗೆ 'ಎಕ್ಸ್' ಮಾಡಿರುವ ಅವರು, 'ಇಚ್ಛಾಶಕ್ತಿಯ ಕೊರತೆಯಿಂದ ಜ್ಯೇಷ್ಠತಾ ಪಟ್ಟಿಯ ಪ್ರಕರಣವು ಕಗ್ಗಂಟಾಗಿ ನ್ಯಾಯಾಲಯದಲ್ಲಿತ್ತು. ನಮ್ಮ ಸರ್ಕಾರದ ಪ್ರಾಮಾಣಿಕ ಪ್ರಯತ್ನ ಮತ್ತು ವಿಶೇಷ ಆಸಕ್ತಿಯಿಂದ ಈ ಪ್ರಕರಣವನ್ನು ಸಕಾರಾತ್ಮಕವಾಗಿ ಬಗೆಹರಿಸಲು ಸಾಧ್ಯವಾಗಿದೆ' ಎಂದಿದ್ದಾರೆ.

'ಪಂಚಾಯತ್ ರಾಜ್ ಇಲಾಖೆಯ ಜವಾಬ್ದಾರಿ ವಹಿಸಿಕೊಂಡಾಗ ಇಲಾಖೆಯಲ್ಲಿನ ಪಿಡಿಒ ಜ್ಯೇಷ್ಠತಾ ಪಟ್ಟಿಯ ಪ್ರಕರಣವು ಸವಾಲಿನಂತೆ ಎದುರಿಗಿತ್ತು. ಅದನ್ನು ಬಗೆಹರಿಸಲೇಬೇಕು ಎಂಬ ದೃಷ್ಟಿಯಿಂದ 15ಕ್ಕೂ ಹೆಚ್ಚು ಸಭೆಗಳನ್ನು ನಡೆಸಿ, ಪ್ರಕರಣದ ಮೇಲ್ವಿಚಾರಣೆ ನಡೆಸಲಾಗಿತ್ತು. ಈ ಸಮಸ್ಯೆಗೆ ಕಾಲಮಿತಿಯಲ್ಲಿ ಪರಿಹಾರ ಕಂಡುಕೊಳ್ಳಲು ನಿರ್ದೇಶಿಸಲಾಗಿತ್ತು. ಅದರನ್ವಯ ನ್ಯಾಯಾಲಯದ ತೀರ್ಪು ಕೂಡಾ ಸುಮಾರು 2 ಸಾವಿರ ಪಿಡಿಒಗಳಿಗೆ ನ್ಯಾಯ ಒದಗಿಸಿದೆ ಮತ್ತು ಇಲಾಖೆಯ ಆಡಳಿತಾತ್ಮಕ ವಿಷಯಗಳಿಗೆ ಪೂರಕವಾಗಿದೆ' ಎಂದಿದ್ದಾರೆ.

ಫಾರ್ಮಸಿ ಡಿಪ್ಲೊಮಾ ಅಪ್ರೆಂಟಿಸ್‌ಗಳಾಗಿ ನೇಮಕ

ಬೆಂಗಳೂರು: ಫಾರ್ಮಸಿ ಡಿಪ್ಲೊಮಾ ಪಡೆದಿರುವ ಒಂದು ಸಾವಿರ ಮಂದಿಯನ್ನು ಖಾಲಿ ಇರುವ ಫಾರ್ಮಸಿಸ್ಟ್ ಹುದ್ದೆಗಳಿಗೆ 11 ತಿಂಗಳ ಅವಧಿಗೆ ಅಪ್ರೆಂಟಿಸ್‌ಗಳಾಗಿ (ಪ್ರಾಯೋಗಿಕ ತರಬೇತಿ) ನೇಮಕ ಮಾಡಿಕೊಳ್ಳಲು ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ.

ರಾಜ್ಯದಲ್ಲಿ ವಾರ್ಷಿಕ 18 ಸಾವಿರ ಡಿ.ಫಾರ್ಮ ಮತ್ತು 8 ಸಾವಿರ ಬಿ.ಫಾರ್ಮ ಪದವಿ ಪಡೆದವರು ಹೊರಬರುತ್ತಿದ್ದಾರೆ. ಅವರಲ್ಲಿ ಸುಮಾರು 5 ಸಾವಿರ ಡಿ.ಫಾರ್ಮ ಮತ್ತು 4 ಸಾವಿರ ಬಿ.ಫಾರ್ಮ ವಿದ್ಯಾರ್ಥಿಗಳು ಕರ್ನಾಟಕದವರಾಗಿದ್ದಾರೆ. ಆರೋಗ್ಯ ಇಲಾಖೆಯಡಿ ಇರುವ 3 ಸಾವಿರ ಫಾರ್ಮಾಸಿಸ್ಟ್ ಹುದ್ದೆಗಳಲ್ಲಿ ಶೇ 50 ರಷ್ಟು ಹುದ್ದೆಗಳು ಖಾಲಿಯಿವೆ. ಆರ್ಥಿಕ ಇಲಾಖೆಯು ಇತ್ತೀಚೆಗೆ 400 ಫಾರ್ಮಸಿಸ್ಟ್ ಹುದ್ದೆಗಳನ್ನು ಒಪ್ಪಂದದ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಅನುಮತಿ ನೀಡಿದೆ. ಅಪ್ರೆಂಟಿಸ್ ಕಾರ್ಯಕ್ರಮದಡಿ ಖಾಲಿ ಹುದ್ದೆಗಳಿಗೆ ನೇಮಕ ಮಾಡಿಕೊಂಡು, 11 ತಿಂಗಳ ಅವಧಿಗೆ ನಿಗದಿತ ಮೊತ್ತದ ಸ್ಟೈಫಂಡ್ ಒದಗಿಸಬೇಕು ಎಂದು ತಿಳಿಸಲಾಗಿದೆ.

ಕಳೆದ ಎರಡು ವರ್ಷಗಳಲ್ಲಿ ಕರ್ನಾಟಕದಲ್ಲಿ ಡಿ.ಫಾರ್ಮ ಪೂರ್ಣಗೊಳಿಸಿದ ಎಲ್ಲ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ ಎಂದು ಹೇಳಲಾಗಿದೆ.

ಕೈದಿಗಳ ಬಳಿ ಮೊಬೈಲ್, ಚಾಕು, ಡ್ರಗ್ಸ್ ಪತ್ತೆ

ಡಿಜಿಪಿ ಅಲೋಕ್ ಕುಮಾರ್ ಸೂಚನೆ

ರಾಜ್ಯದ ವಿವಿಧ ಕಾರಾಗೃಹಗಳಲ್ಲಿ ಪರಿಶೀಲನೆ

ಮುಖ್ಯಾಂಶಗಳು
- ಪರಪ್ಪನ ಅಗ್ರಹಾರ ಸೇರಿ ಐದು ಜಿಲ್ಲಾ ಕಾರಾಗೃಹಗಳಲ್ಲಿ ಶೋಧ
- 36 ಗಂಟೆ ಕಾರ್ಯಾಚರಣೆ

ಕೈದಿಗಳ ಬಳಿ ಪತ್ತೆಯಾದ ಮೊಬೈಲ್ ಹಾಗೂ ಚಾಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರಾಗೃಹ ಹಾಗೂ ಸುಧಾರಣಾ ಸೇವೆಗಳ ಇಲಾಖೆಯ ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್‌ಕುಮಾರ್ ಅವರ ಸೂಚನೆ ಮೇರೆಗೆ ರಾಜ್ಯದ ವಿವಿಧ ಕಾರಾಗೃಹಗಳಲ್ಲಿ ಕಾರ್ಯಾಚರಣೆ ನಡೆಸಲಾಗಿದ್ದು, ಕೈದಿಗಳ ಬಳಿ ಮೊಬೈಲ್, ಚಾಕು ಹಾಗೂ ಡ್ರಗ್ಸ್ ಪತ್ತೆ ಆಗಿದೆ.

ಇಲ್ಲಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಸೇರಿದಂತೆ ಮಂಗಳೂರು, ಮೈಸೂರು, ವಿಜಯಪುರ, ಬೆಳಗಾವಿ ಜಿಲ್ಲಾ ಕಾರಾಗೃಹಗಳಲ್ಲಿ 36 ಗಂಟೆಗಳ ಕಾಲ ವಿಶೇಷ ಕಾರ್ಯಾಚರಣೆ ನಡೆಸಲಾಗಿದೆ ಎಂಬುದು ಗೊತ್ತಾಗಿದೆ.

ಪರಪ್ಪನ ಅಗ್ರಹಾರ ಜೈಲಿನಲ್ಲಿ ಆರು ಮೊಬೈಲ್ ಫೋನ್‌ಗಳು, ನಾಲ್ಕು ಚಾಕುಗಳು, ಮೈಸೂರಿನಲ್ಲಿ ಒಂಬತ್ತು ಫೋನ್‌ಗಳು ಹಾಗೂ 11 ಸಿಮ್ ಕಾರ್ಡ್‌ಗಳು, ಬೆಳಗಾವಿಯಲ್ಲಿ ನಾಲ್ಕು ಫೋನ್‌ಗಳು ಹಾಗೂ 366 ಗ್ರಾಂ ಗಾಂಜಾ, ವಿಜಯಪುರದಲ್ಲಿ ಒಂದು ಮೊಬೈಲ್ ಫೋನ್ ಹಾಗೂ ಮಂಗಳೂರಿನಲ್ಲಿ 4 ಫೋನ್‌ಗಳು ಪತ್ತೆಯಾಗಿವೆ ಎಂದು ಮೂಲಗಳು ತಿಳಿಸಿವೆ.

ಈ ಹಿಂದೆಯೂ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ವಿವಿಧ ಬ್ಯಾರಕ್‌ಗಳಲ್ಲಿ ಜೈಲಿನ ಸಿಬ್ಬಂದಿ ದಿಢೀರ್ ದಾಳಿ ನಡೆಸಿ ಪರಿಶೀಲಿಸಿದಾಗ 79 ಮೊಬೈಲ್ ಫೋನ್‌ಗಳು, 59 ಸಿಮ್ ಕಾರ್ಡ್‌ಗಳು, 18 ಚಾರ್ಜರ್ ವೈರ್‌ಗಳು, 14 ಇಯರ್ ಪಾಡ್‌ಗಳು ಹಾಗೂ ₹64 ಸಾವಿರ ನಗದು ಪತ್ತೆಯಾಗಿತ್ತು.

ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಅಲೋಕ್‌ಕುಮಾರ್ ಅವರು ಸೋಮವಾರ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಸಜಾಬಂದಿಗಳು ಹಾಗೂ ವಿಚಾರಣಾಧೀನ ಕೈದಿಗಳಿಗೆ ನೀಡಲಾಗುತ್ತಿರುವ ಊಟ ಹಾಗೂ ತಿಂಡಿ ಪರಿಶೀಲಿಸಿದ್ದರು. ಕಾರಾಗೃಹದಲ್ಲಿರುವ ಆಸ್ಪತ್ರೆಗೂ ಭೇಟಿ ನೀಡಿ ಅಲ್ಲಿನ ವ್ಯವಸ್ಥೆ ವೀಕ್ಷಿಸಿದ್ದರು. ಬೇಕರಿಯಲ್ಲೂ ತಪಾಸಣೆ ನಡೆಸಿದ್ದರು. ಕೈದಿಗಳಿಂದಲೂ ಕೆಲ ಮಾಹಿತಿ ಪಡೆದುಕೊಂಡಿದ್ದರು. ಅದರ ಬೆನ್ನಲ್ಲೇ ಕಾರ್ಯಾಚರಣೆ ನಡೆಸಲು ಸೂಚನೆ ನೀಡಿದ್ದರು.

ಮೊಬೈಲ್ ತರಿಸಿಕೊಂಡು ಬ್ಯಾರಕ್‌ನಲ್ಲಿ ಇಟ್ಟುಕೊಂಡು ಬಳಕೆ ಮಾಡುತ್ತಿದ್ದರೆ, ಅದನ್ನು ಸಿಬ್ಬಂದಿಗೆ ವಾಪಸ್ ನೀಡಬೇಕು ಎಂದು ಕೈದಿಗಳಿಗೆ ಡಿಜಿಪಿ ಸೂಚನೆ ನೀಡಿದ್ದರು.

ಶಾಲಾ ವಾಹನದಿಂದ ಬಿದ್ದು ವಿದ್ಯಾರ್ಥಿ ಸಾವು

ಲಕ್ಷ್ಮೇಶ್ವರ (ಗದಗ ಜಿಲ್ಲೆ): ಚಾಲಕ ಮತ್ತು ಸಹಾಯಕನ ನಿರ್ಲಕ್ಷ್ಯದಿಂದ ತಾಲ್ಲೂಕಿನ ಉಳ್ಳಟ್ಟಿ ಗ್ರಾಮದ ಖಾಸಗಿ ಶಾಲೆಯ ಎಲ್‌ಕೆಜಿ ವಿದ್ಯಾರ್ಥಿ ಪ್ರಥಮ್ ಅರುಣ ಲಮಾಣಿ (4) ಶಾಲಾ ವಾಹನದಿಂದ ಕೆಳಗಡೆ ಬಿದ್ದು ಮೃತಪಟ್ಟಿದ್ದಾನೆ.

'ದೊಡ್ಡೂರು ಗ್ರಾಮದ ಪ್ರಥಮ್, ಶಾಲೆಯಿಂದ ಮನೆಗೆ ಹಿಂದಿರುಗುವ ವೇಳೆ ಚಾಲಕ ಅಡ್ಡಾದಿಡ್ಡಿಯಾಗಿ ವಾಹನ ಚಲಾಯಿಸಿದ್ದಾನೆ. ಜತೆಗೆ ವಾಹನದ ಸಹಾಯಕ ಬಾಗಿಲು ಹಾಕಿರಲಿಲ್ಲ. ಅಡ್ಡಾದಿಡ್ಡಿ ಚಲಾಯಿಸಿದ ವಾಹನದಿಂದ ಕೆಳಕ್ಕೆ ಬಿದ್ದ ಪ್ರಥಮ್ ಮೇಲೆ ವಾಹನದ ಹಿಂದಿನ ಚಕ್ರ ಹರಿದಿದೆ. ಸ್ಥಳದಲ್ಲೇ ಮೃತಪಟ್ಟ ಆತನನ್ನು ಬಸ್ ಒಳಗೆ ಹಾಕಿ, ಚಾಲಕ, ಸಹಾಯಕ ಪರಾರಿ ಆಗಿದ್ದಾರೆ' ಎಂದು ಲಕ್ಷ್ಮೇಶ್ವರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಉಡುಪಿ ನಗರಸಭೆ
ಕವಿ ಮುದ್ದಣ್ಣ ಮಾರ್ಗ, ಉಡುಪಿ–576101, ದೂ: 0820–2520306
E-mail: ka.udupi.cmc@gmail.com Website: www.udupicity.mrc.gov.in
ಸಂಖ್ಯೆ: UCMC/HS/Paryaya/CR-08/2025-26 ದಿನಾಂಕ: 17/12/2025
ಅಲ್ಪಾವಧಿ ಟೆಂಡರ್ ಪ್ರಕಟಣೆ
ದಿನಾಂಕ: 18.01.2026 ರಂದು ನಡೆಯುವ ಉಡುಪಿ ಶ್ರೀ ಕೃಷ್ಣ ಮಠದ ಪರ್ಯಾಯ ಮಹೋತ್ಸವಕ್ಕೆ ಬೇಕಾಗುವ ಅಗತ್ಯ ಸಾಧನ ಸಲಕರಣೆಗಳು ಸರಬರಾಜು ಮಾಡುವ ಕುರಿತು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 24/12/2025 ಸಮಯ ಸಂಜೆ 4.30 ಗಂಟೆವರೆಗೆ. ಅರ್ಹ ಗುತ್ತಿಗೆದಾರರು/ಏಜನ್ಸಿಯವರು ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (https://kppp.karnataka.gov.in) ಅಪ್‌ಲೋಡ್ ಮಾಡಿರುವ ಟೆಂಡರ್ ಡಾಕ್ಯುಮೆಂಟ್‌ನಲ್ಲಿ ಪಡೆಯಬಹುದು.
ಕೆಲಸದ ಹೆಸರು: (1) ದಿನಾಂಕ: 18.01.2026 ರಂದು ನಡೆಯುವ ಉಡುಪಿ ಶ್ರೀ ಕೃಷ್ಣ ಮಠದ ಪರ್ಯಾಯ ಮಹೋತ್ಸವಕ್ಕೆ ಬೇಕಾಗುವ ಅಗತ್ಯ ಸಾಧನ ಸಲಕರಣೆಗಳು ಸರಬರಾಜು ಮಾಡುವ ಕುರಿತು. ಟೆಂಡರ್ ಸಂಖ್ಯೆ: DMA/2025-26/SE6904, ಟೆಂಡರಿಗಿಟ್ಟ ಮೊತ್ತ: Rs. 40.25 Lakhs, ಇ.ಎಂ.ಡಿ ಮೊತ್ತ: Rs. 1,20,750.00/-
ವಾಸಾಇ/ಸನಿಉ/ಕೆಎಸ್‌ಎಂಸಿಎ/582/25–26 ದಿ: 17.12.2025 ಸಹಿ/– ಪೌರಾಯುಕ್ತರು, ಉಡುಪಿ ನಗರಸಭೆ

ಕರ್ನಾಟಕ ಸರ್ಕಾರ
ಪುರಸಭೆ ಕಾರ್ಯಾಲಯ ಭಾಲ್ಕಿ
ಸಂಖ್ಯೆ: ಪುಸಭಾ/ಇಎನ್‌ಜಿ/ಸಿಆರ್– /2025–26 ದಿನಾಂಕ: 15–12–2025
ಟೆಂಡರ್ ಪ್ರಕಟಣೆ
1) ಕಾಮಗಾರಿ/ ಸರಕು/ಸೇವೆಯ ವಿವರ Indent no : 52566, 52670, 52671, 52692 and 52699, 2) ಕಾಮಗಾರಿಯ ಅಂದಾಜು ಮೊತ್ತ kpp portal ನಲ್ಲಿ ನಮೂದಿಸಿದಂತೆ, 3) ಗುತ್ತಿಗೆದಾರರ ಅರ್ಹತೆ ವಿವರ kpp portal ನಲ್ಲಿ ನಮೂದಿಸಿದಂತೆ, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ kpp portal ನಲ್ಲಿ ನಮೂದಿಸಿದಂತೆ, 5) ಟೆಂಡರನ್ನು ಇ–ಪ್ರಾಕ್ಯೂರ್‌ಮೆಂಟ್‌ನಲ್ಲಿ ಆನಲೈನ ಮೂಲಕ ಭರ್ತಿ ಮಾಡಿ ಸಲ್ಲಿಸಲು ಕೊನೆಯ **ದಿನಾಂಕ 02–01–2026 ಸಾ: 4.30 ಗಂಟೆಗೆ,** 6) ಟೆಂಡರಿನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ **03–01–2026 ಸಾ: 5.00 ಗಂಟೆಗೆ,** 7) ಟೆಂಡರಿನ ಆರ್ಥಿಕ ಬಿಡ್ ತೆರೆಯುವ **ದಿನಾಂಕ 05–01–2026 ಸಾ: 5.00 ಗಂಟೆಗೆ,** 8) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಛೇರಿ ವಿಳಾಸ, ದೂರವಾಣಿ ಸಂಖ್ಯೆ ಮುಖ್ಯಾಧಿಕಾರಿ ಪುರಸಭೆ ಭಾಲ್ಕಿ ಇ–ಮೇಲ್: ka.bhalki.tmc@gmail.com ಫೋನ್: 08484–261941 9) ಅಂತರಜಾಲ ತಾಣದ ವಿಳಾಸ www.kppp.karnataka.gov.in
ಸಹಿ/–ಮುಖ್ಯಾಧಿಕಾರಿ ಪುರಸಭೆ ಭಾಲ್ಕಿ
ವಾ.ಸಾ.ಸಂ.ಇ/ಬೀದರ/261/ಕೆ.ಎಸ್.ಎಂ.ಸಿ.&ಎ/2025–26

ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ
ಸಂಖ್ಯೆ: ಶಿಮನಪಾಶಿ/ಕಾ.ವಿ/ಟೆಂಡರ್/40/2025–26 ದಿನಾಂಕ: 15.12.2025
ಟೆಂಡರ್ ಪ್ರಕಟಣೆ
ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಕಾಮಗಾರಿ/ಸೇವೆ ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಆಕ್ಟ್ 1999 ರ ನಿಯಮದಂತೆ ಹಾಗೂ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದನ್ವಯ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಕೆಪಿಪಿ ಪೋರ್ಟಲ್ ಟೆಂಡರ್ ನಲ್ಲಿ ಭಾಗವಹಿಸಲು ಇಚ್ಚಿಸುವ ಗುತ್ತಿಗೆದಾರರು ವಿವರಗಳನ್ನು ವೆಬ್ ಸೈಟ್ www.kppp.karnataka.gov.in ನಲ್ಲಿ ಪಡೆದುಕೊಳ್ಳಬಹುದು
1) ಕೆಪಿಪಿ ಪೋರ್ಟಲ್ ಮೂಲಕ ಸೇವೆಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:31.12.2025 (ಸಂಜೆ: 4.00 ಗಂಟೆಗೆ). 2) ಕೆಪಿಪಿ ಪೋರ್ಟಲ್ ಮೂಲಕ ಸೇವೆಯ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 01.01.2026 (ಸಂಜೆ 4.30 ಗಂಟೆಗೆ). 3) ಕೆಪಿಪಿ ಪೋರ್ಟಲ್ ಮೂಲಕ ಸೇವೆಯ ಆರ್ಥಿಕ್ ಬಿಡ್ ತೆರೆಯುವ ದಿನಾಂಕ: 02.01.2026 (ಸಂಜೆ 4.30 ಗಂಟೆಗೆ)

ಕ್ರ. ಸಂ	ಇಂಡೆಂಟ್ ಸಂಖ್ಯೆ	ಕಾಮಗಾರಿ/ಸೇವೆಯ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ ರೂ.	ಅನುದಾನ
1.	DMA/2025-26/SE6787	Providing Third Party Services to Shivamogga City Corporation.	90.00	1,80,000	ಮಹಾನಗರ ಪಾಲಿಕೆ ಸಾಮಾನ್ಯ ನಿಧಿ ಅನುದಾನ

ಸೂಚನೆ: 1. ಟೆಂಡರ್ ಗೆ ಸಂಬಂಧಪಟ್ಟ ಯಾವುದೇ ರೀತಿಯ ಬದಲಾವಣೆ ಅಥವಾ ತಿದ್ದುಪಡಿಯನ್ನು ಕೆಪಿಪಿ ಪೋರ್ಟಲ್ ಮುಖಾಂತರ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು ಕೆಪಿಪಿ ಪೋರ್ಟಲ್ ಮುಖಾಂತರ ಪಡೆಯಬಹುದು ಮತ್ತು ಇತರೇ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.
ವಾ.ಸಾ.ಸಂ.ಇ./ಶಿ/ನಂ.84.12/ ಝೇಂಕಾರ್/2025–26
ಸಹಿ/– ಕಾರ್ಯಪಾಲಕ ಅಭಿಯಂತರರು ಮಹಾನಗರ ಪಾಲಿಕೆ, ಶಿವಮೊಗ್ಗ

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ, ಡಾ: ಎಮ್.ಹೆಚ್. ಮರೀಗೌಡ ರಸ್ತೆ, ಬೆಂಗಳೂರು – 560 029
ಫೋನ್: 26096832/910/877 E-Mail: purchase@kmf.coop
ಟೆಂಡರ್ ಪ್ರಕಟಣೆಗಳು (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
ಕರ್ನಾಟಕ ಸಹಕಾರ ಹಾಲು ಮಹಾಮಂಡಳ, ಬೆಂಗಳೂರು ಈ ಕೆಳಕಂಡ ವಿವರಗಳನ್ವಯ ಆಸಕ್ತಿಯುಳ್ಳ ಸಂಸ್ಥೆದಾರರಿಂದ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆದಾರರು ವಿವರಗಳನ್ನು ಅಂತರ್‌ಜಾಲದ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ https://kppp.karnataka.gov.in ಗೆ ಭೇಟಿ ನೀಡಿ ಪಡೆಯಬಹುದಾಗಿದೆ.

Sl. No.	IFT Nos.	Item Description	Qty. (Nos.)	EMD (Rs.)
1	KMF/PUR/Tender-857/2025-26 Date: 17.12.2025 (Short term)	Supply of Various type Capacity Glass top Deep Freezers for Ice Cream Storage	2000	As per tender document
2	KMF/PUR/Tender-827/2025-26 Date: 17.12.2025	Providing services to promote the Nandini brand through Digital Gantry at the arrival and departure lanes of Bangalore International Airport.	As detailed in tender document	1,32,000/-

ಟೆಂಡರ್ ವೇಳಾಪಟ್ಟಿ: ಟೆಂಡರ್ ಪ್ರಾರಂಭವಾಗುವ ದಿನಾಂಕ : 17.12.2025 ರಿಂದ., ಟೆಂಡರ್ ಪೂರ್ವಭಾವಿ ಸಭೆ ದಿನಾಂಕ : 23.12.2025 ರಂದು ಬೆಳಿಗ್ಗೆ 11.00 ಗಂಟೆಗೆ., ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 31.12.2025 ರ ಸಂಜೆ 5.30 ಗಂಟೆ ಒಳಗಾಗಿ., ತಾಂತ್ರಿಕ ಟೆಂಡರ್ ತೆರಯುವ ದಿನಾಂಕ : 02.01.2026 ರಂದು ಬೆಳಿಗ್ಗೆ 11.00 ಗಂಟೆಗೆ., ವಾಣಿಜ್ಯ ಟೆಂಡರ್ ತೆರಯುವ ದಿನಾಂಕ : ತಾಂತ್ರಿಕ ದಾಖಲಾತಿಗಳ ಪರಿಶೀಲನೆಯ ನಂತರ.
ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.
ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ ಸಹಿ/– ನಿರ್ದೇಶಕರು (ಖರೀದಿ)

ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕೊಪ್ಪಳ
ಕಾರ್ಯಪಾಲಕ ಅಭಿಯಂತರರ ಕಾರ್ಯಾಲಯ, ಕೊಪ್ಪಳ, ಇ–ಮೇಲ್ : eepredkpl@gmail.com
ಸಂಖ್ಯೆ : ಪಂ.ರಾ.ಇಂ./ವಿ.ಕೊ./ತಾ.ಶಾ./ಸ.ಇಂ./ಟೆಂಡರ್/2025–26/2360 ದಿನಾಂಕ : 16–12–2025
ಟೆಂಡರ್ ಪ್ರಕಟಣೆ
ಕರ್ನಾಟಕ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದೇಶ 1999 – 2000 ರ ಪ್ರಕಾರ ಪಾರದರ್ಶಕತೆ ಆ್ಯಕ್ಟ್ 2000 ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ – 1, 2, 3 ಮತ್ತು 4 ರ ಪ್ರಕಾರ ನಿಯಮಗಳನ್ವಯ ಪಂಚಾಯತ್ ರಾಜ್ ಇಂಜಿನೀಯರಿಂಗ್ / ಪಿ.ಡಬ್ಲ್ಯೂ.ಡಿ. ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ **kppp.karnataka.gov.in ಪೋರ್ಟಲ್ ಮುಖಾಂತರ ಈ ಕೆಳಗೆ ನಮೂದಿಸಿದ ಅನುಬಂಧದಲ್ಲಿಯ 2024–25 ನೇ ಸಾಲಿನ, 2023–24 ಎಸ್.ಸಿ.ಪಿ.ಟಿ.ಎಸ್.ಪಿ. 2024–25 ಎಸ್.ಸಿ.ಪಿ.ಟಿ.ಎಸ್.ಪಿ. 2024–25 5054–ಮಳೆ ಪರಿಹಾರ ಇನ್ನಿತರೆ ಅನುದಾನ ಯೋಜನೆಯಡಿ ಕೊಪ್ಪಳ ಜಿಲ್ಲೆಯ ವಿವಿಧ ತಾಲೂಕಿನ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ,** ಅರ್ಹ ಗುತ್ತಿಗೆದಾರರು **kppp.karnataka.gov.in** ಪೋರ್ಟಲ್ ಮುಖಾಂತರ ಭಾಗವಹಿಸಬಹುದು ಹಾಗೂ ಇನ್ನಿತರೆ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.
1) ಯಲಬುರ್ಗಾ ತಾಲೂಕಿನ ಬಸಾಪೂರ ಗ್ರಾಮದ ಪರಿಶಿಷ್ಟ ಪಂಗಡದ ಕಾಲೋನಿಯಲ್ಲಿ ಸಿ.ಸಿ. ರಸ್ತೆ ಮತ್ತು ಚರಂಡಿ ನಿರ್ಮಾಣ. (ಎಸ್.ಟಿ. ಕೆಟಗರಿ) ಟೆಂಡರ್‌ಗಿಟ್ಟ ಮೊತ್ತ ರೂ. 21.05 ಲಕ್ಷ, ಇ.ಎಂ.ಡಿ. ರೂ. 26,500.00, ಕಾಲಾವಧಿ : 03 ತಿಂಗಳು, IND No : 18603/Call-2, 2) ಯಲಬುರ್ಗಾ ತಾಲೂಕಿನ ಬಳೂಟಗಿ ಗ್ರಾಮದ ಪರಿಶಿಷ್ಟ ಜಾತಿಯ ಕಾಲೋನಿಯಲ್ಲಿ ಸಿ.ಸಿ. ರಸ್ತೆ, ಚರಂಡಿ ನಿರ್ಮಾಣ ಕಾಮಗಾರಿ, 2024–25 IND No : 18594/Call-3, ಟೆಂಡರ್‌ಗಿಟ್ಟ ಮೊತ್ತ ರೂ. 84.12 ಲಕ್ಷ, ಇ.ಎಂ.ಡಿ. ರೂ. 1,68,250.00, 3) ಕುಷ್ಟಗಿ ತಾಲೂಕ ಟಕ್ಕಳಕಿಯಿಂದ ವಣಗೇರಿ ರಸ್ತೆಯಲ್ಲಿ ಸಿ.ಡಿ. ನಿರ್ಮಾಣ, IND No : 21447, ಟೆಂಡರ್‌ಗಿಟ್ಟ ಮೊತ್ತ ರೂ. 33.56 ಲಕ್ಷ, ಇ.ಎಂ.ಡಿ. ರೂ. 67,200.00. 2024–25 –5054–ಮಳೆ ಪರಿಹಾರ.
ಟೆಂಡರ್ ವಿವರ : ಟೆಂಡರ್ ಆಕ್ಷೇಪಣೆ / ಸ್ಪಷ್ಟೀಕರಣಗಳಿಗಾಗಿ ನಿಗಧಿಪಡಿಸಿದ ಅಂತಿಮ ದಿನಾಂಕ ಹಾಗೂ ಸಮಯದ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು : 18–12–2025 ರ ಬೆಳಿಗ್ಗೆ 10.00 ಗಂಟೆ ನಂತರದಿಂದ 30–12–2025 ರ ಸಂಜೆ 4.00 ಗಂಟೆವರೆಗೆ, ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ ಹಾಗೂ ಸಮಯ : 18–12–2025 ರ ಬೆಳಿಗ್ಗೆ 11.00 ಗಂಟೆ ನಂತರದಿಂದ 30–12–2025 ರ ಸಂಜೆ 4.30 ಗಂಟೆವರೆಗೆ, ಟೆಂಡರ್ ತೆರೆಯುವ ದಿನಾಂಕ : 31–12–2025 ಕಚೇರಿ ಸಮಯದಲ್ಲಿ, ಕೆ.ಡಬ್ಲ್ಯೂ 4 ಇದ್ದಲ್ಲಿ ಆರ್ಥಿಕ ಬಿಡ್ ತೆರೆಯುವ ದಿನಾಂಕ : ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ನಂತರ ತೆರೆಯಲಾಗುವುದು.
ಸಾಮಾನ್ಯ ಸೂಚನೆಗಳು : 1) ಗುತ್ತಿಗೆದಾರರು ಗುತ್ತಿಗೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2) ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3) ನಿಗಧಿತ ಇ.ಎಮ್.ಡಿ. ಹಣವನ್ನು ಆನ್‌ಲೈನ್ ಮೂಲಕ ನಿಗಧಿಪಡಿಸಿದಂತೆ ಸಂದಾಯ ಮಾಡಬೇಕು.
ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು ಮತ್ತು ಅಂತರ್ಜಾಲದ ಮೂಲಕ ವೆಬ್‌ಸೈಟ್ : kppp.karnataka.gov.in ಪೋರ್ಟಲ್ ರಲ್ಲಿ ಪಡೆಯಬಹುದು. ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.
ಟಿಪ್ಪಣಿ : ಬಿಡ್‌ಗಳನ್ನು ತೆರೆಯುವ ವೇಳೆಯಲ್ಲಿ ಟೆಂಡರ್‌ನಲ್ಲಿ ಬಾಗವಹಿಸಿದ ಗುತ್ತಿಗೆದಾರರು ಇ.ಎಮ್.ಡಿ. ಮೂಲ ದಾಖಲೆಗಳನ್ನು ಪರಿಶೀಲನೆಗಾಗಿ ಒದಗಿಸತಕ್ಕದ್ದು.
ಸೂಚನೆ : ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವುದೇ ಕಾರಣವಿಲ್ಲದೇ, ಯಾವುದೇ ಹಂತದಲ್ಲಿ ತಿರಸ್ಕರಿಸುವ ಹಾಗೂ ಹಿಂತೆಗೆದುಕೊಳ್ಳುವ ಅಥವಾ ಯಾವುದೇ ಟೆಂಡರ್ ಅನುಮೋದಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿದವರು ಕಾಯ್ದಿರಿಸಿಕೊಂಡಿದ್ದಾರೆ.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಕೊಪ್ಪಳ.
ಡಿಐಪಿಆರ್/ಕೊಪ್ಪಳ/543/ಮಣಿಪಾಲ್/2025–26

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.
ನಂ:ದಾಮಪಾ:ಕಾಅ1.ಇ.ಟೆಂಡರ್:40:2025–26 ದಿನಾಂಕ:11–12–2025
ಟೆಂಡರ್ ಪ್ರಕಟಣೆ
(ಕೆಪಿಪಿಪಿ ಪೋರ್ಟಲ್ ಮುಖಾಂತರ)
2025–26 ನೇ ಸಾಲಿನ ಎನ್.ಸಿ.ಎ.ಪಿ/ಸಾಮಾನ್ಯ ನಿಧಿ.(2ನೇ ಕರೆ)– 01 ಕಾಮಗಾರಿಗೆ ಕೆಪಿಪಿಪಿ ಪೋರ್ಟಲ್ ಮುಖಾಂತರ ಸಿಂಗಲ್/ಡಬಲ್ ಕವರ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಅರ್ಹ ಗುತ್ತಿಗೆದಾರರು/ಏಜನ್ಸಿದಾರರು/ ಸರಬರಾಜುದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ವೆಬ್ ಸೈಟ್ https://kppp.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು, ಹೆಚ್ಚಿನ ವಿವರಗಳನ್ನು ಮಹಾನಗರ ಪಾಲಿಕೆಯ ಕಛೇರಿಯ ವೆಬ್ ಸೈಟ್ www.davanagerecity.mrc.gov.in ರಲ್ಲಿ ಹಾಗೂ ಕೆಪಿಪಿಪಿ ಸಹಾಯಕ ದೂರವಾಣಿ ಸಂಖ್ಯೆ: +91–8046010000 +91–8068948777 ರಿಂದ ಮಾಹಿತಿ ಪಡೆಯಬಹುದು. ಅಂದಾಜು ಮೊತ್ತ, ಟೆಂಡರ್‌ಗಿಟ್ಟ ಮೊತ್ತ, ಇ.ಎಂ.ಡಿ. ಮೊತ್ತ ಮತ್ತು ಟೆಂಡರ್ ದಿನಾಂಕಗಳಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಗಮನಿಸುವುದು ಹಾಗೂ ಯಾವುದೇ ಪತ್ರಿಕಾ ಪ್ರಕಟಣೆಗಳನ್ನು ಹೊರಡಿಸಲಾಗುವುದಿಲ್ಲ.
ಕೆ.ಪಿ.ಪಿ.ಪಿ.ಯಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ : 15–12–2025 ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ : 30–12–2025 ಸಮಯ : 16.00 ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 30–12–2025 ಸಮಯ : 17.00 ಟೆಂಡರ್/ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ವೇಳೆ : 01–01–2026 ಸಮಯ : 11.00
ವಾಸಾಇ/ದಾವಣಗೆರೆ/563/ ಕೆಎಸ್‌ಎಂಸಿಎ/2025–26
ಸಹಿ/–ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ದಾವಣಗೆರೆ

ಬೆಂಗಳೂರು ಕೇಂದ್ರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಶಿವಾಜಿ ನಗರ ವಿಭಾಗ, ತಿಮ್ಮಯ್ಯ ರಸ್ತೆ, ಕ್ವೀನ್ಸ್ ರಸ್ತೆ, ಬೆಂಗಳೂರು
ಟೆಂಡರ್ ಅಧಿಸೂಚನೆ ಸಂಖ್ಯೆ : ಕಾಅ/ಎಸ್‌ಜೆಎನ್/ಇ–ಪ್ರೊಕ್ಯೂರ್/08/2025–26 ದಿನಾಂಕ : 17.12.2025
ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ
(ದ್ವಿಲಕೋಟೆ ಪದ್ಧತಿ)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, (ಶಿವಾಜಿನಗರ ವಿಭಾಗ), ಬೆಂಗಳೂರು ಕೇಂದ್ರ ನಗರ ಪಾಲಿಕೆ, ಬೆಂಗಳೂರು ರವರು ಕೆಪಿಡಬ್ಲ್ಯೂಡಿ / ಸಿಪಿಡಬ್ಲ್ಯೂಡಿ/ ರೈಲ್ವೆಗಳು / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿಸಲಾದ ಅರ್ಹ ಗುತ್ತಿಗೆದಾರರಿಂದ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕಾಮಗಾರಿಗಳ ನಿರ್ಮಾಣಕ್ಕಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು
1.	ಬೆಂಗಳೂರಿನ ಹಲಸೂರು ಕೆರೆಯ Eastern Periphery Bund ಸುಧಾರಣೆ ಮತ್ತು ಹೂಳೆತ್ತುವುದು. **ಟೆಂಡರ್‌ಗಿಟ್ಟ ಮೊತ್ತ (ಜಿಎಸ್‌ಟಿ ಇಲ್ಲದೆ) : ರೂ. 760.28 ಲಕ್ಷಗಳು, ಇಎಂಡಿ ಮೊತ್ತ : ರೂ. 7,60,500.00 (ರೂ.1,00,000.00 ಎನ್‌ಇಎಫ್‌ಟಿ ಉಳಿಕೆ ರೂ. 6,60,500.00 ಬ್ಯಾಂಕ್ ಗ್ಯಾರಂಟಿ)**

ಟೆಂಡರ್‌ನ ಕಾರ್ಯಸೂಚಿ: (1) ಬಿಡ್ ಪೂರ್ವ ಸಭೆಯು ನಡೆಯುವ ಸ್ಥಳ, ದಿನಾಂಕ ಮತ್ತು ಸ್ಥಳ : **30.12.2025 ರಂದು ಮಧ್ಯಾಹ್ನ 15.00 ಗಂಟೆಗೆ,** ಮುಖ್ಯ ಅಭಿಯಂತರರು, ವಲಯ–2, ಬೆಂಗಳೂರು ನಗರ ಕೇಂದ್ರ ಪಾಲಿಕೆ, ಅನುಬಂಧ–3, 4ನೇ ಮಹಡಿ, ಜಿಬಿಎ ಕಚೇರಿ ಕಾಂಪೌಂಡ್, ಎನ್. ಆರ್.ಚೌಕ, ಬೆಂಗಳೂರು. (2) ಭರ್ತಿ ಮಾಡಿದ ಟೆಂಡರ್ ದಾಖಲೆಯನ್ನು ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ 03.01.2026 ರಿಂದ ಸಂಜೆ 16.00 ರವರೆಗೆ.** (3) ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **05.01.2026 ರಂದು ಬೆಳಿಗ್ಗೆ 11.00 ಗಂಟೆ.** (4) ಹಣಕಾಸು ಬಿಡ್ ದಿನಾಂಕವನ್ನು ತಾಂತ್ರಿಕ ಬಿಡ್ ಅನುಮೋದನೆಯ ನಂತರ ಟೆಂಡರ್‌ಗಳನ್ನು ತೆರೆಯುವ ದಿನಾಂಕವನ್ನು ತಿಳಿಸಲಾಗುವುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಶಿವಾಜಿನಗರ ವಿಭಾಗ, ಬೆಂ.ಕೇಂ.ನ.ಪಾ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು
ದೂ: 0821–2443347, ಇ–ಮೇಲ್: eemidmysore@yahoo.co.in
ಸಂಖ್ಯೆ: ಟೆಂಡರ್–25/2025–26 ದಿನಾಂಕ: 16.12.2025
ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ನಜರ್‌ಬಾದ್, ಮೈಸೂರು–570010 ರವರು ಕೆ.ಡಬ್ಲ್ಯು–2 ಮತ್ತು 3ರ ರೀತ್ಯ ಒಟ್ಟು 04 ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಇವುಗಳಲ್ಲಿ ಕನಿಷ್ಠ ಮೊತ್ತ **ರೂ. 40.34 ಲಕ್ಷಗಳು,** ಗರಿಷ್ಠ ಮೊತ್ತ **ರೂ. 80.64 ಲಕ್ಷಗಳು.** ಇ.ಎಂ.ಡಿ ಕನಿಷ್ಠ ಮೊತ್ತ **ರೂ. 0.80 ಲಕ್ಷಗಳು,** ಗರಿಷ್ಠ **ರೂ. 1.61** ಲಕ್ಷಗಳಾಗಿರುತ್ತದೆ. ಈ ಕಾಮಗಾರಿಗಳಿಗೆ ಐಟಂವಾರು ಅಲ್ಪಾವಧಿ ಟೆಂಡರನ್ನು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ನಲ್ಲಿನ ಷರತ್ತುಗಳಿಗನುಗುಣವಾಗಿ ಕರೆಯಲಾಗಿದ್ದು, ಕೆ.ಪಿ.ಪಿ. ಪೋರ್ಟಲ್ ಮೂಲಕ ನೋಂದಾಯಿತ ಗುತ್ತಿಗೆದಾರರಿಂದ ಬಿಡ್ಡನ್ನು ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಗಳು ಈ ಕೆಳಕಂಡಂತಿರುತ್ತವೆ.
ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಗಳನ್ನು ಕಛೇರಿಯ ವೇಳೆಯಲ್ಲಿ ದಿನಾಂಕ: **24.12.2025, ಸಂಜೆ 5.30**ರೊಳಗೆ ಪಡೆಯಬಹುದಾಗಿರುತ್ತದೆ. ಭರ್ತಿಮಾಡಿದ ಟೆಂಡರ್ ದಾಖಲೆಗಳು ಮತ್ತು ಬಿಡ್‌ನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಸಲ್ಲಿಸಲು ಕಡೆಯ **ದಿನಾಂಕ: 26.12.2025 ಸಂಜೆ 5.30 ಗಂಟೆಯವರೆಗೆ.** ಬಿಡ್ ತೆರೆಯುವ **ದಿನಾಂಕ: 29.12.2025ರ ಬೆಳಿಗ್ಗೆ 11.00 ಗಂಟೆಯ ನಂತರ.** ಟೆಂಡರ್ ದಾಖಲಾತಿಗಳನ್ನು ವೆಬ್‌ಸೈಟ್ **https://kppp.karnataka.gov.in** ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.
ವಿ.ಸೂ: ಸದರಿ ಕಾಮಗಾರಿಯ ಟೆಂಡರ್ ಅನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಹಾಗೂ ಯಾವುದೇ ಬಿಡ್‌ನ್ನು ತಿರಸ್ಕರಿಸುವ ಹಕ್ಕನ್ನು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು ಇವರಿಗೆ ಕಾಯ್ದಿರಿಸಲಾಗಿದೆ. ಹಾಗೂ ಈ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿಗಳನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಸಹಿ/– ಕಾರ್ಯಪಾಲಕ ಇಂಜಿನಿಯರ್ ಸನೀ ಮತ್ತು ಅಂ.ಅ.ವಿಭಾಗ, ಮೈಸೂರು
DIPR/MYS/1385/SA/2025-26

ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ KEONICS ISO 9001 : 2008
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನಂ. 59, 1ನೇ ಮಹಡಿ, ಕುಮಾರ ಪಾರ್ಕ್ ಪಶ್ಚಿಮ, ರೈಲ್ವೆ ಪ್ಯಾರಲಲ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು 560020
ಸಂಖ್ಯೆ: KSEDC/P253/2025-26 ದಿನಾಂಕ: 18.12.2025
ಇ–ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಮೆ: ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯೋನಿಕ್ಸ್), ಸಂಸ್ಥೆಯು **"Tender for Empanelment of Vendors for Supply, Installation, Testing, Commissioning and Warranty of Printers at Karnataka State Electronics Development Corporation Limited (KEONICS) for a period of 01 Year (Call-4)"**ಗಾಗಿ ಸಂಸ್ಥೆಗಳನ್ನು ಆಯ್ಕೆ ಮಾಡಲು ಓಪನ್ ಇ–ಟೆಂಡರ್ ಪ್ರಕಟಣೆಯನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಬಿಡ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ವಿವರವನ್ನು ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಕಿಯೋನಿಕ್ಸ್ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು (ದೂರವಾಣಿ ಸಂಖ್ಯೆ: 080 2222 5645)

ಕ್ರ. ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ	ಟೆಂಡರ್ ವಿವರ	ಟೆಂಡರ್‌ನಲ್ಲಿ ಭಾಗವಹಿಸಲು ಕೊನೆಯ ದಿನಾಂಕ
1	KEONICS/2025-26/IND0299	Tender for Empanelment of Vendors for Supply, Installation, Testing, Commissioning and Warranty of Printers at Karnataka State Electronics Development Corporation Limited (KEONICS) for a period of 01 Year (Call-4)".	08.01.2026

DIPR/CP/4504/SA/2025-26 ಸಹಿ/– ನಿರ್ದೇಶಕರು (ತಾಂತ್ರಿಕ)

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ, ಐಬಿಸಿ ವಿಭಾಗ ಸಂಖ್ಯೆ–2
ಆಲಮೇಲ–586202. ದೂರವಾಣಿ ಸಂ: 08488–232298. ಇ–ಮೇಲ್: kbjnleealmel@gmail.com
ಸಂ:ಕೃಭಾಜನಿನಿ/ಐಬಿಸಿವಿ–2/ಪಿಬಿ/2025–26/617 ದಿನಾಂಕ:15.12.2025
ಅಲ್ಪಾವಧಿ ಇ– ಟೆಂಡರ್ ಪ್ರಕಟಣೆ
ಮಾನ್ಯ ವ್ಯವಸ್ಥಾಪಕ ನಿರ್ದೇಶಕರ, ಕೃಭಾಜನಿನಿ ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಕೃಭಾಜನಿನಿ ಐಬಿಸಿ ವಿಭಾಗ ಸಂಖ್ಯೆ : 2, ಆಲಮೇಲ ಇವರ ಕಚೇರಿಯಿಂದ ಈ ಕೆಳಗೆ ಪಟ್ಟಿಕರಿಸಿರುವ ಕಾಮಗಾರಿಗಳಿಗೆ ಶೇಕಡಾವಾರು ಟೆಂಡರ್ ಆಹ್ವಾಹಿಸಲಾಗಿದೆ.

ಕ್ರ. ಸಂ	ಕಾಮಗರಿಗಳ ಹೆಸರು & ವಿವರ	ಟೆಂಡರ್ ಪದ್ಧತಿ	ಅ0ದಾಜು ಮೊತ್ತ (ಲಕ್ಷಗಳಲ್ಲಿ)	ಗುತ್ತಿಗೆದಾರರ ಅರ್ಹತೆ	ಇ–ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೇ
01	AME of colony for the year 2025-26/ Call-02	ಏಕ ಲಕೋಟೆ	* ರೂ.15.895 ಲಕ್ಷಗಳು (02 AME of colony for the year 2025-26 ಕಾಮಗಾರಿಗಳು) * ಕಾಮಗಾರಿಗಳ ಮೊತ್ತದ ವಿವರ: ಗರಿಷ್ಠ ಮೊತ್ತ ರೂ. 10.65 ಲಕ್ಷ – ಕನಿಷ್ಠ ಮೊತ್ತ ರೂ. 5.245 ಲಕ್ಷ * ಗರಿಷ್ಠ ಇ.ಎಂ.ಡಿ. ರೂ. 13,400/– – ಕನಿಷ್ಠ ಇ.ಎಂ.ಡಿ ರೂ. 13,300/–	ಕೆ.ಪಿ.ಡಬ್ಲ್ಯೂ.ಡಿ ಯಲ್ಲಿ ನೊಂದಾಯಿತಿ 4ನೇ ದರ್ಜೆ ಮತ್ತು ಮೇಲ್ಪಟ್ಟ ಅರ್ಹ ಗುತ್ತಿಗೆದಾರರಿಂದ,(ಎಸ್.ಸಿ/ಎಸ್.ಟಿ/CAT-II(A)/ CAT-I) ಮೀಸಲಿಟ್ಟ ಕಾಮಗಾರಿಗಳಿಗೆ ಮೇಲಿನ ದಾಖಲೆಗಳ ಜೊತೆಗೆ 10 ವರ್ಷ ಮೇಲ್ಪಟ್ಟ ಡೋಮಿಶಿಯಲ್ & ಜಾತಿ ಪ್ರಮಾಣ ಪತ್ರ ಲಗತ್ತಿಸುವುದು ಕಡ್ಡಾಯವಗಿರುತ್ತದೆ)	DTS, ನೋಡುವ/ ಸಲ್ಲಿಸುವ ದಿನಾಂಕ: 17.12.2025 ರಿಂದ 24.12.2025 ರ ಸಂಜೆ 4.30 ರ ವರೆಗೆ ಹಾಗೂ ಬಿಡ್ಡನ್ನು ದಿನಾಂಕ : 26.12.2025 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು.
02	Saving grant Closure period and special repairs works 2025-26	ಏಕ ಲಕೋಟೆ	* ರೂ.69.65 ಲಕ್ಷಗಳು (01 closure period work, 04 Special repairs ಕಾಮಗಾರಿಗಳು) * ಕಾಮಗಾರಿಗಳ ಮೊತ್ತದ ವಿವರ: ಗರಿಷ್ಠ ಮೊತ್ತ ರೂ. 20.00 ಲಕ್ಷ – ಕನಿಷ್ಠ ಮೊತ್ತ ರೂ. 2.64 ಲಕ್ಷ * ಗರಿಷ್ಠ ಇ.ಎಂ.ಡಿ. ರೂ. 38,900/– ಕನಿಷ್ಠ ಇ.ಎಂ.ಡಿ ರೂ. 6,600/–		

ಗುತ್ತಿಗೆದಾರರು ದಾಖಲೆಗಳನ್ನು ಇ–ಟೆಂಡರಿಂಗ್ ಮೂಲಕ http:www.kppp.kar.gov.in ಅಂತರ್ಜಾಲದಲ್ಲಿ " ಶೆಡ್ಯೂಲ್ – ಬಿ" ಮತ್ತು ತಾಂತ್ರಿಕ ವಿವರಗಳನ್ನು ಪಡೆಯಬಹುದಾಗಿದೆ. ಬಿಡ್ಡನ್ನು ತೆರೆಯುವ ಸ್ಥಳ :ಕಾರ್ಯನಿರ್ವಾಹಕ ಇಂಜಿನೀಯರರು, ಕೃಭಾಜನಿನಿ ಐಬಿಸಿ ವಿಭಾಗ ಸಂಖ್ಯೆ : 2, ಆಲಮೇಲ ಇವರ ಕಚೇರಿಯಲ್ಲಿ ಮತ್ತು ಹೆಚ್ಚಿನ ಮಾಹಿತಿಗಾಗಿ ಈ ಕೆಳ ಸಹಿದಾರರ ಕಾರ್ಯಾಲಯಕ್ಕೆ (08488 – 232298) ಸಂಪರ್ಕಿಸಬಹುದಾಗಿದೆ. ಮತ್ತು ಷರತ್ತು ಬದ್ಧ ಯಾವುದೇ ಕಾಮಗಾರಿ ಟೆಂಡರ್‌ಗಳನ್ನು/ಒಪ್ಪಿಗೆ/ತಿರಸ್ಕರಿಸುವ, ಅಥವ ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಅಧಿಕಾರ ಸಕ್ಷಮ ಪ್ರಾಧಿಕಾರಕ್ಕೆ ಇರುತ್ತದೆ.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಐಬಿಸಿ ವಿಭಾಗ–2, ಆಲಮೇಲ.
ವಾಸಾಸಂಇ/ವಿಜಯಪುರ/551/ಕೆಎಸ್‌ಎಂಸಿಎ/2025–26

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಸುಭಾಷಿತ

ಅರಿತು ಮಾಡಿದ್ದು ಪಾಪ, ಮರೆತು ಮಾಡಿದ್ದು ಮನುಷ್ಯ ಸ್ವಭಾವ.

–ತರಾಸು

ಸಂಪಾದಕೀಯ

ಆಯೋಗದಿಂದ ಅನುದಾನಕ್ಕೆ ಕತ್ತರಿ ರಾಜ್ಯವೇ ಆಹ್ವಾನಿಸಿಕೊಂಡ ದಂಡನೆ

ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಗಳನ್ನು ಸಕಾಲಕ್ಕೆ ನಡೆಸದ ಕಾರಣಕ್ಕಾಗಿ 15ನೇ ಹಣಕಾಸು ಆಯೋಗದಿಂದ ರಾಜ್ಯಕ್ಕೆ ಬರಬೇಕಾಗಿದ್ದ ₹1,279 ಕೋಟಿ ಅನುದಾನ ಬಾರದಿರುವುದು ರಾಜ್ಯ ಸರ್ಕಾರ ಸ್ವತಃ ಆಹ್ವಾನಿಸಿಕೊಂಡ ದಂಡನೆಯಾಗಿದೆ. ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಕಾಲಕ್ಕೆ ಚುನಾವಣೆ ನಡೆದರೆ ಮಾತ್ರ ಅನುದಾನ ಬಿಡುಗಡೆ ಆಗುತ್ತದೆ. 2020–21ರಿಂದ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ಚುನಾವಣೆ ನಡೆಯದ ಕಾರಣಕ್ಕೆ ಕರ್ನಾಟಕಕ್ಕೆ ಅನುದಾನ ತಡೆಹಿಡಿಯಲಾಗಿದೆ ಎಂದು ಕೇಂದ್ರ ಪಂಚಾಯತ್‌ರಾಜ್ ಸಚಿವ ರಂಜನ್ ಸಿಂಗ್ ಲೋಕಸಭೆಯಲ್ಲಿ ತಿಳಿಸಿದ್ದಾರೆ. ಹಣಕಾಸು ಆಯೋಗದಿಂದ ರಾಜ್ಯದ ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆಯಾಗಿರುವ ₹13,184 ಕೋಟಿಯಲ್ಲಿ ಈವರೆಗೆ ₹11,905 ಕೋಟಿ ಬಿಡುಗಡೆಯಾಗಿದೆ. ಉಳಿದ ಹಣ, ಚುನಾವಣೆ ನಡೆಯದ ಕಾರಣಕ್ಕಾಗಿ ಬಿಡುಗಡೆಯಾಗಿಲ್ಲ. ತನ್ನ ಪಾಲಿನ ಅನುದಾನವನ್ನು ಪಡೆಯುವುದಕ್ಕಾಗಿ ನಿರ್ವಹಿಸಬೇಕಾದ ಉತ್ತರದಾಯಿತ್ವವನ್ನು ಪ್ರದರ್ಶಿಸುವಲ್ಲಿ ಕರ್ನಾಟಕ ಸರ್ಕಾರ ವಿಫಲವಾಗಿರುವುದರ ಫಲಶ್ರುತಿಯಿದು. ರಾಜ್ಯದ ಅಭಿವೃದ್ಧಿ ಚಟುವಟಿಕೆಗಳಿಗೆ ನ್ಯಾಯಬದ್ಧವಾಗಿ ದೊರೆಯಬೇಕಿದ್ದ ಹಣ ದೊರೆಯದೆ ಹೋದುದರ ಗುರುತರ ಲೋಪವನ್ನು ಸರ್ಕಾರವೇ ಹೊರಬೇಕು.

ಹಣಕಾಸು ಆಯೋಗದ ಅನುದಾನಕ್ಕೆ ಕತ್ತರಿ ಪ್ರಯೋಗ ಆಗಿರುವುದಕ್ಕೆ ರಾಜ್ಯ ಸರ್ಕಾರದ ಹೊಣೆಗೇಡಿತನವೇ ಕಾರಣ. ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸದಿರುವುದು ಬಹು ದೊಡ್ಡ ಕರ್ತವ್ಯಲೋಪ.

ರಾಜ್ಯದ ಸ್ಥಳೀಯ ಸಂಸ್ಥೆಗಳಿಗೆ 2016ರ ಏಪ್ರಿಲ್‌ನಲ್ಲಿ ಚುನಾವಣೆ ನಡೆದು, ಚುನಾಯಿತ ಪ್ರತಿನಿಧಿಗಳ ಅವಧಿ 2021ರ ಏಪ್ರಿಲ್‌ನಲ್ಲಿ ಕೊನೆಗೊಂಡಿತ್ತು. ಅಲ್ಲಿಂದ ಇಲ್ಲಿಯವರೆಗೆ ವಿವಿಧ ಕಾರಣಗಳಿಂದಾಗಿ ಚುನಾವಣೆ ಮುಂದಕ್ಕೆ ಹೋಗುತ್ತಲೇ ಇದೆ. ಕ್ಷೇತ್ರ ಪುನರ್ ವಿಂಗಡಣೆ ಮತ್ತು ಮೀಸಲಾತಿ ನಿಗದಿ ಪ್ರಕ್ರಿಯೆ ನೆಪದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಸರ್ಕಾರ ಮುಂದೂಡುತ್ತಲೇ ಬಂದಿದೆ. ಈ ಕರ್ತವ್ಯ ಲೋಪದಲ್ಲಿ ಈಗಿನ ಕಾಂಗ್ರೆಸ್ ಸರ್ಕಾರದೊಂದಿಗೆ ಹಿಂದಿನ ಬಿಜೆಪಿ ಸರ್ಕಾರದ ಪಾತ್ರವೂ ಇದೆ. ಕ್ಷೇತ್ರ ಪುನರ್ ವಿಂಗಡಣೆ ಮತ್ತು ಮೀಸಲಾತಿ ಅಧಿಕಾರವನ್ನು ಚುನಾವಣಾ ಆಯೋಗದಿಂದ ಬಿಜೆಪಿ ನೇತೃತ್ವದ ಹಿಂದಿನ ಸರ್ಕಾರ ಹಿಂಪಡೆಯುವುದರೊಂದಿಗೆ ಆರಂಭವಾದ ಸಮಸ್ಯೆ ಈಗಲೂ ಬಗೆಹರಿದಿಲ್ಲ. ಸ್ಥಳೀಯ ಸಂಸ್ಥೆಗಳಿಗೆ ನಿಗದಿತ ಅವಧಿಯಲ್ಲಿ ಚುನಾವಣೆಗಳನ್ನು ನಡೆಸಲು ಸಾಧ್ಯ ಆಗದೆ ಇರುವ ಬಗ್ಗೆ ಅಸಹಾಯಕತೆ ವ್ಯಕ್ತಪಡಿಸಿರುವ ಚುನಾವಣಾ ಆಯೋಗ, ಚುನಾವಣೆ ನಡೆಯದಿರಲು ರಾಜ್ಯ ಸರ್ಕಾರ ಅನುವು ಮಾಡಿಕೊಡದಿರುವುದೇ ಕಾರಣ ಎಂದು ಹೈಕೋರ್ಟ್‌ ಗಮನಕ್ಕೆ ತಂದಿದೆ. ಪಂಚಾಯಿತಿಗಳಿಗೆ ಸಕಾಲಕ್ಕೆ ಚುನಾವಣೆ ನಡೆಸದಿರುವುದು, ಸಂವಿಧಾನದ 73ನೇ ಮತ್ತು 74ನೇ ತಿದ್ದುಪಡಿಗಳು ಸ್ಥಳೀಯ ಸಂಸ್ಥೆಗಳಿಗೆ ನೀಡಿರುವ ಸಾಂವಿಧಾನಿಕ ಮಹತ್ವವನ್ನು ಕುಗ್ಗಿಸುವಂತಿದೆ. ಸ್ಥಳೀಯ ಸಂಸ್ಥೆಗಳು ನಿಷ್ಕ್ರಿಯವಾದರೆ, ಗ್ರಾಮೀಣಾಭಿವೃದ್ಧಿ, ಶಿಕ್ಷಣ, ಆರೋಗ್ಯ ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದ ನಿರ್ಣಯಗಳಲ್ಲಿ ನಾಗರಿಕರ ನಿಜವಾದ ಧ್ವನಿ, ಸಹಭಾಗಿತ್ವ ಇಲ್ಲದೇ ಹೋಗುತ್ತದೆ.

ಪ್ರಜಾಪ್ರಭುತ್ವ ವ್ಯವಸ್ಥೆಯ ಜೀವನಾಡಿಗಳಂತಿರುವ ಸ್ಥಳೀಯ ಸಂಸ್ಥೆಗಳನ್ನು ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಬೇರುಗಳ ರೂಪದಲ್ಲಿ ಗುರ್ತಿಸಲಾಗುತ್ತದೆ. ಅಧಿಕಾರ ವಿಕೇಂದ್ರೀಕರಣಕ್ಕೆ ಅತ್ಯುತ್ತಮ ಮಾದರಿಯಾಗಿರುವ ಪಂಚಾಯತ್ ರಾಜ್ ವ್ಯವಸ್ಥೆಯ ಪ್ರಯೋಗಶಾಲೆರೂಪದಲ್ಲಿ ಕರ್ನಾಟಕ ದೇಶಕ್ಕೇ ಆದರ್ಶಪ್ರಾಯವಾಗಿತ್ತು. ದುರದೃಷ್ಟವಶಾತ್, ಪಂಚಾಯತ್ ವ್ಯವಸ್ಥೆಯ ತವರುನೆಲದಲ್ಲೇ ಸ್ಥಳೀಯ ಸಂಸ್ಥೆಗಳು ಐದು ವರ್ಷಗಳಿಗೂ ಹೆಚ್ಚು ಕಾಲ ಪ್ರತಿನಿಧಿಗಳಿಲ್ಲದೆ ಇರುವ ಸ್ಥಿತಿ ರೂಪುಗೊಂಡಿದೆ. ಜನಪ್ರತಿನಿಧಿಗಳ ಅನುಪಸ್ಥಿತಿಯಲ್ಲಿ ಅಧಿಕಾರಿಗಳು ದೀರ್ಘ ಕಾಲ ಆಡಳಿತ ನಡೆಸುವುದು ಗ್ರಾಮೀಣ ಭಾಗದಲ್ಲಿನ ಅಭಿವೃದ್ಧಿ ಚಟುವಟಿಕೆಗಳಿಗೆ ಹಿನ್ನಡೆ ಉಂಟುಮಾಡುತ್ತದೆ. ಪ್ರಜಾಪ್ರಭುತ್ವದ ಬಗ್ಗೆ ನಂಬಿಕೆಯುಳ್ಳ ಯಾವುದೇ ಸರ್ಕಾರ, ಸ್ಥಳೀಯ ಸಂಸ್ಥೆಗಳು ದುರ್ಬಲಗೊಳ್ಳಲು ಬಿಡುವುದಿಲ್ಲ. ತನ್ನನ್ನು 'ಸಂವಿಧಾನಪರ' ಎಂದು ಬಿಂಬಿಸಿಕೊಳ್ಳುವ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲೂ ಪಂಚಾಯತ್ ರಾಜ್ ಸಂಸ್ಥೆಗಳ ಚುನಾವಣೆ ನನೆಗುದಿಗೆ ಬಿದ್ದಿರುವುದು, ಪಕ್ಷದ ಆಶಯಗಳ ವಿಶ್ವಾಸಾರ್ಹತೆಯನ್ನೇ ಅನುಮಾನಿಸುವುದಕ್ಕೆ ಆಸ್ಪದ ಕಲ್ಪಿಸುವಂತಿದೆ. ಚುನಾವಣೆ ನಡೆಸದಿರುವ ಕಾರಣಕ್ಕಾಗಿ, ಹಣಕಾಸು ಆಯೋಗದಿಂದ ಅನುದಾನ ಬಾರದಿರುವುದನ್ನು ರಾಜ್ಯ ಸರ್ಕಾರ ಎಚ್ಚರಿಕೆಯಂತೆ ಭಾವಿಸಬೇಕು. ಚುನಾವಣಾ ಪ್ರಕ್ರಿಯೆಯನ್ನು ಆರಂಭಿಸಲು ತಕ್ಷಣವೇ ಕಾರ್ಯಪ್ರವೃತ್ತವಾಗಬೇಕು. ಸ್ಥಳೀಯ ಸಂಸ್ಥೆಗಳನ್ನು ಅಸ್ಥಿರವಾಗಿ ಇರಿಸುವುದು ಸಂವಿಧಾನದ ಆಶಯಗಳಿಗೆ ಧಕ್ಕೆ ತರುವ ಹಾಗೂ ಗ್ರಾಮೀಣ ಅಭಿವೃದ್ಧಿಗೆ ತೀವ್ರ ಹಿನ್ನಡೆ ಉಂಟುಮಾಡುವ ಕ್ರಮ ಎನ್ನುವುದನ್ನು ಸರ್ಕಾರ ಮರೆಯಬಾರದು.

ಅಣೆಕಟ್ಟು: ಮುಳುಗದಿರಲಿ ಬದುಕು!

ವಿಶ್ಲೇಷಣೆ

ಅಖಿಲೇಶ್ ಚಿಪ್ಪಳಿ

ಹೊಸ ಅಣೆಕಟ್ಟು ನಿರ್ಮಾಣ ಕಾರ್ಯ ಸಾಧ್ಯವಲ್ಲ ಎಂದು ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ ಅವರ ಇತ್ತೀಚಿನ ಅಭಿಪ್ರಾಯ, ಅಣೆಕಟ್ಟು ನಿರ್ಮಾಣಕ್ಕಾಗಿ ಮುಳುಗಲಿರುವ ಅರಣ್ಯ ಪ್ರದೇಶ, ಕೃಷಿ ಜಮೀನು ಹಾಗೂ ಅರಣ್ಯೇತರ ಪ್ರದೇಶದ ಸಂರಕ್ಷಣೆಯ ದೃಷ್ಟಿಯಿಂದ ಮಹತ್ವದ ಹೇಳಿಕೆಯಾಗಿದೆ.

ದೇಶದಲ್ಲಿ 6,500 ಅಣೆಕಟ್ಟುಗಳಿವೆ. ಇವುಗಳಿಂದ ಬರೀ 750 ಬಿಸಿಎಂ ನೀರನ್ನು ಸಂಗ್ರಹಿಸುತ್ತಿದ್ದೇವೆ. ಅಣೆಕಟ್ಟು ನಿರ್ಮಿಸಲು 25 ವರ್ಷಗಳು ಬೇಕಾಗುತ್ತದೆ. 25 ಸಾವಿರ ಕೋಟಿ ರೂಪಾಯಿ ವೆಚ್ಚವಾಗುತ್ತದೆ. ನಮಗೆ ಅಷ್ಟೊಂದು ಸಮಯ ಮತ್ತು ಹಣ ಇದೆಯೇ ಎಂದು ಸಚಿವರು ಪ್ರಶ್ನಿಸಿದ್ದಾರೆ. ಇದೇ ಹೊತ್ತಿನಲ್ಲಿ, ಅಮೆರಿಕದಲ್ಲಿ ಅಣೆಕಟ್ಟುಗಳನ್ನು ಸಾಲು ಸಾಲಾಗಿ ತೆರವುಗೊಳಿಸುವ ಕೆಲಸ ಭರದಿಂದ ಸಾಗುತ್ತಿದೆ. ಅಲ್ಲಿ ಸಾವಿರಾರು ಅಣೆಕಟ್ಟುಗಳಿವೆ. 25 ವರ್ಷಗಳಷ್ಟು ಹಳೆಯದಾದ ಸುಮಾರು 2200 ಅಣೆಕಟ್ಟುಗಳನ್ನು ತೆರವುಗೊಳಿಸಿ, ನದಿಯನ್ನು ಮುಕ್ತವಾಗಿ ಹರಿಯಲು ಅನುವು ಮಾಡಿಕೊಡಲಾಗಿದೆ. ಅಣೆಕಟ್ಟುಗಳಿಂದ ಆಗುವ ಲಾಭಕ್ಕಿಂತ ಸ್ವಚ್ಛಂದವಾಗಿ ಹರಿಯುವ ನದಿಯಿಂದ ಹೆಚ್ಚು ಅನುಕೂಲವಿದೆ ಎಂಬುದನ್ನು ಅಲ್ಲಿನ ವಿಜ್ಞಾನಿಗಳು ಜಗತ್ತಿಗೆ ತೋರಿಸಿಕೊಟ್ಟಿದ್ದಾರೆ. 2050ರ ಹೊತ್ತಿಗೆ 30 ಸಾವಿರ ಅಣೆಕಟ್ಟುಗಳನ್ನು ತೆರವುಗೊಳಿಸುವುದರ ಮೂಲಕ, 3 ಲಕ್ಷ ಮೈಲಿಗಳಷ್ಟು ನದಿ ಹರಿವನ್ನು ಮುಕ್ತವಾಗಿಸುವ ಯೋಜನೆಯನ್ನು ಅಮೆರಿಕದಲ್ಲಿ ರೂಪಿಸಲಾಗಿದೆ.

ನದಿ ಪಾತ್ರದಲ್ಲಿ ವಾಸಿಸುವ ಮೂಲ ನಿವಾಸಿಗಳಿಗೆ ಯಾವುದೇ ಅಣೆಕಟ್ಟು ಅನುಕೂಲ ತಂದ ಉದಾಹರಣೆಯಿಲ್ಲ. ಅರಣ್ಯ ನಾಶದ ಜೊತೆಗೆ ಕೃಷಿಭೂಮಿ, ಅರಣ್ಯೇತರ ಭೂಮಿಯೂ ಮುಳುಗಡೆಯಾಗುತ್ತದೆ. ಜಲಚರಗಳ ಜೀವನಚಕ್ರದಲ್ಲಿ ವ್ಯತ್ಯಯವಾಗುತ್ತದೆ. ಬದಲಾದ ಪರಿಸ್ಥಿತಿಯಲ್ಲಿ ಅಣೆಕಟ್ಟುಗಳು ತಮ್ಮ ಮಹತ್ವವನ್ನು ಕಳೆದುಕೊಳ್ಳುತ್ತಿವೆ. ಈ ಅಣೆಕಟ್ಟುಗಳಿಗೆ ಸಂಬಂಧಿಸಿದಂತೆ ನಮ್ಮ ದೇಶ ಮತ್ತು ರಾಜ್ಯದಲ್ಲಿ ಏನೇನು ನಡೆಯುತ್ತಿದೆ ಎಂಬುದನ್ನು ನೋಡೋಣ.

ಜಲವಿದ್ಯುತ್ ಯೋಜನೆಗಳನ್ನು 'ಹಸಿರು ಇಂಧನ'ವೆಂದು ಸರ್ಕಾರಿ ಇಲಾಖೆಗಳು ಹೇಳುತ್ತವೆ. ಪಂಪ್ಡ್ ಸ್ಟೋರೇಜ್ ಪ್ಲಾಂಟ್‌ಗಳನ್ನೂ (ಪಿಎಸ್‌ಪಿ) ಹಸಿರು ಇಂಧನವೆಂದು ಪರಿಗಣಿಸಲಾಗಿದೆ. ಈ ಹಿನ್ನೆಲೆಯಲ್ಲಿ ಭಾರತ 2 ಲಕ್ಷ ಮೆ.ವಾ. ವಿದ್ಯುತ್ ಅನ್ನು ಪಂಪ್ಡ್ ಸ್ಟೋರೇಜ್ ಪ್ಲಾಂಟ್‌ಗಳಿಂದ ಪಡೆಯಲು ಯೋಜನೆ ರೂಪಿಸುತ್ತಿದೆ. ಈಗಾಗಲೇ ಕರ್ನಾಟಕದ ಶರಾವತಿ ಪಿಎಸ್‌ಪಿ (2000 ಮೆ.ವಾ.), ಮಧ್ಯಪ್ರದೇಶದ ಎಂ.ಪಿ-30 ಪಿಎಸ್‌ಪಿ (19200 ಮೆ.ವಾ.), ಮಹಾರಾಷ್ಟ್ರದ ಬಿವ್‌ಪುರಿ ಪಿಎಸ್‌ಪಿ ಮತ್ತು ಬಾವಲಿ ಪಿಎಸ್‌ಪಿ (1000 ಮತ್ತು 1500 ಮೆ.ವಾ.), ಒಡಿಶಾದ ಇಂದ್ರಾವತಿ ಮೇಲ್ದಂಡೆ ಪಿಎಸ್‌ಪಿ (600 ಮೆ.ವಾ.) ಹಾಗೂ ಆಂಧ್ರಪ್ರದೇಶದ ಚಿತ್ರಾವತಿ ಪಿಎಸ್‌ಪಿ (500 ಮೆ.ವಾ.) – ಇವುಗಳಿಗೆ ವಿಸ್ತೃತ ಯೋಜನೆ ತಯಾರಾಗಿದ್ದು, ಕಾರ್ಯಾರಂಭದ ಪ್ರಯತ್ನ ನಡೆಯುತ್ತಿದೆ.

ಕರ್ನಾಟಕದಲ್ಲಿ ವರಾಹಿ, ಕಾಳಿ, ನೇತ್ರಾವತಿ, ಮಲಪ್ರಭಾ ಇತ್ಯಾದಿ ಭಾಗಗಳಲ್ಲಿ ಯೋಜನೆ ಸಾಧ್ಯತೆಗಳ ಕುರಿತು ರೂಪುರೇಷೆಗಳನ್ನು ಭರದಿಂದ ತಯಾರಿಸಲಾಗುತ್ತಿದೆ. 'ಶರಾವತಿ ಪಂಪ್ಡ್ ಸ್ಟೋರೇಜ್' ಯೋಜನೆಯಲ್ಲಿ ಹಾಲಿ ಇರುವ ಎರಡು ಅಣೆಕಟ್ಟುಗಳನ್ನೇ ಬಳಸಿಕೊಳ್ಳಲಾಗುತ್ತದೆ. ಆದರೂ, ಶರಾವತಿ ಸಿಂಗಳೀಕ ಅಭಯಾರಣ್ಯದ ಕೇಂದ್ರ ಭಾಗದಲ್ಲಿ 54 ಹೆಕ್ಟೇರ್ ಅರಣ್ಯ ನಾಶವಾಗಲಿದೆ. ಅದೇ ವರಾಹಿ ಪಿಎಸ್‌ಪಿ ಯೋಜನೆ ಜಾರಿ ಮಾಡಲು ಮತ್ತೊಂದು ಅಣೆಕಟ್ಟು ನಿರ್ಮಿಸಲಾಗುತ್ತದೆ. ಇದಕ್ಕೆ ಮೂಕಾಂಬಿಕಾ ಮತ್ತು ಸೋಮೇಶ್ವರ ಅಭಯಾರಣ್ಯಗಳ ಸುಮಾರು 500 ಎಕರೆ ಪ್ರದೇಶವನ್ನು ಬಳಸಲಾಗುತ್ತದೆ ಎನ್ನಲಾಗಿದೆ. 2 ಲಕ್ಷ ಮೆ.ವಾ. ವಿದ್ಯುತ್‌ಗಾಗಿ ದೇಶದಲ್ಲಿ ಇನ್ನೆಷ್ಟು ಅಣೆಕಟ್ಟುಗಳನ್ನು ಕಟ್ಟಲಾಗುವುದು ಎಂಬ ಸಮಗ್ರ ಮಾಹಿತಿ ಇನ್ನೂ ದೊರಕಿಲ್ಲ. ಸರಾಸರಿ ಒಂದು ಸಾವಿರ ಮೆ.ವಾ. ಸಾಮರ್ಥ್ಯದ ವಿದ್ಯುತ್‌ಗಾಗಿ ಹೊಸ ಅಣೆಕಟ್ಟುಗಳನ್ನು ನಿರ್ಮಿಸುವುದಾದಲ್ಲಿ, ಕನಿಷ್ಠ 200 ಅಣೆಕಟ್ಟುಗಳನ್ನು ಹೊಸದಾಗಿ ಕಟ್ಟಬೇಕಾಗುತ್ತದೆ.

> ಅಣೆಕಟ್ಟುಗಳಿಂದ ಅನನುಕೂಲಗಳೇ ಹೆಚ್ಚು ಎನ್ನುವ ನಂಬಿಕೆ ಬಲವಾಗುತ್ತಿದೆ. ಅಮೆರಿಕದಲ್ಲೀಗ ಅಣೆಕಟ್ಟುಗಳನ್ನು ತೆರವುಗೊಳಿಸುವ ಕಾರ್ಯ ಆಂದೋಲನದ ಸ್ವರೂಪ ಪಡೆದುಕೊಂಡಿದೆ. ನಮ್ಮಲ್ಲೋ ಹೊಸ ಅಣೆಟ್ಟುಗಳನ್ನು ಕಟ್ಟುವ ಉತ್ಸಾಹ. ಕಾಡನ್ನು ಮುಳುಗಿಸುವ ನಿರ್ಮಾಣಗಳಿಂದ ಬದುಕೂ ಮುಳುಗುತ್ತದೆ!

ಅಭಯಾರಣ್ಯಗಳ ದಟ್ಟವಾದ ಕಾಡುಗಳನ್ನು ನಾಶ ಮಾಡಿ ಹಸಿರು ಇಂಧನ ಎಂದು ಕರೆಯಲಾಗುವ ಪಿಎಸ್‌ಪಿ ನಿರ್ಮಿಸುವುದು ಪರಿಸರಸ್ನೇಹಿ ಹೇಗಾಗುತ್ತದೆ? ಇಂಗಾಲವನ್ನು ಹೀರಿಕೊಳ್ಳುವ ಬಲಿತ ಮರಗಳನ್ನು ಹನನ ಮಾಡುವ ಕ್ರಿಯೆಯನ್ನು ಹಸಿರು ಯೋಜನೆ ಎಂದು ಕರೆಯುವುದು ಯಾವ ನೈತಿಕತೆ ಎಂಬುದು ತಜ್ಞರ ಪ್ರಶ್ನೆ. ಅಧ್ಯಯನವೊಂದರ ಪ್ರಕಾರ, ಶೂನ್ಯ ಇಂಗಾಲದ ಗುರಿ ತಲಪಲು ಪಳೆಯುಳಿಕೆ ಇಂಧನಗಳನ್ನು ಭೂಮಿಯಿಂದ ಎತ್ತುವುದನ್ನು ನಿಲ್ಲಿಸುವುದು ಬಹಳ ಮುಖ್ಯವಾಗಿದೆ. ಈಗಾಗಲೇ ಭೂಮಿ ತನ್ನ ಧಾರಣಾ ಸಾಮರ್ಥ್ಯವನ್ನು ಕಳೆದುಕೊಂಡಿದೆ. ಯಂತ್ರ ಮತ್ತು ತಂತ್ರಜ್ಞಾನ ಕ್ಷೇತ್ರಗಳೂ ಹೆಚ್ಚು ವಿದ್ಯುತ್ ಬೇಡುತ್ತವೆ. ಈಗಂತೂ ಯಾಂತ್ರಿಕ ಬುದ್ಧಿಮತ್ತೆಯ (ಎಐ) ಕಾಲ. ಮನುಷ್ಯ ಮಾಡುವ ಕೆಲಸಗಳನ್ನು ಯಂತ್ರಗಳೇ ಮಾಡಲು ಹೊರಟಲ್ಲಿ, ವಿದ್ಯುತ್ ಬೇಡಿಕೆ ಇನ್ನಷ್ಟು ಹೆಚ್ಚಲಿದೆ. ಆದರೆ, 'ಎಐ' ಬಳಕೆಯಿಂದ ವಾತಾವರಣದಲ್ಲಿ ಇಂಗಾಲದ ಅಂಶ ಹೆಚ್ಚಬಹುದೇ ಹೊರತು, ಇಂಗಾಲ ಹೀರಿಕೊಳ್ಳುವ ಸಾಮರ್ಥ್ಯ ಹೊಂದಿರುವ ಕಾಡುಗಳ ಕೆಲಸವನ್ನು 'ಎಐ' ಮಾಡಲು ಸಾಧ್ಯವಿಲ್ಲ.

ಶಿವಮೊಗ್ಗ ಜಿಲ್ಲೆಯ ಸಾಗರದ ಸೈನ್ಸ್ ಫೋರಂನಲ್ಲಿ ಇತ್ತೀಚೆಗೆ ಭಾಷಣ ಸ್ಪರ್ಧೆಯೊಂದು ನಡೆಯಿತು. ವಿಷಯ: ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯ ಸಾಧಕ ಬಾಧಕಗಳು. ಭಾಗವಹಿಸಿದ ಹೆಚ್ಚಿನವರು ಯೋಜನೆಯ ಬಾಧಕಗಳ ಕುರಿತಾಗಿ ಮಾತನಾಡಿದರು. ಬಹುತೇಕ ಯುವಜನರಿಗೆ ಯೋಜನೆಗೆ ಇರುವ ಪರ್ಯಾಯಗಳ ಕುರಿತ ಮಾಹಿತಿಯ ಕೊರತೆಯಿತ್ತು. ಪಶ್ಚಿಮಘಟ್ಟಗಳ ಅಮೂಲ್ಯ ಕಾಡು, ಜೀವರಾಶಿಯನ್ನು ನಾಶ ಮಾಡುವ ಯೋಜನೆಗಳ ಬದಲಿಗೆ, ವೇಗವಾಗಿ ಮುನ್ನೆಲೆಗೆ ಬರುತ್ತಿರುವ ಬ್ಯಾಟರಿ ಶೇಖರಣಾ ವ್ಯವಸ್ಥೆಯಂಥ ಪರ್ಯಾಯಗಳನ್ನು ನಾವು ಗಮನಿಸಬೇಕು. ವಿದ್ಯುತ್ ಸಂಗ್ರಹ ಮಾಡಿಕೊಂಡು, ಅಗತ್ಯವಿರುವಾಗ ಬಳಕೆ ಮಾಡಲು ಶೇಖರಣಾ ವ್ಯವಸ್ಥೆ ಬೇಕು. ಅದು ಪಂಪ್ಡ್ ಸ್ಟೋರೇಜ್ ಆಗಬಹುದು ಅಥವಾ ಬ್ಯಾಟರಿ ಸ್ಟೋರೇಜ್ ಆಗಬಹುದು. ಈ ಎರಡಕ್ಕೂ ಹೋಲಿಕೆ ಮಾಡಿದರೆ, ಬ್ಯಾಟರಿ ಸ್ಟೋರೇಜ್ ವಿಧಾನವೇ ಅತ್ಯಂತ ಅಗ್ಗ, ಸುರಕ್ಷಿತ ಮತ್ತು ವಿದ್ಯುತ್ ಸೋರಿಕೆಯನ್ನು ಕಡಿಮೆ ಮಾಡುವ ವಿಧಾನ ಎನ್ನುವುದು ತಜ್ಞರ ಲೆಕ್ಕಾಚಾರ. ಭಾರತದ ಮಟ್ಟಿಗೆ ಹೇಳುವುದಾದರೆ, ಬ್ಯಾಟರಿ ಶೇಖರಣಾ ಘಟಕಕ್ಕೆ ಶೇ 30ರಷ್ಟು ಆರ್ಥಿಕ ಅನುದಾನವನ್ನು ಕೇಂದ್ರ ಸರ್ಕಾರ ನೀಡಲಿದೆ. ಇದರಿಂದ ರಾಜ್ಯ ಸರ್ಕಾರಕ್ಕೆ ಆರ್ಥಿಕ ಹೊರೆ ಕಡಿಮೆ ಆಗಲಿದೆ.

2016–17 ದಕ್ಷಿಣ ಆಸ್ಟ್ರೇಲಿಯಾಕ್ಕೆ ತೀರಾ ಆಘಾತಕಾರಿಯಾಗಿದ್ದ ವರ್ಷ. ಭಾರೀ ಬಿರುಗಾಳಿಯಿಂದಾಗಿ ವಿದ್ಯುತ್ ವ್ಯವಸ್ಥೆ ಸಂಪೂರ್ಣವಾಗಿ ಕುಸಿದುಬಿತ್ತು. ವಿದ್ಯುತ್ ಗ್ರಿಡ್ ಅಸ್ಥಿರತೆಯಿಂದಾಗಿ ಆರ್ಥಿಕವಾಗಿ ದೊಡ್ಡ ಮಟ್ಟದ ಹೊಡೆತ ಬಿದ್ದಿತ್ತು. ತಂತ್ರಜ್ಞಾನ ಕ್ಷೇತ್ರದಲ್ಲಿ ನಿರಂತರವಾಗಿ ಹೊಸತನ್ನು ಪರಿಚಯಿಸುವ ಇಲಾನ್ ಮಸ್ಕ್, ಆಸ್ಟ್ರೇಲಿಯಾದಲ್ಲಿ ನಡೆದ ವಿದ್ಯುತ್ ಗಂಡಾಂತರವನ್ನು ಗಂಭೀರವಾಗಿ ಪರಿಗಣಿಸಿದ. 'ವಿದ್ಯುತ್ ಅಸ್ಥಿರತೆ ಸರಿಪಡಿಸಲು ನೂರು ದಿನಗಳಲ್ಲಿ 100 ಮೆ.ವಾ. ಸಾಮರ್ಥ್ಯದ ಬ್ಯಾಟರಿ ಶೇಖರಣಾ ಘಟಕವನ್ನು ಮಾಡಿಕೊಡುತ್ತೇವೆ. ಗಡುವು ಮೀರಿದರೆ, ನಮಗೆ ಚಿಕ್ಕಾಸೂ ನೀಡಬೇಕಾಗಿಲ್ಲ' ಎಂದು ಹೇಳಿದ. ಮಸ್ಕ್ ಪ್ರಸ್ತಾವವನ್ನು ಆಸ್ಟ್ರೇಲಿಯಾ ಸರ್ಕಾರ ಒಪ್ಪಿಕೊಂಡಿತು. 'ಟೆಸ್ಲಾ' ಕಂಪನಿ ಬರೀ 63 ದಿನಗಳಲ್ಲಿ ವಿಶ್ವದ ಮಹಾ ಬ್ಯಾಟರಿಯನ್ನು ತಯಾರು ಮಾಡಿ, ಸರ್ಕಾರಕ್ಕೆ ವಹಿಸಿಕೊಟ್ಟಿತು. ಅದು ವಿಶ್ವದಲ್ಲಿ ಸಂಚಲನ ಸೃಷ್ಟಿ ಮಾಡಿತು. ಗ್ರಿಡ್ ಅಸ್ಥಿರತೆಯಿಂದ ಬಳಲುತ್ತಿದ್ದ ಆಸ್ಟ್ರೇಲಿಯಾ ಸರ್ಕಾರಕ್ಕೆ ಲಕ್ಷಾಂತರ ಡಾಲರ್ ಉಳಿತಾಯವಾಯಿತು.

ಆಸ್ಟ್ರೇಲಿಯಾದ ವಿದ್ಯುತ್ ಗ್ರಿಡ್ ವಿಶ್ವದಲ್ಲೇ ಅತ್ಯಂತ ಆಧುನಿಕ ಮತ್ತು ನವೀನ ಶಕ್ತಿಗೆ ಸೂಕ್ತವಾಗಿರುವ ವ್ಯವಸ್ಥೆಗಳಲ್ಲಿ ಒಂದಾಗಿ ಹೊರಹೊಮ್ಮಿದೆ. ಆ ಗ್ರಿಡ್ ತಾಂತ್ರಿಕ ಸಾಧನೆಯಷ್ಟೇ ಅಲ್ಲ, ನವೀನ ಶಕ್ತಿಯ ಭವಿಷ್ಯಕ್ಕೆ ದಾರಿದೀಪವಾಗಿದೆ. ದೊಡ್ಡ ಪ್ರಮಾಣದ ಬ್ಯಾಟರಿ ಸಂಗ್ರಹಣಾ ಘಟಕಗಳು ಪವನಶಕ್ತಿ, ಸೌರಶಕ್ತಿ ಇತ್ಯಾದಿ ನವೀಕರಿಸಬಹುದಾದ ಇಂಧನವನ್ನು ವಿಶ್ವಾಸಾರ್ಹವಾಗಿ ಬಳಸುವ ದಾರಿಯನ್ನು ತೋರಿಸಿದವು. ಅಮೆರಿಕ, ಯುರೋಪ್, ಭಾರತ ಸೇರಿದಂತೆ ಅನೇಕ ರಾಷ್ಟ್ರಗಳು ಬೃಹತ್ ಬ್ಯಾಟರಿ ಸಂಗ್ರಹಣಾ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಪ್ರಾರಂಭಿಸಿದವು. ದಕ್ಷಿಣ ಆಸ್ಟ್ರೇಲಿಯಾದಲ್ಲಿ ಹುಟ್ಟಿದ ಈ ಮಹಾಯೋಜನೆ ವಿಶ್ವದ ಪರಿಸರ ರಾಜಕೀಯ ಮತ್ತು ಭವಿಷ್ಯದ ಇಂಧನ ವ್ಯವಸ್ಥೆಗಳನ್ನು ರೂಪಿಸುವಲ್ಲಿ ಮಹತ್ತರ ಪಾತ್ರವಹಿಸಿದೆ.

ಮಧ್ಯಪ್ರದೇಶದಲ್ಲಿ ಖಾಸಗಿ ಕಂಪನಿಯೊಂದು ₹2.70ಕ್ಕೆ ಒಂದು ಯೂನಿಟ್ ಸೌರ ಮತ್ತು ಬ್ಯಾಟರಿ ವಿದ್ಯುತ್ ಅನ್ನು ಸರ್ಕಾರಕ್ಕೆ ನೀಡಲು ಮುಂದಾಗಿದೆ. ಭಾರತದ ವಿದ್ಯುತ್ ಸಮಸ್ಯೆಗೆ ಈ ಪ್ರಸ್ತಾವ ಆಶಾದಾಯಕ ಬೆಳವಣಿಗೆಯಾಗಿದೆ.

ಮತ್ತೆ ಅಣೆಕಟ್ಟುಗಳ ವಿಷಯಕ್ಕೆ ಬರೋಣ. ಅರಣ್ಯ ಪ್ರದೇಶಗಳನ್ನು ಮುಳುಗಿಸಿ ಅಣೆಕಟ್ಟುಗಳನ್ನು ನಿರ್ಮಿಸುವುದು ನೀರಾವರಿಗಿರಲಿ ಅಥವಾ ವಿದ್ಯುತ್ ಉತ್ಪಾದನೆಗಿರಲಿ, ಈ ಹೊತ್ತಿನ ಜಾಗತಿಕ ಸಂಕಷ್ಟಗಳಿಗೆ ಪರಿಹಾರವಾಗಲಾರದು. ಕಾವೇರಿ ಅಭಯಾರಣ್ಯ ಪ್ರದೇಶದಲ್ಲಿ 11 ಸಾವಿರ ಎಕರೆ ವನ್ಯಜೀವಿ ನೆಲೆಯನ್ನು ಮುಳುಗಿಸಿ ಮೇಕೆದಾಟು ಅಣೆಕಟ್ಟು ನಿರ್ಮಿಸುವುದು ಮತ್ತಷ್ಟು ಪಾರಿಸರಿಕ ಸಮಸ್ಯೆಗಳಿಗೆ ಕಾರಣವಾಗಲಿದೆ. ಕಳೆದ ಐದು ವರ್ಷಗಳಲ್ಲಿ 99 ಸಾವಿರ ಹೆಕ್ಟೇರ್ ಅರಣ್ಯ ಪ್ರದೇಶವನ್ನು ಅರಣ್ಯೇತರ ಪ್ರದೇಶಕ್ಕೆ ಬಳಸಲಾಗಿದೆ ಎಂದು ಕೇಂದ್ರ ಸಚಿವ ಕೀರ್ತಿವರ್ಧನ್ ಹೇಳಿರುವ ಮಾಹಿತಿಯನ್ನು ನೆನಪಿನಲ್ಲಿ ಇರಿಸಿಕೊಳ್ಳಬೇಕಾಗಿದೆ.

ವಾಚಕರ ವಾಣಿ

ನಗರದ ಚಕ್ರವ್ಯೂಹ: ಮಾನವೀಯತೆ ಬಲಿ

ಬೆಂಗಳೂರಿನ ಬನಶಂಕರಿಯ ಇಟ್ಟಮಡು ಬಳಿ ಪತ್ನಿಯೊಂದಿಗೆ ಬೈಕ್‌ನಲ್ಲಿ ಆಸ್ಪತ್ರೆಗೆ ಹೋಗುತ್ತಿದ್ದ ವೆಂಕಟರಾಮನ್ ಎನ್ನುವ 34 ವರ್ಷದ ವ್ಯಕ್ತಿ, ಹೃದಯಾಘಾತದಿಂದ ರಸ್ತೆಯಲ್ಲೇ ಸಾವನ್ನಪ್ಪಿರುವುದು ದುರದೃಷ್ಟಕರ ಘಟನೆ. ಗಂಡನನ್ನು ಆಸ್ಪತ್ರೆಗೆ ಸಾಗಿಸಲು ಸಹಾಯ ಮಾಡಿ ಎಂದು ಆ ನತದೃಷ್ಟ ಮಹಿಳೆ ಅಂಗಲಾಚುತ್ತಿದ್ದ ಸಿ.ಸಿ. ಟಿ.ವಿ. ದೃಶ್ಯ ಹೃದಯಕಲಕುವಂತಿತ್ತು. ಆ ಕ್ಷಣಕ್ಕೆ ಯಾರಾದರೂ ಸಹಾಯಹಸ್ತ ಚಾಚಿದ್ದರೆ ಅಮೂಲ್ಯವಾದ ಜೀವ ಉಳಿಯುತಿತ್ತೇನೋ? ಸಮಾಜ ಮಾನವೀಯತೆಯಿಂದ ದೂರವಾಗುತ್ತಿದೆ ಎನ್ನುವುದಂತೂ ಸತ್ಯ.

ಎಚ್. ತುಕಾರಾಂ, ಬೆಂಗಳೂರು

'ಗ್ರೀನ್ ಕಾರಿಡಾರ್' ಮಗ್ಗುಲಿನಲ್ಲೇ ಕತ್ತಲು!

ಹೈಟೆಕ್ ಆಸ್ಪತ್ರೆಗಳಿಗೆ ಅಂಗಾಂಗ ಸಾಗಿಸಲು ನೆರವಾಗುವಂತೆ ಮೆಟ್ರೋ ರೈಲಿನ ಒಂದಿಡೀ ಬೋಗಿಯನ್ನು ಮೀಸಲಾಗಿ ಇರಿಸುವ 'ಗ್ರೀನ್ ಕಾರಿಡಾರ್' ಹೆಸರಿನ ವ್ಯವಸ್ಥೆಯಿದೆ. ಮತ್ತೊಂದೆಡೆ, ಆ್ಯಂಬುಲೆನ್ಸ್ ಸಿಗದೆ, ಕಠಿಣಹೃದಯದ ವಾಹನ ಚಾಲಕರೂ ನೆರವಾಗದೆ, ರಸ್ತೆಯಲ್ಲೇ ಪ್ರಾಣಬಿಡುವ ನತದೃಷ್ಟರು! ಹೀಗಿದೆ ಮಹಾನಗರದಲ್ಲಿನ ವಿರೋಧಾಭಾಸಗಳ ಜೀವನ.

ಮಧುಸೂದನ್ ಬಿ.ಎಸ್., ಬೆಂಗಳೂರು

ಕೇಂದ್ರ ಸರ್ಕಾರದ ನಡೆ ನಂಬಲರ್ಹವೇ?

ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಬಂದಾಗಿನಿಂದಲೂ ಸೋನಿಯಾ ಗಾಂಧಿ ಮತ್ತವರ ಕುಟುಂಬದ ಸದಸ್ಯರ ಮೇಲೆ ಭ್ರಷ್ಟಾಚಾರ ಆರೋಪದ ಖಾಸಗಿ ದೂರುಗಳ ಆಧಾರದಲ್ಲಿ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ ಹಾಗೂ ಅವು ನ್ಯಾಯಾಲಯಗಳಿಂದ ತಿರಸ್ಕೃತಗೊಳ್ಳುತ್ತಿವೆ. ಸೋನಿಯಾ ಕುಟುಂಬವನ್ನು ಪ್ರಕರಣಗಳಲ್ಲಿ ಅಲೆಯುವಂತೆ ಮಾಡಿ, ಇಕ್ಕಟ್ಟಿಗೆ ಸಿಲುಕಿಸಲು ಪ್ರಯತ್ನಿಸುತ್ತಿರುವ ಕೇಂದ್ರ ಸರ್ಕಾರ ನ್ಯಾಯಾಲಯಗಳಿಂದ ಮುಖಭಂಗ ಅನುಭವಿಸುತ್ತಿದೆ. ಕನಿಷ್ಠ ಒಂದಾದರೂ ಪ್ರಕರಣದಲ್ಲಿ ಆ ಕುಟುಂಬದ ವಿರುದ್ಧ ತೀರ್ಪು ಬಂದಿದೆಯೇ?

ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ 'ಜಾರಿ ನಿರ್ದೇಶನಾಲಯ' ಸಲ್ಲಿಸಿದ್ದ ಆರೋಪ ಪಟ್ಟಿಯನ್ನು ದೆಹಲಿ ಕೋರ್ಟ್ ತಿರಸ್ಕರಿಸಿದೆ (ಪ್ರ.ವಾ., ಡಿ. 17). ಇಂತಹ ಸಂಸ್ಥೆಗಳನ್ನು ಪೋಷಿಸುತ್ತಿರುವ ಕೇಂದ್ರ ಸರ್ಕಾರದ ನಡೆ ನಂಬಲರ್ಹವೇ?

ರಮೇಶ್, ಬೆಂಗಳೂರು

ಓ ಮಹಾತ್ಮ

ಎಂದೋ ನಿನ್ನ
ಖಾದಿ ಬಿಚ್ಚಿಸಿಕೊಂಡರು!
ಚರಕ ಕಿತ್ತು ಪಕ್ಕಕ್ಕಿಟ್ಟು
ಕನ್ನಡಕ ಬಿಚ್ಚಿಸಿಕೊಂಡರು!
ಕಡೆಗೀಗ ನಿನ್ನನ್ನೇ ಪಕ್ಕಕ್ಕಿಟ್ಟು
ನಿನ್ನೊಂದಿಗಿದ್ದ ರಾಮನನ್ನು
ಮರೆಸಲು ಮುಂದಾಗಿದ್ದಾರೆ!
ನಿನ್ನೊಂದಿಗೆ ಇನ್ನೇನಾದರೂ
ಇದ್ದರೆ ಈಗಲೇ ಹೇಳಿಬಿಡು,
ಇಲ್ಲವೆ ನೀನೇ ಕೊಟ್ಟುಬಿಡು,
ಸತ್ಯ ಅಹಿಂಸೆ ಬಿಟ್ಟು!
ಅವೆರಡನ್ನು ಸ್ವೀಕರಿಸಲು
ಯಾರೂ ಸಿದ್ಧರಿಲ್ಲ!

ಜೆ.ಬಿ. ಮಂಜುನಾಥ, ಪಾಂಡವಪುರ

ಮಕ್ಕಳ ಬೆನ್ನೆಲುಬೇ ದೇಶದ ಬೆನ್ನೆಲುಬು

ಮಕ್ಕಳ ಆರೋಗ್ಯದ ಕುರಿತು ಸ್ಪಷ್ಟ ಮಾರ್ಗಸೂಚಿ ಇದ್ದರೂ, ಬಹುತೇಕ ಶಾಲೆಗಳು ಪಾಲಿಸುತ್ತಿಲ್ಲ. ವಿದ್ಯಾರ್ಥಿಗಳ ಬ್ಯಾಗ್ ತೂಕವು ದೇಹದ ತೂಕದ ಶೇ 10 ಮೀರಬಾರದು ಎನ್ನುವ ನಿಯಮ ಕಾಗದದ ಮೇಲೆ ಉಳಿದಿದೆ. ಸುಮಾರು ಶೇ 50ರಷ್ಟು ಶಾಲಾಮಕ್ಕಳು ಬೆನ್ನು ಮತ್ತು ಕುತ್ತಿಗೆ ನೋವಿನಿಂದ ಬಳಲುತ್ತಿದ್ದಾರೆ. ಶಿಕ್ಷಣ ಇಲಾಖೆ ಈ ವಿಷಯದಲ್ಲಿ ಗಂಭೀರ ಕ್ರಮ ಕೈಗೊಳ್ಳದೆ ಮೌನವಾಗಿದೆ. ಶಾಲೆಗಳ ಮೇಲೆ ನಿಯಮಿತ ಪರಿಶೀಲನೆ ಮತ್ತು ದಂಡ ಕ್ರಮಗಳಿಲ್ಲ. ತರಗತಿ ಮಟ್ಟದಲ್ಲಿ ಬ್ಯಾಗ್ ತೂಕ ಪರಿಶೀಲನೆ ಮಾಡಬಹುದು; ಹಗುರವಾದ ಪುಸ್ತಕಗಳು ಮತ್ತು ಡಿಜಿಟಲ್ ನೋಟ್ಸ್ ಬಳಸಬಹುದಾಗಿದೆ. ಮಗುವಿನ ಬೆನ್ನೆಲುಬು ಸುರಕ್ಷಿತವಾಗಿದ್ದರೆ ಮಾತ್ರ ಅದರ ಭವಿಷ್ಯ ಸುರಕ್ಷಿತ ಹಾಗೂ ದೇಶದ ಬೆನ್ನೆಲುಬೂ ಭದ್ರವಾಗಿರುತ್ತದೆ.

ವಿಜಯಕುಮಾರ್ ಎಚ್.ಕೆ., ರಾಯಚೂರು

ದೇಶದ ಆತ್ಮವನ್ನು ಬದಿಗೆ ಸರಿಸುವ ಯತ್ನ

ಭಾರತದ ಗ್ರಾಮೀಣರಿಗೆ ಆಶಾಕಿರಣವಾಗಿರುವ 'ಮನರೇಗಾ' ಬರೀ ಉದ್ಯೋಗ ಯೋಜನೆಯಲ್ಲ; ಅದು ಸಂವಿಧಾನಾತ್ಮಕ ಹಕ್ಕಿನ ರೂಪ ಪಡೆದ ಸಾಮಾಜಿಕ ನ್ಯಾಯದ ಸಾಧನ. ಈ ಯೋಜನೆಗೆ ಮಹಾತ್ಮ ಗಾಂಧಿ ಹೆಸರು ಜೋಡಿಸಿರುವುದು ಆಕಸ್ಮಿಕವಲ್ಲ. ಗ್ರಾಮಸ್ವರಾಜ್ಯ, ಸ್ವಾವಲಂಬನೆ ಮತ್ತು ದುಡಿಮೆಗೆ ಗೌರವ ನೀಡಿದ ಗಾಂಧೀಜಿಯ ತತ್ವಗಳೇ ಇದರ ಆತ್ಮ. ಈಗ 'ಮನರೇಗಾ' ಹೆಸರನ್ನು ಬದಲಾಯಿಸುವ ಪ್ರಯತ್ನದ ಮೂಲಕ ಮಹಾತ್ಮನ ಹೆಸರನ್ನು ಮರೆಮಾಡುವ ಯತ್ನ ನಡೆಯುತ್ತಿದೆ. ಸರ್ಕಾರದ ನಡೆಯನ್ನು, ಗಾಂಧೀಜಿ ತತ್ತ್ವಗಳನ್ನು ಸಾರ್ವಜನಿಕ ಸ್ಮೃತಿಯಿಂದ ನಿಧಾನವಾಗಿ ದೂರ ಸರಿಸುವ ಪ್ರಯತ್ನವೆಂದು ಹಲವರು ಭಾವಿಸುವುದು ಸಹಜ. ಗಾಂಧೀಜಿ ರಾಷ್ಟ್ರದ ಆತ್ಮ. ಅವರ ಹೆಸರನ್ನು ಯೋಜನೆಗಳಿಂದ ಅಳಿಸುವ ಯತ್ನಗಳು ನಡೆಯುತ್ತಿದ್ದರೆ, ಪ್ರಶ್ನಿಸುವುದು ಜನರ ಪ್ರಜಾಸತ್ತಾತ್ಮಕ ಹಕ್ಕು.

ಹನುಮಂತ ಆರ್.ಸಿ., ಹುನಗುಂದ

ಕೇಂದ್ರದ ಮಲತಾಯಿ ಧೋರಣೆ ನಿಲ್ಲಲಿ

ನಲವತ್ತು ವರ್ಷಗಳ ಹಿಂದೆ, ಕೇಂದ್ರ ಲೋಕಸೇವಾ ಆಯೋಗ ಕರೆದಿದ್ದ ಹುದ್ದೆಯ ಆಕಾಂಕ್ಷಿಯಾಗಿ ದೆಹಲಿಗೆ ಹೋಗಿದ್ದೆ. ಬಿಹಾರದಿಂದ ಬಂದಿದ್ದ ಅಭ್ಯರ್ಥಿಯೊಬ್ಬಾಕೆ, 'ಯೂ ಆರ್ ಫ್ರಮ್...? ಎಂದಿದ್ದಕ್ಕೆ, 'ಕರ್ನಾಟಕ' ಎಂದೆನಷ್ಟೆ. ಆಕೆ, ಕಣ್ಣರಳಿಸಿ 'ಐ ನೊ ಯುವರ್ ಸ್ಟೇಟ್, ಮೋಸ್ಟ್ ಕಲ್ಚರ್ಡ್ ಪೀಪಲ್ ಆರ್ ದೇರ್' ಎಂದು ಉದ್ಗಾರ ತೆಗೆದಿದ್ದಳು. ಇತ್ತೀಚಿನ ವರ್ಷಗಳಲ್ಲಿ ಉತ್ತರದ ರಾಜ್ಯಗಳಿಂದ ವಲಸೆ ಬರುತ್ತಿರುವವರ ಸಂಖ್ಯೆ ಏರುತ್ತಲೇ ಇರುವುದನ್ನು ನೋಡಿದರೆ, ನಮ್ಮ ರಾಜ್ಯ ಈಗಲೂ ತನ್ನ ಅನನ್ಯತೆ ಕಾಪಾಡಿಕೊಂಡಿರುವುದು ಹೆಮ್ಮೆಯ ಸಂಗತಿ. ಅಧಿಕಾರದಲ್ಲಿರುವ ಕೇಂದ್ರ ಸರ್ಕಾರದ ಮಲತಾಯಿ ಧೋರಣೆ ಮಾತ್ರ ಅಸಹನೀಯ.

ಈರಪ್ಪ ಎಂ. ಕಂಬಳಿ, ಬೆಂಗಳೂರು

ಚಿಲಿಪಿಲಿ

ಅಳಿಸಲಾಗುವುದೆ?

'ಮಹಾತ್ಮ ಗಾಂಧಿ' ಪದವನ್ನು ಅಳಿಸಬಹುದು. ಸತ್ಯ, ಪ್ರೇಮ, ಶಾಂತಿ, ಅಹಿಂಸೆ... ಭಾವವನ್ನು ಅಳಿಸಲಾಗುವುದೆ? 'ಹೇ ರಾಮ್' ಎನ್ನುತ್ತಾ ರಾಮನಲ್ಲಿ ಬೆರೆತು ಹೋದ ಜ್ಯೋತಿಯದು, ನಂದಿಸಲಾಗುವುದೆ?

ಸವಿತಾ ನಾಗಭೂಷಣ, ಕವಯಿತ್ರಿ, 'ಫೇಸ್‌ಬುಕ್'ನಿಂದ

ಕಿಡಿನುಡಿ

ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಕೋರ್ಟ್, ಕೇಂದ್ರ ಸರ್ಕಾರದ ಕೆನ್ನೆಗೆ ಬಾರಿಸಿ ಬುದ್ಧಿ ಕಲಿಸಿದೆ. ಇ.ಡಿ, ಸಿಬಿಐ ಸಂಸ್ಥೆಗಳು ಕೇಂದ್ರ ಸರ್ಕಾರದ ಸೀಳುನಾಯಿಗಳ ಹಾಗೆ ವರ್ತಿಸುತ್ತಿವೆ. ವಿರೋಧ ಪಕ್ಷದ ನಾಯಕರನ್ನು ಗುರಿಯಾಗಿಸಿ ಸುಳ್ಳು ಪ್ರಕರಣ ದಾಖಲಿಸುತ್ತಿವೆ

ಕೃಷ್ಣ ಬೈರೇಗೌಡ, ಕಂದಾಯ ಸಚಿವ

25 ವರ್ಷಗಳ ಹಿಂದೆ

ಸೋಮವಾರ, 18-12-2000

• ಗ್ರಾಮಸಭೆ ಕಡ್ಡಾಯ: ಕೇಂದ್ರ ಯೋಜನೆ

ಬೆಂಗಳೂರು, ಡಿ. 17– ಗ್ರಾಮೀಣಾಭಿವೃದ್ಧಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವ ಉದ್ದೇಶದಿಂದ ವರ್ಷಕ್ಕೆ ಕನಿಷ್ಠ ನಾಲ್ಕು ಬಾರಿ ಧಾರ್ಮಿಕ ರೀತಿಯಲ್ಲಿ 'ಗ್ರಾಮಸಭೆ' ನಡೆಸುವುದನ್ನು ಕಡ್ಡಾಯಗೊಳಿಸುವ ಹಾಗೂ ಗ್ರಾಮೀಣ ಅಭಿವೃದ್ಧಿಯಲ್ಲಿ ಸಾರ್ವಜನಿಕರೂ ಪಾಲುದಾರರು ಆಗುವಂತೆ ಮಾಡುವ ರಾಷ್ಟ್ರೀಯ ಯೋಜನೆ ರೂಪಿಸಲು ಕೇಂದ್ರ ಸರ್ಕಾರ ಉದ್ದೇಶಿಸಿದೆ.

ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಎಂ. ವೆಂಕಯ್ಯ ನಾಯ್ಡು ಇಂದು ಇಲ್ಲಿ ಈ ವಿಷಯ ತಿಳಿಸಿದರು.

ಕಲ್ಬುರ್ಗಿ ವಿವಿಗೆ ಬಸವಣ್ಣನ ಹೆಸರು: ಆಗ್ರಹ

ರಾಯಚೂರು, ಡಿ. 17– ಕಲ್ಬುರ್ಗಿ ವಿಶ್ವವಿದ್ಯಾಲಯಕ್ಕೆ ಬಸವಣ್ಣನವರ ಹೆಸರಿಡುವುದು, ಶರಣ ಸಾಹಿತ್ಯ ಸಂಸ್ಕೃತಿಯ ಸಂರಕ್ಷಣೆ, ಕೃಷ್ಣ ಮೇಲ್ದಂಡೆ ಯೋಜನೆಗೆ ತ್ವರಿತ ಕ್ರಮ, ಕಿತ್ತೂರು ರಾಣಿ ಚೆನ್ನಮ್ಮ ಹೆಸರಿನಲ್ಲಿ ರಾಷ್ಟ್ರೀಯ ಪ್ರಶಸ್ತಿ, ಬೆಂಗಳೂರಿನಲ್ಲಿ ಮಾಜಿ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪನವರ ಮೂರ್ತಿ ಪ್ರತಿಷ್ಠಾಪನೆ ಮೊದಲಾದ ಬೇಡಿಕೆಗಳನ್ನು ಸರ್ಕಾರಕ್ಕೆ ಸಲ್ಲಿಸಿ ಬೇಗನೇ ಈಡೇರಿಸಬೇಕೆಂಬ ನಿರ್ಣಯವನ್ನು ಅಖಿಲ ಭಾರತ 6ನೇ ಶರಣ ಸಾಹಿತ್ಯ ಸಮ್ಮೇಳನದ ಶರಣಾಧಿವೇಶನ ಸರ್ವಾನುಮತದಿಂದ ಅಂಗೀಕರಿಸಿತು.

75 ವರ್ಷಗಳ ಹಿಂದೆ

ಸೋಮವಾರ, 18-12-1950

• 'ಸಂಜೀವಿನಿ' (?) ನುಂಗಿದರೂ ರೋಗ ಬಿಡಲಿಲ್ಲ

ಕಟಕ್, ಡಿ. 17– 'ಸರ್ವರೋಗ ನಿವಾರಣೆ' ಮದ್ದಿಗಾಗಿ ಜನ ಬರುವುದನ್ನು ತಡೆಯಬೇಕೆಂಬುದಾಗಿ ಈ ದಿನ ಒರಿಸ್ಸಾದ ಸಾರ್ವಜನಿಕ ಸಂಪರ್ಕ ಶಾಖಾ ಸಚಿವ ಪ್ರವಟಕ ಮೋಹನ ಪ್ರಧಾನ್‌ರವರು ನೆರೆ ಪ್ರಾಂತ್ಯಗಳ ಸಾರ್ವಜನಿಕರಿಗೂ ಪತ್ರಿಕೆಗಳಿಗೂ ವಿನಂತಿ ಮಾಡಿಕೊಂಡರು.

ಕುರುಬ ಹುಡುಗನ ವೈದ್ಯ ಪ್ರತೀತಿಗೆ ಮರುಳಾಗಿ ರಿಂಕಲ್ವೆಗೆ ಬಂದ ಯಾತ್ರಿಕರು ಹಾಗೂ ರೋಗಿಗಳಲ್ಲಿ ಅನೇಕರು ಕಾಲರಾದಿಂದ ಮೃತರಾದರೆಂದೂ ತಿಳಿಸಿದರು. ಔಷಧಿ ನುಂಗಿದ ಕೆಲವರನ್ನು ರೋಗ ನುಂಗಿತೆಂದರು.

• 26 ಮಂದಿಗೆ ಗುಂಡೇಟು

ಸಿಯೋಲ್, ಡಿ. 17– ದಕ್ಷಿಣ ಕೊರಿಯದ ಮಹಿಳೆಯೊಬ್ಬಳನ್ನು ಕಳೆದ ಶುಕ್ರವಾರ ಬಲಪಕ್ಷದ ಕೊರಿಯಾ ಯುವಜನ ರಕ್ಷಣಾ ಸಂಘದವರು ಕೊಲೆ ಮಾಡಲೆತ್ನಿಸುತ್ತಿದ್ದಾಗ, ಅಮೆರಿಕದ ಕಾಲಾಳು ದಳದ ಪಹರೆಯವರು ಮಧ್ಯ ಹೋಗಿ ತಪ್ಪಿಸಿದರು. ಆದರೆ, ಇವರು ಬರುವ ಹೊತ್ತಿಗೆ 26 ಮಂದಿಯನ್ನು ವಧೆ ಮಾಡಲಾಗಿತ್ತು.

ಚುರುಮುರಿ

ಪಿಪಿಎಲ್ ಹರಾಜು!

• ಗುರು ಪಿ.ಎಸ್.

'ಐಪಿಎಲ್ ಆಟಗಾರರನ್ನು ಹರಾಜು ಹಾಕುವಂತೆ ನಮ್ ರಾಜಕಾರಣಿಗಳನ್ನೂ ಹರಾಜು ಹಾಕಿದರೆ ಹೇಗಿರುತ್ತೆ ರೀ...' ಪೇಪರ್ ಓದುತ್ತಾ ಕೇಳಿದಳು ಹೆಂಡತಿ.

'ಅವರೇ ಕೋಟಿ ಕುಳಗಳು. ಇನ್ನು, ಅವರನ್ನು ಹರಾಜಿನಲ್ಲಿ ಕೊಂಡುಕೊಳ್ಳೋ ಶಕ್ತಿ ಯಾರಿಗಮ್ಮ ಇರುತ್ತೆ?'

'ಇದು ಉಲ್ಟಾ ಹರಾಜು ಪ್ರಕ್ರಿಯೆ ರೀ... ಹರಾಜು ಹಾಕಿಸ್ಕೊಳೋಕೆ ಬರೋರೇ ದುಡ್ಡು ಕೊಡಬೇಕು. ಯಾರು ಜಾಸ್ತಿ ದುಡ್ಡು ಕೊಡುತ್ತಾರೋ ಅವರೇ ನಮ್ಮ ನಾಯಕ' ಎಂದಳು ಮನೆಯ ಅಧಿನಾಯಕಿ.

'ಆಯ್ತು. ಅವರನ್ನೆಲ್ಲ ಹರಾಜಿನಲ್ಲಿ ಆಯ್ಕೆ ಮಾಡಿಕೊಂಡು ಏನ್ ಮಾಡಬೇಕಮ್ಮ'.

'ಇದೇನ್ರಿ ಹೀಗೆ ಕೇಳ್ತೀರಿ... ನಮ್ಮನ್ನ ಆಳೋರು ಬೇಡ್ವಾ? ನ್ಯಾಷನಲ್ ಲೆವೆಲ್‌ನಲ್ಲಿ ಜಾಸ್ತಿ ದುಡ್ಡು ಕೊಟ್ಟೋರು ಪ್ರಧಾನಿ. ಸ್ಟೇಟ್ ಲೆವೆಲ್‌ನಲ್ಲಿ ಹೆಚ್ಚು ದುಡ್ಡು ಕೊಟ್ಟೋರು ಮುಖ್ಯಮಂತ್ರಿ. ನಂತರ ಅವರವರು ಕೊಟ್ಟ ದುಡ್ಡಿನ ಅನುಸಾರ ಉಪಮುಖ್ಯಮಂತ್ರಿ, ಮಂತ್ರಿ, ಶಾಸಕ, ಹೀಗೆ ಹುದ್ದೆಗಳನ್ನ ಹಂಚುತ್ತಾ ಹೋಗೋದು...'

'ಅದ್ ಸರಿ. ಕ್ರಿಕೆಟ್ ಆಟಗಾರರನ್ನ ಅವರವರು ಹೊಂದಿರೋ ಟ್ಯಾಲೆಂಟ್ ಅನುಸಾರ ಸೆಲೆಕ್ಟ್ ಮಾಡ್ತಾರೆ. ಇಲ್ಲಿ ರಾಜಕಾರಣಿಗಳ ಆಯ್ಕೆ ಮಾನದಂಡವೇನು? ತುಂಬಾ ಜನ ದೊಡ್ಡ ಮೊತ್ತ ಕೊಡೋಕೆ ತಯಾರಿದ್ದರೆ, ಯಾರನ್ನ ಸೆಲೆಕ್ಟ್ ಮಾಡ್ಕೊಬೇಕು?' ಎಂದೆ ಗೊಂದಲದಿಂದ.

'ಸಿಂಪಲ್. ಇದು, ಪೊಲಿಟಿಕಲ್ ಪ್ರೀಮಿಯರ್ ಲೀಗ್. ಅಂದ್ರೆ ಪಿಪಿಎಲ್. ಮೊದಲ ಅರ್ಹತೆ, ಎಷ್ಟು ಸಲ ಜೈಲಿಗೆ ಹೋಗಿ ಬಂದಿದ್ದಾರೆ ಅನ್ನೋದು. ಎರಡನೆಯದ್ದು, ಎಷ್ಟು ಬಾರಿ ಐಟಿ–ಇಡಿ ದಾಳಿಗೆ ಒಳಗಾಗಿದ್ದಾರೆ ಅನ್ನೋದು. ಮೂರನೆಯದು, ಎಷ್ಟು ಪಕ್ಷಗಳನ್ನ ಬದಲಾಯಿಸಿದ್ದಾರೆ ಅನ್ನೋದರ ಜೊತೆಗೆ, ಹೆಚ್ಚು ಕ್ರಿಮಿನಲ್ ಕೇಸ್ ಯಾರ ಮೇಲಿದೆ ಅನ್ನೋದನ್ನ ನೋಡಿ, ಈ ಎಲ್ಲ ವಿಭಾಗದಲ್ಲಿ ಯಾರ ಸ್ಕೋರ್ ಹೆಚ್ಚಿರುತ್ತೋ ಅವರೇ ಎಲಿಜಬಲ್'.

'ಇಷ್ಟು ದುಡ್ಡು ಕೊಟ್ಟು ಆಯ್ಕೆಯಾದವರಿಗೇನು ಲಾಭ?'

'ಮುಂದೆ ದೇಶವನ್ನೇ ಮಾರ್ತಾರಲ್ರೀ, ಇನ್ನೇನ್ ಲಾಭ ಬೇಕು ಅವರಿಗೆ' ಎನ್ನುತ್ತಾ ಗಂಭೀರವಾಗಿ ಪೇಪರ್ ಓದತೊಡಗಿದಳು.

ಸಂಗತ

ಐಸ್ಲೆಂಡ್‌ನಲ್ಲೂ ಸೊಳ್ಳೆ! ಅಪಾಯದ ಕರೆಗಂಟೆ!

ಸೊಳ್ಳೆಗಳಿಲ್ಲದ ದೇಶ ಎನ್ನುವ ಹೆಗ್ಗಳಿಕೆಯ ಐಸ್ಲೆಂಡ್‌ನಲ್ಲೂ ಸೊಳ್ಳೆಗಳು ಕಾಣಿಸಿವೆ. ಈ ವಿದ್ಯಮಾನ ಭೂಮಿಯ ಜ್ವರ ತೀವ್ರವಾಗಿರುವುದನ್ನು ಸೂಚಿಸುವಂತಿದೆ.

• ಉದಯ ಗಾಂವಕಾರ

ಸೊಳ್ಳೆಗಳಿಲ್ಲದ ದೇಶ ಯಾವುದು? ರಸಪ್ರಶ್ನೆ ಕಾರ್ಯಕ್ರಮಗಳಲ್ಲಿ ಪುನರಾವರ್ತನೆ ಆಗುವ ಈ ಕುತೂಹಲಕಾರಿ ಪ್ರಶ್ನೆಗೆ ಉತ್ತರ: ಐಸ್ಲೆಂಡ್! ಆದರೆ, ಇತ್ತೀಚಿನ ಬೆಳವಣಿಗೆಗಳ ಪ್ರಕಾರ, ಐಸ್ಲೆಂಡ್ ಕೂಡ ಸೊಳ್ಳೆಗಳಿಲ್ಲದ ಸ್ಥಳವಲ್ಲ!

ಈ ವರ್ಷದ ಅಕ್ಟೋಬರ್ 16ರಂದು ಐಸ್ಲೆಂಡ್‌ನಲ್ಲೂ ಸೊಳ್ಳೆಗಳು ಕಂಡುಬಂದವು. ಆ ಮೂಲಕ ಸೊಳ್ಳೆಗಳ ಜಾಗತೀಕರಣವೂ ಸಾಧ್ಯವಾಗಿದೆ ಎಂದು ವಿನೋದ ಮಾಡಬಹುದು. ಆದರೆ, ಈ ಬೆಳವಣಿಗೆಯೇನೂ ತಮಾಷೆಯ ಸಂಗತಿಯಲ್ಲ.

ಬೋರ್ನ್ ಹಿಜಾಲ್ಸ್‌ಸನ್ ಎಂಬ ಕೀಟಾಸಕ್ತ ಎಂದಿನಂತೆ ತನ್ನ ಉದ್ಯಾನದಲ್ಲಿ ಅಲ್ಲಲ್ಲಿ ಕೆಂಪುವೈನಿನಲ್ಲಿ ಅದ್ದಿದ ಹಗ್ಗಗಳನ್ನು ತೂಗುಬಿಟ್ಟು, ಯಾವುದಾದರೂ ವಿಶಿಷ್ಟ ಕೀಟಗಳು ಬರಬಹುದೇ ಎಂದು ಕಾಯುತ್ತಿದ್ದರು. ಐಸ್ಲೆಂಡ್‌ನ ವಿಶಿಷ್ಟ ಪರಿಸರದಲ್ಲಿ ಬದುಕುವ ವಿಭಿನ್ನ ಹಾತೆಗಳಿಗಾಗಿ ಬೋರ್ನ್ 'ಗಾಳ' ಹಾಕಿದ್ದರು. ಆದರೆ, ಅವರ ಗಾಳಕ್ಕೆ ಹಾತೆಗಳು ಬೀಳಲಿಲ್ಲ. ಆ ದಿನ, ಸಂಜೆಗತ್ತಲಲ್ಲಿ ಎಲ್ಲಿಂದಲೋ ಹಾರಿಬಂದ ಮೂರು ಸೊಳ್ಳೆಗಳು ಹಗ್ಗದ ಮೇಲೆ ಬಂದು ಕುಳಿತವು. ಅರೆಕ್ಷಣದಲ್ಲಿಯೇ ಬೋರ್ನ್ ಅವರಿಗೆ, ಎಂತಹ ವಿಚಿತ್ರ ದೃಶ್ಯವನ್ನು ನೋಡುತ್ತಿರುವೆ ಎಂಬುದರ ಅರಿವಾಯಿತು. ಅಸಾಧಾರಣ ಘಟನೆಯೊಂದು ಐಸ್ಲೆಂಡ್‌ನಲ್ಲಿ ಸಂಭವಿಸಿದ್ದಕ್ಕೆ ಅವರು ಸಾಕ್ಷಿಯಾಗಿದ್ದರು.

ಸೊಳ್ಳೆಯೊಂದು ಕಿವಿಯ ಪಕ್ಕದಲ್ಲೇ ಸಶಬ್ದವಾಗಿ ಹಾರಾಡುವುದು ಜಗತ್ತಿನ ಯಾವುದೇ ಭಾಗದ ಜನರಿಗೆ ಸಾಮಾನ್ಯವಾಗಿ ಆಶ್ಚರ್ಯದ ಸಂಗತಿಯಲ್ಲ. ಸೊಳ್ಳೆಗಳಿಂದಾಗಿ, ಡೆಂಗೆ, ಮಲೇರಿಯಾ, ಚಿಕೂನ್ ಗುನ್ಯಾದಂತಹ ಕಾಯಿಲೆಗಳಿಗೆ ತುತ್ತಾಗಿ ಉಷ್ಣವಲಯದ ಲಕ್ಷಾಂತರ ಜನರು ಜೀವಕಳೆದುಕೊಳ್ಳುವುದು ಏಷ್ಯಾದ ದೇಶಗಳಲ್ಲಿ ಸಾಮಾನ್ಯ ಸಂಗತಿ. ಆದರೆ, ಐಸ್ಲೆಂಡ್ ಕಥೆಯೇ ಬೇರೆ. ಅಲ್ಲಿ ಹಿಂದೆಂದೂ ಸೊಳ್ಳೆಗಳನ್ನು ನೋಡಿದವರಿರಲಿಲ್ಲ. ಸ್ವಲ್ಪವೂ ತಡಮಾಡದೆ ಬೋರ್ನ್ ಆ ಮೂರು ಸೊಳ್ಳೆಗಳನ್ನು ಹಿಡಿದು ಜಾರಿನಲ್ಲಿರಿಸಿದರು. ಕೂಡಲೇ ಐಸ್ಲೆಂಡಿನ 'ನ್ಯಾಚುರಲ್ ಸೈನ್ಸ್' ಸಂಸ್ಥೆಯ ಮ್ಯಾಥಿಯಾಸ್ ಆಲ್ಫ್ರೆಡ್ಸನ್ ಅವರಿಗೆ ಕರೆಮಾಡಿದರು. ಕ್ಯುಲಿಸೇಟಾ ಎನ್ಯುಲೇಟಾ ಎಂಬ ಪ್ರಬೇಧಕ್ಕೆ ಸೇರಿರುವ ಆ ಮೂರು ಸೊಳ್ಳೆಗಳನ್ನು ಅವರು ಗುರುತಿಸಿ ಖಾತ್ರಿಪಡಿಸಿದರು. ಐಸ್ಲೆಂಡಿಗೆ ಸೊಳ್ಳೆ ಬಂದಿರುವ ಆಘಾತಕಾರಿ ಸುದ್ದಿಯನ್ನು ಅಧಿಕೃತವಾಗಿ ಘೋಷಿಸಿದರು.

ಐಸ್ಲೆಂಡಿನಲ್ಲಿ ಸೊಳ್ಳೆ ಕಾಣಿಸಿಕೊಂಡ ಸುದ್ದಿ ಆ ದೇಶಕ್ಕಷ್ಟೇ ಅಲ್ಲ; ಇಡೀ ವಿಶ್ವಕ್ಕೆ ಆಘಾತ ಉಂಟುಮಾಡುವ ವಿದ್ಯಮಾನ. ಆ ಆಘಾತಕ್ಕೆ ಕಾರಣ, ಸೊಳ್ಳೆಗಳು ಅಲ್ಲಿನ ಜನರಿಗೆಲ್ಲ ಕಾಯಿಲೆಗಳನ್ನು ಉಂಟುಮಾಡಬಹುದು ಎಂಬ ಭಯವಲ್ಲ. ಇದುವರೆಗೂ ಅವಶ್ಯಕತೆ ಎನಿಸದಿದ್ದ ಸೊಳ್ಳೆ ನಿರೋಧಕಗಳು ಇನ್ನು ಮುಂದೆ ದಿನಬಳಕೆ ವಸ್ತುವಾಗಬಹುದೆಂಬ ಕಾರಣವೂ ಅಲ್ಲ. ಇನ್ನು ಸೊಳ್ಳೆಪರದೆಯೊಳಗೆ ಮಲಗಬೇಕಾದ ಸ್ಥಿತಿ ತಲೆದೋರಬಹುದು ಎಂಬ ಭಯವೂ ಅಲ್ಲ. ಆಘಾತವಾಗಿರುವುದು, ಮನುಷ್ಯ ಇತಿಹಾಸವು ಎಂದೂ ಕಾಣದ ಇಂತಹ ಸಂದರ್ಭ ಉಂಟಾಗಲು ಕಾರಣ ಆಗಿರುವ ಬದಲಾವಣೆಗಳು ಮತ್ತು ಅದರ ಪರಿಣಾಮಗಳ ಬಗ್ಗೆ.

ಅಭಿವೃದ್ಧಿಯ ಹೆಸರಲ್ಲಿ, ಐಷಾರಾಮದ ನೆಪದಲ್ಲಿ ನಾವು ಸೃಷ್ಟಿಸುತ್ತಿರುವ ಇಂಗಾಲ ಈಗ ಭೂಮಿಯ ವಾತಾವರಣವನ್ನು ಗಾಜಿನ ಮನೆಯಾಗಿಸಿದೆ. ಸೂರ್ಯನ ಕಿರಣಗಳು ಇಲ್ಲಿಗೆ ಪ್ರವೇಶಿಸಿ ಎಲ್ಲವನ್ನೂ ಬೆಚ್ಚಗೆ ಮಾಡುವುದಷ್ಟೇ ಅಲ್ಲ, ಆ ಶಾಖ ಇಲ್ಲೇ ಉಳಿದುಕೊಳ್ಳುತ್ತದೆ. ಭೂಮಿ ಬಿಸಿಯೇರುವ ಈ ವಿದ್ಯಮಾನ ಐಸ್ಲೆಂಡ್ ಅನ್ನೂ ಬಿಟ್ಟಿಲ್ಲ. ಹಾಗೆ ನೋಡಿದರೆ, ಬೇರೆ ಸ್ಥಳಗಳಿಗಿಂತ ಅಲ್ಲಿಗೇ ಹೆಚ್ಚು ತಟ್ಟಿದೆ. ಸಾವಿರಾರು ವರ್ಷಗಳ ಪರ್ಮಾಫ್ರಾಸ್ಟ್ ಶಿಥಿಲಗೊಂಡು ನೆಲ ಕಾಣುತ್ತಿದೆ. ಭೂಮಿ ಬೆಚ್ಚಗಾಗುವ ಜಾಗತಿಕ ಸರಾಸರಿಯನ್ನೂ ಮೀರಿ ಐಸ್ಲೆಂಡ್ ಕ್ಷಿಪ್ರವಾಗಿ ಬೆಚ್ಚಗಾಗುತ್ತಿದೆ. ಸೊಳ್ಳೆಗಳಿಗೆ ಚಕ್ರಾಧಿಪತ್ಯವನ್ನು ಸ್ಥಾಪಿಸಲು ಇನ್ನೊಂದು ಸಾಮ್ರಾಜ್ಯ ಕಾಣಿಸಿದೆ!

ಹೆಸರೇ ಹೇಳುವಂತೆ ಐಸ್ಲೆಂಡ್‌ನ ಭೂಮಿ ಶಾಶ್ವತ ಹೆಪ್ಪುಗಟ್ಟಿದ ಪರ್ಮಾಫ್ರಾಸ್ಟಿನಿಂದ ಆಚ್ಛಾದಿತ. ಅಲ್ಲಿನ ತಾಪಮಾನವು ಚಳಿಗಾಲದಲ್ಲಿ ಮೈನಸ್ ಎರಡು ಡಿಗ್ರಿ ಸೆಲ್ಸಿಯಸ್ ಇದ್ದರೆ, ಬೇಸಿಗೆಯಲ್ಲಿ ಅಬ್ಬಬ್ಬಾ ಎಂದರೆ ಹತ್ತು ಡಿಗ್ರಿ ಸೆಲ್ಸಿಯಸ್‌ವರೆಗೆ ಇರುವುದು ಸಾಮಾನ್ಯ. ಅಂಥ ಕೊರೆಯುವ ಚಳಿಯಲ್ಲಿ ಸೊಳ್ಳೆಗಳು ಬದುಕುಳಿಯಲಾರವು. ಆ ಕಾರಣಕ್ಕಾಗಿಯೇ ಅಂಟಾರ್ಟಿಕಾದಂತೆ ಐಸ್ಲೆಂಡಿನಲ್ಲೂ ಇತ್ತೀಚಿನವರೆಗೂ ಸೊಳ್ಳೆಗಳಿರಲಿಲ್ಲ.

ಐಸ್ಲೆಂಡಿನ ಜನಸಂಖ್ಯೆ ಕೇವಲ ನಾಲ್ಕು ಲಕ್ಷ; ನಮ್ಮ ಗದಗ, ದಾವಣಗೆರೆ ಮುಂತಾದ ಸಣ್ಣ ನಗರಗಳ ಜನಸಂಖ್ಯೆಯಷ್ಟು. ವಿಸ್ತೀರ್ಣದಲ್ಲಿ ಅದು ತೆಲಂಗಾಣ ರಾಜ್ಯಕ್ಕಿಂತ ತುಸು ಚಿಕ್ಕದು. ಅಂದಾಜು ಒಂದು ಲಕ್ಷ ಚದರ ಕಿಲೋಮೀಟರಿನ ಪುಟ್ಟ ಭೂಭಾಗವದು. ಆ ದೇಶದ ರಾಷ್ಟ್ರೀಯ ಉತ್ಪನ್ನದ ನೂರಕ್ಕೆ ನಲವತ್ತು ಭಾಗ ಪ್ರವಾಸೋದ್ಯಮದಿಂದ ದೊರೆಯುತ್ತದೆ. ಇಲ್ಲಿನ ವಿಶೇಷ ಭೌಗೋಳಿಕ ಸನ್ನಿವೇಶದ ಕಾರಣಕ್ಕಾಗಿ ಜಗತ್ತಿನ ಬೇರೆ ಬೇರೆ ಭಾಗದ ಜನ ಬರುತ್ತಾರೆ. ಇಲ್ಲಿಗೆ ಜನರು ಎಲ್ಲಿಂದಲೇ ಬರಲಿ, ಅವರೊಡನೆ ಅವರ ಆಪ್ತೇಷ್ಟರನ್ನೂ ಕರೆತರಲಿ, ಸೊಳ್ಳೆಗಳಂತೂ ಇದುವರೆಗೂ ಅಲ್ಲಿಗೆ ಬಂದಿರಲಿಲ್ಲ.

ಈಗಲ್ಲಿ ಸೊಳ್ಳೆಗಳು ಬಂದಿವೆ. ಭೂಮಿಯ ಮೇಲಿರುವ ಸಕಲ ಜೀವಿಗಳಿಗೂ ಗಂಡಾಂತರ ಎದುರಾಗಿದೆ ಎಂಬ ಮತ್ತೊಂದು ಸ್ಪಷ್ಟ ಸೂಚನೆಯನ್ನು ಪ್ರಕೃತಿ ನೀಡಿದೆ. ಆದರೆ, ಇಂತಹ ಸಾವಿರಾರು ಎಚ್ಚರಿಕೆಗಳನ್ನು ಅಲಕ್ಷಿಸಿ ನಾವು ಭೂಮಂಡಲವನ್ನೇ ಅಪಾಯದ ಅಂಚಿಗೆ ತಂದು ನಿಲ್ಲಿಸಿದ್ದೇವೆ. ಹೀಗಿರುವಾಗ ಸೊಳ್ಳೆ ನಮ್ಮನ್ನು ಎಚ್ಚರಿಸುವುದೆ?

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಶಿವಮೊಗ್ಗ, ಚಿಕ್ಕಮಗಳೂರು, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕೆಎಫ್‌ಡಿ

ಮಂಗನ ಕಾಯಿಲೆ ಮಲೆನಾಡಿನಲ್ಲಿ ಆತಂಕದ ಛಾಯೆ

ಸಾಮಾನ್ಯವಾಗಿ ಚಳಿಗಾಲ ಅಂತ್ಯವಾಗಿ, ಬಿಸಿಲು ಹೆಚ್ಚಾಗುವುದರೊಂದಿಗೆ ಮಲೆನಾಡಿನಲ್ಲಿ ಮಂಗನ ಕಾಯಿಲೆ ವ್ಯಾಪಕವಾಗುತ್ತದೆ. ಆದರೆ, ಈ ಬಾರಿ ಚಳಿಗಾಲದಲ್ಲೇ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಕಾಯಿಲೆ ಹಲವರನ್ನು ಬಾಧಿಸುತ್ತಿದೆ. ರಾಜ್ಯದಲ್ಲಿ ಕೆಎಫ್‌ಡಿ ಪತ್ತೆಯಾಗಿ 68 ವರ್ಷ ಕಳೆದರೂ ಅದಕ್ಕೆ ಸರಿಯಾದ ಚಿಕಿತ್ಸೆ ಇಲ್ಲ. ಪ್ರಸ್ತುತ ರಾಜ್ಯದ ನಾಲ್ಕು ಜಿಲ್ಲೆಗಳಲ್ಲಿ ಮಾತ್ರವೇ ಈ ಕಾಯಿಲೆ ಕಾಣಿಸಿಕೊಳ್ಳುತ್ತಿದೆ. ಇಲ್ಲಿಯವರೆಗೂ ಈ ಕಾಯಿಲೆ ತಡೆಗೆ ಬಳಕೆಯಲ್ಲಿದ್ದ ಲಸಿಕೆಯು ಇತ್ತೀಚಿನ ವರ್ಷಗಳಲ್ಲಿ ಕೆಲಸ ಮಾಡುತ್ತಿಲ್ಲ. ಹೊಸ ಲಸಿಕೆಯ ಪ್ರಯೋಗಗಳು ಇನ್ನೂ ನಡೆಯುತ್ತಿದ್ದು, ಮಲೆನಾಡಿಗರು ಆತಂಕಗೊಂಡಿದ್ದಾರೆ

• ವೆಂಕಟೇಶ ಜಿ.ಎಚ್.

ಮಲೆನಾಡಿನಲ್ಲಿ ಈ ಬಾರಿ ಬೇಸಿಗೆ ಆರಂಭವಾಗುವ ಮುನ್ನವೇ ಕೆಎಫ್‌ಡಿ (ಕ್ಯಾಸನೂರು ಫಾರೆಸ್ಟ್ ಡಿಸೀಸ್- ಮಂಗನ ಕಾಯಿಲೆ) ಕಾಣಿಸಿಕೊಂಡಿದೆ. ಡಿ.1ರಿಂದ 17ರವರೆಗೆ ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ 10 ಮಂದಿಗೆ ಕೆಎಫ್‌ಡಿ ಬಾಧಿಸಿದೆ. 36 ಮಂಗಗಳು ಸತ್ತಿವೆ. ಚಳಿ ಕರಗಿ ಬಿಸಿಲು ಹೆಚ್ಚುತ್ತಿದ್ದಂತೆಯೇ ಕಾಯಿಲೆ ವ್ಯಾಪಕಗೊಳ್ಳುತ್ತದೆ. ಹೀಗಾಗಿ ಶಿವಮೊಗ್ಗ, ಚಿಕ್ಕಮಗಳೂರು, ಉತ್ತರ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಅರಣ್ಯದಂಚಿನ ಗ್ರಾಮಗಳಲ್ಲಿ ಆತಂಕದ ಛಾಯೆ ಆವರಿಸಿದೆ.

ಆರೋಗ್ಯ ಇಲಾಖೆಯೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಜನಜಾಗೃತಿ ಆರಂಭಿಸಿದ್ದು, ಡೆಪಾ (DEPA) ತೈಲ ವಿತರಣೆ ಮಾಡುತ್ತಿದೆ. ರೋಗ ಬಾಧಿತರಿಗೆ ವೈದ್ಯಕೀಯ ನೆರವಿಗೆ ಸಿದ್ಧತೆ ಆರಂಭಿಸಿದೆ.

ಏನಿದು ಕೆಎಫ್‌ಡಿ?: ಕೆಎಫ್‌ಡಿ ಮೊದಲ ಬಾರಿಗೆ 1957ರಲ್ಲಿ ಸೊರಬ ತಾಲ್ಲೂಕಿನ ಕ್ಯಾಸನೂರಿನಲ್ಲಿ ಪತ್ತೆಯಾಗಿತ್ತು. ಹೀಗಾಗಿ ವೈದ್ಯಕೀಯ ಪರಿಭಾಷೆಯಲ್ಲಿ ಇದು ಕ್ಯಾಸನೂರು ಕಾಡಿನ ಕಾಯಿಲೆ. ಆದರೆ ಆಡುಭಾಷೆಯಲ್ಲಿ ಇದು ಮಂಗನ ಕಾಯಿಲೆ. 'ರಷ್ಯನ್ ಎನ್‌ಸಫಲೈಟಿಸ್' ಹೆಸರಿನ ವೈರಸ್‌ನಿಂದ ಈ ಕಾಯಿಲೆ ಬರುತ್ತದೆ. ಮಲೆನಾಡಿನ ಕಾಡಿಗೆ ಸೈಬೀರಿಯಾ ಭಾಗದಿಂದ ಬಂದ ಯಾವುದೋ ವಲಸೆ ಹಕ್ಕಿಯ ಮೈಯಲ್ಲಿ ಈ ವೈರಸ್ ಹೊತ್ತ ಉಣ್ಣೆ (ಉಣುಗು) ಮಲೆನಾಡಿಗೆ ಬಂದಿರಬಹುದು ಎಂಬುದು ವಿಜ್ಞಾನಿಗಳ ಊಹೆ.

ರೋಗದ ಲಕ್ಷಣಗಳೇನು?: ಮೊದಲ ಹಂತದಲ್ಲಿ ಮೂರರಿಂದ ಎಂಟು ದಿನ ಜ್ವರ, ಕತ್ತಿನ ಹಿಂಭಾಗ, ಸ್ನಾಯುಗಳಲ್ಲಿ ನೋವು ಜೊತೆಗೆ ತಲೆನೋವು ಕಾಣಿಸಿಕೊಳ್ಳುತ್ತದೆ. ರೋಗಲಕ್ಷಣ ಆಧರಿಸಿ ವೈದ್ಯರು ಔಷಧಿ ಕೊಟ್ಟು ರೋಗಿ ಗುಣಮುಖರಾದರೂ ವಾರದ ಅಂತರದಲ್ಲಿಯೇ ಎರಡನೇ ಹಂತದ ಲಕ್ಷಣಗಳು ಬಾಧಿಸುತ್ತವೆ. ಎರಡನೇ ಹಂತದಲ್ಲಿ ವಿಪರೀತ ಜ್ವರ, ತಲೆನೋವು, ಕಣ್ಣು ಕೆಂಪಾಗುವುದು, ನಿಶ್ಶಕ್ತಿ, ಕ್ಷೋಭೆ, ರಕ್ತಸ್ರಾವ, ಪ್ರಜ್ಞಾಹೀನತೆ ಉಂಟಾಗುತ್ತದೆ. ಈ ಹಂತದಲ್ಲಿ ಸೂಕ್ತ ಚಿಕಿತ್ಸೆ ದೊರೆಯದಿದ್ದಲ್ಲಿ ಸಾವು ಬರಬಹುದು.

ಕೆಎಫ್‌ಡಿಗೆ ಕಾಡಂಚಿನ ತೋಟಗಳಲ್ಲಿ ಕೆಲಸ ಮಾಡುವ ಕಾರ್ಮಿಕರೇ ಶೇ 50ರಿಂದ 60ರಷ್ಟು ತುತ್ತಾಗುತ್ತಿದ್ದಾರೆ. ಇವರಲ್ಲಿ ಅತಿಯಾಗಿ ಮದ್ಯಪಾನ–ತಂಬಾಕು ಸೇವನೆ ಚಟ, ಪೌಷ್ಟಿಕಾಂಶದ ಕೊರತೆ ಇದ್ದವರಲ್ಲಿ ರೋಗ ನಿರೋಧಕ ಶಕ್ತಿ ಕುಂಠಿತವಾಗಿ ಸಾವಿಗೀಡಾಗುತ್ತಿದ್ದಾರೆ. ಅವರಲ್ಲಿ ಮಹಿಳೆಯರ ಸಾವಿನ ಪ್ರಮಾಣ ಹೆಚ್ಚಿದೆ. ಮುಟ್ಟಿನ ದಿನಗಳಲ್ಲಿ ಕಾಯಿಲೆ ಬಾಧಿಸಿದರೆ ಅತಿಹೆಚ್ಚು ರಕ್ತಸ್ರಾವ ಆಗುತ್ತದೆ. ಋತುಚಕ್ರದ ಸ್ರಾವ ನಿಲ್ಲಿಸುವುದು ಕಷ್ಟ. ಕೊನೆಗೆ ರಕ್ತಹೀನತೆಯಿಂದ ಸಾವಿಗೀಡಾಗುತ್ತಾರೆ.

2 ವರ್ಷದಲ್ಲಿ 22 ಸಾವು

ಕಳೆದ ವರ್ಷ (2024) ಶಿವಮೊಗ್ಗ ಸೇರಿದಂತೆ ನಾಲ್ಕು ಜಿಲ್ಲೆಗಳಲ್ಲಿ 303 ಕೆಎಫ್‌ಡಿ ಪ್ರಕರಣಗಳು ವರದಿಯಾಗಿದ್ದವು. ಈ ವರ್ಷ 186 ಪ್ರಕರಣಗಳು ದೃಢಪಟ್ಟಿದ್ದವು. ಈ ಎರಡು ವರ್ಷಗಳಲ್ಲಿ 22 ಜನರು ಕಾಯಿಲೆಯಿಂದ ಸಾವಿಗೀಡಾಗಿದ್ದಾರೆ. ಇದು ಕಾಯಿಲೆಯ ಗಂಭೀರತೆಯನ್ನು ಬಿಂಬಿಸುತ್ತಿದೆ. ರಾಜ್ಯದಲ್ಲಿ ಕೆಎಫ್‌ಡಿ ಪತ್ತೆಯಾಗಿ 68 ವರ್ಷ ಕಳೆದರೂ ಅದಕ್ಕೆ ಸರಿಯಾದ ಚಿಕಿತ್ಸೆ ಇಲ್ಲ. ಈ ಮಧ್ಯೆ ಇಲ್ಲಿಯವರೆಗೂ ಬಳಕೆಯಲ್ಲಿದ್ದ ಲಸಿಕೆ ಕೆಲಸ ಮಾಡುತ್ತಿಲ್ಲ ಎಂಬುದು ಮಲೆನಾಡಿನ ಜನರ ನಿದ್ರೆಗೆಡಿಸಿದೆ.

ಕಾಡಿನಲ್ಲಿ ಕೆಎಫ್‌ಡಿ ವೈರಸ್ ವಾಹಕ ಉಣುಗುಗಳು

> **ಕೆಎಫ್‌ಡಿ ನಿಯಂತ್ರಣಕ್ಕೆ ಮಲೆನಾಡಿನಲ್ಲಿ ಅಕ್ಟೋಬರ್ ತಿಂಗಳಿಂದಲೇ ಜಾಗೃತಿ ಕಾರ್ಯಕ್ರಮ ನಡೆಸಿದ್ದೇವೆ. ಮನೆ ಮನೆಗೆ ತೆರಳಿ ಕಾಯಿಲೆ ಬಗ್ಗೆ ತಿಳಿವಳಿಕೆ ನೀಡುತ್ತಿದ್ದೇವೆ. ಪ್ರತಿ ಮನೆಗೆ ಎರಡು ಬಾಟಲಿ ಡೆಪಾ ಎಣ್ಣೆ ವಿತರಣೆ ಮಾಡಲಾಗುತ್ತಿದೆ**
> **ಡಾ.ಎಲ್.ನಾಗರಾಜ ನಾಯ್ಕ,** ಸರ್ವೇಕ್ಷಣಾ ಅಧಿಕಾರಿ, ಆರೋಗ್ಯ ಇಲಾಖೆ, ಶಿವಮೊಗ್ಗ

ಮಂಗನಿಂದ ಬರುವ ಕಾಯಿಲೆ ಅಲ್ಲ : ಮಂಗನಿಗೂ ಕೆಎಫ್‌ಡಿಗೂ ಸಂಬಂಧವಿಲ್ಲ. ಆದರೆ ಜನರ ಬಾಯಲ್ಲಿ ಮಂಗನ ಕಾಯಿಲೆ ಆಗಿದೆ. ವಾಸ್ತವವಾಗಿ ಮಂಗ ಕೂಡ ಮನುಷ್ಯನಿಗಿಂತ ಹೆಚ್ಚು ಸಂತ್ರಸ್ತ. ಉಣುಗು ಕಡಿತದಿಂದ ರಷ್ಯನ್ ಎನ್‌ಸಫಲೈಟಿಸ್ ವೈರಸ್ ಮನುಷ್ಯನ ರೀತಿಯಲ್ಲೇ ಮಂಗನ ದೇಹಕ್ಕೂ ಸೇರುತ್ತದೆ. ಕೆಎಫ್‌ಡಿ ಬಾಧಿತರು ಬಹುತೇಕ ಸಂದರ್ಭಗಳಲ್ಲಿ ಚಿಕಿತ್ಸೆ ಪಡೆದು ಬದುಕುತ್ತಾರೆ. ಆದರೆ ಸೋಂಕು ಬಾಧಿತ ಮಂಗಗಳು ಸಾಯುತ್ತವೆ.

ಕಾಡಿನಲ್ಲಿ ಮಂಗಗಳ ಕಳೇಬರ ದೊರೆತರೆ ಅಲ್ಲಿ ವೈರಸ್‌ನ ಸುಳಿವು ಇರುತ್ತದೆ. ಮಂಗನ ಹೆಸರಲ್ಲಿ ಕಾಯಿಲೆಯ ಗುರುತಿಸುವುದರಿಂದ ಬಾಧಿತರಲ್ಲಿ ಒಂದು ಬಗೆಯ ಸಾಮಾಜಿಕ ಕಳಂಕದ ಭಾವನೆ ಮೂಡುತ್ತಿದ್ದು, ಅವರು ತಕ್ಷಣ ವೈದ್ಯರ ಬಳಿಗೆ ತೆರಳದೇ ಮನೆ ಮದ್ದಿಗೆ ಸೀಮಿತರಾಗುತ್ತಾರೆ. ರೋಗ ಉಲ್ಬಣಿಸಿದಾಗ ವೈದ್ಯರ ಬಳಿ ತೆರಳುತ್ತಿದ್ದು, ಇದು ಜೀವ ಹಾನಿಗೂ ಕಾರಣವಾಗುತ್ತಿದೆ.

ನಾಲ್ಕು ಜಿಲ್ಲೆಗಳಿಗೆ ಮಾತ್ರ ಸೀಮಿತ

1957ರಿಂದ 2024ರವರೆಗೆ ಕೆಎಫ್‌ಡಿಗೆ ತುತ್ತಾಗಿ ರಾಜ್ಯದಲ್ಲಿ 597 ಜನರು ಸಾವಿಗೀಡಾಗಿದ್ದಾರೆ. ಸಾಗರ ತಾಲ್ಲೂಕಿನ ಅರಳಗೋಡು ಗ್ರಾಮದಲ್ಲಿ 2019ರ ಮಾರ್ಚ್‌ನಲ್ಲಿ ಈ ಸೋಂಕು ಬಾಧಿತರಾಗಿದ್ದ 23 ಜನರು ಸಾವಿಗೀಡಾಗಿದ್ದರು. ಆ ದುರಂತದ ಕಹಿ ಇನ್ನೂ ಈ ಭಾಗದ ಜನಮಾನಸದಲ್ಲಿ ಮಾಸಿಲ್ಲ. ರಾಜ್ಯದಲ್ಲಿ ಈ ಮೊದಲು ಪಶ್ಚಿಮ ಘಟ್ಟ ಶ್ರೇಣಿಯ 10 ಜಿಲ್ಲೆಗಳಲ್ಲೂ ಈ ಕಾಯಿಲೆ ಕಾಣಿಸಿಕೊಂಡಿದೆ. ಆದರೆ ಈಚೆಗೆ ಶಿವಮೊಗ್ಗ, ಚಿಕ್ಕಮಗಳೂರು, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಿಗೆ ಮಾತ್ರ ಸೀಮಿತಗೊಂಡಿದೆ. ಕ್ಯಾಸನೂರಿನಲ್ಲಿ ಮೊದಲ ಬಾರಿಗೆ ಕಾಣಿಸಿಕೊಂಡರೂ ಮತ್ತೆ ಅಲ್ಲಿ ಕಂಡುಬಂದಿಲ್ಲ. ಮಹಾರಾಷ್ಟ್ರದ ಸಿಂಧುದುರ್ಗ, ಕೇರಳದ ಮಲಪ್ಪುರ, ತಮಿಳುನಾಡಿನ ನೀಲಗಿರಿ ಹಾಗೂ ಈರೋಡ್ ಭಾಗದಲ್ಲೂ ಕೆಎಫ್‌ಡಿ ಕಾಣಿಸಿಕೊಂಡಿದೆ.

'ತಕ್ಷಣ ಪರೀಕ್ಷೆ ಮಾಡಿಸಿ'

ಕೆಎಫ್‌ಡಿ ಬಾಧಿತರಿಗೆ ಚಿಕಿತ್ಸೆ ನೀಡಲು ಶಿವಮೊಗ್ಗ, ಚಿಕ್ಕಮಗಳೂರು, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳ ಮಲೆನಾಡು ಭಾಗದ ತಾಲ್ಲೂಕು ಆಸ್ಪತ್ರೆಗಳಲ್ಲಿ ತಲಾ 10 ಹಾಸಿಗೆಯ ಪ್ರತ್ಯೇಕ ವೈರಲ್ ವಾರ್ಡ್ ರೂಪಿಸಲಾಗಿದೆ. ತೀವ್ರ ರೋಗ ಬಾಧಿತರ ಚಿಕಿತ್ಸೆಗೆ ಶಿವಮೊಗ್ಗದ ಮೆಗ್ಗಾನ್, ಸುಬ್ಬಯ್ಯ ಹಾಗೂ ಮಣಿಪಾಲ್‌ನ ಕಸ್ತೂರಬಾ ಆಸ್ಪತ್ರೆಗಳನ್ನು ಗುರುತಿಸಿದ್ದು, ಅಲ್ಲಿ ಎಲ್ಲ ರೋಗಿಗಳಿಗೂ ಸಂಪೂರ್ಣ ಉಚಿತ ಚಿಕಿತ್ಸೆಗೆ ಅವಕಾಶ ಕಲ್ಪಿಸಲಾಗಿದೆ.

'ಕೆಎಫ್‌ಡಿ ಮೊದಲ ಹಂತದಲ್ಲಿಯೇ ಚಿಕಿತ್ಸೆ ಪಡೆಯುವುದು ಸೂಕ್ತ. ಮಲೆನಾಡಿನಲ್ಲಿ ಜ್ವರ ಬಾಧಿತರು ಆರ್‌ಎಂಪಿ, ನಾಟಿ ವೈದ್ಯರ ಬಳಿ ತೆರಳದೇ ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ತೆರಳಬೇಕು. ಅಲ್ಲಿ ರಕ್ತ ಪರೀಕ್ಷೆ ವ್ಯವಸ್ಥೆ ಮಾಡಲಾಗಿದೆ. ಇದರಿಂದ ಕಾಯಿಲೆಯನ್ನು ಪ್ರಾಥಮಿಕ ಹಂತದಲ್ಲಿಯೇ ಪತ್ತೆ ಮಾಡಬಹುದು' ಎಂದು ಡಾ.ನಾಗರಾಜ ನಾಯ್ಕ ಮನವಿ ಮಾಡುತ್ತಾರೆ.

ಲಸಿಕೆ ಅಭಿವೃದ್ಧಿ ಟ್ರಯಲ್ಸ್ ಹಂತದಲ್ಲಿ: ಕೆಎಫ್‌ಡಿಗೆ ಈಗ ನಿರ್ದಿಷ್ಟ ಔಷಧಿ ಇಲ್ಲ. ಆರೋಗ್ಯ ಇಲಾಖೆ ಸದ್ಯ ರೋಗದ ಲಕ್ಷಣ ಆಧರಿಸಿ ಚಿಕಿತ್ಸೆ ನೀಡುತ್ತಿದೆ. 1992ರಲ್ಲಿ ಮಹಾರಾಷ್ಟ್ರದ ವಿಜ್ಞಾನಿ ಡಾ.ದಂಡಾವತೆ ಅಭಿವೃದ್ಧಿಪಡಿಸಿದ್ದ ಲಸಿಕೆ ಇಲ್ಲಿಯವರೆಗೂ ಬಳಕೆಯಲ್ಲಿತ್ತು. ಆದರೆ ಅದು ವೈರಸ್‌ನ ರೂಪಾಂತರದಿಂದ (ಮ್ಯುಟೇಶನ್) ತನ್ನ ಪರಿಣಾಮ ಕಳೆದುಕೊಂಡಿದೆ. ಹೀಗಾಗಿ ಆ ಲಸಿಕೆ ಬಳಕೆಯನ್ನು ಆರೋಗ್ಯ ಇಲಾಖೆ ಮೂರು ವರ್ಷಗಳಿಂದ ನಿಲ್ಲಿಸಿದೆ.

'ಹೊಸದಾಗಿ ಲಸಿಕೆ ಅಭಿವೃದ್ಧಿಗೆ ಈಗಾಗಲೇ ಪ್ರಕ್ರಿಯೆ ಆರಂಭವಾಗಿದ್ದು, ಈಗ ಅದು ಕ್ಲಿನಿಕಲ್ ಟ್ರಯಲ್ಸ್ ಹಂತದಲ್ಲಿದೆ. ಮುಂದಿನ ವರ್ಷದ ವೇಳೆಗೆ ಲಸಿಕೆ ಸಿದ್ಧವಾಗಬಹುದು' ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಶಿವಮೊಗ್ಗ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಎಲ್.ನಾಗರಾಜ ನಾಯ್ಕ ಹೇಳುತ್ತಾರೆ.

ಉಣುಗು ಕಡಿತದಿಂದ ರಕ್ಷಣೆಗೆ ಸಲಹೆ

ಕೆಎಫ್‌ಡಿ ಹರಡುವ ಉಣುಗುಗಳು ಕಾಡಿನಲ್ಲಿರುತ್ತವೆ. ಇವು ಜೀವಿತಾವಧಿಯಲ್ಲಿ ತಾವಾಗಿಯೇ 100 ಮೀ. ಮಾತ್ರ ಕ್ರಮಿಸಬಹುದು. ಆದರೆ ಇಲಿ, ಹೆಗ್ಗಣ, ಬೆಕ್ಕು, ನಾಯಿ, ಮಂಗ, ಕಾಡಿಗೆ ಮೇಯಲು ಹೋಗುವ ದನಗಳ ಮೂಲಕ ಮನುಷ್ಯರ ಸಂಪರ್ಕಕ್ಕೆ ಬರುತ್ತವೆ. ಕಾಡಿಗೆ ಹೋದವರಿಗೆ ಉಣುಗು ಕಚ್ಚಿದರೂ ರೋಗ ಹರಡುತ್ತದೆ. ಕಾಡಿಗೆ ಹೋಗುವಾಗ ಡೆಪಾ ಎಣ್ಣೆ ಕೈ ಕಾಲಿಗೆ ಹಚ್ಚಿಕೊಳ್ಳಬೇಕು, ಪೂರ್ಣ ತೋಳಿನ ಶರ್ಟು, ಪ್ಯಾಂಟ್, ಶೂ ಧರಿಸಬೇಕು. ವಾಪಸ್ ಮರಳಿದಾಗ ಬಿಸಿ ನೀರಿನಲ್ಲಿ ಸ್ನಾನ ಮಾಡಿ, ಬಟ್ಟೆಗಳನ್ನೂ ಬಿಸಿ ನೀರಿನಲ್ಲಿ ಒಗೆದು ಹಾಕಬೇಕು. ದನ–ಕರುಗಳ ಮೈ ತೊಳೆಯಬೇಕು ಎಂದು ಎಂಬುದು ವೈದ್ಯರ ಸಲಹೆ.



ರಾಷ್ಟ್ರೀಯ

ಢಾಕಾದಲ್ಲಿರುವ ಭಾರತದ ಹೈಕಮಿಷನ್ ಕಚೇರಿಯತ್ತ ಬರುತ್ತಿದ್ದ ಪ್ರತಿಭಟನಕಾರರನ್ನು ಪೊಲೀಸರು ತಡೆದು ನಿಲ್ಲಿಸಿದರು –ಪಿಟಿಐ ಚಿತ್ರ

ಬಾಂಗ್ಲಾದೇಶ: ಭಾರತದ ವಿರುದ್ಧ ಪ್ರತಿಭಟನೆ

ಪ್ರಜಾವಾಣಿ ವಾರ್ತೆ/ಪಿಟಿಐ

ಢಾಕಾ/ನವದೆಹಲಿ: ಮಾಜಿ ಪ್ರಧಾನಿ ಶೇಕ್ ಹಸೀನಾ ಅವರನ್ನು ವಾಪಸು ಕಳುಹಿಸಿಕೊಡುವುದು ಸೇರಿ ಅನೇಕ ವಿಚಾರಗಳಿಗೆ ಸಂಬಂಧಿಸಿ ಢಾಕಾದಲ್ಲಿರುವ ಭಾರತದ ಹೈಕಮಿಷನ್ ಕಚೇರಿ ಎದುರು 'ಜುಲೈ ಒಯಿಕ್ಯಾ' ಸಂಘಟನೆಯ ನೂರಾರು ಸದಸ್ಯರು ಪ್ರತಿಭಟನೆ ನಡೆಸಿ, ಭಾರತ ವಿರೋಧಿ ಘೋಷಣೆಗಳನ್ನು ಬುಧವಾರ ಕೂಗಿದರು.

'ಭಾರತ ಹೈಕಮಿಷನ್ ಕಚೇರಿ ಮೇಲೆ ದಾಳಿ ನಡೆಸುವ ಬಗ್ಗೆ ಯೋಜನೆ ಇದೆ ಎಂದು ಉಗ್ರರು ಘೋಷಿಸಿದ್ದರ ಬಗ್ಗೆ ಮಧ್ಯಂತರ ಸರ್ಕಾರವು ತನಿಖೆಯನ್ನೂ ನಡೆಸಿಲ್ಲ ಅಥವಾ ನಮ್ಮೊಂದಿಗೆ ಸಾಕ್ಷ್ಯಗಳನ್ನೂ ಹಂಚಿಕೊಂಡಿಲ್ಲ. ಇದು ದುರದೃಷ್ಟಕರ' ಎಂದು ಬಾಂಗ್ಲಾದೇಶದ ರಾಯಭಾರಿ ರಿಯಾಜ್ ಹಮೀದುಲ್ಲಾ ಅವರನ್ನು ಕರೆಸಿದ ಭಾರತದ ವಿದೇಶಾಂಗ ಸಚಿವಾಲಯ ಬುಧವಾರ ಬೆಳಿಗ್ಗೆ ತನ್ನ ಕಳವಳವನ್ನು ವ್ಯಕ್ತಪಡಿಸಿತ್ತು.

ಇದಾದ ಕೆಲವೇ ಗಂಟೆಗಳಲ್ಲಿ ಢಾಕಾದಲ್ಲಿ ಪ್ರತಿಭಟನೆ ನಡೆಯಿತು. ಭಾರತದ ಹೈಕಮಿಷನ್ ಕಚೇರಿ ಸುತ್ತ ಬ್ಯಾರಿಕೇಡ್‌ಗಳನ್ನು ಹಾಕಲಾಗಿತ್ತು. ಇದನ್ನು ತಳ್ಳಿದ ಪ್ರತಿಭಟನಕಾರರು ಕಚೇರಿಯ ಹತ್ತಿರ ಬಂದರು. ಆದರೆ, ಇಲ್ಲಿ ದೊಡ್ಡ ಪ್ರಮಾಣದ ಪೊಲೀಸ್ ಭದ್ರತೆಯನ್ನು ನಿಯೋಜಿಸಲಾಗಿತ್ತು. ಇದರಿಂದ ಅಲ್ಲಿಯೇ ನಿಂತ ಪ್ರತಿಭಟನಕಾರರು ಭಾರತ ವಿರೋಧಿ ಭಾಷಣಗಳನ್ನು ಮಾಡಿದರು.

ಬೆದರಿಕೆ ಇದ್ದ ಕಾರಣ ಢಾಕಾದಲ್ಲಿರುವ ಭಾರತದ ವೀಸಾ ಅರ್ಜಿ ಕೇಂದ್ರವನ್ನು (ಐವಿಎಸಿ) ಇತ್ತೀಚೆಗೆ ಮುಚ್ಚಲಾಗಿದೆ.

> **ಬಾಂಗ್ಲಾದಲ್ಲಿ ನ್ಯಾಯಯುತವಾಗಿ ಶಾಂತಿಯುತ ಚುನಾವಣೆಗಳು ನಡೆಯುವುದರ ಪರ ನಾವಿದ್ದೇವೆ. ಅಲ್ಲಿ ಶಾಂತಿ ಮತ್ತು ಸ್ಥಿರತೆ ನೆಲಸಬೇಕು**
> ಭಾರತದ ವಿದೇಶಾಂಗ ಸಚಿವಾಲಯ

> **ಕಳೆದ 15 ವರ್ಷಗಳಿಂದ ಬಾಂಗ್ಲಾದಲ್ಲಿ ಚುನಾವಣೆ ಎನ್ನುವುದು ಪ್ರಹಸನವಾಗಿತ್ತು. ಆಗ ಒಮ್ಮೆಯೂ ಒಂದು ಮಾತು ಆಡಲಿಲ್ಲ. ನಮಗೇನು ಮಾಡಬೇಕು ಎಂಬುದು ನಮಗೆ ಗೊತ್ತಿದೆ**
> **ತೌಹಿದ್ ಹುಸೇನ್,** ಮಧ್ಯಂತರ ಸರ್ಕಾರಕ್ಕೆ ವಿದೇಶಾಂಗ ವ್ಯವಹಾರಗಳ ಸಲಹೆಗಾರ

ಕಳೆದ ವರ್ಷ ನಡೆದ ಮೀಸಲಾತಿ ವಿರೋಧಿ ಪ್ರತಿಭಟನೆಯ ಮುಂಚೂಣಿ ನಾಯಕ ಶಾರಿಫ್ ಒಸ್ಮಾನ್ ಹಾದಿ ಅವರ ಮೇಲೆ ವ್ಯಕ್ತಿಯೊಬ್ಬರು ಕಳೆದ ವಾರ ಗುಂಡಿನ ದಾಳಿ ನಡೆಸಿದ್ದರು. ಇದಾದ ಬಳಿಕ ಭಾರತ ವಿರೋಧಿ ಚಟುವಟಿಕೆಗಳು ನಡೆಯುತ್ತಿವೆ.

'ಬಾಂಗ್ಲಾದೇಶದ ಜನರೊಂದಿಗೆ ಭಾರತಕ್ಕೆ ಸ್ನೇಹ ಸಂಬಂಧವಿದೆ. ಇದು ಬಾಂಗ್ಲಾ ವಿಮೋಚನಾ ಸಂಘರ್ಷದ ಸಮಯದಿಂದಲೂ ಇದೆ. ಅಲ್ಲಿ ಶಾಂತಿ ಮತ್ತು ಸ್ಥಿರತೆ ನೆಲಸುವ ಪರ ನಾವಿದ್ದೇವೆ. ಆದ್ದರಿಂದ ಮಧ್ಯಂತರ ಸರ್ಕಾರವು ದ್ವಿಪಕ್ಷೀಯ ಸಂಬಂಧವನ್ನೂ ಗಮನದಲ್ಲಿ ಇರಿಸಿಕೊಂಡು, ನಮ್ಮ ಹೈಕಮಿಷನ್‌ಗೆ ಸೂಕ್ತ ಭದ್ರತೆ ಒದಗಿಸುತ್ತದೆ ಎಂದು ನಿರೀಕ್ಷಿಸುತ್ತೇವೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

'ನಮ್ಮ ಮೇಲೆ ಪ್ರಾಬಲ್ಯ ಸಾಧಿಸಬೇಡಿ'

ನಾವು ಭಾರತದ ಹೈಕಮಿಷನ್ ಮೇಲೆ ದಾಳಿ ನಡೆಸುವುದಿಲ್ಲ. ನಮಗೆ ಭಯವಿಲ್ಲ. ಆದರೆ, ಯಾರಾದರೂ ಬಾಂಗ್ಲಾದೇಶದ ಮೇಲೆ ಪ್ರಾಬಲ್ಯ ಸಾಧಿಸಲು ಮುಂದಾದರೆ, ನಾವು ಅವರನ್ನು ಬಿಡುವುದಿಲ್ಲ. ಭಾರತದ ರಾಜಕೀಯ ಪಕ್ಷಗಳು, ಮಾಧ್ಯಮ ಮತ್ತು ಸರ್ಕಾರದ ಅಧಿಕಾರಿಗಳು ಪಿತೂರಿ ಮಾಡುತ್ತಿದ್ದಾರೆ

ಪ್ರತಿಭಟನಕಾರರು

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಬೃಹತ್ ಜನಸಮೂಹವು ರಾತ್ರಿ ವೇಳೆ ಒಂದೆಡೆ ನೆರೆದು ಜೋರಾಗಿ ಕೂಗುತ್ತಾ, ಮೊಬೈಲ್ ಫ್ಲಾಷ್‌ಲೈಟ್‌ಗಳನ್ನು ತೋರಿಸುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಫುಟ್‌ಬಾಲ್ ಲೋಕದ ದಂತಕಥೆ ಲಿಯೊನೆಲ್ ಮೆಸ್ಸಿ ಅವರು ಇತ್ತೀಚೆಗೆ 'GOAT tour of India' ಪ್ರವಾಸದ ಭಾಗವಾಗಿ ಹೈದರಾಬಾದ್‌ಗೆ ಭೇಟಿ ನೀಡಿದ್ದಾಗ ಅವರನ್ನು ನೋಡಲು ನೆರೆದಿದ್ದ ಜನಸ್ತೋಮದ ವಿಡಿಯೊ ಎಂದು ಪೋಸ್ಟ್ ಅನ್ನು ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು.



ಇನ್‌ವಿಡ್ ಸಾಧನದ ಮೂಲಕ ವಿಡಿಯೊದ ಕೀಫ್ರೇಮ್‌ಗಳನ್ನು ವಿಂಗಡಿಸಿ, ಒಂದು ಕೀಫ್ರೇಮ್ ಅನ್ನು ಗೂಗಲ್ ಲೆನ್ಸ್ ಮೂಲಕ ವಿಶ್ಲೇಷಣೆಗೊಳಪಡಿಸಿದಾಗ, ಈ ವಿಡಿಯೊನ ಹಲವರು ಹಂಚಿಕೊಂಡಿರುವುದು ಕಂಡಿತು. ಮತ್ತಷ್ಟು ಹುಡುಕಾಟ ನಡೆಸಿದಾಗ, 'ಎಕ್ಸ್' ಬಳಕೆದಾರರೊಬ್ಬರು 'ಮರೆಯಲು ಸಾಧ್ಯವಾಗುತ್ತಲೇ ಇಲ್ಲ #ಪುಷ್ಪ–2' ಎಂದು ವಿಡಿಯೊದೊಂದಿಗೆ ಪೋಸ್ಟ್ ಮಾಡಿದ್ದರು. ಅದರ ಆಧಾರದಲ್ಲಿ ನಿರ್ದಿಷ್ಟ ಪದದ ಮೂಲಕ ಗೂಗಲ್‌ನಲ್ಲಿ ಹುಡುಕಿದಾಗ, 'ನ್ಯೂಸ್ ಬಜ್' 2024ರ ಡಿ.5ರಂದು ಯೂಟ್ಯೂಬ್‌ನಲ್ಲಿ ವಿಡಿಯೊ ಅಪ್‌ಲೋಡ್ ಮಾಡಿರುವುದು ಕಂಡಿತು. 'ಪುಷ್ಪ–2' ಚಿತ್ರ ಪ್ರದರ್ಶನವಾಗುತ್ತಿದ್ದ ಹೈದರಾಬಾದ್‌ನ ಸಂಧ್ಯಾ ಥಿಯೇಟರ್‌ಗೆ ಅಲ್ಲು ಅರ್ಜುನ್ ಭೇಟಿ ನೀಡಿದಾಗ ಅವರನ್ನು ನೋಡಲು ಸೇರಿದ್ದ ಜನಸಮೂಹದ ಬಗ್ಗೆ ವರದಿ ಉಲ್ಲೇಖಿಸಿತ್ತು. ಹಳೆಯ ವಿಡಿಯೊ ಅನ್ನು ಮೆಸ್ಸಿ ಭೇಟಿ ಸಂದರ್ಭದ್ದು ಎಂದು ಹಂಚಿಕೊಳ್ಳುವ ಮೂಲಕ ತಪ್ಪು ಪ್ರತಿಪಾದನೆ ಮಾಡಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ. ❖

ನುಡಿ ಬೆಳಗು

ಪಿ.ಚಂದ್ರಿಕಾ

ಬುದ್ಧನಿಗೆ ತಲುಪಿದ ಹೂವು

ಶ್ರೀಮಂತನೊಬ್ಬ ಬುದ್ಧನನ್ನು ಕಾಣಲು ಹೊರಟಿದ್ದ. ಅವನಿಗೆ ಅರಿವಿತ್ತು, ತಾನು ಕಾಣಲು ಹೊರಟಿರುವುದು ಕಾಲಮಾನದ ಮಹಾನ್ ಪುರುಷನನ್ನು ಎಂಬುದು. ಆತನೋ ಎಲ್ಲವನ್ನೂ ತ್ಯಜಿಸಿದ ಪರಮ ವಿರಾಗಿ. ಆತನಿಗೆ ಕೊಡಲು ತನ್ನಲ್ಲಿ ಏನೂ ಇಲ್ಲ. ಇಷ್ಟು ಹಣವಿದ್ದೂ ತಾನು ಬಡವನಾದೆ ಎಂದವನಿಗೆ ಅನ್ನಿಸಿಬಿಟ್ಟಿತ್ತು. ಆಗ ಜೊತೆಯಲ್ಲಿದ್ದವ ಹೇಳಿದ, 'ದಾರಿಯಲ್ಲಿ ಹೂವಿನ ತೋಟವಿದೆ. ಅಲ್ಲಿ ರೈತ ಬೆಳೆದ ಹೂಗಳನ್ನು ಮಾರುತ್ತಿರುತ್ತಾನೆ. ಅಂಥಾ ತೋಟವನ್ನೂ ನಾನು ಕಂಡಿಲ್ಲ, ಅಂಥಾ ಹೂಗಳನ್ನೂ ಕಂಡಿಲ್ಲ. ಅಲ್ಲಿ ಬುದ್ಧನಿಗೆ ಹೂಗಳನ್ನು ತೆಗೆದುಕೊಳ್ಳಬಹುದು. ನಿಮಗೆ ಕೊಟ್ಟ ಹಾಗೂ ಇರುತ್ತದೆ, ಬುದ್ಧನಿಗೆ ತಾನೇನೋ ಯಾರಿಂದಲೋ ಸ್ವೀಕರಿಸಿದೆ ಎನ್ನುವ ಹಾಗೂ ಇರುವುದಿಲ್ಲ' ಎಂದನು.

ಶ್ರೀಮಂತನಿಗೆ ಏನಿಲ್ಲವೆಂದರೂ ಹೂಗಳನ್ನಾದರೂ ತೆಗೆದುಕೊಂಡು ಹೋಗಬಹುದಲ್ಲಾ ಎನ್ನುವ ಸಮಾಧಾನದಿಂದ ಹೂವಿನ ತೋಟ ಸಿಗುವುದನ್ನೇ ಕಾಯುತ್ತಿದ್ದ, ಅತ್ಯಂತ ಉತ್ಕೃಷ್ಟವಾದ ಹೂಗಳನ್ನು ಬುದ್ಧನಿಗೆ ಅರ್ಪಿಸುವ ತವಕದಲ್ಲಿ. ಆ ಗಳಿಗೆ ಬಂದೇ ಬಿಟ್ಟಿತು. ರೈತ ತಾನು ಬೆಳದ ಹೂಗಳನ್ನು ಹಿಡಿದು ರಸ್ತೆ ಬದಿಯಲ್ಲಿ ನಿಂತಿದ್ದ. ಅವನನ್ನು ನೋಡುತ್ತಲೇ ಶ್ರೀಮಂತ ಗಾಡಿಯಿಂದ ಇಳಿದು ರೈತನ ಕಡೆಗೆ ಧಾವಿಸಿ, 'ಎಷ್ಟು ಹಣವಾದರೂ ಸರಿಯೇ, ಅತ್ಯಂತ ಉತ್ಕೃಷ್ಟ ಹೂಗಳನ್ನು ಕೊಡು. ನಾನು ಬುದ್ಧನಿಗೆ ಅರ್ಪಿಸಬೇಕಿದೆ' ಎಂದ. ರೈತ ನಕ್ಕ, 'ಎಷ್ಟು ಹಣವಾದರೂ ಸರಿಯೇ ಕೊಡುವಿರಾ' ಎಂದ. 'ಹೌದು ಕೇಳು. ನಿನಗೆ ಈವರೆಗೂ ಯಾರೂ ಕೊಟ್ಟಿರಬಾರದು ಅಷ್ಟು ಹಣವನ್ನು ನೀಡುವೆ' ಎಂದ ಶ್ರೀಮಂತ. ರೈತ ನಗುತ್ತಾ, 'ಇಲ್ಲ ನೀನು ಎಷ್ಟು ಹಣ ಕೊಟ್ಟರೂ ನಾನು ನಿನಗೆ ಹೂಗಳನ್ನು ಕೊಡಲಾರೆ' ಎಂದ. ಶ್ರೀಮಂತನಿಗೆ ಅಚ್ಚರಿ, 'ಯಾಕೆ ನೀನು ಹೂಗಳನ್ನು ನೀಡಲಾರೆ? ನೀನು ನಿಂತಿರುವುದು ಮಾರಲಿಕ್ಕೆ ಅಲ್ಲವೇ' ಎಂದ ಶ್ರೀಮಂತ.

'ಹೌದು ಮಾರಲಿಕ್ಕೆ. ಆದರೆ, ಬುದ್ಧನಿಗೆ ಕೊಡುವ ಹೂವಿಗೆ ಯಾವ ಅಹಂಕಾರಿಯ ಕೈಗಳೂ ತಾಕಬಾರದು ಎನ್ನುವ ನಿಲುವು ನನ್ನದು. ನಾನು ಬಿತ್ತಿದ ಬೀಜಕ್ಕೆ ಗೊತ್ತಿಲ್ಲ ಅದು ಬುದ್ಧನಿಗೆ ತಲುಪಲಿವೆ ಎಂದು- ಹಾಗೆಯೇ ಬೆಳೆದ ಭೂಮಿಗೆ ಮತ್ತು ನನ್ನ ಬೆವರ ಹನಿಗೂ. ಅವು ತಮ್ಮ ಪಾಡಿಗೆ ತಾವು ಇವನ್ನು ನನ್ನ ಕೈಗೆ ಇಟ್ಟವೆ. ಇಂಥಾ ಹೂಗಳನ್ನು ಅಹಂಕಾರಿಯ ಕೈಗಳ ಮೂಲಕ ಬುದ್ಧನಿಗೆ ಹೇಗೆ ತಲುಪಿಸಲಿ' ಎಂದ. ಅಷ್ಟು ಹೊತ್ತಿನ ತನಕ ತಾನು ಹಣವನ್ನು ಕೊಟ್ಟು ಏನನ್ನಾದರೂ ಖರೀದಿಸಬಹುದು ಎಂದುಕೊಂಡಿದ್ದ ಶ್ರೀಮಂತನಿಗೆ ಹಣ ಕೊಟ್ಟರೂ ಆ ವಸ್ತು ಸಿಗಲಾರದು ಎನ್ನುವ ಕಲ್ಪನೆಯೂ ಇರಲಿಲ್ಲ. ಅವನು ಅತ್ಯಂತ ದೀನನಾಗಿ ಕೇಳಿದ, 'ಈಗ ನೀನು ಹೂವನ್ನು ಕೊಡದೆ ಹೋದರೆ ನಾನು ಬುದ್ಧನಿಗೆ ಏನು ಕೊಡಲಿ.' ರೈತ ನಗುತ್ತಾ, 'ಅಲ್ಲಿಗೆ ಹೋಗುವಷ್ಟರಲ್ಲಿ ನಿನಗೆ ಹೊಳೆಯುತ್ತದೆ ಏನನ್ನು ಕೊಡಬೇಕೆಂದು' ಎಂದು ಹೇಳಿದ. ದಾರಿಯುದ್ದಕ್ಕೂ ಶ್ರೀಮಂತ ಯೋಚಿಸಿದ, ತಲುಪುವ ಹಾದಿ ಸ್ವಲ್ಪವಾದರೂ ದೂರವಿರಲಿ ಎಂದು ಪ್ರಾರ್ಥಿಸಿದ. ಕೊನೆಗೂ ಕಾಲ ಅವನನ್ನು ಬುದ್ಧನ ಎದುರು ನಿಲ್ಲಿಸಿತ್ತು. ಕೈಮುಗಿದು ಹೇಳಿದ, 'ತಂದೆ, ಅಹಂಕಾರವನ್ನು ಕಳೆದ ನನ್ನನ್ನು ಒಪ್ಪಿಸಿಕೋ'.

ರೈತನ ಕೈಲಿದ್ದ ಹೂಗಳೆಲ್ಲವೂ ನಕ್ಕವು, ತೆಳುವಾದ ಸುಗಂಧ ಬುದ್ಧನ ಸುತ್ತಲೂ ಹರಡಿತ್ತು. ❖

ಗುಂಡಣ್ಣ



ಪದಬಂಧ 6257

ವಿದ್ಯಾ ವಿನಯ್



ಎಡದಿಂದ ಬಲಕ್ಕೆ
1.ದೂರದ ವಸ್ತುಗಳನ್ನು ನೋಡುವ ದುರ್ಬೀನು (5)
4.ಒಳ್ಳೆಯ ಕೆಲಸ (3)
5.ಮಾತು ಕೇಳುತ್ತಿರುವ ಸೋದರ ಮಾವ (3)
6.ಗರ ಬಡಿದಂತಿರುವ ಗಾವಿಲ (3)
8.ದಟ್ಟಣೆಯನ್ನು ಹೀಗೆನ್ನಿ (3)
9.ಜಾತಿಯಲ್ಲಿ ರೇಖಾಗಣಿತವೇ?! (3)
12.ನೂಲು ತೆಗೆಯುವ ಉಪಕರಣ (3)
15.ದಾವಣಿ ಧರಿಸಿ ಹೇಳಿದ ಜಾನಪದ ಹಾಡು (3)
16.ಧಾನ್ಯಗಳನ್ನು ಶೇಖರಿಸುವ ನೆಲಮಾಳಿಗೆ (3)
17.ವ್ಯಾಯಾಮ ಶಾಲೆಯಿದು (5)

ಮೇಲಿಂದ ಕೆಳಕ್ಕೆ
1.ರಾಯಭಾರಿಯ ವಾಸಸ್ಥಾನ (4)
2.ಈತ ಕಡುಬಡವ (5)
3.ಅರ್ಧ ಚಂದ್ರಾಕೃತಿಯ ರಚನೆಯಿದು (3)
4.ಆನೆಗಳ ನಾಯಕ (3)
7.ಮಾತಿನಲ್ಲೇ ಹನುಮಂತ ಕಾಣಿಸಿದನಲ್ಲಾ! (3)
8.ಸಂಘಕ್ಕೆ ಸೇರಿದುದು (3)
10.ಮಿಡಿಯಲ್ಲಿರುವ ಒಯ್ಯಾರಿ (5)
11.ನೆರೆಮನೆಯವ ಸೇರಿರುವ ಜೈಲು (4)
13.ಲೀಲಾಜಾಲವಾಗಿ ನಡೆದ ಏಲಂ (3)
14.ಲೆಕ್ಕಶಾಸ್ತ್ರವಿಲ್ಲಿ ತಿರುವುಮುರುವಾಗಿದೆ(3)

6256ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಕವಾಡಿಗ 4.ಪ್ರಹಾರ
5.ಶಿಲ್ಕು 6.ಅಂಗ
7.ಗರಗಸ 9.ಪ್ರತಿ
10.ಜ್ಞಾನ 11.ಪರಿಸರ 13.ತಿದಿ
14.ಯಿನಾ 15.ಓಲಗ
16.ಹಜಾಮತಿ

ಮೇಲಿಂದ ಕೆಳಕ್ಕೆ:
1.ಸಹಾನುಭೂತಿ 2.ಕಲ್ಕುಟಿಗ
3.ಗಜಗಮನ 8.ರಮೀಸ
9.ಪ್ರಸೂತಿಗೃಹ 10.ಜ್ಞಾತಿಕಲಹ
12.ರಿಯಾಯಿತಿ

ಸುಡೊಕು 6641

ಆಡುವುದು ಹೇಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	2					8		7
4		8						
	9					6		4
	5		7				6	
				9			5	
2		3			4		7	
7								6
	1		2		9		4	
6		2				9	8	5

6640 ಸುಡೊಕು

7	6	3	5	9	2	4	1	8
1	9	4	8	7	3	5	6	2
8	5	2	1	6	4	3	9	7
5	1	7	2	4	9	6	8	3
4	2	8	6	3	1	7	5	9
6	3	9	7	5	8	1	2	4
2	8	5	4	1	7	9	3	6
3	4	1	9	2	6	8	7	5
9	7	6	3	8	5	2	4	1

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

18 ಡಿಸೆಂಬರ್ 2025 ಗುರುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ಚತುರ್ದಶಿ ಗಂ. 29-00 ನಕ್ಷತ್ರ: ಅನುರಾಧ ಗಂ. 20-07 ಯೋಗ: ಧೃತಿ ಗಂ. 15-06 ಕರಣ: ವಿಷ್ಟಿ ಗಂ. 15-48 ಧನು ಮಾಸದ 03 ನೇ ದಿನ. ಮಳೆ ನಕ್ಷತ್ರ : ಮೂಲ 1 ನೇ ಪಾದ. ರಾಹುಕಾಲ : ಮಧ್ಯಾಹ್ನ 01-30 - 03-00 ಸೂರ್ಯೋದಯ : 06-51 ಸೂರ್ಯಾಸ್ತ : 06-02, ಮುಸ್ಲಿಂ ದಿನಾಂಕ : 26 ಜುಮಾದುಸ್ಸಾನಿ , ಅದೃಷ್ಟ ಸಂಖ್ಯೆ : 7, 3

ಮೇಷ: ಶಿಕ್ಷಕ ವರ್ಗದವರಿಗೆ ಪರಸ್ಪರ ವರ್ಗಾವಣೆ ಮಾಡಿಕೊಳ್ಳುವ ಅವಕಾಶ ಸಿಗುವುದು. ಸಹನಾಶೀಲರಾಗಿ ವರ್ತಿಸಿದಲ್ಲಿ ಪ್ರಯತ್ನಬಲಕ್ಕೆ ಸರಿಯಾದ ಯಶಸ್ಸು ಸಿಗುತ್ತದೆ. ಆತಂಕವು ದೂರವಾಗುತ್ತದೆ.

ವೃಷಭ: ಸಮಾಜದಲ್ಲಿ ಅಸಭ್ಯವಾಗಿ ವರ್ತಿಸದೆ ಗೌರವಾನ್ವಿತವಾಗಿ ಬದುಕುವುದನ್ನು ರೂಢಿಸಿಕೊಳ್ಳಿರಿ. ಮಾಡುವ ಹಾಸ್ಯದಿಂದ ಬೇರೆಯವರ ಮನಸ್ಸಿಗೆ ನೋವು ಉಂಟಾಗದಂತೆ ನೋಡಿಕೊಳ್ಳಿ.

ಮಿಥುನ: ವೃತ್ತಿ ಜೀವನಕ್ಕೆ ಸಂಬಂಧಪಟ್ಟ ವಿಚಾರದಲ್ಲಿ ನಿರ್ಣಯ ಕೈಗೊಳ್ಳಲು ಆಪ್ತರೊಬ್ಬರ ಸಲಹೆ ಕೇಳುವಿರಿ. ಒಂದು ಕೆಲಸವನ್ನು ಆಸಕ್ತಿಯಿಂದ ನಿರ್ವಹಿಸುತ್ತೀರಿ. ಕೆಲಸದ ಒತ್ತಡ ಕಡಿಮೆಯಾಗಲಿದೆ.

ಕರ್ಕಾಟಕ: ಮನೆಯಲ್ಲಿ ಶಾಂತ ವಾತಾವರಣವಿದ್ದು, ನಿಧಾನಗತಿಯ ಕೆಲಸ ಕಾರ್ಯಗಳು ಚುರುಕಾಗಿ ನೆಮ್ಮದಿ ಬರುವುದು. ಪ್ರಿಯ ವ್ಯಕ್ತಿಯೊಂದಿಗೆ ವಿಚಾರ ವಿನಿಮಯ ಮಾಡಿಕೊಳ್ಳಲು ಅವಕಾಶ ಸಿಗುವುದು.

ಸಿಂಹ: ಸಹೋದರರಲ್ಲಿನ ಕೋರ್ಟು ವ್ಯವಹಾರಗಳನ್ನು ರಾಜಿ ಅಥವಾ ಸಂಧಾನ ಮೂಲಕ ಬಗೆ ಹರಿಸಿಕೊಳ್ಳುವ ಪ್ರಯತ್ನವನ್ನು ಮಾಡುವುದು ಒಳ್ಳೆಯದು. ಬದಲಾವಣೆಯ ಲಕ್ಷಣಗಳು ಕಣ್ಣಿಗೆ ಬೀಳಲಿವೆ.

ಕನ್ಯಾ: ತಂದೆ ತಾಯಿಯರ ಶುಶ್ರೂಷೆ, ಚಿಕಿತ್ಸೆ ಕಾರಣಕ್ಕೆ ಆರ್ಥಿಕ ಸ್ಥಿತಿಯಲ್ಲಿ ಏರುಪೇರು ಕಾಣುವಿರಿ. ವಿಮಾ ಕ್ಷೇತ್ರದಿಂದ ಆಗಬೇಕಾದ ಸಹಕಾರದಲ್ಲಿ ಗೊಂದಲಗಳು ಮೂಡಲಿವೆ. ದಿಢೀರ್ ಪ್ರಯಾಣ ಸಂಭವಿಸಬಹುದು.

ತುಲಾ: ಗೃಹ ನಿರ್ಮಾಣದಂತಹ ಕಾರ್ಯ ಕೈಗೊಂಡವರಿಗೆ ಆರ್ಥಿಕತೆ ಸ್ವಲ್ಪ ಮಟ್ಟಿನ ತೊಂದರೆಯನ್ನು ಸೃಷ್ಟಿ ಮಾಡುವುದು. ಶಿಲ್ಪಿಗಳಿಗೆ, ಸಮುದ್ರೋತ್ಪನ್ನಗಳ ಮಾರಾಟಗಾರರಿಗೆ ವೃತ್ತಿಯಲ್ಲಿ ಲಾಭ ಸಿಗಲಿದೆ.

ವೃಶ್ಚಿಕ: ಎಲ್ಲಾ ಆಸೆಗಳನ್ನು ಕೈಬಿಟ್ಟು ಜೀವನ ನಡೆಸುವ ಸಮಯದಲ್ಲಿ ಪುನಃ ಅದೃಷ್ಟ ಕೈ ಬೀಸಿ ಕರೆಯುವುದು. ಕೆಲಸಗಳು ನಿಧಾನಗತಿಯಲ್ಲಿ ಸಾಗುವುದಕ್ಕೆ ಮನಸ್ಸಿಗೆ ಬೇಸರ ಉಂಟಾಗುವುದು.

ಧನು: ಕೃಷಿಕ್ಷೇತ್ರದಲ್ಲಿ ಇರುವವರಿಗೆ ಅಧಿಕ ಲಾಭ. ಅದರಲ್ಲೂ ತರಕಾರಿ ಮಾರಾಟಗಾರರಿಗೆ ಕುಬೇರನ ಅನುಗ್ರಹವು ಸಿಗಲಿದೆ. ಹರಿತಾದ ವಸ್ತುಗಳ, ಯಂತ್ರಗಳ ಜೊತೆ ಕೆಲಸ ಮಾಡುವವರು ಜಾಗ್ರತರಾಗಿರಿ.

ಮಕರ: ವಂಶಪಾರಂಪರಿಕವಾಗಿ ಬಂದ ವ್ಯಾಪಾರ ಅಥವಾ ವೃತ್ತಿಯಲ್ಲಿ ಮತ್ತಷ್ಟು ಏಳಿಗೆ ಕಾಣಲಿದೆ. ಶತ್ರುಗಳ ಗಾಳಕ್ಕೆ ಸಿಕ್ಕಿಕೊಳ್ಳದಂತೆ ಎಚ್ಚರವಹಿಸಬೇಕು. ಸಮ್ಮಿಶ್ರ ಫಲವನ್ನು ಕಾಣುವಿರಿ.

ಕುಂಭ: ರಾಜಕಾರಣಿಗಳೊಂದಿಗೆ ಅಧಿಕವಾಗಿ ಬೆಳೆಸಿಕೊಂಡ ಒಡನಾಟವು ಕಾರಾಗೃಹ ವಾಸದಂತಹ ಅಪಾಯದ ಪರಿಸ್ಥಿತಿಯನ್ನು ತಂದೊಡ್ಡಲಿದೆ. ಆಸ್ತಿ ವಿಷಯಗಳನ್ನು ಬಗೆಹರಿಸಿಕೊಳ್ಳಲು ಹಿತೈಷಿಯೊಬ್ಬರ ನೆರವು ಪಡೆಯುವಿರಿ.

ಮೀನ: ವೃತ್ತಿ ಮಾಡುವ ಸ್ಥಳದಲ್ಲಿ ಯಾವುದೇ ವಾದ ವಿವಾದಗಳು ನಡೆಸಬೇಡಿ. ಇದು ಕಾರ್ಯ ಸಾಧನೆಗೆ ಅಡ್ಡಿಯಾಗುವುದು. ಹೊಸ ಬದುಕನ್ನು ಆರಂಭಿಸಲು ಅವಕಾಶದ ಬಾಗಿಲು ನಿಮಗಾಗಿ ತೆರೆದಿದೆ.

ಅಧ್ಯಯನಕ್ಕೆ ಹೆಚ್ಚು ಆಪ್ತವಾದ 'ಪದ್ಮಗಂಧಿ'

ಸಾಮಾನ್ಯವಾಗಿ ಸ್ಟಾರ್ ನಾಯಕರ ಸಿನಿಮಾಗಳಲ್ಲಿ ಮುಕ್ಕಾಲು ಭಾಗ ಸಿನಿಮಾ ಸ್ಟಾರ್ ನಟರೇ ಆವರಿಸಿಕೊಂಡಿರುತ್ತಾರೆ. ಅವರ ಅಭಿಮಾನಿಗಳಿಗಾಗಿಯೇ ಮಾಡಿದ ಸಿನಿಮಾಗಳವು. ಹೀಗಾಗಿ ಅಲ್ಲಿ ಮೊದಲು ನಾಯಕನಿಗೆ ಜಾಗ, ಉಳಿದರೆ ಕಥೆಗೆ, ನಾಯಕಿಗೆ, ಇತರೆ ನಟರಿಗೆ. ಅದೇ ರೀತಿಯ ಸಿನಿಮಾ 'ಪದ್ಮಗಂಧಿ'. ಇಲ್ಲಿ ನಾಯಕನ ಜಾಗದಲ್ಲಿ ಕಮಲವಿದೆಯಷ್ಟೆ! ಕಮಲದ ಹೂ, ಎಸಳು, ಬೀಜ, ದಂಟು...ಹೀಗೆ ಒಂದು ಕಮಲದಲ್ಲಿ ಏನೆಲ್ಲ ಭಾಗಗಳಿರಬಹುದೋ, ಕಮಲದಿಂದ ಏನೆಲ್ಲ ಮಾಡಬಹುದೋ ಅವೆಲ್ಲವೂ ಚಿತ್ರದಲ್ಲಿ ಬರುತ್ತವೆ. ಪ್ರತಿ ದೃಶ್ಯವೂ ಕಮಲದ್ದೇ, ಸಂಭಾಷಣೆಯೂ ಕಮಲಮಯ. ಚಿತ್ರ ಮುಗಿಯುವ ಹೊತ್ತಿಗೆ ಇದು ಬರಿ ಸಿನಿಮಾವಲ್ಲ, ಕಮಲದ ದಿಗ್ದರ್ಶನ ಎಂಬ ಭಾವ ಮೂಡಿರುತ್ತದೆ!

ರಾಮೋಹಳ್ಳಿಯಲ್ಲಿನ 'ಶುಭಂ ಕರೋತಿ–ಮೈತ್ರೇಯಿ ಗುರುಕುಲ' ಹೆಣ್ಣುಮಕ್ಕಳಿಗೆ ಸನಾತನ ಮಾದರಿಯ ಶಿಕ್ಷಣ ನೀಡುವ ವಿಶಿಷ್ಟ ತಾಣ. ಆ ಗುರುಕುಲವೇ ಕಥೆಯ ಕೇಂದ್ರಬಿಂದು. ಅಲ್ಲಿನ ವಿದ್ಯಾರ್ಥಿನಿ ಮಹಾಪದ್ಮಳಿಗೆ ಕಮಲದ ಕುರಿತು ಅತೀವ ಆಸಕ್ತಿ. ಕುಳಿತಲ್ಲಿ, ನಿಂತಲ್ಲಿ ಅದರದ್ದೇ ಧ್ಯಾನ. ಆಕೆ ಪದ್ಮ ಪುಷ್ಪದ ಮಜಲುಗಳು, ಇತಿಹಾಸ ಹುಡುಕಿಕೊಂಡು ಹೋಗುವುದು ಚಿತ್ರದ ಒಟ್ಟಾರೆ ಕಥೆ. ಇದರ ಹುಡುಕಾಟದ ಜತೆಗೆ ಗುರುಕುಲದಲ್ಲಿ ವಿದ್ಯಾರ್ಥಿನಿಯರ ದಿನಚರಿಯನ್ನು ತೆರೆದಿಡುವುದು ಒಂದು ಹೊಸ ಲೋಕವನ್ನು ಪರಿಚಯಿಸುತ್ತದೆ. ಪ್ರಮೋದ್ ಕಾಮತರು ನಡೆಸುವ ಈ ಗುರುಕುಲದಲ್ಲಿ ಸಂಸ್ಕೃತವೇ ಪ್ರಥಮ ಭಾಷೆ. ನಿತ್ಯದ ಪಾಠ–ಸಂಭಾಷಣೆಗಳು ಈ ಭಾಷೆಯಲ್ಲಿಯೇ ನಡೆಯುತ್ತವೆ. ಹೀಗಾಗಿ ಚಿತ್ರದುದ್ದಕ್ಕೂ ಕನ್ನಡದ ಜತೆ ಸಂಸ್ಕೃತ ಸಂಭಾಷಣೆಯೂ ಹೇರಳವಾಗಿದೆ.

ಮಹಾಪದ್ಮ, ಆಕೆಯ ಸಹಪಾಠಿಗಳು, ಗುರುಕುಲದ ಬೋಧಕ ವರ್ಗದ ಸುತ್ತವೇ ಕಥೆ ಸಾಗುತ್ತದೆ. ಈ ಗುರುಕುಲದ ಅಧ್ಯಾಪಕ ವೃಂದ ಮತ್ತು ಮಕ್ಕಳೆ ಚಿತ್ರದಲ್ಲಿ ನಟಿಸಿರುವುದರಿಂದ ಆ ಭಾಗ ಆಪ್ತವೆನಿಸುತ್ತದೆ. ಆಗಾಗ ಅತಿಥಿ ಪಾತ್ರಗಳಲ್ಲಿ ನಾಡಿನ ವಿದ್ವಾಂಸರು ಬಂದು ಕಮಲದ ವೈಶಿಷ್ಟ್ಯವನ್ನು ವಿವರಿಸಿ ಹೋಗುತ್ತಾರೆ. ಮಹಾಪದ್ಮಳ ನಟನೆ ಸಹಜ ಎನ್ನಿಸುತ್ತದೆ. ಗುರುಮಾತೆಯಾಗಿ ಪರಿಪೂರ್ಣ ಚಂದ್ರಶೇಖರ್ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಉಳಿದ ಹಲವು ಪಾತ್ರಗಳು ಕೆಲವು ಕಡೆ ನಾಟಕೀಯ ಎನ್ನಿಸುತ್ತವೆ.

ನಿರ್ದೇಶಕರು ಕಮಲದ ಕುರಿತು ಆಳವಾಗಿ ಅಧ್ಯಯನ ಮಾಡಿರುವುದು ಚಿತ್ರದಲ್ಲಿ ಬರುವ ಸನ್ನಿವೇಶಗಳಿಂದ ತಿಳಿಯುತ್ತದೆ.

ನಾವು ನೋಡಿದ ಸಿನಿಮಾ

ಪದ್ಮಗಂಧಿ (ಕನ್ನಡ)

- ನಿರ್ಮಾಣ:ಎಸ್.ಆರ್.ಲೀಲಾ
- ನಿರ್ದೇಶನ: ಸುಚೇಂದ್ರ ಪ್ರಸಾದ್
- ತಾರಾಗಣ: ಮಹಾಪದ್ಮ, ಪರಿಪೂರ್ಣ ಚಂದ್ರಶೇಖರ್, ಮೃತ್ಯುಂಜಯ ಶಾಸ್ತ್ರಿ, ಜಿ.ಎಲ್.ಭಟ್ ಮತ್ತಿತರರು.

ಈಗಾಗಲೇ ಕನ್ನಡ ಸಿನಿಮಾಗಳಲ್ಲಿ ಬಂದ ಕಮಲ ಕುರಿತಾದ ದೃಶ್ಯಗಳನ್ನು ಮಹಾಪದ್ಮಳ ಕಲಿಕೆಯ ಭಾಗದಲ್ಲಿ ಬಳಸಿರುವುದು ಚೆನ್ನಾಗಿದೆ. ಮಹಾಪದ್ಮಳ ಈ ಪಯಣಕ್ಕೆ ಒಂದು ಗಟ್ಟಿಯಾದ ಕಥೆ, ಪಾತ್ರದ ಹಿನ್ನೆಲೆ, ಸಂಬಂಧಗಳು, ತಿರುವುಗಳನ್ನು ನೀಡುವ ಅವಕಾಶ ನಿರ್ದೇಶಕರಿಗಿತ್ತು. ಇಡೀ ಕಥಾವಸ್ತು ವಿಷಯ ಕೇಂದ್ರೀತವಾಗಿರುವುದರಿಂದ, ಹೇಳಿಕೊಂಡು ಹೋದ ರೀತಿಯೂ ಕಮಲ ಕುರಿತು ಆಳವಾದ ಅಧ್ಯಯನಕ್ಕೆ ಹೆಚ್ಚು ಆಪ್ತವಾಗಿರುವುದರಿಂದ ಇದನ್ನು ಸಿನಿಮಾ ಬದಲು ಉತ್ತಮ ಸಾಕ್ಷ್ಯಚಿತ್ರವಾಗಿಸಬಹುದಿತ್ತು ಎಂಬ ಭಾವ ಅನೇಕ ಕಡೆಗಳಲ್ಲಿ ಮೂಡುತ್ತದೆ. ಸಾಕಷ್ಟು ದೃಶ್ಯಗಳು ಅರ್ಧ ಆಗಿರುವಾಗ ಮತ್ತೊಂದು ದೃಶ್ಯ ಪ್ರಾರಂಭವಾಗಿ ಆ ದೃಶ್ಯಗಳು ಅಪೂರ್ಣ ಎನ್ನಿಸುತ್ತವೆ. ತಾಂತ್ರಿಕವಾಗಿ ಸಂಕಲನ, ಸಂಗೀತಗಳನ್ನು ಇನ್ನಷ್ಟು ಉತ್ತಮವಾಗಿಸಬಹುದಿತ್ತು.

ವಿನಾಯಕ ಕೆ.ಎಸ್.

ಉಗ್ರಾಯುಧಮ್‌ನಲ್ಲಿ ಹೀಗಿದ್ದಾರೆ ಶ್ರೀಮುರಳಿ

2024ರಲ್ಲಿ ತೆರೆಕಂಡ 'ಬಘೀರ' ಸಿನಿಮಾ ಬಳಿಕ ನಟ ಶ್ರೀಮುರಳಿ ನಟನೆಯ ಸಿನಿಮಾಗಳಾವೂ ತೆರೆಕಂಡಿಲ್ಲ. ಸದ್ಯ 'ಪರಾಕ್' ಹಾಗೂ 'ಉಗ್ರಾಯುಧಮ್' ಎಂಬ ಎರಡು ಪ್ರಾಜೆಕ್ಟ್‌ಗಳಲ್ಲಿ ಶ್ರೀಮುರಳಿ ತೊಡಗಿಸಿಕೊಂಡಿದ್ದಾರೆ. ಬುಧವಾರ (ಡಿ.17) ಅವರ ಜನ್ಮದಿನದಂದು 'ಉಗ್ರಾಯುಧಮ್' ಚಿತ್ರದ ಪೋಸ್ಟರ್ ಬಿಡುಗಡೆಯಾಗಿದೆ.

ಜನ್ಮದಿನಕ್ಕೆ ಮೋಷನ್ ಪೋಸ್ಟರ್ ಬಿಡುಗಡೆ ಮಾಡಲು ಚಿತ್ರತಂಡ ಯೋಚಿಸಿತ್ತು. 'ಎಲ್ಲವೂ ಸಿದ್ಧವಾಗಿತ್ತು. ಸಣ್ಣದೊಂದು ಅಹಿತಕರ ಘಟನೆಯ ಕಾರಣದಿಂದ ಮೋಷನ್ ಪೋಸ್ಟರ್ ಬಿಡುಗಡೆ ಮುಂದೂಡಿದ್ದೇವೆ. ಇದು ವೈಯಕ್ತಿಕ ಕಾರಣ. ಹೀಗಾಗಿ ನಾನು ಹೆಚ್ಚೇನೂ ಕೇಳಲಿಲ್ಲ. ಶೀಘ್ರದಲ್ಲೇ ಸಿನಿಮಾದ ವಿಡಿಯೊವೊಂದನ್ನು ರಿಲೀಸ್ ಮಾಡಲಿದ್ದೇವೆ' ಎಂದಿದ್ದಾರೆ ಸಿನಿಮಾದ ನಿರ್ದೇಶಕ ಪುನೀತ್ ರುದ್ರನಾಗ್.

ಶ್ರೀಮುರಳಿ

'ಉಗ್ರಾಯುಧಮ್' ಏಳುನೂರು ವರ್ಷಗಳ ಹಿಂದಿನ ಪಿರಿಯಾಡಿಕ್ ಡ್ರಾಮಾ ಕಥಾಹಂದರ ಹೊಂದಿರುವ ಚಿತ್ರವಾಗಿದೆ. ಚಿತ್ರಕ್ಕಾಗಿ ಸಕಲೇಶಪುರದ ಬಳಿ 135 ಎಕರೆಯಲ್ಲಿ ಅದ್ದೂರಿ ಸೆಟ್ ಹಾಕಲಾಗಿದ್ದು, ಅಲ್ಲೇ ಹೆಚ್ಚಿನ ಚಿತ್ರೀಕರಣ ನಡೆಯಲಿದೆ. ನಟ ರಾಜ್‌ಕುಮಾರ್ ಅಭಿಮಾನಿಯಾಗಿರುವ ಪುನೀತ್ ಅವರಿಗೆ ಈ ಸಿನಿಮಾ ಮಾಡಲು ರಾಜ್‌ಕುಮಾರ್ ಅವರ ಐತಿಹಾಸಿಕ ಸಿನಿಮಾಗಳೇ ಸ್ಫೂರ್ತಿ. ಸುರಮ್ ಮೂವೀಸ್ ಲಾಂಛನದಲ್ಲಿ ಜಯರಾಮ್ ದೇವಸಮುದ್ರ ಈ ಚಿತ್ರಕ್ಕೆ ಬಂಡವಾಳ ಹೂಡುತ್ತಿದ್ದಾರೆ.

ಪೃಥ್ವಿ ಅಂಬಾರ್, ಶ್ವೇತಾ

ಶೀಘ್ರದಲ್ಲೇ 'ಚೌಕಿದಾರ್' ತೆರೆಗೆ

'ರಥಾವರ' ಸಿನಿಮಾ ನಿರ್ದೇಶಿಸಿದ್ದ ಚಂದ್ರಶೇಖರ್ ಬಂಡಿಯಪ್ಪ ಆ್ಯಕ್ಷನ್ ಕಟ್ ಹೇಳಿರುವ, ಪೃಥ್ವಿ ಅಂಬಾರ್ ಮುಖ್ಯಭೂಮಿಕೆಯಲ್ಲಿ ನಟಿಸಿರುವ 'ಚೌಕಿದಾರ್' ಚಿತ್ರ ಬಿಡುಗಡೆಗೆ ಸಜ್ಜಾಗಿದ್ದು, ಸಿನಿಮಾದ ಮೂರನೇ ಹಾಡು ಇತ್ತೀಚೆಗೆ ಬಿಡುಗಡೆಯಾಗಿದೆ.

ಅಪ್ಪ ಮಗನ ಬಾಂಧವ್ಯದ ಕುರಿತ ಈ ಸಿನಿಮಾದಲ್ಲಿ ಸಾಯಿಕುಮಾರ್ ಹಾಗೂ ಪೃಥ್ವಿ ಅಂಬಾರ್ ತಂದೆ–ಮಗನಾಗಿ ಜೊತೆಯಾಗಿದ್ದಾರೆ. ಪೃಥ್ವಿ ಅಂಬಾರ್ ಹಾಗೂ ಧನ್ಯಾ ರಾಮ್‌ಕುಮಾರ್ ಜೋಡಿಯಾಗಿ ನಟಿಸಿರುವ ಈ ಸಿನಿಮಾ ಫ್ಯಾಮಿಲಿ ಡ್ರಾಮಾ ಜಾನರ್‌ನಲ್ಲಿದೆ. 'ಇಷ್ಟ ಆದೆ ನೀನು..' ಎಂಬ ಹಾಡಿಗೆ ಪ್ರಮೋದ್ ಮರವಂತೆ ಸಾಹಿತ್ಯವಿದ್ದು, ಸಚಿನ್ ಬಸ್ರೂರ್ ಸಂಗೀತ ನೀಡಿದ್ದಾರೆ. ಹಾಡಿಗೆ ಪೃಥ್ವಿ ಭಟ್ ದನಿಯಾಗಿದ್ದಾರೆ. ಶ್ವೇತಾ, ಸುಧಾರಾಣಿ, ಧರ್ಮ, 'ಬಿಗ್‌ಬಾಸ್' ಖ್ಯಾತಿಯ ಗಿಲ್ಲಿ ನಟ ಸೇರಿದಂತೆ ಹಲವರು ತಾರಾಬಳಗದಲ್ಲಿದ್ದಾರೆ. ವಿ.ಎಸ್.ಎಂಟರ್‌ಟೇನ್ಮೆಂಟ್ ಬ್ಯಾನರ್‌ನಡಿ ಕಲ್ಲಹಳ್ಳಿ ಚಂದ್ರಶೇಖರ್ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ. ಬಿಡುಗಡೆಗೆ ಸಜ್ಜಾಗಿರುವ ಈ ಸಿನಿಮಾದ ಬಿಡುಗಡೆ ದಿನಾಂಕವನ್ನು ಖ್ಯಾತ ತಾರೆಯೊಬ್ಬರು ಶೀಘ್ರದಲ್ಲೇ ಘೋಷಣೆ ಮಾಡಲಿದ್ದಾರೆ ಎಂದು ಚಿತ್ರತಂಡ ತಿಳಿಸಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	25,860
ಇಂದಿನ ಅಂತ್ಯ:	25,818
ದಿನದ ಕನಿಷ್ಠ:	25,770

41

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು

100 ಕ್ಕೆ	₹690
12 ಕ್ಕೆ	₹96
ಮೈಸೂರು: 100 ಕ್ಕೆ	₹690

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹179.50
ಆರ್‌ಎಸ್‌ಎಸ್-5	₹174.50
ಗುಡ್ ಲಾಟ್	₹162.50

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹550-755
ದ್ವಿತಳಿ (ಬಿ.ವಿ)	₹489-890

ಮುದ್ರೆಮನೆ ಕಾಫಿ

ಎಪಿ	₹27100
ಎಸಿ	₹14980
ಆರ್‌ಪಿ	₹17900
ಆರ್‌ಸಿ	₹9675

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1500 (1520)
ಸೋಯಾ (ರಿಫೈನ್ಡ್)	₹1275 (1280)
ಸೂರ್ಯಕಾಂತಿ (ರಿಫೈನ್ಡ್)	₹1475 (1490)
ಪಾಮೋಲಿನ್	₹1245 (1245)

ಅಡಿಕೆ ಧಾರಣೆ

ಕುಮಟಾ		ಶಿರಸಿ			
ಚಾಲಿ	42089-47403	ಬೆಟ್ಟೆ	42099-47289	ರಾಶಿ	51099-57561
ಚಿಪ್ಪು	26269-35019	ಬಿಳಿಗೋಟು	20786-37599	**ಪುತ್ತೂರು**	
ಕೋಕ	12509-28029	ಚಾಲಿ	41141-48982	ಕೋಕ	20000-35000
ಫ್ಯಾಕ್ಟರಿ	6590-23829	ಕೆಂಪುಗೋಟು	21109-35099	ಹೊಸತು	26000-41000
ಹೊಸಚಾಲಿ	32869-39017			ಹಳತು	45000-54000

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನಮ್ಮ ಕಕ್ಷಿದಾರರು ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಚನ್ನರಾಯಪಟ್ಟಣ ಹೋಬಳಿ, ಬೂದಿಗೆರೆ ಗ್ರಾಮದ ರೀಸರ್ವೆ ನಂ. 3/2 ರಲ್ಲಿರುವ (ಹಳೆಯ ಸರ್ವೆ ನಂ. 3 ರ ಭಾಗ) 3 ಎಕರೆ 30 ಗುಂಟೆ ಮತ್ತು ಖರಾಬ್ 07 ಗುಂಟೆ ಅಳತೆಯ ಜಮೀನನ್ನು ಈ ಕೆಳಗೆ ಷೆಡ್ಯೂಲ್‌ನಲ್ಲಿ ("ಷೆಡ್ಯೂಲ್ ಸ್ವತ್ತು") ಸಂಪೂರ್ಣವಾಗಿ ವಿವರಿಸಲಾಗಿದ್ದು ಇದನ್ನು ಶ್ರೀ ಬಿ.ಎಸ್. ನಂಜುಂಡ ಭಟ್, ಬಿನ್ ಲೇಟ್ ಸೂರಪ್ಪ ಮತ್ತು ಅವರ ಕುಟುಂಬದ ಸದಸ್ಯರಿಂದ ಖರೀದಿಸಲು ಪ್ರಸ್ತಾಪಿಸಿರುತ್ತಾರೆ. ಸದರಿ ಸ್ವತ್ತು ಬೂದಿಗೆರೆ ಗ್ರಾಮದ ಹಳೆಯ ಸರ್ವೆ ನಂ. 3ರ ಅಳತೆ ಒಟ್ಟು 4 ಎಕರೆ 21 ಗುಂಟೆ ವಿಸ್ತೀರ್ಣ, 07 ಗುಂಟೆ ಖರಾಬ್ ಸೇರಿದಂತೆ ಇನಾಮ್ ಭೂಮಿಯಾಗಿದ್ದು ಶ್ರೀ ದೇಶ ನಾರಾಯಣಸ್ವಾಮಿ ದೇವಸ್ಥಾನಕ್ಕೆ ಸೇರಿದ್ದು ಮತ್ತು ಸದರಿ ಶ್ರೀ ಬಿ.ಎಸ್. ನಂಜುಂಡ ಭಟ್‌ರವರನ್ನು ಕರ್ನಾಟಕ (ಮತೀಯ ಮತ್ತು ಧಾರ್ಮಿಕ ಸಂಬಂಧವಾದ) ಇನಾಮ್ ರದ್ದಿಯಾಯ್ತಿ ಕಾಯ್ದೆ, 1955ರ ಅಡಿಯಲ್ಲಿ ದೇವನಹಳ್ಳಿ ತಾಲ್ಲೂಕಿನ ಭೂ ನ್ಯಾಯಮಂಡಳಿಯು 29ನೇ ಅಕ್ಟೋಬರ್ 1981ರ ಸಾಮಾನ್ಯ ಆದೇಶದ ನಂ. LRF (INA) ನಂ. 65/79–80, 792/79–80, 27, 10, 11, 12/79–80, 822/79–80, 823/79–80, 784/79–80, 162/80–81 ಮತ್ತು 163/80–81ರ ಪ್ರಕಾರ ಅನುಭೋಗಿ/ಹಿಡುವಾಳಿದಾರರು ಎಂದು ನೋಂದಾಯಿಸಲಾಗಿರುತ್ತದೆ. ಹಳೆಯ ಸರ್ವೆ ನಂ.3 ಸದರಿ ಭೂಮಿಯು ತರುವಾಯ ರೀಸರ್ವೆ ನಂ. 3/1 (24 ಗುಂಟೆಗಳು) ಮತ್ತು ರೀಸರ್ವೆ ನಂ. 3/2 (3 ಎಕರೆ 30 ಗುಂಟೆಗಳು ಮತ್ತು 07 ಖರಾಬ ಗುಂಟೆಗಳು) ಅಂದರೆ, ಷೆಡ್ಯೂಲ್ ಸ್ವತ್ತು ಎಂದು ಉಪವಿಭಾಗ ಮಾಡಲಾಗಿರುತ್ತದೆ.

ಸದರಿ ಸ್ವತ್ತಿನ ಮೇಲೆ ಯಾವುದೇ ವ್ಯಕ್ತಿ/ಗಳಿಗೆ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ ಅಥವಾ ಕ್ಲೇಮುಗಳು ಮತ್ತು ಆಕ್ಷೇಪಣೆಗಳು ಇದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ಹದಿನೈದು ದಿನಗಳ ಒಳಗೆ, ದಾಖಲೆ ಪುರಾವೆಗಳೊಂದಿಗೆ ತಮ್ಮ ಹಕ್ಕು ಅಥವಾ ಆಕ್ಷೇಪಣೆಗಳನ್ನು ನಮಗೆ ಸಲ್ಲಿಸಬಹುದು. ಈ ಅವಧಿಯೊಳಗೆ ಅಂತಹ ಯಾವುದೇ ಹಕ್ಕು ಅಥವಾ ಆಕ್ಷೇಪಣೆಗಳು ನಮಗೆ ಬರದಿದ್ದರೆ, ನಮ್ಮ ಕಕ್ಷಿದಾರರು ಸದರಿ ಸ್ವತ್ತಿನ ಮೇಲೆ ಯಾವುದೇ ವ್ಯಕ್ತಿ(ಗಳಿಂದ) ಯಾವುದೇ ಹಕ್ಕು/ಆಕ್ಷೇಪಣೆಗಳಿಲ್ಲ ಎಂದು ಪರಿಗಣಿಸುತ್ತಾರೆ ಮತ್ತು ಖರೀದಿಯ ವಹಿವಾಟನ್ನು ಮುಂದುವರಿಸುತ್ತಾರೆಂದು ತಿಳಿಸುವುದು.

ಷೆಡ್ಯೂಲ್

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಚನ್ನರಾಯಪಟ್ಟಣ ಹೋಬಳಿ, ಬೂದಿಗೆರೆ ಗ್ರಾಮದ ರೀಸರ್ವೆ ನಂ. 3/2ರಲ್ಲಿರುವ (ಹಳೆಯ ಸರ್ವೆ ನಂ.3 ರ ಭಾಗ) 3 ಎಕರೆ 30 ಗುಂಟೆ ಮತ್ತು ಖರಾಬ್ 07 ಗುಂಟೆ ಅಳತೆಯ ಸ್ವತ್ತಿಗೆ ಚೆಕ್ಕುಬಂದಿ–

ಪೂರ್ವಕ್ಕೆ : ಸರ್ವೆ ನಂ. 4.
ಪಶ್ಚಿಮಕ್ಕೆ : ಸರ್ವೆ ನಂ. 241,
ಉತ್ತರಕ್ಕೆ : ಬೂದಿಗೆರೆ ಕೆರೆ,
ದಕ್ಷಿಣಕ್ಕೆ : ಬಾಗಲೂರು – ದೇವನಹಳ್ಳಿ ರಸ್ತೆ ಮತ್ತು ಅದರಾಚೆಗೆ, ಮರು ಸರ್ವೆ ನಂ. 3/1

ಬೆಂಗಳೂರು
ದಿನಾಂಕ: 17–12–2025

ಮೆ॥ ಟಿ ಎಸ್ ಸುರೇಶ್ + ಅಸೋಸಿಯೇಟ್ಸ್
ವಕೀಲರು
ಫಾರ್ಚೂನ್ ಛೇಂಬರ್ಸ್, 2ನೇ ಮಹಡಿ, 8, ಲಾಲ್‌ಬಾಗ್ ರಸ್ತೆ, ರಿಚ್‌ಮಂಡ್ ಸರ್ಕಲ್, ಬೆಂಗಳೂರು–560 027.

ಉದ್ಯೋಗಾವಕಾಶ

Wanted

ಕಂಪನಿಗಳಿಗೆ ಆಫೀಸ್ ಗಳಿಗೆ ಬೇಕಾಗಿದ್ದಾರೆ. 7th,PUC, Degree ಡಿಪ್ಲೋಮೋದವರು ಯುವಕರು ಯುವತಿಯರಿಗೆ ಸಂಬಳ 20000, 45000 (ವಿದ್ಯಾರ್ಹತೆಹಿಲ್ಲದವರಿಗೂ) ವಸತಿಯೂಟವಿರುತ್ತದೆ. 9916788422.

ತನ್ಮಯಿ ಆಯಿಲ್ ಕಂಪನಿಯಲ್ಲಿ ಪ್ಯಾಕಿಂಗ್ ಮಾಡಲು 10 ಜನ ಯುವಕ ಯುವತಿಯರು ಬೇಕಾಗಿದ್ದಾರೆ. ಸಂಬಳ 15 ರಿಂದ 18 ಸಾವಿರ. ಶೇಷಾದ್ರಿಪುರಂ ಬೆಂಗಳೂರು 9019626612.

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಕರ್ನಾಟಕದ್ಯಾಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಗಳಿಗೆ ಪುರುಷರಿಗೆ, ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ ಆದ್ಯತೆ. 19,000ರಿಂದ 25,000 ಸಂಪಾದಿಸಿ. ಕೋರಿಯರ್ ಸೌಲಭ್ಯವಿದೆ. 9019593297, 8095133188.

ಪ್ಯಾಕೇಜ್ ಪ್ರವಾಸಗಳು ದುಬಾಯಿ, ಅಬುದಾಬಿ, ಶಾರ್ಜಾ 21.01.2026, ರಿಂದ 6 ದಿನಗಳು, ಸಿಂಗಾಪುರ್, ಮಲೇಶಿಯಾ, ಥೈಲ್ಯಾಂಡ್ 30.01.2026 ರಿಂದ 5/11 ದಿನಗಳು. ಜಪಾನ್ ಪ್ರವಾಸ 08.04.2026 ರಿಂದ 8 ದಿನಗಳು. ವಿಯೆಟ್ನಾಂ, ಕಾಂಬೋಡಿಯಾ 25.02.2026 ರಿಂದ 11 ದಿನಗಳು. ಕಾಶಿ, ಗಯಾ, ಚಿತ್ರಕೂಟ, ನೈಮಿಶಾರಣ್ಯ 05.02.2026, 04.03.2026 ರಿಂದ 8 ದಿನಗಳು. ಗುಜರಾತ್/ ಮಧ್ಯಪ್ರದೇಶ 20.01.2026, 28.01.2026 ರಿಂದ 8/11 ದಿನಗಳು. ರಾಜಸ್ಥಾನ 18.02.2026 ರಿಂದ 11 ದಿನಗಳು. ರಾಮೇಶ್ವರ, ಕನ್ಯಾಕುಮಾರಿ, ತ್ರಿವೇಂಡ್ರಂ 25.12.2025, 21.01.2026 ರಿಂದ 7 ದಿನಗಳು ಆನಂದ್ ವಿಹಾರಿ. ಬೆಂಗಳೂರು23 080 23385837, 8088887677

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 17,000/ ರಿಂದ 20,000/. ESI, PF ಸೌಲಭ್ಯವಿರುತ್ತದೆ. ಬೆಂಗಳೂರು76. ಸಂಪರ್ಕಿಸಿ: 96063 85001, 96063 84001

ಪ್ರವಾಸ

Travel

18/13/8 ದಿನಗಳ ಗ್ರಾಂಡ್ ಯುಕೆ ಮತ್ತು ಯುರೋಪ್ 10ದೇಶಗಳು. ಯುಕೆ, ಫ್ರಾನ್ಸ್ ನೆದರ್ಲ್ಯಾಂಡ್, ಬೆಲ್ಜಿಯಂ, ಜರ್ಮನಿ, ಸ್ವಿಜರ್ ಲ್ಯಾಂಡ್, ಲಿಚೆನ್ ಟೆನ್ ಸ್ಟೈನ್, ಇಟಲಿ ಆಸ್ಟ್ರೀಯಾ, ವ್ಯಾಟಿಕನ್ ವಿಮಾನ,ವೀಸಾ,ತೆರಿಗೆ, ಊಟ,ವಸತಿ, ಟಿಪ್ಸ್ ಇನ್ಸೂರೆನ್ಸ್ ಎಲ್ಲಾ ಪ್ರವಾಸದರದಲ್ಲಿ ಒಳಗೊಂಡಿರುತ್ತದೆ. ಸಂಪರ್ಕಿಸಿ. ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್, ಬಸವನಗುಡಿ, ಬೆಂಗಳೂರು-04, 9880079644, 9900080793, 9900080794

ಶ್ರೀಮಹಾದೇಶ್ವರ ಟೂರ್ಸ್ &.ಟ್ರಾವೆಲ್ಸ್, 08 ದಿನಗಳ ಕಾಶಿಪ್ರವಾಸ. 10ದಿನಗಳ ಗುಜರಾತ್ ಪ್ರವಾಸ. 06ದಿನಗಳ ಪುರಿಜಗನ್ನಾಥ್ ಪ್ರವಾಸ. 12ದಿನಗಳ ನೇಪಾಳಪ್ರವಾಸ. ಹೆಚ್ಚಿನ.ವಿವರಗಳಿಗಾಗಿ ಸಂಪರ್ಕಿಸಿ: 9611801143/ 9742810701.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಭಾರತ– ಇಥಿಯೋಪಿಯಾ: ಒಪ್ಪಂದಗಳಿಗೆ ಸಹಿ

ದ್ವಿಪಕ್ಷೀಯ ಪಾಲುದಾರಿಕೆಯಲ್ಲಿ ಮಹತ್ವದ ಹೆಜ್ಜೆ– ಪ್ರಧಾನಿ ಮೋದಿ ಬಣ್ಣನೆ

ಅಡಿಸ್ ಅಬಾಬಾ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಇಥಿಯೋಪಿಯಾ ಭೇಟಿ ವೇಳೆ ಉಭಯ ದೇಶಗಳ ನಡುವೆ ಕಸ್ಟಮ್ಸ್ ವಿಷಯಗಳಲ್ಲಿ ಪರಸ್ಪರ ಆಡಳಿತಾತ್ಮಕ ನೆರವು ಸೇರಿದಂತೆ ಮಹತ್ವದ ಮೂರು ಒಪ್ಪಂದಗಳಿಗೆ ಬುಧವಾರ ಸಹಿ ಹಾಕಲಾಯಿತು.

ವಿಶ್ವಸಂಸ್ಥೆಯ ಶಾಂತಿಪಾಲನಾ ಕಾರ್ಯಾಚರಣೆ ತರಬೇತಿ, ಇಥಿಯೋಪಿಯಾದ ವಿದೇಶಾಂಗ ವ್ಯವಹಾರಗಳ ಸಚಿವಾಲಯದಲ್ಲಿ ದತ್ತಾಂಶ ಕೇಂದ್ರ ಸ್ಥಾಪನೆ ಕುರಿತ ಒಪ್ಪಂದಕ್ಕೆ ಈ ವೇಳೆ ಸಹಿ ಮಾಡಲಾಯಿತು.

ಇದಕ್ಕೂ ಮುನ್ನ ಇಥಿಯೋಪಿಯಾದ ಪ್ರಧಾನಿ ಅಬಿ ಅಹ್ಮದ್ ಅಲಿ ಅವರ ಜತೆಗೆ ಮೋದಿ ಅವರು ವ್ಯಾಪಕ ಮಾತುಕತೆ ನಡೆಸಿದರು.

'ಈ ಒಪ್ಪಂದಗಳು ಜನ ಕೇಂದ್ರಿತ ಅಭಿವೃದ್ಧಿ ಮೇಲೆ ಕೇಂದ್ರೀಕರಿಸಿದ ದ್ವಿಪಕ್ಷೀಯ ಪಾಲುದಾರಿಕೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿವೆ' ಎಂದು ನರೇಂದ್ರ ಮೋದಿ ಬಣ್ಣಿಸಿದರು.

ಉಭಯ ದೇಶಗಳ ನಡುವೆ ಕಾರ್ಯತಂತ್ರದ ಪಾಲುದಾರಿಕೆ ನವೀಕರಣ, ಜಿ–20 ಅಡಿಯಲ್ಲಿ ಸಾಲ ಪುನರ್‌ರಚನೆ, ಶಿಕ್ಷಣ, ಆರೋಗ್ಯ, ಸಂಸ್ಕೃತಿ ಕ್ಷೇತ್ರಗಳಲ್ಲಿ ಸಹಕಾರ ಮತ್ತು ಸಂಬಂಧ ವೃದ್ಧಿಸಲು ಉಭಯ ನಾಯಕರು ಸಮ್ಮತಿಸಿದರು.

'ಎರಡೂ ದೇಶಗಳ ನಡುವೆ ದೀರ್ಘಕಾಲೀನ ಮತ್ತು ವಿಶ್ವಾಸಾರ್ಹ ಪಾಲುದಾರಿಕೆಯಲ್ಲಿ ಇವು ಪ್ರಮುಖ ನಿರ್ಧಾರಗಳಾಗಿವೆ' ಎಂದು ಪ್ರಧಾನಿ ನರೇಂದ್ರ ಮೋದಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಭಯೋತ್ಪಾದನೆ ವಿರೋಧಿ ಹೋರಾಟಕ್ಕೆ ಇಥಿಯೋಪಿಯಾ ಬಲವಾದ ಬೆಂಬಲ ವ್ಯಕ್ತಪಡಿಸಿದೆ. ಇದಕ್ಕಾಗಿ ಪ್ರಧಾನಿ ಮೋದಿ ಅವರು ಅಲ್ಲಿನ ಪ್ರಧಾನಿಗೆ ಧನ್ಯವಾದ ಅರ್ಪಿಸಿದ್ದಾರೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ (ಆರ್ಥಿಕ ಸಂಬಂಧ) ಸುಧಾಕರ್ ದಲೇಲಾ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮೋದಿ ಅವರು ಬುಧವಾರ ಇಥಿಯೋಪಿಯಾದಿಂದ ಒಮಾನ್‌ಗೆ ತೆರಳಿದರು.

ಮೋದಿಗೆ ಅತ್ಯುನ್ನತ ನಾಗರಿಕ ಪ್ರಶಸ್ತಿ

ಪ್ರಧಾನಿ ನರೇಂದ್ರ ಮೋದಿ ಅವರಿಗೆ ಇಥಿಯೋಪಿಯಾದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ದಿ ಗ್ರೇಟ್ ಆನರ್ ನಿಶಾನ್ ಆಫ್ ಇಥಿಯೋಪಿಯಾ' ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಇಥಿಯೋಪಿಯಾದ ಪ್ರಧಾನಿ ಅಬಿ ಅಹ್ಮದ್ ಅಲಿ ಪ್ರದಾನ ಮಾಡಿದರು.

'ಈ ಪ್ರಶಸ್ತಿಯನ್ನು ಭಾರತದ 140 ಕೋಟಿ ನಾಗರಿಕರಿಗೆ ಅರ್ಪಿಸುತ್ತೇನೆ' ಎಂದು ಮೋದಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ. ಇದು ಮೋದಿ ಅವರಿಗೆ ದೊರೆತ 28ನೇ ಅಂತರ-ರಾಷ್ಟ್ರೀಯ ಪ್ರಶಸ್ತಿಯಾಗಿದೆ. ಅಲ್ಲದೆ ಇಥಿಯೋಪಿಯಾದ ಅತ್ಯುನ್ನತ ಪ್ರಶಸ್ತಿಯನ್ನು ಪಡೆದ ಮೊದಲ ಜಾಗತಿಕ ನಾಯಕ (ದೇಶವೊಂದರ ಮುಖ್ಯಸ್ಥ) ಮೋದಿ ಆಗಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರಿಗೆ ಇಥಿಯೋಪಿಯಾದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ದಿ ಗ್ರೇಟ್ ಆನರ್ ನಿಶಾನ್ ಆಫ್ ಇಥಿಯೋಪಿಯಾ' ಪ್ರಶಸ್ತಿಯನ್ನು ಅಲ್ಲಿನ ಪ್ರಧಾನಿ ಅಬಿ ಅಹ್ಮದ್ ಅಲಿ ಪ್ರದಾನ ಮಾಡಿದರು —ಪಿಟಿಐ ಚಿತ್ರ

ವಂದೇ ಮಾತರಂ ಗೀತೆ ಗಾಯನ

ಪ್ರಧಾನಿ ನರೇಂದ್ರ ಮೋದಿ ಅವರಿಗಾಗಿ ಇಥಿಯೋಪಿಯಾದ ಪ್ರಧಾನಿ ಅಬಿ ಅಹ್ಮದ್ ಅಲಿ ಅವರು ಆಯೋಜಿಸಿದ್ದ ಔತಣಕೂಟದಲ್ಲಿ ಮೂವರು ಗಾಯಕರು ವಂದೇ ಮಾತರಂ ಗೀತೆ ಗಾಯನ ಪ್ರಸ್ತುತಪಡಿಸಿದರು.

ಈ ಕುರಿತ ವಿಡಿಯೊವನ್ನು 'ಎಕ್ಸ್'ನಲ್ಲಿ ಹಂಚಿಕೊಂಡಿರುವ ಮೋದಿ, 'ಇದು ತುಂಬಾ ಹೃದಯಸ್ಪರ್ಶಿ ಕ್ಷಣವಾಗಿತ್ತು' ಎಂದು ಬಣ್ಣಿಸಿದ್ದಾರೆ.

'ಜಂಟಿ ಅಧಿವೇಶನದಲ್ಲಿ ಮೋದಿ ಭಾಷಣ'

ಭಾರತ ಮತ್ತು ಇಥಿಯೋಪಿಯಾ ದೇಶಗಳು ಪ್ರಾದೇಶಿಕ ಶಾಂತಿ, ಭದ್ರತೆ ಕ್ಷೇತ್ರದಲ್ಲಿ ಪಾಲುದಾರರು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಇಥಿಯೋಪಿಯಾದ ಸಂಸತ್ತಿನಲ್ಲಿ ಬುಧವಾರ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡಿದ ಅವರು, 'ಎರಡೂ ದೇಶಗಳ ಪೂರ್ವಿಕರು ಕೇವಲ ಪದಾರ್ಥಗಳನ್ನಷ್ಟೇ ಅಲ್ಲದೆ ವಿಚಾರ ಮತ್ತು ಜೀವನ ವಿಧಾನವನ್ನು ವಿನಿಮಯ ಮಾಡಿಕೊಂಡಿದ್ದಾರೆ' ಎಂದು ತಿಳಿಸಿದರು.

'ಪ್ರಜಾಪ್ರಭುತ್ವವು ಒಂದು ಜೀವನ ವಿಧಾನ ಮತ್ತು ಪ್ರಯಾಣ ಎಂಬುದನ್ನು ಎರಡೂ ದೇಶಗಳು ಅರ್ಥಮಾಡಿ ಕೊಂಡಿವೆ' ಎಂದು ಅವರು ವಿವರಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಭಾಷಣ ಮಾಡಿದ ವಿಶ್ವದ 18ನೇ ಸಂಸತ್ತು ಇದಾಗಿದೆ.

ರಾಷ್ಟ್ರೀಯ ಪಿಂಚಣಿ ಯೋಜನೆಯ ನಿಯಮ ಬದಲಾಯಿಸಿದ ಪಿಎಫ್‌ಆರ್‌ಡಿಎ

ಎನ್‌ಪಿಎಸ್ ಆಧರಿಸಿ ಇನ್ನು ಸಾಲ ಸೌಲಭ್ಯ

ನವದೆಹಲಿ (ಪಿಟಿಐ): ರಾಷ್ಟ್ರೀಯ ಪಿಂಚಣಿ ಯೋಜನೆಯ (ಎನ್‌ಪಿಎಸ್) ನಿಯಮಗಳನ್ನು ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರವು (ಪಿಎಫ್‌ಆರ್‌ಡಿಎ) ಪರಿಷ್ಕರಿಸಿದ್ದು, ಎನ್‌ಪಿಎಸ್ ಖಾತೆಯನ್ನು ಅಡಮಾನವಾಗಿ ಇರಿಸಿ ಸಾಲ ಪಡೆಯುವ ಸೌಲಭ್ಯ ಕಲ್ಪಿಸಿದೆ.

ಪಿಎಫ್‌ಆರ್‌ಡಿಎ ನಿಗದಿಪಡಿಸಿದ ಮಿತಿಯ ಒಳಗೆ, ನಿಯಂತ್ರಣಕ್ಕೆ ಒಳಪಟ್ಟ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಬಹುದು ಎಂದು ಡಿಸೆಂಬರ್ 12ರ 'ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ನಿಯಮಗಳು–2025'ರಲ್ಲಿ ಹೇಳಲಾಗಿದೆ.

ಸರ್ಕಾರೇತರ ಚಂದಾದಾರರು ಎನ್‌ಪಿಎಸ್ ವ್ಯವಸ್ಥೆಯಿಂದ ಹೊರನಡೆಯುವ ಸಂದರ್ಭದಲ್ಲಿ ಖಾತೆಯಲ್ಲಿನ ಶೇಕಡ 80ರವರೆಗಿನ ಮೊತ್ತವನ್ನು ಹಿಂಪಡೆಯಲು ಅವಕಾಶ ಕಲ್ಪಿಸಲಾಗಿದೆ. ಇದುವರೆಗೆ ಶೇ 60ರವರೆಗಿನ ಮೊತ್ತವನ್ನು ಮಾತ್ರ ಹಿಂಪಡೆಯಲು ಅವಕಾಶ ಇತ್ತು. ಇನ್ನುಳಿದ ಶೇ 40ರಷ್ಟು ಮೊತ್ತವನ್ನು ಆ್ಯನ್ಯುಟಿ ಯೋಜನೆ ಖರೀದಿಸಲು ಬಳಸಬೇಕಿತ್ತು.

ಹೊಸ ನಿಯಮಗಳು ಅವು ಅಧಿಸೂಚನೆಯಲ್ಲಿ ಪ್ರಕಟವಾದ ದಿನದಿಂದ ಜಾರಿಗೆ ಬರಲಿವೆ.

ಪಿಂಚಣಿ ನಿಧಿಯಲ್ಲಿ ಒಗ್ಗೂಡಿರುವ ಮೊತ್ತವು ₹8 ಲಕ್ಷಕ್ಕಿಂತ ಕಡಿಮೆ ಇದ್ದರೆ, ಅಷ್ಟೂ ಮೊತ್ತವನ್ನು ಒಂದೇ ಬಾರಿಗೆ ಹಿಂಪಡೆಯುವ ಅವಕಾಶ ಇರುತ್ತದೆ. ಅಥವಾ, ಆ ಮೊತ್ತವನ್ನು ಕಾಲಕಾಲಕ್ಕೆ ವ್ಯವಸ್ಥಿತ ಹಿಂತೆಗೆತದ ಮೂಲಕ ಪಡೆಯಲು ಕೂಡ ಅವಕಾಶ ಇರಲಿದೆ.

ಎನ್‌ಪಿಎಸ್ ಮೊತ್ತವನ್ನು ಇನ್ನು ಮುಂದೆ ಒಟ್ಟು ನಾಲ್ಕು ಬಾರಿ ಭಾಗಶಃ ಹಿಂಪಡೆಯಲು ಅವಕಾಶ ಇರಲಿದೆ. ಆದರೆ ಒಂದು ಬಾರಿ ಹಿಂಪಡೆದ ನಂತರ ನಾಲ್ಕು ವರ್ಷ ಮತ್ತೆ ಹಿಂಪಡೆಯಲು ಅವಕಾಶ ಸಿಗುವುದಿಲ್ಲ.

ಸರ್ಕಾರಿ ವಲಯದ ಎನ್‌ಪಿಎಸ್ ಚಂದಾದಾರರಿಗೆ 85 ವರ್ಷ ವಯಸ್ಸಾಗುವವರೆಗೂ ಎನ್‌ಪಿಎಸ್‌ನಲ್ಲಿ ಮುಂದುವರಿಯಲು ಅವಕಾಶ ನೀಡಲಾಗಿದೆ. ಈ ಮೊದಲು ಇದಕ್ಕೆ 75 ವರ್ಷ ವಯಸ್ಸಿನ ಮಿತಿ ಇತ್ತು.

ರಾಜೀನಾಮೆ, ಕೆಲಸದಿಂದ ವಜಾ ಕಾರಣದಿಂದಾಗಿ ಎನ್‌ಪಿಎಸ್‌ನಿಂದ ಹೊರನಡೆಯುವ ಸರ್ಕಾರಿ ನೌಕರರು ಎನ್‌ಪಿಎಸ್‌ನಲ್ಲಿ ಶೇ 80ರಷ್ಟು ಮೊತ್ತವನ್ನು ಆ್ಯನ್ಯುಟಿ ಖರೀದಿಗೆ ಬಳಸಬೇಕು. ಇನ್ನುಳಿದ ಮೊತ್ತವನ್ನು ಅವರು ಹಿಂಪಡೆಯಬಹುದು.

ಸರ್ಕಾರೇತರ ವಿಭಾಗ ಹಾಗೂ ಎನ್‌ಪಿಎಸ್–ಲೈಟ್ ವಿಭಾಗದವರು ಕೂಡ ತಮಗೆ 85 ವರ್ಷ ವಯಸ್ಸಾಗುವವರೆಗೂ ಹೂಡಿಕೆಯನ್ನು ಮುಂದುವರಿಸಲು ಹೊಸ ನಿಯಮಗಳಲ್ಲಿ ಅವಕಾಶ ನೀಡಲಾಗಿದೆ.

ಮುಂಬೈ ಧಾರಣೆ (ಶೇಂಗಾ)

17-12-2025	
ಜಾವಾ 70/80(ಹೊಸ)	10600-10700
ಜಾವಾ 80/90(ಹೊಸ)	9900-10000
ದಪ್ಪ ಮಧ್ಯಪ್ರದೇಶ (ಹೊಸ)	7600-7700
ದಪ್ಪ ಗುಜರಾತ್ (ಹೊಸ)	8900-9000
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1510 (1530)
ಒಂದು ವಾರದ ಡೆಲಿವರಿ	1505 (1525)
ಪಾಮ್ ವಾರದ ಡೆಲಿವರಿ	1243 (1243)
ಸೂರ್ಯಕಾಂತಿ ಎಣ್ಣೆ ಕಚ್ಚಾ	1415 (1420)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,32,500 (1,31,800)
ಬೆಳ್ಳಿ ಕೆ.ಜಿಗೆ	2,00,000 (1,92,300)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ದೆಹಲಿ: ಬೆಳ್ಳಿ ದರ ₹2 ಲಕ್ಷ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ನಡೆದ ವಹಿವಾಟಿನಲ್ಲಿ ಕೆ.ಜಿ ಬೆಳ್ಳಿ ಧಾರಣೆಯು ಇದೇ ಮೊದಲ ಬಾರಿಗೆ ₹2 ಲಕ್ಷ ದಾಟಿದೆ.

ಕೆ.ಜಿ ಬೆಳ್ಳಿ ಧಾರಣೆ ₹7,300ರಷ್ಟು ಹೆಚ್ಚಳವಾಗಿ, ₹2,05,800ರಂತೆ ಮಾರಾಟವಾಗಿದೆ. ಜಾಗತಿಕ ಮತ್ತು ದೇಶಿ ಮಾರುಕಟ್ಟೆಯಲ್ಲಿ ಬೆಳ್ಳಿಗೆ ಹೆಚ್ಚಿದ ಬೇಡಿಕೆಯು ಬೆಲೆ ಏರಿಕೆಗೆ ಕಾರಣ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ. ಮಂಗಳವಾರದ ವಹಿವಾಟಿನಲ್ಲಿ ಬೆಳ್ಳಿ ಬೆಲೆಯು ಕೆ.ಜಿಗೆ ₹1,98,500 ಇತ್ತು. 10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹600 ಹೆಚ್ಚಳವಾಗಿ, ₹1,36,500 ಆಗಿದೆ ಎಂದು ತಿಳಿಸಿದೆ.

ಬೆಂಗಳೂರಿನಲ್ಲಿ ಕೆ.ಜಿ. ಬೆಳ್ಳಿ ದರ ಈಗಾಗಲೇ ₹2 ಲಕ್ಷದ ಗಡಿ ದಾಟಿ, ₹2,13,000 ಆಗಿದೆ.

ಹೆದ್ದಾರಿ: ರಾಜ್ಯಕ್ಕೆ ಅನುದಾನ ಭಾರಿ ಕಡಿತ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳಿಗೆ ಅನುದಾನ ಪ್ರಮಾಣವನ್ನು ಕೇಂದ್ರ ಹೆದ್ದಾರಿ ಹಾಗೂ ಭೂಸಾರಿಗೆ ಸಚಿವಾಲಯ 2025–26ನೇ ಸಾಲಿನಲ್ಲಿ ಭಾರಿ ಕಡಿತ ಮಾಡಿದೆ.

2023–24ರಲ್ಲಿ ₹12,695 ಕೋಟಿ ನೀಡಿದ್ದರೆ, 2024–25ರಲ್ಲಿ ₹11,147 ಕೋಟಿ ಹಂಚಿಕೆ ಮಾಡಲಾಗಿತ್ತು. ಈ ವರ್ಷ ನವೆಂಬರ್ ಅಂತ್ಯದವರೆಗೆ ಕೊಟ್ಟಿರುವುದು ₹6,604 ಕೋಟಿ ಮಾತ್ರ. ರಾಜ್ಯಸಭೆಯಲ್ಲಿ ಬುಧವಾರ ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್ ಸದಸ್ಯ ಜಿ.ಸಿ. ಚಂದ್ರಶೇಖರ್ ಕೇಳಿದ ಪ್ರಶ್ನೆಗೆ ಕೇಂದ್ರ ಹೆದ್ದಾರಿ ಹಾಗೂ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ನೀಡಿರುವ ಲಿಖಿತ ಉತ್ತರದಲ್ಲಿ ಈ ಮಾಹಿತಿ ಇದೆ.

'ರಾಜ್ಯದಲ್ಲಿ ಹಲವು ಹೆದ್ದಾರಿ ಕಾಮಗಾರಿಗಳು ಆಮೆಗತಿಯಲ್ಲಿದ್ದು, ಅನೇಕ ಯೋಜನೆಗಳ ಭೂಸ್ವಾಧೀನ ಪ್ರಕ್ರಿಯೆಯೇ ಮುಗಿದಿಲ್ಲ. ಕಾಲಮಿತಿಯಲ್ಲಿ ಕಾಮಗಾರಿ ಮುಗಿಸದಿದ್ದರೆ ಅನುದಾನ ಒದಗಿಸುವುದಿಲ್ಲ' ಎಂದು ಸಚಿವರು ರಾಜ್ಯ ಸರ್ಕಾರಕ್ಕೆ ಈ ಹಿಂದೆ ಎಚ್ಚರಿಸಿದ್ದರು.

ಹೆದ್ದಾರಿಗಳ ಕಾಮಗಾರಿಗೆ ಅನುದಾನ



ಅಂಕಿ ಅಂಶಗಳು

1,611 ಕಿ.ಮೀ
ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಹೆದ್ದಾರಿ ನಿರ್ಮಾಣ

207 ಕಿ.ಮೀ.
ಈ ವರ್ಷ ನಿರ್ಮಾಣವಾದ ಹೆದ್ದಾರಿ

2,200 ಕಿ.ಮೀ.
ಹೆದ್ದಾರಿ ಕಾಮಗಾರಿಗಳು ಪ್ರಗತಿಯಲ್ಲಿ

ಹಾಕ್ಸ್, ಈಗಲ್ಸ್ ತಂಡಗಳಿಗೆ ಗೆಲುವು

ಉದ್ಯಾನನಗರಿಯಲ್ಲಿ ವಿಶ್ವ ಟೆನಿಸ್ ಲೀಗ್ ಆರಂಭ
ಹಿನ್ನಡೆಯಿಂದ ಚೇತರಿಸಿಕೊಂಡು ಗೆದ್ದ ಸ್ವಿಟೋಲಿನಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಪ್ರಸಿದ್ಧ ಆಟಗಾರರಾದ ಡೇನಿಯಲ್ ಮೆಡ್ವೆಡೇವ್, ಡೆನಿಸ್ ಶಪೊವಲೋವ್, ನಿಕ್ ಕಿರ್ಗಿಯೋಸ್, ಆಟಗಾರ್ತಿಯರಾದ ಎಲಿನಾ ಸ್ವಿಟೋಲಿನಾ, ಮಾರ್ತಾ ಕೊಸ್ಟಿಯುಕ್, ಪೌಲಾ ಬಡೋಸಾ ಮೊದಲಾದವರ ಆಟವನ್ನು ಉದ್ಯಾನಗರಿಯ ಟೆನಿಸ್ ಅಭಿಮಾನಿಗಳು ಕಣ್ತುಂಬಿಕೊಂಡರು. ಬುಧವಾರ ಆರಂಭವಾದ ವಿಶ್ವ ಟೆನಿಸ್ ಲೀಗ್‌ನಲ್ಲಿ ಭಾರತ–ವಿದೇಶಿ ಆಟಗಾರರನ್ನು ಒಳಗೊಂಡ ತಂಡಗಳ ನಡುವೆ ಉತ್ತಮ ಹೋರಾಟವೂ ಕಂಡುಬಂತು.

ಆಗಾಗ ಕ್ರೀಡಾ ತಾರೆಯರ ಜೊತೆ ಸಿನಿ ತಾರೆಯರೂ ಲೀಗ್‌ಗೆ ಹಾಜರಾಗಿ ರಂಗೇರಿಸಿದರು. ಕಬ್ಬನ್‌ಪಾರ್ಕ್‌ನ ಎಸ್‌.ಎಂ.ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ಬಿಸಿಲು ಇಳಿಯುತ್ತಿದ್ದಂತೆ ಪ್ರೇಕ್ಷಕರೂ ಭರ್ತಿಯಾಗತೊಡಗಿದರು. ಲೀಗ್‌ನ ಉದ್ಘಾಟನಾ ಪಂದ್ಯದಲ್ಲಿ ಹಾಕ್ಸ್ ತಂಡ 25–21 ಪಾಯಿಂಟ್‌ಗಳಿಂದ ಕೈಟ್ಸ್ ತಂಡವನ್ನು ಸೋಲಿಸಿತು.

ಹಿನ್ನಡೆಯಿಂದ ಗೆದ್ದ ಎಲಿನಾ: ಹಾಕ್ಸ್ ತಂಡಕ್ಕೆ ಮೊದಲ ಡಬಲ್ಸ್ ಪಂದ್ಯ ಆಡಿದ ಎಲಿನಾ ಸ್ವಿಟೋಲಿನಾ (ಉಕ್ರೇನ್)– ಮಾಯಾ ಆರ್.ರೇವತಿ ಜೋಡಿ 7–5 ರಿಂದ ಕೈಟ್ಸ್ ತಂಡದ ಉಕ್ರೇನ್ ಆಟಗಾರ್ತಿ ಮಾರ್ತಾ ಕೊಸ್ಟಿಯುಕ್– ಭಾರತದ ಅಂಕಿತಾ ರೈನಾ ಜೋಡಿಯನ್ನು ಸೋಲಿಸಿತು.

ನಂತರ ಸಿಂಗಲ್ಸ್‌ನಲ್ಲಿ ಸ್ವಿಟೋಲಿನಾ ಹಿನ್ನಡೆಯಿಂದ ಚೇತರಿಸಿ ಮಾರ್ತಾ ಅವರನ್ನು 7–5 ರಿಂದ ಮಣಿಸಿ ಹಾಕ್ಸ್ ತಂಡದ ಮುನ್ನಡೆ ಹೆಚ್ಚಿಸಿದರು. ಒಂದು ಹಂತದಲ್ಲಿ ಮಾರ್ತಾ 4–1 ರಿಂದ, ಬಳಿಕ 5–3ರಲ್ಲಿ ಮುನ್ನಡೆಯಲ್ಲಿದ್ದರು. ಪಂದ್ಯದ ಪಾಯಿಂಟ್ ಪಡೆಯುವ ಅವಕಾಶವನ್ನೂ ಹೊಂದಿದ್ದರು. ಆದರೆ ಈ ಹಂತದಲ್ಲಿ ತಪ್ಪುಗಳನ್ನೆಸಗಿದರು. ಒಂದು ಡಬಲ್ ಫಾಲ್ಟ್, ಒಂದು ‘ಲಾಬ್’ ಹೊಡೆತ ಆಚೆ ಬಿದ್ದ ಕಾರಣ ಮಾರ್ತಾ ಗೇಮ್ ಕಳೆದುಕೊಂಡರು. ಹೀಗಾಗಿ ಚೇತರಿಸಿದ ಸ್ವಿಟೋಲಿನಾ ಗೇಮ್ ಬ್ರೇಕ್ ಮಾಡಿ, ನಂತರ ಪಂದ್ಯವನ್ನೂ ಗೆದ್ದರು.

ಎರಡನೇ ಡಬಲ್ಸ್‌ನಲ್ಲಿ ಕೈಟ್ಸ್‌ನ ನಿಕ್ ಕಿರ್ಗಿಯೋಸ್/ ದಕ್ಷಿಣೇಶ್ವರ ಸುರೇಶ್ 6–4 ರಿಂದ ಹಾಕ್ಸ್ ತಂಡಕ್ಕೆ ಆಡಿದ ಕೆನಡಾದ ಶಪೊವಲೋವ್/ ಯುಕಿ ಭಾಂಬ್ರಿ ಜೋಡಿಯನ್ನು ಸೋಲಿಸಿತು. ಗಾಯ ಮತ್ತು ಶಸ್ತ್ರಚಿಕಿತ್ಸೆಯ ನಂತರ ಪುನರಾಗಮನದ ಯತ್ನದಲ್ಲಿರುವ ಆಸ್ಟ್ರೇಲಿಯಾದ ಆಟಗಾರ ಕಿರ್ಗಿಯೋಸ್ ಅವರು ಸುರೇಶ್ ಅವರೊಂದಿಗೆ ತಮ್ಮ ಆಟದ ಮೂಲಕ ಪ್ರೇಕ್ಷಕರನ್ನು ರಂಜಿಸಿದರು.

‘ನಾನು ಅರ್ಧ ಮಲೇಷ್ಯಾದವನು. ಹೀಗಾಗಿ ಇಲ್ಲಿನ ಸಂಸ್ಕೃತಿ, ಆಹಾರ ಅಲ್ಲಿನಂತೆ ಇದ್ದು, ತವರಿನಲ್ಲಿದ್ದಂತೆ ಭಾಸವಾಯಿತು. ಹಾಕ್ಸ್ ತಂಡವನ್ನು ಗೆಲ್ಲಿಸಲಾಗಲಿಲ್ಲ. ಆದರೆ ಮುಂದಿನ ಪಂದ್ಯಗಳಲ್ಲಿ ಉತ್ತಮ ಆಟವಾಡಲು ಯತ್ನಿಸುವೆ’ ಎಂದು ಕಿರ್ಗಿಯೋಸ್ ಹೇಳಿದರು.

ಕೊನೆಯ (ಸಿಂಗಲ್ಸ್) ಪಂದ್ಯದಲ್ಲಿ ವಿಶ್ವದ 23ನೇ ಕ್ರಮಾಂಕದ ಆಟಗಾರ ಶಪೊವಲೋವ್ 7–5 ರಿಂದ ದಕ್ಷಿಣೇಶ್ವರ ಸುರೇಶ್ ಅವರನ್ನು ಹಿಮ್ಮೆಟ್ಟಿಸಿದರು. ಮೊದಲ 10 ಗೇಮ್‌ಗಳಲ್ಲಿ ಇಬ್ಬರಿಂದಲೂ ಸಮಬಲದ ಆಟ ಕಂಡುಬಂತು. ಅದರಲ್ಲೂ ಸುರೇಶ್ ತಮ್ಮ ಭರ್ಜರಿ ಸರ್ವ್‌ಗಳ ಮೂಲಕವೇ ಹೆಚ್ಚಿನ ಪಾಯಿಂಟ್ಸ್ ಪಡೆದರು. ಆದರೆ ಶಪೊವಲೋವ್ 11ನೇ ಗೇಮ್‌ನಲ್ಲಿ ನಿರ್ಣಾಯಕ ಬ್ರೇಕ್ ಪಡೆದರು. ಆ ಗೇಮ್‌ನಲ್ಲಿ ಸ್ಕೋರ್ 30–30 ಆಗಿದ್ದ ವೇಳೆ ಎರಡು ಅಮೋಘ ಬ್ಯಾಕ್‌ಹ್ಯಾಂಡ್ ಹೊಡೆತಗಳಿಂದ ಅಂಕ ಪಡೆದು ಗೇಮ್ ಪಡೆದ ಕೆನಡಾದ ಆಟಗಾರ ನಂತರ ಪಂದ್ಯವನ್ನೂ ತಮ್ಮದಾಗಿಸಿಕೊಂಡರು.

ಈಗಲ್ಸ್‌ಗೆ ಜಯ: ಹೊನಲು ಬೆಳಕಿನಡಿ ನಡೆದ ದಿನದ ಎರಡನೇ ಪಂದ್ಯದಲ್ಲಿ ಈಗಲ್ಸ್ ತಂಡ 18–16 ರಿಂದ ಫಾಲ್ಕನ್ಸ್ ತಂಡವನ್ನು ಮಣಿಸಿತು. ಮಗ್ದಾ ಲಿನೆಟ್ (ಫಾಲ್ಕನ್ಸ್) ಅವರು 6–4 ರಿಂದ ಪೌಲಾ ಬಡೋಸಾ (ಈಗಲ್ಸ್) ಅವರನ್ನು ಸೋಲಿಸಿದರು. ಡಬಲ್ಸ್‌ನಲ್ಲಿ ಬಡೋಸಾ– ಸುಮಿತ್ ನಗಾಲ್ ಜೋಡಿ (ಈಗಲ್ಸ್) 6–1 ರಿಂದ ರೋಹನ್ ಬೋಪಣ್ಣ– ಮಗ್ದಾ ಜೋಡಿಯನ್ನು ಮಣಿಸಿದ್ದರಿಂದ ಪಂದ್ಯ ಕುತೂಹಲ ಕೆರಳಿಸಿತು. ನಂತರ ಇನ್ನೊಂದು ಡಬಲ್ಸ್‌ನಲ್ಲಿ ಬೋಪಣ್ಣ– ಡೇನಿಯಲ್ ಮೆಡ್ವೆಡೇವ್ (ಫಾಲ್ಕನ್ಸ್) 6–2 ರಿಂದ ನಗಾಲ್– ಗೇಲ್ ಮಾನ್ಫಿಲ್ಸ್ (ಈಗಲ್ಸ್) ಜೋಡಿಯನ್ನು ಸೋಲಿಸಿತು. ಕೊನೆಯ ಸಿಂಗಲ್ಸ್‌ನಲ್ಲಿ ಮಾನ್ಫಿಲ್ಸ್ 6–3 ರಿಂದ ಮೆಡ್ವೆಡೇವ್ (ಫಾಲ್ಕನ್ಸ್) ಅವರನ್ನು ಸೋಲಿಸಿದರು.



ಹಾಕ್ಸ್ ತಂಡದ ಸಿಂಗಲ್ಸ್ ಪಂದ್ಯದಲ್ಲಿ ಗೆದ್ದ ಎಲಿನಾ ಸ್ವಿಟೋಲಿನಾ

ಪ್ರಜಾವಾಣಿ ಚಿತ್ರಗಳು: ಬಿ.ಕೆ.ಜನಾರ್ದನ

ತಾರೆಯರ ದಂಡು

ಟೆನಿಸ್ ಅಭಿಮಾನಿಗಳಿಗೆ ಒಂದು ಕಡೆ ಅಗ್ರ ಟೆನಿಸಿಗರ ಆಟವನ್ನು ಆಸ್ವಾದಿಸುವ ಜೊತೆಗೆ ಇನ್ನೊಂದೆಡೆ ಸಿನಿ ತಾರೆಯನ್ನು ವೀಕ್ಷಿಸುವ ಅವಕಾಶವೂ ದೊರೆಯಿತು. ಮೊದಲ ದಿನ ಪಂದ್ಯ ವೀಕ್ಷಿಸಲು ಆಗಾಗ ಚಿತ್ರತಾರೆಯರು ಬಂದು ಹೋದರು. ರಕುಲ್ ಪ್ರೀತ್ ಸಿಂಗ್, ಕಾರ್ತಿಕ್ ಆರ್ಯನ್, ಅನನ್ಯಾ ಪಾಂಡೆ, ಜಾಕ್ವೆಲಿನ್ ಫರ್ನಾಂಡಿಸ್ ಮೊದಲ ದಿನ ಆಗಮಿಸಿದ್ದರು. ಭಾರತದ ದಿಗ್ಗಜ ಕ್ರಿಕೆಟಿಗ ಕಪಿಲ್ ದೇವ್ ಅವರೂ ಗಣ್ಯರ ಗ್ಯಾಲರಿಯಲ್ಲಿದ್ದು ಕೆಲಹೊತ್ತು ಪಂದ್ಯ ವೀಕ್ಷಿಸಿದರು.

ಮಾಜಿ ಕ್ರಿಕೆಟಿಗ ಕಪಿಲ್ ದೇವ್, ಬಾಲಿವುಡ್ ನಟ ಕಾರ್ತಿಕ್ ಆರ್ಯನ್ ಮತ್ತು ನಟಿ ಅನನ್ಯಾ ಪಾಂಡೆ ಭಾಗವಹಿಸಿದ್ದರು

ಅಸಮಾಧಾನ: ಆಟಗಾರರು ಪ್ರವೇಶಿಸಲು ನಿರ್ಮಿಸಿದ್ದ ದ್ವಾರವು, ಕ್ರೀಡಾಂಗಣದ ಎಡಭಾಗದ ಪ್ರೇಕ್ಷಕರಿಗೆ ಪಂದ್ಯ ವೀಕ್ಷಣೆಗೆ ಅಡ್ಡಿಯಾಗುತ್ತಿತ್ತು. ಹೀಗಾಗಿ ಮೊದಲ ಪಂದ್ಯ ಮೊದಲ ಗೇಮ್ ವೇಳೆ ಆ ಕಡೆಯ ಎದ್ದುನಿಂತು ಅಸಮಾಧಾನ ವ್ಯಕ್ತಪಡಿಸಿದರು. ಹೀಗಾಗಿ ಪಂದ್ಯವನ್ನು ಐದು ನಿಮಿಷ ಸ್ಥಗಿತಗೊಳಿಸಿ, ಪ್ರೇಕ್ಷಕರನ್ನು ಪಕ್ಕದ ಸ್ಟ್ಯಾಂಡ್‌ಗೆ ಸ್ಥಳಾಂತರಿಸಲಾಯಿತು. ಸುಮಾರು ಎರಡು ಸಾವಿರ ಪ್ರೇಕ್ಷಕರು ಪಂದ್ಯ ವೀಕ್ಷಿಸಿದರು. ಮೊದಲ ಬಾರಿ ಈ ಲೀಗ್ ಭಾರತದಲ್ಲಿ ನಡೆಯುತ್ತಿದೆ.

‘ವಾಡಾ’ದ 2024ರ ಪರೀಕ್ಷೆಗಳ ವರದಿಯ ಮಾಹಿತಿ
ಭಾರತದಲ್ಲಿ ಡೋಪಿಂಗ್ ಪಿಡುಗು ಉಲ್ಬಣ

ನವದೆಹಲಿ (ಪಿಟಿಐ): ಭಾರತದ ಕ್ರೀಡಾ ರಂಗದಲ್ಲಿ ಉದ್ದೀಪನ ಮದ್ದು ಸೇವನೆ ಪಿಡುಗು ಉಲ್ಬಣಗೊಂಡಿದೆ. 5000 ಅಥವಾ ಅದಕ್ಕಿಂತ ಹೆಚ್ಚಿನ ಪರೀಕ್ಷೆಗಳನ್ನು ನಡೆಸಲಾದ ದೇಶಗಳ ಪೈಕಿ ಮದ್ದುಸೇವನೆ ಸಾಬೀತಾದ ಪ್ರಕರಣಗಳ ಸಂಖ್ಯೆ ಭಾರತದಲ್ಲೇ ಹೆಚ್ಚು ಇದೆ. ವಿಶ್ವ ಉದ್ದೀಪನ ಮದ್ದುಸೇವನೆ ತಡೆ ಘಟಕದ (ವಾಡಾ) 2024ರ ಪರೀಕ್ಷಾ ಅಂಕಿಸಂಖ್ಯೆಗಳ ವರದಿಯಲ್ಲಿ ಈ ವಿಷಯ ದೃಢಪಟ್ಟಿದೆ.



ವಾಡಾ ವರದಿಯ ಪ್ರಕಾರ, ಭಾರತದಲ್ಲಿ 2024ರಲ್ಲಿ ಉದ್ದೀಪನ ಮದ್ದುಸೇವನೆಗೆ ಸಂಬಂಧಿಸಿ 7113 ಮಂದಿಯ ಪರೀಕ್ಷೆಗಳನ್ನು (6576 ಮೂತ್ರ ಮಾದರಿ ಮತ್ತು 537 ರಕ್ತ ಮಾದರಿ) ನಡೆಸಲಾದೆ. ಇದರಲ್ಲಿ 260 ಮಂದಿ ಮದ್ದುಸೇವನೆ ಮಾಡಿರುವುದು ದೃಢಪಟ್ಟಿದೆ. ಪಾಸಿಟಿವಿಟಿ ದರ ಶೇ 3.6 ಆಗಿದ್ದು, ಇದು ಪ್ರಮುಖ ರಾಷ್ಟ್ರಗಳ ಪೈಕಿ ಅತಿ ಹೆಚ್ಚು ಎನಿಸಿದೆ.

2036ರ ಒಲಿಂಪಿಕ್ಸ್ ಆತಿಥ್ಯ ವಹಿಸಲು ಉತ್ಸುಕವಾಗಿರುವ ಭಾರತದ ಬಿಡ್‌ನ ಮೌಲ್ಯಮಾಪನ ನಡೆಯಬೇಕಾಗಿದ್ದು, ಉದ್ದೀಪನ ಮದ್ದುಸೇವನೆ ವಿಷಯದಲ್ಲಿ ಕಳಪೆ ದಾಖಲೆ ಕಳವಳಕ್ಕೆ ಕಾರಣವಾಗಿದೆ. ‘ಈ ಅಂಕಿ ಅಂಶಗಳು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಕಳವಳ ಮೂಡಿಸುವಂತೆ ಕಾಣಬಹುದು. ಆದರೆ ಡೋಪಿಂಗ್ ಪಿಡುಗಿಗೆ ತಡೆಹಾಕಲು ಭಾರತ ಕೈಗೊಂಡ ಪ್ರಯತ್ನಗಳನ್ನೂ ಇದು ಸೂಚಿಸುತ್ತಿದೆ. ಪರೀಕ್ಷೆಗಳ ಸಂಖ್ಯೆಯನ್ನೂ ಹೆಚ್ಚಿಸಲಾಗಿದೆ ಮತ್ತು ಉದ್ದಿಪನಾ ಮದ್ದುಸೇವನೆ ಮಾಡುವವರನ್ನು ಪತ್ತೆ ಮಾಡಲು ಹೆಚ್ಚಿನ ಕ್ರಮಗಳನ್ನು ಕೈಗೊಂಡಿರುವುದರಿಂದ ಪಾಸಿಟಿವಿಟಿ ದರ ಹೆಚ್ಚಾಗಿದೆ’ ಎಂದು ರಾಷ್ಟ್ರೀಯ ಉದ್ದೀಪನ ಮದ್ದು ಸೇವನೆ ತಡೆ ಘಟಕ (ನಾಡಾ) ಹೇಳಿದೆ.

2023ರ ಪರೀಕ್ಷಾ ಅಂಕಿಅಂಶಗಳಲ್ಲಿ ಪಾಸಿಟಿವಿಟಿ ದರ ಶೇ 3.8ರಷ್ಟಿತ್ತು. 5606 ಮಂದಿಯ ಪರೀಕ್ಷೆಯಲ್ಲಿ 213 ಮಂದಿ ಮದ್ದುಸೇವನೆ ಮಾಡಿದ್ದು ದೃಢಪಟ್ಟಿತ್ತು.

ಚೀನಾ 2024ರಲ್ಲಿ 24,214 ಪರೀಕ್ಷೆಗಳನ್ನು ನಡೆಸಿದ್ದು, ಪಾಸಿಟಿವಿಟಿ ದರ ಶೇ 0.2ರಷ್ಟಿದೆ. ಅಮೆರಿಕದ ಉದ್ದೀಪನ ಮದ್ದು ಸೇವನೆ ತಡೆ ಘಟಕ ಕಡಿಮೆ ಪರೀಕ್ಷೆ ಗಳನ್ನು (6592) ನಡೆಸಿದ್ದು, ಸಿಕ್ಕಿಬಿದ್ದವರ ಪ್ರಮಾಣ ಶೇ 1.1ರಷ್ಟಿದೆ.

ಈ ಹಿಂದೆ ಉದ್ದೀಪನ ಮದ್ದುಸೇವನೆ ಪಿಡುಗು ನಿಭಾಯಿಸುವಲ್ಲಿ ವಿಫಲವಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಕುಖ್ಯಾತಿ ಪಡೆದಿದ್ದ ರಷ್ಯಾ 10,514 ಪರೀಕ್ಷೆಗಳನ್ನು ನಡೆಸಿದ್ದು, ಪಾಸಿಟಿವಿಟಿ ದರ ಶೇ 0.7ರಷ್ಟು ಇದೆ. ಅಂದರೆ ಪರೀಕ್ಷೆಗೊಳಗಾದವರಲ್ಲಿ 76 ಮಂದಿ ಮಾತ್ರ ಮದ್ದುಸೇವನೆ ಮಾಡಿದ್ದು ದೃಢಪಟ್ಟಿದೆ.

ಪಾಕಿಸ್ತಾನ ಮತ್ತು ಮಂಗೋಲಿಯಾದಲ್ಲಿ ಪಾಸಿಟಿವಿಟಿ ದರ ಭಾರತಕ್ಕಿಂತ ಹೆಚ್ಚು ಇದೆ. ಆದರೆ ಅಲ್ಲಿ ನಡೆಸಲಾದ ಉದ್ದೀಪನ ಮದ್ದುಸೇವನೆ ಪರೀಕ್ಷೆಗಳ ಸಂಖ್ಯೆ ತೀರಾ ಕಡಿಮೆಯಿದೆ. 2025ರಲ್ಲಿ ‘ನಾಡಾ’ ಇದುವರೆಗೆ 7068 ಪರೀಕ್ಷೆಗಳನ್ನು ಕೈಗೊಂಡಿದ್ದು,110 ಮಂದಿ ಮಾತ್ರ ತಪ್ಪಿತಸ್ಥರೆನಿಸಿದ್ದು, ಪಾಸಿಟಿವಿಟಿ ದರ ಶೇ 1.5ರಷ್ಟು ಇದೆ.

ಫಿಫಾ ವಿಶ್ವಕಪ್ ವಿಜೇತ ತಂಡಕ್ಕೆ ₹452 ಕೋಟಿ ಬಹುಮಾನ

ಪ್ಯಾರಿಸ್ (ಎಎಫ್‌ಪಿ): 2026ರ ಫುಟ್‌ಬಾಲ್ ವಿಶ್ವಕಪ್ ವಿಜೇತ ತಂಡವು ₹452.06 ಕೋಟಿ ಬಹುಮಾನ ಪಡೆಯಲಿದೆ ಎಂದು ಫಿಫಾ ಬುಧವಾರ ತಿಳಿಸಿದೆ.

ಟೂರ್ನಿಯು ಒಟ್ಟು ₹5921 ಕೋಟಿ ಬಹುಮಾನ ಮೊತ್ತವನ್ನು ಒಳಗೊಂಡಿದೆ. 2022ರಲ್ಲಿ ಕತಾರ್‌ನಲ್ಲಿ ನಡೆದ ಕೊನೆಯ ಟೂರ್ನಿಗಿಂತ ಶೇ 50ರಷ್ಟು (₹3978 ಕೋಟಿ) ಬಹುಮಾನ ಮೊತ್ತ ಹೆಚ್ಚಳವಾಗಿದೆ.

ಮುಂದಿನ ವರ್ಷ ಜೂನ್ 11ರಿಂದ ಜುಲೈ 19ರವರೆಗೆ ಅಮೆರಿಕ, ಮೆಕ್ಸಿಕೊ ಮತ್ತು ಕೆನಡಾ ದೇಶಗಳ ಜಂಟಿ ಆತಿಥ್ಯದಲ್ಲಿ ಟೂರ್ನಿ ನಡೆಯಲಿದೆ.

ಟಿಟಿ: ಗೌರವ್, ತನಿಷ್ಕಾಗೆ ಕಿರೀಟ

ಬೆಂಗಳೂರು: ಬಿ.ಆರ್.ಗೌರವ್ ಮತ್ತು ತನಿಷ್ಕಾ ಕಪಿಲ್ ಕಾಲಭೈರವ ಅವರು ಮಲ್ಲೇಶ್ವರದ ಕೆನರಾ ಯೂನಿಯನ್‌ನಲ್ಲಿ ನಡೆಯುತ್ತಿರುವ ಸಿ.ವಿ.ಎಲ್. ಶಾಸ್ತ್ರಿ ಸ್ಮಾರಕ ರಾಜ್ಯ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ 19 ವರ್ಷದೊಳಗಿನ ಬಾಲಕರ ಮತ್ತು ಬಾಲಕಿಯರ ಸಿಂಗಲ್ಸ್ ಪ್ರಶಸ್ತಿ ಗೆದ್ದರು.

ಬುಧವಾರ ನಡೆದ ಬಾಲಕರ ಫೈನಲ್‌ನಲ್ಲಿ ಗೌರವ್ 2-11, 7-11, 11-4, 11-8, 11-7, 11-9ರಿಂದ ವರುಣ್ ಕಶ್ಯಪ್ ಅವರನ್ನು ಮಣಿಸಿದರು. ಸೆಮಿಫೈನಲ್‌ನಲ್ಲಿ ಗೌರವ್ 11-5, 6-11, 9-11, 11-9, 11-6ರಿಂದ ಅಭಿನವ್ ಮೂರ್ತಿ ಎದುರು; ವರುಣ್ 11-4, 11-6, 9-11, 6-11, 11-9ರಿಂದ ಅರ್ಣವ್ ಎನ್. ಎದುರು ಗೆಲುವು ಸಾಧಿಸಿದ್ದರು.

ಪ್ರಶಸ್ತಿ ಗೆದ್ದ ಬಿ.ಆರ್.ಗೌರವ್ ಮತ್ತು ತನಿಷ್ಕಾ ಕಪಿಲ್ ಕಾಲಭೈರವ

ಬಾಲಕಿಯರ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ತನಿಷ್ಕಾ 11-7, 11-6, 4-11, 11-8, 11-7ರಿಂದ ಹಿಮಾಂಶಿ ಚೌಧರಿ ಅವರನ್ನು ಸೋಲಿಸಿದರು. ನಾಲ್ಕರ ಘಟ್ಟದ ಹಣಾಹಣಿಯಲ್ಲಿ ತನಿಷ್ಕಾ 11-8, 9-11, 11-4, 11-8ರಿಂದ ರಾಶಿ ವಿ.ರಾವ್ ವಿರುದ್ಧ; ಹಿಮಾಂಶಿ 11-9, 11-7, 11-2ರಿಂದ ಹಿಯಾ ಸಿಂಗ್ ವಿರುದ್ಧ ಜಯ ಗಳಿಸಿದ್ದರು.

ತೆಂಡೂಲ್ಕರ್ ಭೇಟಿ

ಭಾರತ ಮತ್ತು ಶ್ರೀಲಂಕಾದ ಆತಿಥ್ಯದಲ್ಲಿ ನಡೆದ ಅಂಧ ಮಹಿಳೆಯರ ಟಿ20 ಕ್ರಿಕೆಟ್ ಚೊಚ್ಚಲ ವಿಶ್ವಕಪ್ ವಿಜೇತ ಭಾರತ ತಂಡದ ಆಟಗಾರ್ತಿಯರು ಮಂಗಳವಾರ ಮುಂಬೈನ ಎಂಐಜಿ ಕ್ರಿಕೆಟ್ ಕ್ಲಬ್‌ನಲ್ಲಿ ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ಅವರನ್ನು ಭೇಟಿಯಾದರು. ತಂಡದ ಆಟಗಾರ್ತಿಯರ ಸಹಿಯುಳ್ಳ ಬ್ಯಾಟ್ ಮತ್ತು ಚೆಂಡನ್ನು ನಾಯಕಿ, ಕರ್ನಾಟಕದ ದೀಪಿಕಾ ಟಿ.ಸಿ. ಅವರು ಸಚಿನ್ ಅವರಿಗೆ ಹಸ್ತಾಂತರಿಸಿದರು.

‘ಚೆನ್ನೈ ತಂಡಕ್ಕೆ ಟ್ರೋಫಿ ಕಾಣಿಕೆ ನೀಡುವುದೇ ನನ್ನ ಗುರಿ’

ನವದೆಹಲಿ(ಪಿಟಿಐ): ಯುವ ಬ್ಯಾಟರ್ ಸರ್ಫರಾಜ್ ಖಾನ್ ಅವರು ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ ಕೃತಜ್ಞತೆ ಸಲ್ಲಿಸಿದ್ದಾರೆ.

ಅಬುಧಾಬಿಯಲ್ಲಿ ಮಂಗಳವಾರ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಮಿನಿ ಹರಾಜು ಪ್ರಕ್ರಿಯೆಯಲ್ಲಿ ಮುಂಬೈನ ಸರ್ಫರಾಜ್ ಅವರನ್ನು ಚೆನ್ನೈ ತಂಡವು ₹ 75 ಲಕ್ಷಕ್ಕೆ ಖರೀದಿಸಿತ್ತು. ಇದೇ ದಿನ ಸೈಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಯ ಪಂದ್ಯದಲ್ಲಿ ಸರ್ಫರಾಜ್ ಅವರು 22 ಎಸೆತಗಳಲ್ಲಿ 73 ರನ್ ಗಳಿಸಿದ್ದರು. ಆದರೆ ಬಿಡ್‌ನ ಮೊದಲ ಸುತ್ತಿನಲ್ಲಿ ಸರ್ಫರಾಜ್ ಅವರನ್ನು ಯಾವುದೇ ಫ್ರ್ಯಾಂಚೈಸಿಯೂ ಖರೀದಿ ಮಾಡಿರಲಿಲ್ಲ. ಕೊನೆಯ ಸುತ್ತಿನಲ್ಲಿ ಚೆನ್ನೈ ತಂಡವು ಮುಂಬೈ ಆಟಗಾರನಿಗೆ ಮಣೆ ಹಾಕಿತು.

ಸರ್ಫರಾಜ್

‘ನನಗೆ ಹೊಸ ಜೀವನ ನೀಡಿದ್ದಕ್ಕೆ ಸಿಎಸ್‌ಕೆಗೆ ಧನ್ಯವಾದಗಳು. 2026ರಲ್ಲಿ ಚೆನ್ನೈ ತಂಡವು ಟ್ರೋಫಿ ಜಯಿಸುವಂತೆ ಮಾಡುವುದೇ ನನ್ನ ಧ್ಯೇಯ’ ಎಂದು ಸರ್ಫರಾಜ್ ಅವರು ಇನ್ಸ್ಟಾಗ್ರಾಮ್‌ನಲ್ಲಿ ಬರೆದಿದ್ದಾರೆ.

2023ರಲ್ಲಿ ಅವರು ಡೆಲ್ಲಿ ಕ್ಯಾಪಿಟಲ್ಸ್ ತಂಡದಲ್ಲಿ ಆಡಿದ್ದರು. ನಂತರದ ಎರಡು ಆವೃತ್ತಿಗಳಲ್ಲಿ ಫ್ರ್ಯಾಂಚೈಸಿಗಳ ಗಮನ ಸೆಳೆಯುವಲ್ಲಿ ಅವರು ವಿಫಲರಾಗಿದ್ದರು.

ಅಂತರರಾಷ್ಟ್ರೀಯ ಕಾನೂನಿನಡಿ ಪರಿಸರ ಸಂರಕ್ಷಣೆ

ಚೆನ್ನೈ : ಭವಿಷ್ಯದ ಪೀಳಿಗೆಗೆ ಉತ್ತಮ ಪರಿಸರ ಉಳಿಸಿಕೊಡುವ ಕ್ರಮಗಳನ್ನು ಕೈಗೊಳ್ಳಬೇಕಿದೆ ಎಂದು ನೆದರ್ ಲ್ಯಾಂಡ್ಸ್‌ನ ಹೇಗ್ ಅಂತರರಾಷ್ಟ್ರೀಯ ನ್ಯಾಯಾಲಯದ ನ್ಯಾ.ಲಿಯೋನಾರ್ಡೋ ನೆಮರ್ ಕಾಲ್ಡೀರಾ ಬ್ರಾಂಟ್ ಹೇಳಿದರು.

ಚೆನ್ನೈನ ವಿಐಟಿ ಕ್ಯಾಂಪಸ್‌ನಲ್ಲಿ ‘ಅಂತರರಾಷ್ಟ್ರೀಯ ಕಾನೂನಿನಡಿ ಪರಿಸರ ಸಂರಕ್ಷಣೆ ಸಮ್ಮೇಳನದಲ್ಲಿ ಪಾಲ್ಗೊಂಡು, ರಾಷ್ಟ್ರಮಟ್ಟದಲ್ಲಿ ಪರಿಸರ ಮಾಲಿನ್ಯ ತಡೆಗಟ್ಟಲು ಅಂತರರಾಷ್ಟ್ರೀಯ ನ್ಯಾಯಾಲಯ(ಐಸಿಜೆ) ಸಮರ್ಪಕ ಕ್ರಮ ಕೈಗೊಳ್ಳಬೇಕು. ಅಂತರರಾಷ್ಟ್ರೀಯ ಪರಿಸರ ಕಾನೂನುಗಳು, ಹವಾಮಾನ ಬದಲಾವಣೆ ಕಾನೂನುಗಳ ರಚನೆ ಮತ್ತು ಕಾರ್ಯಗತದಲ್ಲಿ ಅಂತರರಾಷ್ಟ್ರೀಯ ನ್ಯಾಯಾಲಯದ ಪಾತ್ರ ಅನಿವಾರ್ಯ ಎಂದರು.



ಸಮ್ಮೇಳನದಲ್ಲಿ ವಿಐಟಿ ಉಪಾಧ್ಯಕ್ಷರಾದ ಡಾ.ಜಿ.ವಿ.ಸೆಲ್ವಂ, ನೆದರ್ಲ್ಯಾಂಡ್ಸ್‌ನ ಹೇಗ್ ನ್ಯಾಯಾಲಯದ ನ್ಯಾ.ಲಿಯೊನಾರ್ಡೋ ನೆಮರ್ ಕಾಲ್ಡೀರಾ ಬ್ರಾಂಟ್, ಮದ್ರಾಸ್‌ನ ಹೈಕೋರ್ಟ್ ನ್ಯಾ.ಆರ್.ಸುರೇಶ್‌ಕುಮಾರ್ ಇದ್ದರು.

ವಿಐಟಿ ಉಪಾಧ್ಯಕ್ಷರಾದ ಡಾ.ಜಿ.ವಿ.ಸೆಲ್ವಂ, ಪರಿಸರ ಮಾಲಿನ್ಯ ತಡೆ ಮತ್ತು ಕಾನೂನಿನ ಪಾಲನೆಯ ಮೂಲಕ ಭೂಮಿಯ ಸಂರಕ್ಷಣೆ ಸಾಧ್ಯವಾಗಲಿದೆ. ಆ ಮೂಲಕ ಭವಿಷ್ಯದ ಪೀಳಿಗೆಗೆ ಉತ್ತಮ ವಾತಾವರಣವನ್ನು ಕೊಡುಗೆಯಾಗಿ ನೀಡಬಹುದು. ಅಂತರರಾಷ್ಟ್ರೀಯ ಕಾನೂನುಗಳು ಸುಸ್ಥಿರ ಅಭಿವೃದ್ಧಿ, ಪರಿಸರ ಹಾನಿ ತಡೆಗಟ್ಟಲು ಪ್ರಬಲ ಚೌಕಟ್ಟನ್ನು ನೀಡಿವೆ. ಹೀಗಾಗಿ, ಈ ಮಾಹಿತಿಗಳನ್ನು ಪ್ರತಿಯೊಬ್ಬರು ತಿಳಿದುಕೊಳ್ಳುವುದು ಮಾತ್ರವಲ್ಲದೆ ಪರಿಸರ ಸಂರಕ್ಷಣೆಯಲ್ಲಿ ಪಾಲ್ಗೊಳ್ಳಬೇಕಿದೆ. ಈ ವಿಚಾರದಲ್ಲಿ ವಿಐಟಿ ಸದಾ ಮುಂದಿದೆ ಎಂದರು.

ಮದ್ರಾಸ್ ಹೈಕೋರ್ಟ್ ನ್ಯಾಯಾಧೀಶರಾದ ನ್ಯಾ.ಆರ್. ಸುರೇಶ್‌ಕುಮಾರದ ಮಾತನಾಡಿ, ಜಾಗತಿಕ ಪರಿಸರ ಸಂರಕ್ಷಣೆಗೆ ಪ್ರತ್ಯೇಕ ‘ಅಂತರರಾಷ್ಟ್ರೀಯ ನ್ಯಾಯಾಲಯ’ ಬೇಕೆನ್ನುವ ಹಕ್ಕೊತ್ತಾಯ ಅನೇಕ ವರ್ಷಗಳಿಂದಲೂ ಚಾಲ್ತಿಯಲ್ಲಿದೆ. 1980, 1989ರಲ್ಲಿ ಈ ಪ್ರಯತ್ನಗಳು ನಡೆದಿದ್ದವು. ಬಳಿಕ 2008ರಲ್ಲಿ ಮತ್ತಷ್ಟು ಪ್ರಬಲವಾಗಿ ಪ್ರಯತ್ನ ನಡೆದಿತ್ತು. ಪ್ರಪಂಚದಾದ್ಯಂತ 20ಸಾವಿರಕ್ಕೂ ಅಧಿಕ ವಕೀಲರನ್ನೊಳಗೊಂಡ ಅಂತರರಾಷ್ಟ್ರೀಯ ವಕೀಲರ ಸಂಘ ಈ ಕುರಿತಂತೆ ಪ್ರಯತ್ನ ಮುಂದುವರೆಸಿದೆ ಎಂದರು.

ಕಾರ್ಯಕ್ರಮದಲ್ಲಿ ವಿಐಟಿ ಚೆನ್ನೈನ ಉಪಕುಲಪತಿ ಪ್ರೊ.ಟಿ.ತ್ಯಾಜರಾಜನ್, ವಿಐಟಿ ಕಾನೂನು ಕಾಲೇಜಿನ ಡೀನ್ ಪ್ರೊ.ಡಾ.ಸಿ.ರಬ್ಬಿರಾಜ್, ಪ್ರಾಧ್ಯಾಪಕ ಪ್ರೊ.ಡಾ.ಪಿಆರ್‌ಎಲ್. ರಾಜಾ ವೆಂಕಟೇಶನ್ ಇದ್ದರು.

ಪ್ರಸ್ತುತಿ : ಪಿವಿ ಬ್ರ್ಯಾಂಡ್ ಸ್ಪಾಟ್

ಆ್ಯಷಸ್ ಟೆಸ್ಟ್: ಅಲೆಕ್ಸ್ ಶತಕ ಆಸ್ಟ್ರೇಲಿಯಾ ಉತ್ತಮ ಮೊತ್ತ

ಅಡಿಲೇಡ್ (ಎಪಿ): ದಿಟ್ಟ ಶತಕ ಬಾರಿಸಿದ ಅಲೆಕ್ಸ್ ಕ್ಯಾರಿ ಮತ್ತು ಅರ್ಧಶತಕ ಗಳಿಸಿದ ಉಸ್ಮಾನ್ ಖ್ವಾಜಾ ಅವರು ಬುಧವಾರ ಇಲ್ಲಿ ಆರಂಭವಾದ ಆ್ಯಷಸ್ ಸರಣಿಯ ಟೆಸ್ಟ್‌ನಲ್ಲಿ ಆಸ್ಟ್ರೇಲಿಯಾ ತಂಡಕ್ಕೆ ಆಸರೆಯಾದರು.

ಟಾಸ್ ಗೆದ್ದ ಆತಿಥೇಯ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಆದರೆ ಇಂಗ್ಲೆಂಡ್ ತಂಡದ ವೇಗಿ ಜೋಫ್ರಾ ಆರ್ಚರ್ (29ಕ್ಕೆ3) ಮತ್ತು ಬ್ರೈಡನ್ ಕಾರ್ಸ್ (70ಕ್ಕೆ2) ಅವರ ದಾಳಿಗೆ ಆಸ್ಟ್ರೇಲಿಯಾದ ಆರಂಭಿಕರು ಎಡವಿದರು. ಇದರಿಂದಾಗಿ 94 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡಿತು.

ಈ ಹಂತದಲ್ಲಿ ಅಲೆಕ್ಸ್ (106; 143ಎ, 4X8, 6X1) ಮತ್ತು ಉಸ್ಮಾನ್ (82; 126ಎ, 4X10) ಐದನೇ ವಿಕೆಟ್ ಜೊತೆಯಾಟದಲ್ಲಿ 91 ರನ್ ಸೇರಿಸಿ ಇನಿಂಗ್ಸ್‌ಗೆ ಚೇತರಿಕೆ ನೀಡಿದರು. ಇದರಿಂದಾಗಿ ತಂಡವು ದಿನದಾಟದ ಮುಕ್ತಾಯಕ್ಕೆ 83 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 326 ರನ್ ಗಳಿಸಿತು.

ಸ್ಟೀವ್ ಸ್ಮಿತ್ ಅವರು ಅನಾರೋಗ್ಯದಿಂದಾಗಿ ಕಣಕ್ಕಿಳಿಯಲಿಲ್ಲ. ಟಾಸ್ ಹಾಕುವುದಕ್ಕಿಂತ ಸ್ವಲ್ಪ ಹೊತ್ತಿನ ಮುಂಚೆಯಷ್ಟೇ ಸ್ಮಿತ್ ಅವರ ಬದಲು ಉಸ್ಮಾನ್ ಕಣಕ್ಕಿಳಿಯುವ ನಿರ್ಧಾರವನ್ನು ತಂಡ ಪ್ರಕಟಿಸಿತು. ಗುರುವಾರ ತಮ್ಮ 39ನೇ ಜನ್ಮದಿನ ಆಚರಿಸಿಕೊಳ್ಳಲಿರುವ ಉಸ್ಮಾನ್ ಈ ಅವಕಾಶವನ್ನು ಚೆನ್ನಾಗಿ ಬಳಸಿಕೊಂಡರು. 5 ರನ್ ಗಳಿಸಿದ ಉಸ್ಮಾನ್ ಅವರಿಗೆ ಒಂದು ‘ಜೀವದಾನ’ ಕೂಡ ಲಭಿಸಿತ್ತು. ಆದರೆ ಶತಕದ ಸನಿಹದಲ್ಲಿದ್ದಾಗ ಉಸ್ಮಾನ್ ಅವರು ವಿಲ್ ಜ್ಯಾಕ್ಸ್ ಎಸೆತವನ್ನು ಸ್ಲಾಗ್ ಸ್ವೀಪ್ ಮಾಡಿ ಜೋಷ್ ಟಂಗ್ ಅವರಿಗೆ ಕ್ಯಾಚಿತ್ತರು.

ಆಸ್ಟ್ರೇಲಿಯಾದ ಅಲೆಕ್ಸ್ ಕ್ಯಾರಿ ಶತಕ ಸಂಭ್ರಮ ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 83 ಓವರ್‌ಗಳಲ್ಲಿ 8ಕ್ಕೆ326 (ಉಸ್ಮಾನ್ ಖ್ವಾಜಾ 82, ಅಲೆಕ್ಸ್ ಕ್ಯಾರಿ 106, ಜೋಶ್ ಇಂಗ್ಲಿಸ್ 32, ಜೋಫ್ರಾ ಆರ್ಚರ್ 29ಕ್ಕೆ3, ಬ್ರೈಡನ್ ಕಾರ್ಸ್ 70ಕ್ಕೆ2, ವಿಲ್ ಜ್ಯಾಕ್ಸ್ 105ಕ್ಕೆ2)

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in
ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–66/2992/2025–26 ದಿನಾಂಕ: 16.12.2025
ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ
ಕೆಐಎಡಿಬಿಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಕಾಮಗಾರಿಯ ಹೆಸರು : ಮೈಸೂರು ತಾಲ್ಲೂಕು ಮತ್ತು ಜಿಲ್ಲೆಯ ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿ ರಸ್ತೆಗಳ ಬಲವರ್ಧನೆ ಮತ್ತು ಹೆಚ್‌ಡಿಪಿಇ ನೀರು ಸರಬರಾಜು ಪೈಪ್‌ಲೈನ್‌ಗಳನ್ನು ಒದಗಿಸುವುದು ಮತ್ತು ಅಳವಡಿಸುವ ಕಾಮಗಾರಿ.
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 20.01.2026 ಸಂಜೆ 4.00 ಗಂಟೆಯವರೆಗೆ
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು
DIPR/CP/4494/Zen/2025-26

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪರು–1 ರವರ ಕಛೇರಿ, 1ನೇ ಮಹಡಿ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು –560052.
ಸಂಖ್ಯೆ: ಡಿಜಿಎಂ–3/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/18/2025–26 ದಿನಾಂಕ: 17–12–2025
ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ಜಿಒಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಲಿಮಿಟೆಡ್‌ನ ಉಪ ಪ್ರಧಾನ ವ್ಯವಸ್ಥಾಪಕರು–3, ವ್ಯವಸ್ಥಾಪಕ ನಿರ್ದೇಶಕರು, ಬಿಎಸ್‌ಡಬ್ಲ್ಯೂಎಂಎಲ್, ಬೆಂಗಳೂರು ಇವರು ಕೆಳಗಿನ ಕೋಷ್ಟಕದಲ್ಲಿ ಉಲ್ಲೇಖಿಸಲಾದ ಸೇವೆಗಳಿಗೆ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸುತ್ತಾರೆ. ಟೆಂಡರ್‌ಗಳು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಸೇವೆಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದು (ಉದಾ. https://kppp.karnataka.gov.in).

ಕ್ರ. ಸಂ.	ಕಾಮಗಾರಿಯ ಹೆಸರು	ಕಾಮಗಾರಿಗಳ ಅಂದಾಜು ಮೊತ್ತ (ಲಕ್ಷಗಳಲ್ಲಿ)	ಅವಧಿ	ಇಎಂಡಿ ಮೊತ್ತ (ರೂ. ಗಳಲ್ಲಿ)
1	ತರಬೇತಿ ಸಂಸ್ಥೆಗಳೊಂದಿಗೆ ಸಮನ್ವಯ, ಮಾಡ್ಯೂಲ್‌ಗಳ ಪರಿಶೀಲನೆ, ಉತ್ತಮ ಅಭ್ಯಾಸಗಳ ಗುರುತಿಸುವಿಕೆ, ಜ್ಞಾನ ನಿರ್ವಹಣೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಇತ್ಯಾದಿಗಳಿಗಾಗಿ ಸ್ವಚ್ಛ ಭಾರತ ಮಿಷನ್ ಘಟಕಗಳ ವಿವಿಧ ಕ್ಷೇತ್ರಗಳಲ್ಲಿ 8 ತಜ್ಞರೊಂದಿಗೆ ಸಂಪನ್ಮೂಲ ಕೇಂದ್ರವನ್ನು ಸ್ಥಾಪಿಸುವುದು.	244.80	24 ತಿಂಗಳುಗಳು	4,89,600/-
2	ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳು (DWCCs) ಮತ್ತು ಸಂಸ್ಕರಣಾ ಘಟಕಗಳಿಂದ ಆರ್‌ಡಿಎಫ್ ಅನ್ನು ಬಿಡದಿ ಕೆಪಿಸಿಎಲ್ ತ್ಯಾಜ್ಯದಿಂದ ವಿದ್ಯುತ್ ಸ್ಥಾವರಕ್ಕೆ ಮತ್ತು ಬೂದಿಯನ್ನು ತ್ಯಾಜ್ಯ–ವಿದ್ಯುತ್ ಸ್ಥಾವರದಿಂದ ಭೂಭರ್ತಿ ಜಾಗಕ್ಕೆ ಸಾಗಿಸುವ ಕಾಮಗಾರಿಗಾಗಿ ಪಿಎಂಸಿ ಸೇವೆಗಳ ನೇಮಕಾತಿ, ಹಂತ –3	992.00	07 ತಿಂಗಳುಗಳು	25,000.00

ಕಾರ್ಯಕ್ರಮಗಳ ವೇಳಾಪಟ್ಟಿ : 1. ಬಿಡ್ ಪೂರ್ವಭಾವಿ ವಿಚಾರಣೆಗಳನ್ನು ಕೆಪಿಪಿ ಪೋರ್ಟಲ್ ಮುಖಾಂತರ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 23.12.2025 ರಿಂದ 17.30 ಗಂಟೆಯವರೆಗೆ. 2. ಬಿಡ್ ಪೂರ್ವಭಾವಿ ಸಭೆ ದಿನಾಂಕ: 24.12.2025 ರಂದು ಮಧ್ಯಾಹ್ನ 3.00 ಗಂಟೆಯವರೆಗೆ ಸಿಇ & ಸಿಜಿಎಂ (ಟೆಕ್), ಬಿಎಸ್‌ಡಬ್ಲ್ಯೂಎಂಎಲ್, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು ಇಲ್ಲಿ ನಡೆಸಲಾಗುವುದು. 3. ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 29.12.2025 ರಿಂದ ಸಂಜೆ 4.00 ಗಂಟೆಯವರೆಗೆ. 4. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 30.12.2025 ರಂದು ಸಂಜೆ 4.30 ಗಂಟೆಯವರೆಗೆ. 5. ಹಣಕಾಸು ಬಿಡ್‌ಗಳನ್ನು ತೆರೆಯುವ ದಿನಾಂಕವನ್ನು ತಾಂತ್ರಿಕವಾಗಿ ಅರ್ಹ ಬಿಡ್‌ದಾರರಿಗೆ ತಿಳಿಸಲಾಗುವುದು.
1. ತನ್ನ ನಿಯಂತ್ರಣ ಮೀರಿದ ವ್ಯವಸ್ಥೆಯ ವೈಫಲ್ಯದಿಂದ ಉಂಟಾಗುವ ಯಾವುದೇ ವಿಳಂಬಗಳಿಗೆ ಉದ್ಯೋಗದಾತರು ಜವಾಬ್ದಾರರಾಗಿರುವುದಿಲ್ಲ. ಯಾವುದೇ ಟೆಂಡರ್ ನವೀಕರಣಗಳ ಬಗ್ಗೆ ಟೆಂಡರ್‌ದಾರರಿಗೆ ತಿಳಿಸಲು ವ್ಯವಸ್ಥೆಯು ಪ್ರಯತ್ನಿಸಿದರೂ ಸಹ, ಟೆಂಡರ್‌ದಾರರು ಸ್ವೀಕರಿಸದ ಯಾವುದೇ ಮಾಹಿತಿಗೆ ಉದ್ಯೋಗದಾತರು ಜವಾಬ್ದಾರರಾಗಿರುವುದಿಲ್ಲ. ಟೆಂಡರ್‌ಗೆ ಸಂಬಂಧಿಸಿದ ಇತ್ತೀಚಿನ ಮಾಹಿತಿಗಾಗಿ ಕೆಪಿಪಿ ಪೋರ್ಟಲ್ ಅನ್ನು ಪರಿಶೀಲಿಸುವುದು ಟೆಂಡರ್‌ದಾರರ ಜವಾಬ್ದಾರಿಯಾಗಿದೆ, ಸಹಾಯವಾಣಿಯ ಇ–ಮೇಲ್ ವಿಳಾಸ Helpdesk issupport@eprochelpdesk.com ಕೆಪಿಪಿ ಪೋರ್ಟಲ್ ಸಹಾಯವಾಣಿ ದೂರವಾಣಿ ಸಂಖ್ಯೆಗಳು: 080–22371090/22373788. ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯಕ್ಕೆ ಮುಂಚಿತವಾಗಿ ಕಂಪ್ಯೂಟರ್‌ನ ಬ್ರೌಸರ್ ಸಾಮರ್ಥ್ಯವನ್ನು ಟೆಂಡರ್‌ದಾರರು ಖಚಿತಪಡಿಸಿಕೊಳ್ಳಬೇಕು. ಇಂಟರ್‌ನೆಟ್ ಸಂಪರ್ಕ ಸಮಸ್ಯೆಗಳು ಮತ್ತು ತಾಂತ್ರಿಕ ದೋಷಗಳಿಂದಾಗಿ ಕೆಪಿಪಿ ಪೋರ್ಟಲ್ ಪ್ರವೇಶಿಸಲಾಗದಿದ್ದರೆ ಉದ್ಯೋಗದಾತರು ಜವಾಬ್ದಾರರಾಗಿರುವುದಿಲ್ಲ. 2. ಯಾವುದೇ ತಿದ್ದುಪಡಿ / ಅನುಬಂಧವನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.
ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–3, ಬಿಎಸ್‌ಡಬ್ಲ್ಯೂಎಂಎಲ್
ವಾಸಾಸಂಇ/ವಾ.ಪ್ರ/4512/ಎಎಎ/2025–26

ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ದಿಮೆ)
4ನೇ ಮಹಡಿ, ಟಿಟಿಎಂಸಿ ಕಟ್ಟಡ, "ಎ"ಬ್ಲಾಕ್, ಬಿಎಂಟಿಸಿ ಕಟ್ಟಡ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು – 560 027. ಫೋನ್: 22483636/38/39
No.KSBCL/INFRA/ADM11-104/2025-26 Date: 17.12.2025
ಟೆಂಡರ್‌ಗಾಗಿ ಆಹ್ವಾನ
(ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)
ಕಾರ್ಯನಿರ್ವಾಹಕ ನಿರ್ದೇಶಕರು (A&I), ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ, ಬೆಂಗಳೂರು ಇವರು ಕರ್ನಾಟಕ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000ರ ಅನ್ವಯ KPWD / CPWD ಮತ್ತು MES ನಲ್ಲಿ ನೋಂದಾಯಿತ ವರ್ಗ–1 ಸಿವಿಲ್ ಗುತ್ತಿಗೆದಾರರು/ಸಂಸ್ಥೆಗಳಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಐಟಂದರದ ಟೆಂಡರನ್ನು ಆಹ್ವಾನಿಸಿದ್ದಾರೆ. ಇತರೆ ವಿವರಗಳನ್ನು ವೆಬ್‌ಸೈಟ್ ವಿಳಾಸ https://kppp.karnataka.gov.in ನಲ್ಲಿ ಪಡೆಯಬಹುದು.
ಕಾಮಗಾರಿಯ ಹೆಸರು: ಬೆಂಗಳೂರಿನ ಕಿತ್ತಗಾನಹಳ್ಳಿ–2 ಡಿಪೋಗೆ ರ್ಯಾಕಿಂಗ್ ವ್ಯವಸ್ಥೆ, ಕಚೇರಿ ಪಾರ್ಟಿಷನ್, ಕೋಲ್ಡ್ ಸ್ಟೋರೇಜ್ ಕೊಠಡಿ, ಇಪಾಕ್ಸಿ ನೆಲಹಾಸು ಮತ್ತು ಇತರೆ ಕೆಲಸಗಳನ್ನು ಒದಗಿಸುವುದು.
ಟೆಂಡರಿಗಿಟ್ಟ ಮೊತ್ತ: ರೂ 4,68,34,964/– + ಜಿಎಸ್‌ಟಿ. ಇಎಂಡಿ: ರೂ. 7,02,524/–. ಕಾಮಗಾರಿ ಪೂರ್ಣಗೊಳಿಸುವ ಅವಧಿ: 6 ತಿಂಗಳು (ಮಳೆಗಾಲ ಸೇರಿ).
1) ವಿಚಾರಣೆಯನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: 30.12.2025ರ ಮಧ್ಯಾಹ್ನ 12:30 ಗಂಟೆಯವರೆಗೆ. 2) ಪೂರ್ವಭಾವಿ ಸಭೆಯ ದಿನಾಂಕ: 03.01.2026ರ ಮಧ್ಯಾಹ್ನ 3:00 ಗಂಟೆಗೆ. 3) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 16.01.2026ರ ಸಂಜೆ 5:30 ಗಂಟೆಯವರೆಗೆ. 4) ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: 19.01.2026ರ ಸಂಜೆ 4:00 ಗಂಟೆಗೆ.
ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು (ಎ & ಐ)
ಕರಾಪಾನಿನಿ, ಬೆಂಗಳೂರು.
ವಾಸಾಸಂಇ/ವಾಪ್ರ/ಜಿಎ/4503/2025–26

@SudhaWeekly
ಸುಧಾ
ನಿಮ್ಮ ಸಮೀಪದ ಅಂಗಡಿಗಳಲ್ಲಿ ಲಭ್ಯ
ಇದು ಅಡಿಕೆ ಕೊಯ್ಲಿನ ಸಮಯ. ಕರಾವಳಿ, ಮಲೆನಾಡು ಪ್ರದೇಶದಲ್ಲಿ ಅಡಿಕೆ (areca) ಬೆಳೆ ಹೆಚ್ಚು. ಇದು ಇಲ್ಲಿನ ಕೃಷಿಕರ ಜೀವನೋಪಾಯದ ಹಾದಿಯೂ ಹೌದು. ಸದ್ಯ ಕರಾವಳಿ, ಮಲೆನಾಡಿನ ಅಡಿಕೆ ಬೆಳೆಯುವ ಪ್ರದೇಶಕ್ಕೆ ಭೇಟಿ ನೀಡಿದರೆ, ಇಲ್ಲಿ ಬೆಳೆ ಕೊಯ್ಲಿನ ಸಂಭ್ರಮ ಒಂದೆಡೆಯಾದರೆ, ಕೊಯ್ಲು ಮುಗಿಸುವಷ್ಟರಲ್ಲಿ ಈ ಕಷ್ಟದಿಂದ ಹೈರಾಣಾಗುವ ದೃಶ್ಯ ಇನ್ನೊಂದೆಡೆ.

ಪಂದ್ಯ ರದ್ದು: ಬಿಸಿಸಿಐ ವೇಳಾಪಟ್ಟಿಗೆ ಟೀಕೆ

ಲಖನೌದಲ್ಲಿ ಭಾರತ– ದಕ್ಷಿಣ ಆಫ್ರಿಕಾ ಟಿ20 ಪಂದ್ಯಕ್ಕೆ ಅಡ್ಡಿಯಾದ ವಿಪರೀತ ಮಂಜು

ಏಕನಾ ಕ್ರೀಡಾಂಗಣದಲ್ಲಿ ಬುಧವಾರ ಮಂಜು ಮುಸುಕಿದ ವಾತಾವರಣವಿತ್ತು. ಈ ವೇಳೆ ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಮತ್ತು ಬಿಸಿಸಿಐ ಪದಾಧಿಕಾರಿಗಳ ಮಾತುಕತೆ ನಡೆಸಿದರು ಪಿಟಿಐ ಚಿತ್ರ

ಲಖನೌ (ಪಿಟಿಐ): ವಿಪರೀತ ಮಂಜು ಮುಸುಕಿದ ಕಾರಣ ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಣ ನಾಲ್ಕನೇ ಟಿ20 ಕ್ರಿಕೆಟ್ ಪಂದ್ಯವು ರದ್ದಾಯಿತು.

ಏಕನಾ ಕ್ರೀಡಾಂಗಣದಲ್ಲಿ ಬುಧವಾರ ರಾತ್ರಿ 7 ಗಂಟೆಗೆ ಪಂದ್ಯ ಆರಂಭವಾಗಬೇಕಿತ್ತು. ಆದರೆ ದಟ್ಟ ಮಂಜು ಕವಿದ ಕಾರಣ ಚೆಂಡಿನ ಚಲನೆಯನ್ನು ಗುರುತಿಸುವುದು ಕಷ್ಟವಾಗುವ ಸಾಧ್ಯತೆ ಇತ್ತು. ಆದ್ದರಿಂದ ಟಾಸ್ ಕೂಡ ಮಾಡಲಿಲ್ಲ. ರಾತ್ರಿ 10 ಗಂಟೆಯವರೆಗೂ ಅಂಪೈರ್‌ಗಳು ಹಲವು ಬಾರಿ ವಾತಾವರಣದ ಪರಿಶೀಲನೆ ನಡೆಸಿದರು. ನಂತರ ಪಂದ್ಯ ರದ್ದುಗೊಳಿಸಿದರು. 5 ಪಂದ್ಯಗಳ ಸರಣಿಯಲ್ಲಿ ಭಾರತವು 2–1ರಿಂದ ಮುಂದಿದೆ. ಇನ್ನೊಂದು ಪಂದ್ಯ ಬಾಕಿ ಇದೆ. ಕ್ರೀಡಾಂಗಣದಲ್ಲಿ ಸೇರಿದ್ದ ಜನ ನಿರಾಶೆಯಿಂದ ಮರಳಿದರು.

ಅಸಮಾಧಾನ: ಡಿಸೆಂಬರ್ ತಿಂಗಳಲ್ಲಿ ಉತ್ತರ ಭಾರತದ ಹಲವು ನಗರಗಳಲ್ಲಿ ದಟ್ಟ ಮಂಜು ಮತ್ತು ವಾಯುಮಾಲಿನ್ಯದ ಸಮಸ್ಯೆ ಇದ್ದೇ ಇರುತ್ತದೆ. ಆದರೂ ಈ ತಿಂಗಳಲ್ಲಿ ಇಲ್ಲಿ ಪಂದ್ಯಗಳನ್ನು ಆಯೋಜಿಸಿರುವುದು ಸರಿಯಲ್ಲ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ವಿರುದ್ಧ ಅಸಮಾಧಾನ ವ್ಯಕ್ತವಾಗಿದೆ.

ದಕ್ಷಿಣ ಆಫ್ರಿಕಾದ ಎದುರಿನ ಟೆಸ್ಟ್, ಏಕದಿನ ಮತ್ತು ಟಿ20 ಸರಣಿಗಳ ಪಂದ್ಯಗಳಿಗೆ ನವಚಂಡೀಗಡ, ಧರ್ಮಶಾಲಾ, ಲಖನೌ, ರಾಂಚಿ, ರಾಯಪುರ, ವಿಶಾಖಪಟ್ಟಣ, ಕಟಕ್, ಅಹಮದಾಬಾದ್, ಗುವಾಹಟಿ ಮತ್ತು ಕೋಲ್ಕತ್ತ ನಗರಗಳನ್ನು ನಿಗದಿಪಡಿಸಲಾಗಿತ್ತು. ನವೆಂಬರ್ ಮತ್ತು ಡಿಸೆಂಬರ್‌ನಲ್ಲಿ ಈ ಸರಣಿಗಳು ನಡೆದಿವೆ.

ಈ ಹೊತ್ತಿನಲ್ಲಿ ಲಖನೌ, ಚಂಡೀಗಡ ಮತ್ತು ಧರ್ಮಶಾಲಾಗಳಲ್ಲಿ ವಾಯುಮಾಲಿನ್ಯವೂ ವಿಪರೀತವಾಗಿರುತ್ತದೆ. ಅಲ್ಲದೇ ಬುಧವಾರ ಲಖನೌ ನಗರದಲ್ಲಿ ಗಾಳಿಯ ಗುಣಮಟ್ಟದ ಸೂಚ್ಯಂಕ (ಎಕ್ಯುಐ) 400ರ ಮಟ್ಟದಲ್ಲಿತ್ತು. ಇದು ಅಪಾಯಕಾರಿ ಮಟ್ಟವಾಗಿದೆ. ಇಂತಹ ವಾತಾವರಣದಲ್ಲಿಯೂ ಪಂದ್ಯವನ್ನು ಇಲ್ಲಿ ಆಯೋಜಿಸಿರುವ ಬಿಸಿಸಿಐಗೆ ಆಟಗಾರರ ಆರೋಗ್ಯದ ಬಗ್ಗೆ ಕಾಳಜಿ ಇಲ್ಲವೇ ಎಂಬ ಪ್ರಶ್ನೆಗಳು ಕೇಳಿಬರುತ್ತಿವೆ.

ಶುಭಮನ್ ಗಿಲ್‌ಗೆ ಗಾಯ; ಮತ್ತೆ ಅಲಭ್ಯ

ಲಖನೌ (ಪಿಟಿಐ): ಭಾರತ ಟಿ20 ಕ್ರಿಕೆಟ್ ತಂಡದ ಉಪನಾಯಕ ಶುಭಮನ್ ಗಿಲ್ ಅವರ ಕಾಲ್ಬೆರಳಿಗೆ ಗಾಯವಾಗಿದೆ. ಅದರಿಂದಾಗಿ ಅವರು ದಕ್ಷಿಣ ಆಫ್ರಿಕಾ ಎದುರಿನ ಕೊನೆಯ ಎರಡು ಪಂದ್ಯಗಳಿಗೆ ಅಲಭ್ಯರಾಗಿದ್ದಾರೆ.

‘ಏಕನಾ ಕ್ರೀಡಾಂಗಣದಲ್ಲಿ ಬುಧವಾರ ಪಂದ್ಯಕ್ಕೂ ಮುನ್ನ ಗಿಲ್ ಅವರು ನೆಟ್ಸ್‌ನಲ್ಲಿ ಬ್ಯಾಟಿಂಗ್ ಅಭ್ಯಾಸ ಮಾಡುತ್ತಿದ್ದರು. ಈ ಸಂದರ್ಭದಲ್ಲಿ ಅವರ ಕಾಲ್ಬೆರಳಿಗೆ ಚೆಂಡು ಬಡಿದು ಪೆಟ್ಟಾಯಿತು. ಇದರಿಂದಾಗಿ ಅವರು ವಿಪರೀತ ನೋವು ಅನುಭವಿಸಿದರು. ಅವರಿಗೆ ಚಿಕಿತ್ಸೆ ನೀಡಲಾಗಿದ್ದು, ವಿಶ್ರಾಂತಿ ಅಗತ್ಯವಿದೆ ಎಂದು ವೈದ್ಯಕೀಯ ತಂಡ ಹೇಳಿದೆ. ಆದ್ದರಿಂದ ಅವರು ನಾಲ್ಕು ಮತ್ತು ಐದನೇ ಪಂದ್ಯಕ್ಕೆ ಅಲಭ್ಯರಾಗಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ಕಳೆದ ಮೂರು ಪಂದ್ಯಗಳಲ್ಲಿಯೂ ಅವರು ಬ್ಯಾಟಿಂಗ್ ಲಯ ಕಂಡುಕೊಳ್ಳುವಲ್ಲಿ ವಿಫಲರಾಗಿದ್ದರು. ಆದ್ದರಿಂದ ಅವರ ಮೇಲೆ ಲಯಕ್ಕೆ ಮರಳುವ ಒತ್ತಡ ಹೆಚ್ಚಿತ್ತು.

ವಿಜಯ್ ಹಜಾರೆ ಟ್ರೋಫಿ: ರಾಹುಲ್, ಪ್ರಸಿದ್ಧಗೆ ಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಟರ್ ಕೆ.ಎಲ್. ರಾಹುಲ್ ಮತ್ತು ವೇಗಿ ಪ್ರಸಿದ್ಧ ಎಂ. ಕೃಷ್ಣ ಅವರು ಅಹಮದಾಬಾದಿನಲ್ಲಿ ಇದೇ 24ರಿಂದ ಆರಂಭವಾಗಲಿರುವ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಕರ್ನಾಟಕ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಆಯ್ಕೆ ಸಮಿತಿಯು ಬುಧವಾರ ಪ್ರಕಟಿಸಿರುವ 16 ಆಟಗಾರರ ತಂಡದಲ್ಲಿ ಇಬ್ಬರೂ ಇದ್ದಾರೆ. ಅವರು ಈಚೆಗೆ ದಕ್ಷಿಣ ಆಫ್ರಿಕಾ ಎದುರಿನ ಸರಣಿಯಲ್ಲಿ ಭಾರತ ತಂಡದಲ್ಲಿ ಆಡಿದ್ದರು. ಅಂತರರಾಷ್ಟ್ರೀಯ ಪಂದ್ಯಗಳು ಇಲ್ಲದ ಸಂದರ್ಭದಲ್ಲಿ ದೇಶಿ ಟೂರ್ನಿಗಳಲ್ಲಿ ಆಡುವುದನ್ನು ಭಾರತ ತಂಡದ ಆಟಗಾರರಿಗೆ ಬಿಸಿಸಿಐ ಕಡ್ಡಾಯಗೊಳಿಸಿದೆ. ಅದರಿಂದಾಗಿ ರಾಹುಲ್ ಮತ್ತು ಪ್ರಸಿದ್ಧ ಅವರು ದೇಶಿ ಏಕದಿನ ಟೂರ್ನಿಯಲ್ಲಿ ಕೆಲವು ಪಂದ್ಯಗಳಿಗೆ ಲಭ್ಯರಾಗುವ ಸಾಧ್ಯತೆ ಇದೆ.

ಕರ್ನಾಟಕ ತಂಡವನ್ನು ಮಯಂಕ್ ಅಗರವಾಲ್ ಮುನ್ನಡೆಸುವರು. ಅನುಭವಿ ಆಟಗಾರ ಕರುಣ್ ನಾಯರ್ ಉಪ ನಾಯಕರಾಗಿದ್ದಾರೆ. ಇಬ್ಬರು ವಿಕೆಟ್ ಕೀಪರ್‌ಗಳಾದ ಕೆ.ಎಲ್. ಶ್ರೀಜಿತ್ ಮತ್ತು ಬಿ.ಆರ್. ಶರತ್ ಅವರಿಗೂ ಸ್ಥಾನ ನೀಡಲಾಗಿದೆ. ಈಚೆಗೆ ನಡೆದ ಸೈಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಯಲ್ಲಿ ಕರ್ನಾಟಕ ತಂಡವು ವೈಫಲ್ಯ ಅನುಭವಿಸಿತ್ತು.

ಕೆ.ಎಲ್. ರಾಹುಲ್

ತಂಡ: ಮಯಂಕ್ ಅಗರವಾಲ್ (ನಾಯಕ), ಕರುಣ್ ನಾಯರ್ (ಉಪನಾಯಕ), ದೇವದತ್ತ ಪಡಿಕ್ಕಲ್, ಆರ್. ಸ್ಮರಣ್, ಕೆ.ಎಲ್. ಶ್ರೀಜಿತ್ (ವಿಕೆಟ್‌ಕೀಪರ್), ಅಭಿನವ್ ಮನೋಹರ್, ಶ್ರೇಯಸ್ ಗೋಪಾಲ್, ವೈಶಾಖ ವಿಜಯಕುಮಾರ್, ಎಲ್. ಮನ್ವಂತ್ ಕುಮಾರ್, ಶ್ರೀಶಾ ಎಸ್ ಆಚಾರ್, ಅಭಿಲಾಶ್ ಶೆಟ್ಟಿ, ಬಿ.ಆರ್. ಶರತ್ (ವಿಕೆಟ್‌ಕೀಪರ್), ಹರ್ಷಿಲ್ ಧಮಾನಿ, ಧ್ರುವ ಪ್ರಭಾಕರ್, ಕೆ.ಎಲ್.ರಾಹುಲ್, ಪ್ರಸಿದ್ಧ ಎಂ ಕೃಷ್ಣ. ಕೆ. ಯರೇಗೌಡ (ಕೋಚ್), ಮನ್ಸೂರ್ ಅಲಿ ಖಾನ್ (ಬೌಲಿಂಗ್ ಕೋಚ್), ಶಬರೀಶ್ ಮೋಹನ್ (ಫೀಲ್ಡಿಂಗ್ ಕೋಚ್), ಪಿ.ವಿ. ಸುಮಂತ್ (ಮ್ಯಾನೇಜರ್).

ಕೂಚ್ ಬಿಹಾರ್ ಟ್ರೋಫಿ ಕ್ರಿಕೆಟ್ ಕರ್ನಾಟಕಕ್ಕೆ ಮಣಿಕಾಂತ್ ಆಸರೆ

ಪ್ರಜಾವಾಣಿ ವಾರ್ತೆ

ಮೈಸೂರು: ಮಣಿಕಾಂತ್ ಶಿವಾನಂದ್ (71) ಮತ್ತು ಧ್ರುವ್ ಕೃಷ್ಣನ್ (59) ಅವರ ಅರ್ಧಶತಕಗಳ ಬಲದಿಂದ ಕರ್ನಾಟಕ ತಂಡವು ಕೂಚ್ ಬಿಹಾರ್ ಟ್ರೋಫಿ 19 ವರ್ಷದ ಒಳಗಿನವರ ಕ್ರಿಕೆಟ್ ಟೂರ್ನಿಯ ಲೀಗ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಮಹಾರಾಷ್ಟ್ರ ತಂಡಕ್ಕೆ ಪ್ರತ್ಯುತ್ತರ ನೀಡಿತು.

ಇಲ್ಲಿನ ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಬುಧವಾರ ಎರಡನೇ ದಿನದಾಟ ಮುಂದುವರಿಸಿದ ಮಹಾರಾಷ್ಟ್ರ ಅನೀಶ್ ಜೋಶಿ ಅರ್ಧಶತಕದ (58 ರನ್) ನೆರವಿನಿಂದ 94.2 ಓವರ್‌ಗಳಲ್ಲಿ 304 ರನ್ ಗಳಿಸಿ ಆಲೌಟ್ ಆಯಿತು. ಅದಕ್ಕೆ ತಕ್ಕ ಉತ್ತರ ಕೊಟ್ಟ ಆತಿಥೇಯ ತಂಡವು ದಿನದಾಟದ ಅಂತ್ಯಕ್ಕೆ 5ಕ್ಕೆ 252 ರನ್‌ಗಳಿಸಿ ಉತ್ತಮ ಮೊತ್ತದತ್ತ ಹೆಜ್ಜೆ ಇಟ್ಟಿದೆ.

ಮಣಿಕಾಂತ್ ಆಸರೆ: ಸಮಯೋಚಿತ ಆಟವಾಡಿದ ಮಣಿಕಾಂತ್ ಅವರು ಧ್ರುವ್ ಕೃಷ್ಣನ್ ಮತ್ತು ನಾಯಕ ಅನ್ವಯ್ ದ್ರಾವಿಡ್ (38 ರನ್) ಅವರೊಂದಿಗೆ ಉತ್ತಮ ಇನಿಂಗ್ಸ್ ಕಟ್ಟಿದರು. ಜೊತೆಯಾಟದಲ್ಲಿ ಕ್ರಮವಾಗಿ 75 ಹಾಗೂ 66 ರನ್ ತಂಡಕ್ಕೆ ಹರಿದುಬಂತು. ಸ್ವಶಿಕ್ ಜಗತಾಪ್ ಅವರ ಸ್ಪಿನ್ ಮೋಡಿಗೆ ಧ್ರುವ್ ಮತ್ತು ಅನ್ವಯ್ ವಿಕೆಟ್ ಒಪ್ಪಿಸಿದರೆ, ಹರ್ಷಿಲ್ ಸಾವಂತ್ ಎಸೆತದಲ್ಲಿ ಮಣಿಕಾಂತ್ ಔಟಾದರು. ವರುಣ್ ಪಟೇಲ್ 34 ರನ್‌ಗಳಿಸಿ ಕ್ರೀಸ್‌ನಲ್ಲಿದ್ದಾರೆ.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಮಹಾರಾಷ್ಟ್ರ: 94.2 ಓವರ್‌ಗಳಲ್ಲಿ 304 (ಅರ್ಕಮ್ ಸಯ್ಯದ್ 68, ಅನೀಶ್ ಜೋಶಿ 58; ವೈಭವ್ ಶರ್ಮಾ 77ಕ್ಕೆ 5, ಮಣಿಕಾಂತ್ ಶಿವಾನಂದ 13ಕ್ಕೆ 2). ಕರ್ನಾಟಕ: 78 ಓವರ್‌ಗಳಲ್ಲಿ 5ಕ್ಕೆ 252 (ಮಣಿಕಾಂತ್ ಶಿವಾನಂದ 71, ಧ್ರುವ್ ಕೃಷ್ಣನ್ 59; ಸ್ವಶಿಕ್ ಜಗತಾಪ್ 72ಕ್ಕೆ 2)

ಟೆನಿಸ್: ಸೆಮಿಗೆ ಜೀವಿತ್, ತನೀಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಜೀವಿತ್ ಸತೀಶ್ ಅವರು ಇಲ್ಲಿ ನಡೆಯುತ್ತಿರುವ ಸಿಆರ್‌ಎಸ್ ಟ್ರಸ್ಟ್ ಎಐಟಿಎ 16 ವರ್ಷದೊಳಗಿನವರ ಚಾಂಪಿಯನ್‌ಷಿಪ್ ಸರಣಿ ಟೆನಿಸ್ ಟೂರ್ನಿಯ ಬಾಲಕರ ಸಿಂಗಲ್ಸ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿದರು.

ಜೀವಿತ್ ಸತೀಶ್

ಎರಡನೇ ಶ್ರೇಯಾಂಕದ ಜೀವಿತ್ ಬುಧವಾರ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ 6-2, 6-1ರ ನೇರ ಸೆಟ್‌ಗಳಿಂದ ಎಂಟು ಶ್ರೇಯಾಂಕದ ಅಧಿದನ್ (ತಮಿಳುನಾಡು) ಅವರನ್ನು ಮಣಿಸಿದರು. ನಿಕಟ ಪೈಪೋಟಿ ಕಂಡ ಮತ್ತೊಂದು ಪಂದ್ಯದಲ್ಲಿ ತನೀಶ್ ದನ್ನಾರಿ ಅವರು 6-4, 3-6, 6-4 ಅಂತರದಿಂದ ತನಯ್ ಬಾಬು ಪೈ ಅವರನ್ನು ಸೋಲಿಸಿ ನಾಲ್ಕರ ಘಟ್ಟ ಪ್ರವೇಶಿಸಿದರು.

ಬಾಲಕಿಯರ ಸಿಂಗಲ್ಸ್‌ನಲ್ಲಿ ಅಗ್ರ ಶ್ರೇಯಾಂಕದ ಅನಿಷ್ಕಾ ಝಾ (ಉತ್ತರಪ್ರದೇಶ) 6-3,6-4ರಿಂದ ಆರನೇ ಶ್ರೇಯಾಂಕದ ಖುಷಿ ಬುಧ್ಯಾ ಅವರನ್ನು ಮಣಿಸಿದರು. ಐದನೇ ಶ್ರೇಯಾಂಕದ ಪ್ರೀತಿ ಪಿ. 6–3, 6–4ರಿಂದ ಮೂರನೇ ಶ್ರೇಯಾಂಕದ ವೀಣಾ ಶಿವರಾಮನ್ ಅವರಿಗೆ ಆಘಾತ ನೀಡಿ ಸೆಮಿಫೈನಲ್ ಪ್ರವೇಶಿಸಿದರು.

ಫಲಿತಾಂಶ: ಬಾಲಕರ ಸಿಂಗಲ್ಸ್: ನಮನ್ ಸರಾಫ್ 6-2, 6-0ರಿಂದ ಜೋಶುವಾ ಸ್ಯಾಮ್ಯುಯೆಲ್ ವಿರುದ್ಧ; ಜೀವಿತ್ ಸತೀಶ್ 6–2, 6–1ರಿಂದ ಅಧಿದನ್ ವಿರುದ್ಧ; ಧನ್ವಿನ್ ವೆಂಕಟೇಶ್ 6-4,6-2ರಿಂದ ಮಹಿನ್ ಜವೇರಿ ವಿರುದ್ಧ; ತನೀಶ್ ದನ್ನಾರಿ 6-4, 3-6, 6-4 ತನಯ್ ಬಾಬು ವಿರುದ್ಧ ಗೆಲುವು ಸಾಧಿಸಿದರು.

ಬಾಲಕಿಯರ ಸಿಂಗಲ್ಸ್: ಯಹಾನಾ ಅರೋರಾ 6-2,6-1ರಿಂದ ಪ್ರಿಯಾಲ್ ಸರಾಫ್ ಎದುರು; ಸಹಸ್ರ ಜಯಂತ್ 6-2, 6-1ರಿಂದ ಶರ್ವಿ ಗೌಲತ್ ಎದುರು; ಪ್ರೀತಿ ಕೆ. 6–3, 6–4ರಿಂದ ವೀನಾ ಶಿವರಾಮನ್ ಎದುರು; ಅನಿಸ್ಕಾ ಝಾ 6-3, 6-4ರಿಂದ ಖುಷಿ ಬುಧ್ಯಾ ಎದುರು ಜಯ ಗಳಿಸಿದರು.

ಸಾತ್ವಿಕ್– ಚಿರಾಗ್ ಶೆಟ್ಟಿ ಶುಭಾರಂಭ

ಹಾಂಗ್ಝು (ಪಿಟಿಐ): ಭಾರತದ ತಾರಾ ವರ್ಚಸ್ಸಿನ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಬುಧವಾರ ಇಲ್ಲಿ ಆರಂಭವಾದ ಬಿಡಬ್ಲ್ಯುಎಫ್ ವಿಶ್ವ ಬ್ಯಾಡ್ಮಿಂಟನ್ ಟೂರ್ ಫೈನಲ್ಸ್‌ನಲ್ಲಿ ಶುಭಾರಂಭ ಮಾಡಿದರು.

ವಿಶ್ವ ಬ್ಯಾಡ್ಮಿಂಟನ್ ರ‍್ಯಾಂಕಿಂಗ್‌ನಲ್ಲಿ 3ನೇ ಸ್ಥಾನದಲ್ಲಿರುವ ಭಾರತದ ಜೋಡಿಯು ಪಂದ್ಯದ ಆರಂಭಿಕ ಗೇಮ್‌ನಲ್ಲಿ ಹಿನ್ನಡೆ ಅನುಭವಿಸಿತ್ತು. ನಂತರ ಪುಟಿದೆದ್ದು ಚೀನಾದ ಲಿಯಾಂಗ್ ವೀ ಕೆಂಗ್ ಮತ್ತು ವಾಂಗ್ ಚಾಂಗ್ ಜೋಡಿಯನ್ನು 12–21, 22–20, 21–14ರಿಂದ ಮಣಿಸಿದರು.

ಏಷ್ಯನ್ ಗೇಮ್ಸ್ ಚಾಂಪಿಯನ್ ಜೋಡಿಯು ಈ ವರ್ಷ ಹಾಂಗ್‌ಕಾಂಗ್ ಓಪನ್ ಮತ್ತು ಚೀನಾ ಮಾಸ್ಟರ್ಸ್ ಟೂರ್ನಿಗಳಲ್ಲಿ ಫೈನಲ್ ಪ್ರವೇಶಿಸಿತ್ತು. ಇಲ್ಲಿಯೂ ಅಮೋಘ ಲಯದಲ್ಲಿ ಮುಂದುವರಿದಿದ್ದಾರೆ.

ಗುರುವಾರ ಎರಡನೇ ಸುತ್ತಿನ ಪಂದ್ಯದಲ್ಲಿ ಸಾತ್ವಿಕ್ ಮತ್ತು ಚಿರಾಗ್ ಜೋಡಿಯು ಇಂಡೊನೇಷ್ಯಾದ ಫಜರ್ ಅಲ್ಫಿಯಾನ್ ಮತ್ತು ಮೊಹಮ್ಮದ್ ಶೋಹಿಬುಲ್ ಫಿಕ್ರಿ ಜೋಡಿಯನ್ನು ಎದುರಿಸಲಿದೆ.